4. Government Guarantee provided for this loan would entail a mandatory payment of 1% p.a. Guarantee Commission by Hukkeri Rural Electric Co-operative Society Ltd. to Government of Karnataka as Finance Department G.O. FD 6 RLG 2002 dated : 17.9.2002.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : FD 950 Exp.1/2009 dated :24.6.2009 ರ ಸಹಮತಿಯೊಂದಿಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1973

ಎಸ್.ಜಿ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಶ್ರೀ ಸತ್ಯಸಾಯಿ ಉನ್ನತ ವೈದ್ಯಕೀಯ ವಿಜ್ಞಾನ ಸಂಸ್ಥೆ, ವೈಟ್‌ಫೀಲ್ಡ್, ಬೆಂಗಳೂರು ಇವರಿಗೆ ಉಚಿತ ವಿದ್ಯುತ್ ಸರಬರಾಜು ಮಾಡುವ ಸಂಬಂಧ ಸಹಾಯ ಧನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಇಂಇ 51 ಇಇಬಿ 2001 ದಿನಾಂಕ: 27.4.2001.
2. ಸರ್ಕಾರಿ ಆದೇಶ ಸಂಖ್ಯೆ: ಇಂಇ 51 ಇಇಬಿ 2001 ದಿನಾಂಕ; 11.11.2002.
3. ಸರ್ಕಾರಿ ಆದೇಶ ಸಂಖ್ಯೆ: ಇಂಇ 71 ಇಇಬಿ 2003 ದಿನಾಂಕ: 12.9.2003.
4. ಸರ್ಕಾರಿ ಆದೇಶ ಸಂಖ್ಯೆ: ಇಂಇ 71 ಇಇಬಿ 2003 ದಿನಾಂಕ: 23.10.2003.
5. ತಿದ್ದುಪಡಿ ಆದೇಶ ಸಂಖ್ಯೆ: ಇಂಇ 71 ಇಇಬಿ 2003 ದಿನಾಂಕ: 16.12.2003.
6. ಸರ್ಕಾರಿ ಆದೇಶ ಸಂಖ್ಯೆ: ಇಂಇ 74 ಇಇಬಿ 2004 ದಿನಾಂಕ: 9.11.2004.
7. ಸರ್ಕಾರಿ ಆದೇಶ ಸಂಖ್ಯೆ: ಇಂಇ 74 ಇಇಬಿ 2004 ದಿನಾಂಕ: 30.3.2005.
8. ಸರ್ಕಾರಿ ಆದೇಶ ಸಂಖ್ಯೆ : ಇಎನ್ 91 ಇಇಬಿ 2005 (ಪಿ) ದಿನಾಂಕ 19.4.2006.
9. ಸರ್ಕಾರಿ ಆದೇಶ ಸಂಖ್ಯೆ : ಇಎನ್ 91 ಇಇಬಿ 2005 (ಪಿ) ದಿನಾಂಕ 16.3.2007.
10. ಸರ್ಕಾರಿ ಆದೇಶ ಸಂಖ್ಯೆ : ಇಎನ್ 107 ಇಇಬಿ 2007 ದಿನಾಂಕ : 6.5.2008.
11. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ಕಛೇರಿ ಪತ್ರ ಸಂಖ್ಯೆ : ಉಪ್ರವ್ಯ (ಕಂ&ಮೇ)/ಬಿಸಿ 27/1935/08–09/1348–51 ದಿನಾಂಕ: 19.3.2008.

ಪ್ರಸ್ತಾವನೆ :–

ಶ್ರೀ ಸತ್ಯಸಾಯಿ ಉನ್ನತ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ವಿದ್ಯುತ್ ಪೂರೈಕೆಯನ್ನು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತವು ಮಾಡಿರುವ ಸಂಬಂಧ ಮೇಲೆ ಓದಲಾದ ಕ್ರಮಾಂಕ (1) ರಿಂದ (10) ರವರೆಗೆ 2001ನೇ ಸಾಲಿನಿಂದ ಬಿಡುಗಡೆ ಮಾಡಿರುವ ಸಹಾಯಧನದ ವಿವರಗಳು ಈ ಕೆಳಗಿನಂತಿವೆ:–

ಕ್ರಮ ಸಂಖ್ಯೆ	ಸರ್ಕಾರಿ ಆದೇಶ ಸಂಖ್ಯೆ	ದಿನಾಂಕ	ಆರ್ಥಿಕ ವರ್ಷ	ಮೊತ್ತ (ರೂ. ಕೋಟಿಗಳಲ್ಲಿ)
1	ಡಿಇ 51 ಇಇಬಿ 2001	27.4.2001	2001–2002	2.00
2	ಡಿಇ 51 ಇಇಬಿ 2001	11.11.2002	2002–2003	2.00
3	ಡಿಇ 71 ಇಇಬಿ 2003	23.10.2003	2003–2004	2.00
4	ಡಿಇ 71 ಇಇಬಿ 2003	9.11.2004	2004–2005	1.00
5	ಡಿಇ 71 ಇಇಬಿ 2003	30.3.2005	2004–2005	0.80
6	ಡಿಇ 91 ಇಇಬಿ 2003 (ಪಿ)	19.4.2006	2005–2006	1.15
7	ಇಎನ್ 91 ಇಇಬಿ 2005 (ಪಿ)	16.3.2007	2006–2007	2.00

ಕ್ರಮ ಸಂಖ್ಯೆ	ಸರ್ಕಾರಿ ಆದೇಶ ಸಂಖ್ಯೆ	ದಿನಾಂಕ	ಆರ್ಥಿಕ ವರ್ಷ	ಮೊತ್ತ (ರೂ. ಕೋಟಿಗಳಲ್ಲಿ)
8	ಇಎನ್ 107 ಇಇಬಿ 2007	6.5.2008	2008–2009	2.00
			ಒಟ್ಟು	**12.95**

ಮೇಲೆ ಓದಲಾದ ಕ್ರಮಾಂಕ (11)ರ ಪತ್ರದಲ್ಲಿ ಮುಖ್ಯ ಪ್ರಧಾನ ವ್ಯವಸ್ಥಾಪಕರು (ಹ&ವಾ), ಬೆಸ್ಕಾಂ ರವರು ಶ್ರೀ ಸತ್ಯಸಾಯಿ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸ್ಥಾವರ ಸಂಖ್ಯೆ: ಇ4–ಹೆಚ್‌ಟಿ 184 ವತಿಯಿಂದ ಮಾರ್ಚ್ 2009 ರ ಅಂತ್ಯಕ್ಕೆ ವಿದ್ಯುತ್ ಬಾಕಿ ರೂ. 1.65 ಕೋಟಿಗಳಷ್ಟಿರುತ್ತದೆಂದು, ಸದರಿ ಮೊತ್ತವನ್ನು ಸರ್ಕಾರದ ವತಿಯಿಂದ ಪಾವತಿಸುವಂತೆ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ :–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 60 ಇಇಬಿ 2009, ಬೆಂಗಳೂರು, ದಿನಾಂಕ: 14ನೇ ಆಗಸ್ಟ್ 2009

ಶ್ರೀ ಸತ್ಯಸಾಯಿ ಉನ್ನತ ವೈದ್ಯಕೀಯ ವಿಜ್ಞಾನ ಸಂಸ್ಥೆ, ವೈಟ್‌ಫೀಲ್ಡ್, ಬೆಂಗಳೂರು ಇವರಿಗೆ ವಿದ್ಯುತ್ ಪೂರೈಕೆ ಮಾಡಿರುವ ಸಂಬಂಧ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತರವರಿಗೆ 2009–10ನೇ ಸಾಲಿಗೆ ರೂ. 1.65 ಕೋಟಿ (ರೂ. ಒಂದು ಕೋಟಿ ಅರವತ್ತೈದು ಲಕ್ಷಗಳು ಮಾತ್ರ) ಸಹಾಯ ಧನವನ್ನು ಲೆಕ್ಕ ಶೀರ್ಷಿಕೆ '2801–80–101–1–04–106 (ಯೋಜನೇತರ)' ರಡಿಯಲ್ಲಿ ಬಿಡುಗಡೆ ಮಾಡಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಬೆಂಗಳೂರು ಇವರು ಹಣಸಂದ ರಶೀದಿಗೆ (Payees Receipt) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಇಂಧನ ಇಲಾಖೆ ಇವರ ಮೇಲುರುಜುವನ್ನು ಪಡೆದುಕೊಳ್ಳತಕ್ಕದ್ದು ಹಾಗೂ ಈ ಬಗ್ಗೆ ಸರಿಯಾದ ಲೆಕ್ಕ ತ:ಖ್ತೆಯನ್ನು ಇಟ್ಟುಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 976 Exp.I/2009 ದಿನಾಂಕ: 24.6.2009 ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1974

ಎಸ್.ಜಿ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ENERGY SECRETARIAT

Sub: Sanction of Pensionary Benefits to Sri Philipose Mathai retired Chairman KERC

Read:
1. G.O.No. EN 123 PSR 2004 dated 16.2.2005.
2. Corrigendum to G.O.No. EN 123 PSR 2005 dated 23.3.2005.
3. Notification No.EN 137 PSR 2006 dated 6.12.2007 & 7.1.2009.
4. Letter No.E/11/5556 dated 5.2.2009 of the Secretary, KERC
5. Letter No. EN 22 EST 2008 dated 10.7.2009 of the Secretary to Hon'ble Governor

Preamble:

In G.O. read at (1) above, the following Pensionary benefits were sanctioned to Sri Philipose Mathai, Former Chairmn of Karnataka Electricity Regulatory Commission.

Pension of Rs.73,150/- per anum or Rs.6096/-per month,

Gratuity of Rs.43833/- and

Leave Encashment of Rs.91,347/-

As per corrigendum read at (2) above the Leave Encashment figure was revised from Rs.91,347/- to Rs.1,20,813/-

As per Notification read at (3) above, with effect from 1.4.2004-

(i) DA equal to 50% of the existing basic pay has been merged with the basic pay and shon distinctly as Dearness Pay (DP) which would be counted for purposes like payment of allowances, transfer grant, retirement benefits, contribution to GPF, License Fee, monthly contribution for CGIS, various allowance etc., and

(ii) in case of existing Pnsioners, Dearness Relief equal to 50% of the present Pension w.e.f.1.4.2009 has been merged with Pension and shown distintly as Dearness Pension

Consequent to Notification at (3) above, Secretary, KERC vide letter read at (4) above has requested the Karnataka Governor's Secretariat to sanction revised Pension, Gratuity and Leave encashment to Sri Philipose Mathai, Former Chairman, KERC.

The matter pertaining to correctness of the Leave Encashment figure has been verified again by Government and Karnataka Governor's Secretariat and found that Leave Encashment of Rs.91,262/- was found to be correct in place of Rs.1,20,813/- Considering this and the above, Karnataka Governor's Secretariat vide letter read at (5) above has communicated sanction of the revised Pensionary benefits to Sri Philipose Mathai, Former Chairman, KERC as detailed below and further requested the Government to issue necessary Orders to this effect.

(a) Pension: Rs. 9,144/- per month
(Rupees Nine thousand one hundred forty four only)

(b) Gratuity: Rs. 89,166/-
(Rupees Eighty nine thousand one hundred sixty six only)

(c) Leave Encashment: Rs. 91,262-
(Rupees Ninety one thousand two hundred two only)

Accordingly, the following Order.

Government Order No. EN 28 PSR 2009, Bangalore, Dated: 10th August 2009

In the circumstances explained in the preamble, Government are pleased to accord approval to sanction the revised pension, gratuity and leave encashment as under to Sri Philipose Mathai (Former Chairman, KERC), as detailed below:

a) Pension: Rs. 9,144/- per month
(Rupees Nine thousand one hundred forty four only)

(b) Gratuity: Rs. 89,166/-
(Rupees Eighty nine thousand one hundred sixty six only)

(c) Leave Encashment: Rs. 91,262-
(Rupees Ninety one thousand two hundred two only)

By Order and in the name of Governor of Karnataka,

P.R. 1975

S.J. SAMPATHKUMAR
Under Secretary to Government, Energy Department

ನಗರಾಭಿವೃದ್ಧಿ ಸಚಿವಾಲಯ

ವಿಷಯ: ಹರಪನಹಳ್ಳಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಅಂದಾಜು ರೂ.2950.00 ಲಕ್ಷಗಳ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು ರವರ ಪತ್ರ ಸಂಖ್ಯೆ: ಕಜಮಂ: ಮುಅ:ಅಶ್ರೇಕಾಅ1/ತಾಂಸ–8/754/2009–10 ದಿನಾಂಕ: 27.6.2009.

ಪ್ರಸ್ತಾವನೆ:

ಹರಪನಹಳ್ಳಿ ಪಟ್ಟಣವು ದಾವಣಗೆರೆ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದ್ದು, 2001ರ ಜನಗಣತಿಯಂತೆ 41,889 ಜನಸಂಖ್ಯೆ ಇದ್ದು, ಪ್ರಸ್ತುತ 45,000 ಇರುತ್ತದೆ. ಪ್ರಸ್ತುತ ಈ ಪಟ್ಟಣಕ್ಕೆ ತುಂಗಭದ್ರಾ ನದಿಯನ್ನು ಮೂಲವಾಗಿಟ್ಟುಕೊಂಡು ತಲಾ ದಿನಂ ಪ್ರತಿ 150 ಲೀಟರ್‌ನಂತೆ ಕುಡಿಯುವ ನೀರು ಒದಗಿಸುತ್ತಿದ್ದು, 2031ರಲ್ಲಿ ಊಹಿಸಲಾದ 89,467 ಜನಸಂಖ್ಯೆಗೆ ತಲಾ ದಿನಂಪ್ರತಿ 100 ಲೀಟರ್ ಕುಡಿಯುವ ನೀರು ಒದಗಿಸಲು ಯೋಜಿಸಲಾಗಿದೆ. ಹರಪನಹಳ್ಳಿ ಪಟ್ಟಣಕ್ಕೆ ಹಾಲಿ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಬಹುತೇಕ ಮನೆಯವರು ಸ್ವತಃ ಸೋಕ್ (soak) ಪಿಟ್ಟ್ ಅಳವಡಿಸಿಕೊಂಡಿರುತ್ತಾರೆ. ಹಾಗೂ ಇತರರು ತೆರೆದ ಪ್ರದೇಶಗಳನ್ನು ಉಪಯೋಗಿಸುತ್ತಿದ್ದಾರೆ. ಇನ್ನೂ ಕೆಲವರು ಗ್ರಾಮಸಾರವನ್ನು ತೆರೆದ ಚರಂಡಿಗಳ ಬಿಡುತ್ತಿರುವುದರಿಂದ, ಇದರಿಂದ ಪರಿಸರ ಮಾಲಿನ್ಯ ಮತ್ತು ಅಂತರ್ಜಲ ಮಾಲಿನ್ಯ ಉಂಟಾಗುತ್ತದೆ.

2) ಹರಪನಹಳ್ಳಿ ಪಟ್ಟಣಕ್ಕೆ ಒಳಚರಂಡಿ ಯೋಜನೆಯನ್ನು 2031ರಲ್ಲಿ ಅಂದಾಜಿಸಲಾದ ಜನಸಂಖ್ಯೆಗೆ ಅನುಗುಣವಾಗಿ ತಯಾರಿಸಲಾಗಿದೆ. 2009–10ನೇ ಸಾಲಿನ ದರಪಟ್ಟಿಯಂತೆ ಈ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಅಂದಾಜು ವೆಚ್ಚ ರೂ.2950.00 ಲಕ್ಷಗಳಲ್ಲಿ ಯೋಜನೆಯನ್ನು ತಯಾರಿಸಿ, ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ಹಾಗೂ

ಯೋಜನೆಗೆ ಆಡಳಿತಾತ್ಮಕ ಅನುಮೋದನೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಇವರು ಮೇಲೆ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಆರ್ಥಿಕ ಸಂಸ್ಥೆಗಳಿಂದ ಸಾಲ 50%	ರೂ.1475.00 ಲಕ್ಷಗಳು
ಸರ್ಕಾರದ ಸಾಲ 30%	ರೂ. 885.00 ಲಕ್ಷಗಳು
ಸ್ಥಳೀಯ ಸಂಸ್ಥೆಯ ವಂತಿಕೆ 20%	ರೂ. 590.00 ಲಕ್ಷಗಳು
ಒಟ್ಟು	**ರೂ.2950.00 ಲಕ್ಷಗಳು**

ಈ ಯೋಜನೆಯನ್ನು ಮಂಡಳಿಯ 2009-10ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರಿಸಿ, ಯೋಜನೆಯ 1/3ರಷು ಮೊತ್ತವನ್ನು ಅನುವು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 16 ಯುಡಿಎಸ್ 2009, ಬೆಂಗಳೂರು, ದಿನಾಂಕ: 10ನೇ ಸೆಪ್ಟೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹರಪನಹಳ್ಳಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಅಂದಾಜು ರೂ. 2950.00 ಲಕ್ಷಗಳ (ರೂ.ಎರಡು ಸಾವಿರದ ಒಂಭೈನೂರ ಐವತ್ತು ಲಕ್ಷ ಮಾತ್ರ) ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಒಳಚರಂಡಿ ಯೋಜನೆಯಡಿ ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1) Water rates as proposed by KUWS&DB have to be implemented to meet O & M cost.

2) KTPP provisions, quality control and timely completion should ensured.

3) ಸದರಿ ಕಾಮಗಾರಿಯನ್ನು ಕೈಗೊಳ್ಳುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000ನ್ನು ಪಾಲಿಸುವುದು.

4) ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡತಕ್ಕದ್ದಲ್ಲ.

5) ಸದರಿ ಕಾಮಗಾರಿಯನ್ನು ನಿಗದಿತ ಅವಧಿಯ ಒಳಗೆ ಪೂರ್ಣಗೊಳಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ FD 447 Exp-9:2009, ದಿನಾಂಕ:23.07.2009 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2138 **ಸಿ.ಟಿ. ನಾರಾಯಣಸ್ವಾಮಿ**

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ: ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರಕ್ಕೆ 2009-10ನೇ ಸಾಲಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು ಅವರ ಪತ್ರ ಸಂಖ್ಯೆ: ಡಿಎಎಂ/ಎಸಿಟಿ/1/17/2009-10 ದಿನಾಂಕ 25.07.2009.

ಪ್ರಸ್ತಾವನೆ:

ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದ ಸಿಬ್ಬಂದಿ ವೇತನಕ್ಕಾಗಿ 2009-10ನೇ ಸಾಲಿಗೆ ರೂ.28.39 ಲಕ್ಷಗಳ ಹಣವನ್ನು ಲೆಕ್ಕಶೀರ್ಷಿಕೆ 2205-103-0-18-101 (ಯೋಜನೇತರ) ಸಹಾಯಾನುದಾನ ಅಡಿಯಲ್ಲಿ ನಿಗಧಿಪಡಿಸಲಾಗಿದೆಯೆಂದು ತಿಳಿಸಿ, ಅಲ್ಲದೇ ಸದರಿ ಕ್ರಿಯಾಯೋಜನೆಯು ಅನುಮೋದಿತವಾಗಿದೆಯೆಂದು, ರೂ.28.39 ಲಕ್ಷಗಳನ್ನು ಒಂದೇ ಕಂತಿನಲ್ಲಿ ಆಯುಕ್ತರು, ಹಂಪಿ ವಿಶ್ವಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ, ಹೊಸಪೇಟೆ ಇವರಿಗೆ ಪೇಯಿಸ್ ರಸೀತಿ ಮೂಲಕ ಬಿಡುಗಡೆ ಮಾಡಲು ಮಂಜೂರಾತಿ ಆದೇಶ ನೀಡುವಂತೆ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು ಇವರು ಶಿಫಾರಸ್ಸು ಮಾಡಿರುತ್ತಾರೆ. ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಆದೇಶ ಸಂಖ್ಯೆ: ಕಸಂವಾಪ್ರ 154 ಕೆಎಂಯು 2009, ಬೆಂಗಳೂರು, ದಿನಾಂಕ: 8ನೇ ಸೆಪ್ಟೆಂಬರ್ 2009

ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದ 2009-10ನೇ ಸಾಲಿನ ಸಿಬ್ಬಂದಿ ವೇತನಕ್ಕಾಗಿ ನಿಗದಿಪಡಿಸಿದ ರೂ.28.39 (ರೂಪಾಯಿ ಇಪ್ಪತ್ತೆಂಟು ಲಕ್ಷ ಮೂವತ್ತೊಂಬತ್ತು ಸಾವಿರ ಮಾತ್ರ) ಗಳನ್ನು ಒಂದೇ ಕಂತಿನಲ್ಲಿ ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರಕ್ಕೆ ಪೇಯೀಸ್ ರಸೀತಿ ಮೂಲಕ ಬಿಡುಗಡೆ ಮಾಡಲು ನಿರ್ದೇಶಕರು,

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು ಇವರಿಗೆ ಪಾರದರ್ಶಕ ಅಧಿನಿಯಮ 1999 ಮತ್ತು ಅದರ ನಿಯಮಗಳು 2000 ಗಳನ್ನು ಅನುಸರಿಸುವ ಷರತ್ತಿಗೊಳಪಟ್ಟು ಈ ಮೂಲಕ ಸರ್ಕಾರದ ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2205–103–0–18–101 (ಯೋಜನೇತರ) ಸಹಾಯಾನುದಾನ ರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಕನ್ನಡ ಮತ್ತು ಸಂಸ್ಕೃತಿ, ಹಾಗೂ ವಾರ್ತಾ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಶಿಇ 2127 ಐಎಫ್(ಬಿ&ಎ) 2009, ದಿನಾಂಕ 29.08.2009 ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ 10.07.96ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಕೆ. ಧರ್ಮರಾಜಪ್ಪ

ಪಿ.ಆರ್. 2141 ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ವಿಷಯ: ದಾವಣಗೆರೆ ಜಿಲ್ಲಾ ಸಹಾಯಕ ನಿರ್ದೇಶಕರ ಕಛೇರಿಗೆ ಪೀಠೋಪಕರಣ ಖರೀದಿಸಲು ಅನುದಾನ ನೀಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವರ ಪತ್ರ ಸಂಖ್ಯೆ: ಕಸನಿ:12:ದಾಸ್ವಾನು:2009–10, ದಿನಾಂಕ 04.08.2009.

ಪ್ರಸ್ತಾವನೆ:

ಮೇಲೆ ಓದಲಾದ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರ ದಿನಾಂಕ: 04.08.2009ರ ಪತ್ರದಲ್ಲಿ ದಾವಣಗೆರೆ ಜಿಲ್ಲಾ ಸಹಾಯಕ ನಿರ್ದೇಶಕರ ಕಛೇರಿಗೆ ಅವಶ್ಯವಿರುವ ಅಲ್ಮೇರಾಗಳು, ಟೇಬಲ್‌ಗಳು, ರ್‍ಯಾಕ್‌ಗಳು, ಖುರ್ಚಿಗಳು ಮತ್ತು ಇತರೆ ಸಾಮಗ್ರಿಗಳ ಖರೀದಿಗೆ 2009–10ನೇ ಸಾಲಿನ ಆಯವ್ಯಯದಲ್ಲಿ ರೂ.1.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಸಹಾಯಕ ನಿರ್ದೇಶಕರು, ದಾವಣಗೆರೆ ಜಿಲ್ಲೆ ಇವರು ಕೋರಿದ್ದು, ಅದನ್ನು ರೂ.50,000/– ಗಳಿಗೆ ಸೀಮಿತಗೊಳಿಸಿ, ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದಾವಣಗೆರೆ ಜಿಲ್ಲೆ ಇವರಿಗೆ ಬಿಡುಗಡೆ ಮಾಡುವಂತೆ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಕೋರಿರುತ್ತಾರೆ. ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 107 ಕಸನಿ 2009, ಬೆಂಗಳೂರು, ದಿನಾಂಕ: 7ನೇ ಸೆಪ್ಟೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ದಾವಣಗೆರೆ ಜಿಲ್ಲಾ ಸಹಾಯಕ ನಿರ್ದೇಶಕರ ಕಛೇರಿಯಲ್ಲಿ ಅವಶ್ಯವಿರುವ ಅಲ್ಮೇರಾಗಳು, ಟೇಬಲ್‌ಗಳು, ರ್‍ಯಾಕ್‌ಗಳು, ಖುರ್ಚಿಗಳು ಮತ್ತು ಇತರೆ ಸಾಮಗ್ರಿಗಳ ಖರೀದಿಗೆ **ರೂ.50,000.00** ಗಳನ್ನು (ರೂಪಾಯಿ ಐವತ್ತು ಸಾವಿರ ಮಾತ್ರ) ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದಾವಣಗೆರೆ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲು ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರಿಗೆ ಸರ್ಕಾರದ ಅನುಮತಿ ನೀಡಲಾಗಿದೆ.

ಈ ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ಅದರ ನಿಯಮಗಳು 2000ನ್ನು ಅನುಸರಿಸಿ ಕ್ರಮ ವಹಿಸುವುದು. ಹಾಗೂ ಈ ವೆಚ್ಚವನ್ನು 2009–10ನೇ ಸಾಲಿನ ಲೆಕ್ಕಶೀರ್ಷಿಕೆ 2205–00–001–0–01–059 (ಯೋಜನೆ) ಇತರೆ ಖರ್ಚು ಇದರಡಿ ಭರಿಸತಕ್ಕದ್ದು.

ಈ ಆದೇಶವನ್ನು ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಶಿಇ 2068/ಐಎಫ್(ಬಿ&ಎ)2009 ದಿನಾಂಕ 26.08.2009ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಕೆ. ಧರ್ಮರಾಜಪ್ಪ

ಪಿ.ಆರ್. 2142 ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ವಿಷಯ: ಗುಲ್ಬರ್ಗಾ ಜಿಲ್ಲಾ ಸಹಾಯಕ ನಿರ್ದೇಶಕರ ಕಛೇರಿಗೆ ಪೀಠೋಪಕರಣ ಖರೀದಿಸಲು ಅನುದಾನ ನೀಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವರ ಪತ್ರ ಸಂಖ್ಯೆ: ಕಸನಿ:14:ದಾಸ್ತಾನು:2009-10, ದಿನಾಂಕ 05.08.2009

ಪ್ರಸ್ತಾವನೆ:

ಮೇಲೆ ಓದಲಾದ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರ ದಿನಾಂಕ: 05.08.2009ರ ಪತ್ರದಲ್ಲಿ ಗುಲ್ಬರ್ಗಾ ಜಿಲ್ಲಾ ಸಹಾಯಕ ನಿರ್ದೇಶಕರ ಕಛೇರಿಯನ್ನು ಗುಲ್ಬರ್ಗಾ ಜಿಲ್ಲಾ ಸುವರ್ಣ ಸಾಂಸ್ಕೃತಿಕ ಸಮುಚ್ಛಯ ಕೇಂದ್ರದಲ್ಲಿ ಪ್ರಾರಂಭಿಸಿದ್ದು, ಹೊಸ ಕಟ್ಟಡದಲ್ಲಿ ವಿದ್ಯುತ್ ಬೋರ್ಡ್ ಟೇಬಲ್ ಹಾಗೂ ಕಿಟಕಿಗಳಿಗೆ ಕರ್ಟನ್ ಹಾಕಿಸಲು ಮತ್ತು ಕಛೇರಿಯ ಆಧುನೀಕರಣಕ್ಕಾಗಿ ಪ್ರಸ್ತುತ 2009-10ನೇ ಸಾಲಿನ ಆಯವ್ಯಯದಲ್ಲಿ ರೂ.50,000.00ಗಳನ್ನು ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗುಲ್ಬರ್ಗಾ ಜಿಲ್ಲೆ ಇವರಿಗೆ ಬಿಡುಗಡೆ ಮಾಡುವಂತೆ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಕೋರಿರುತ್ತಾರೆ. ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 108 ಕಸನಿ 2009, ಬೆಂಗಳೂರು, ದಿನಾಂಕ: 7ನೇ ಸೆಪ್ಟೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಗುಲ್ಬರ್ಗಾ ಜಿಲ್ಲಾ ಸಹಾಯಕ ನಿರ್ದೇಶಕರ ಕಛೇರಿಯನ್ನು ಗುಲ್ಬರ್ಗಾ ಜಿಲ್ಲಾ ಸುವರ್ಣ ಸಾಂಸ್ಕೃತಿಕ ಸಮುಚ್ಛಯ ಕೇಂದ್ರದಲ್ಲಿ ಪ್ರಾರಂಭಿಸಿದ್ದು, ಹೊಸ ಕಟ್ಟಡದಲ್ಲಿ ವಿದ್ಯುತ್ ಬೋರ್ಡ್, ಟೇಬಲ್ ಹಾಗೂ ಕಿಟಕಿಗಳಿಗೆ ಕರ್ಟನ್ ಹಾಕಿಸಲು ಮತ್ತು ಕಛೇರಿಯ ಆಧುನೀಕರಣಕ್ಕಾಗಿ ರೂ.50,000.00 ಗಳನ್ನು (ರೂಪಾಯಿ ಐವತ್ತು ಸಾವಿರ ಮಾತ್ರ) ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗುಲ್ಬರ್ಗಾ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರಿಗೆ ಸರ್ಕಾರದ ಅನುಮತಿ ನೀಡಲಾಗಿದೆ.

ಈ ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ಅದರ ನಿಯಮಗಳು 2000ನ್ನು ಅನುಸರಿಸಿ ಕ್ರಮ ವಹಿಸುವುದು. ಹಾಗೂ ಈ ವೆಚ್ಚವನ್ನು 2009-10ನೇ ಸಾಲಿನ ಲೆಕ್ಕಶೀರ್ಷಿಕೆ 2205-00-001-0-01-059 (ಯೋಜನೆ) ನಿರ್ದೇಶನ ಮತ್ತು ಆಡಳಿತ ಇದರಡಿ ಭರಿಸತಕ್ಕದ್ದು.

ಈ ಆದೇಶವನ್ನು ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಶಿಇ 2067/ಐಎಫ್(ಬಿ&ಎ)2009 ದಿನಾಂಕ 25.08.2009ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಕೆ. ಧರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ಪಿ.ಆರ್. 2143

ವಿಷಯ: ಕಿತ್ತೂರು ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ತಜ್ಞರ ಸಮಿತಿಯನ್ನು ಪುನರ್‌ರಚಿಸಿ, ಮುಂದುವರಿಸುವ ಬಗ್ಗೆ

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ: ಸಂಕಇ 133 ಕೆಎಂಯು 2004 ದಿನಾಂಕ 9-12-2005
2) ಸರ್ಕಾರಿ ಆದೇಶ ಸಂಖ್ಯೆ: ಸಂಕಇ 146 ಕೆಎಂಯು 2007, ದಿನಾಂಕ 06.02.2008
3) ಆಯುಕ್ತರು, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ರವರ ಪತ್ರ ಸಂಖ್ಯೆ: ಆಪ್ರಾಸಂಪ/ಕಿ.ತ.ಸ./ 2009-10/146, ದಿನಾಂಕ 28.07.2009

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಸರ್ಕಾರದ ಆದೇಶದಲ್ಲಿ ಕಿತ್ತೂರು ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ತಜ್ಞರ ಸಮಿತಿಯನ್ನು ದಿನಾಂಕ 9-12-2005ರಿಂದ ಒಂದು ವರ್ಷದ ಅವಧಿಗೆ ರಚಿಸಲಾಗಿತ್ತು. ಸದರಿ ಸಮಿತಿಯನ್ನು ಮೇಲೆ ಓದಲಾದ (2)ರ ಸರ್ಕಾರಿ ಆದೇಶದಲ್ಲಿ ದಿನಾಂಕ 09.12.2006 ರಿಂದ ಎರಡು ವರ್ಷಗಳ ಅವಧಿಗೆ ಮುಂದುವರೆಸಿ ಆದೇಶಿಸಿದೆ. ಮೇಲೆ ಓದಲಾದ (3)ರ ಪತ್ರದಲ್ಲಿ ಆಯುಕ್ತರು, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಇವರು 14 ಸದಸ್ಯರ ಪಟ್ಟಿಯನ್ನು ಅವರ ವಿಳಾಸಗಳೊಂದಿಗೆ ಸಲ್ಲಿಸಿ, ಸದರಿ ಸಮಿತಿಯನ್ನು ಎರಡು ವರ್ಷದ ಅವಧಿಯವರೆಗೆ ಪುನರ್‌ರಚಿಸಿ ಮುಂದುವರೆಸಬೇಕೆಂದು ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 20 ಕೆಎಂಯು 2009, ಬೆಂಗಳೂರು, ದಿನಾಂಕ: 7ನೇ ಸೆಪ್ಟೆಂಬರ್ 2009

ಕಿತ್ತೂರು ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ಸರ್ಕಾರದ ಆದೇಶ ಸಂಖ್ಯೆ: ಸಂಕಇ 133 ಕೆಎಂಯು 2004 ದಿನಾಂಕ 9-12-2005ರಲ್ಲಿ ರಚಿಸಿ ತದ ನಂತರ ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 146 ಕೆಎಂಯು

2007, ದಿನಾಂಕ 06.02.2008 ರನ್ವಯ ಎರಡು ವರ್ಷಗಳ ಅವಧಿಗೆ ವಿಸ್ತರಿಸಿರುವುದನ್ನು ಪುನರ್‌ರಚಿಸಿ ಅನುಬಂಧ – I ರಲ್ಲಿರುವ ಸದಸ್ಯರುಗಳನ್ನೊಳಗೊಂಡ ಸಮಿತಿಯನ್ನು ದಿನಾಂಕ 09.12.2008 ರಿಂದ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಮುಂದುವರೆಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಕೆ. ಧರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ಅನುಬಂಧ–I

(ಸರ್ಕಾರದ ಆದೇಶ ಸಂಖ್ಯೆ ಕಸಂವಾಪ್ರ 20 ಕೆಎಂಯು 2009 ದಿನಾಂಕ: 07.09.2009)

ಕಿತ್ತೂರುಪ್ರದೇಶ ಪ್ರಾರಂಪರಿಕ ಸಮಿತಿ ಸದಸ್ಯರ ವಿವರ

ಕ್ರ. ಸಂ.	ಅಧಿಕಾರಿ/ಅಧಿಕಾರೇತರ ಹೆಸರು	
1.	ಜಿಲ್ಲಾಧಿಕಾರಿಯವರು ಬೆಳಗಾವಿ ಜಿಲ್ಲೆ, ಬೆಳಗಾವಿ	ಅಧ್ಯಕ್ಷರು
2.	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ	ಸದಸ್ಯರು
3.	ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು, ಬೆಳಗಾವಿ	ಸದಸ್ಯರು
4.	ಅಧ್ಯಕ್ಷರು ಗ್ರಾಮ ಪಂಚಾಯತ್, ಕಿತ್ತೂರು	ಸದಸ್ಯರು
5.	ಅಧೀಕ್ಷಕ ಪುರಾತತ್ವ ಸರ್ವೇಕ್ಷಣಾ, ಧಾರವಾಡ ವೃತ್ತ, ಧಾರವಾಡ	ಸದಸ್ಯರು
6.	ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಆಯುಕ್ತರು/ ಪ್ರತಿ ನಿಧಿ, ಬೆಂಗಳೂರು	ಸದಸ್ಯರು
7.	ಡಾ: ಶ್ರೀನಿವಾಸ ಪಾಡಿಗಾರ, ಇತಿಹಾಸ ತಜ್ಞರು, ಭಾರತ ಪ್ರಾಚೀನ ಇತಿಹಾಸ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ	ಸದಸ್ಯರು
8.	ಶ್ರೀಮತಿ ಡಾ. ಸ್ಮಿತಾ ಸುರೇಬಾನಕರ್, ಇತಿಹಾಸತಜ್ಞರು ಇತಿಹಾಸ ವಿಭಾಗ, ರಾಣಿ ಪಾರ್ವತಿ ದೇವಿ ಕಾಲೇಜು, ಬೆಳಗಾವಿ	ಸದಸ್ಯರು
9.	ಜಂಟಿ ನಿರ್ದೇಶಕರು, ಪರಿಸರ ತಜ್ಞರು, ಪರಿಸರ ಇಲಾಖೆ, ಕರ್ನಾಟಕ ಸರ್ಕಾರ ಬೆಳಗಾವಿ	ಸದಸ್ಯರು
10.	ಮುಖ್ಯಸ್ಥರು, ವಾಸ್ತುಶಿಲ್ಪ ವಿಭಾಗ, ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜು, ಹುಬ್ಬಳ್ಳಿ	ಸದಸ್ಯರು
11.	ಉಪ ನಿರ್ದೇಶಕರು, ನಗರ ವಿನ್ಯಾಸ ತಜ್ಞರು, ನಗರ ವಿನ್ಯಾಸ, ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ	ಸದಸ್ಯರು
12.	ಉಪ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಪ್ರವಾಸೋದ್ಯಮ ಕಟ್ಟಡ, ಧಾರವಾಡ	ಸದಸ್ಯರು
13.	ಪ್ರೊ. ಅನಿಲ ಪ್ರಕಾಶ, ಚಿತ್ರಕಲಾವಿದರು, ಪ್ರಾಚಾರ್ಯರು, ಬೆನನ್ ಸ್ಮಿತ್ ಚಿತ್ರಕಲಾ ಶಾಲೆ, ಬೆಳಗಾವಿ	ಸದಸ್ಯರು
14.	ಉಪ ವಿಭಾಗಾಧಿಕಾರಿ, ಬೈಲಹೊಂಗಲ	ಸದಸ್ಯ ಕಾರ್ಯದರ್ಶಿ

ಎಂ.ಕೆ. ಧರ್ಮರಾಜಪ್ಪ
ಪಿ.ಆರ್. 2144
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ವಿಷಯ: ಬಿಜಾಪುರ ಜಿಲ್ಲೆಯ ಆಲಮಟ್ಟಿಯಲ್ಲಿ ಹರ್ಡೇಕರ್ ಮಂಜಪ್ಪನವರ ಸ್ಮಾರಕ ನಿರ್ಮಾಣಕ್ಕಾಗಿ ಅನುದಾನ ನೀಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಇವರ ಪತ್ರ ಸಂ:ಕಸನಿ 13 ಸ್ಮಾರಕ 2009-10, ದಿ:30.07.2009.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 3.07.2009ರ ಪತ್ರದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರವರು ಬಿಜಾಪುರ ಜಿಲ್ಲೆಯ ಆಲಮಟ್ಟಿಯಲ್ಲಿ ಹರ್ಡೇಕರ್ ಮಂಜಪ್ಪನವರ ಸ್ಮಾರಕ ನಿರ್ಮಿಸಲು ರೂ.100.00 ಲಕ್ಷಗಳನ್ನು 2009-10ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕಲ್ಪಿಸುವುದಾಗಿ ಘೋಷಿಸಿದ್ದು, ಜಿಲ್ಲಾಧಿಕಾರಿಗಳು, ಬಿಜಾಪುರ ಜಿಲ್ಲೆ, ಇವರು ರೂ.100.00 ಲಕ್ಷಗಳಿಗೆ ಅಂದಾಜು ವೆಚ್ಚ ಪಟ್ಟಿ ಹಾಗೂ ನೀಲಿ ನಕ್ಷೆಯನ್ನು ಕಳುಹಿಸಿ ಕೊಟ್ಟಿರುತ್ತಾರೆ ಎಂದು ವರದಿ ಮಾಡಿ, ಈ ಯೋಜನೆಗೆ ಪ್ರಸಕ್ತ ಸಾಲಿನಲ್ಲಿ ರೂ.100 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2205-00-800-0-10-059 (ಯೋಜನೆ) ಕ್ರಿಯಾ ಯೋಜನೆ ಸಂಖ್ಯೆ:36 ಸ್ವಾತಂತ್ರ್ಯ ಹೋರಾಟಗಾರರ ಸ್ಮಾರಕ ಅಭಿವೃದ್ಧಿ ಅಡಿ ಭರಿಸಬಹುದೆಂದು ತಿಳಿಸುತ್ತಾ ಸದರಿ ಮೊತ್ತವನ್ನು ಜಿಲ್ಲಾಧಿಕಾರಿಗಳು, ಬಿಜಾಪುರ ಜಿಲ್ಲೆ ಇವರಿಗೆ ಬಿಡುಗಡೆ ಮಾಡಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 35 ಸ್ಮಾಪ್ರನಿ 2009, ಬೆಂಗಳೂರು, ದಿನಾಂಕ: 14ನೇ ಸೆಪ್ಟೆಂಬರ್ 2009

ಬಿಜಾಪುರ ಜಿಲ್ಲೆಯ ಆಲಮಟ್ಟಿಯಲ್ಲಿ ಹರ್ಡೇಕರ್ ಮಂಜಪ್ಪನವರ ಸ್ಮಾರಕ ನಿರ್ಮಿಸಲು ರೂ.100.00 ಲಕ್ಷಗಳು (ರೂಪಾಯಿ ಒಂದು ನೂರು ಲಕ್ಷಗಳು ಮಾತ್ರ)ಗಳನ್ನು ಜಿಲ್ಲಾಧಿಕಾರಿಗಳು, ಬಿಜಾಪುರ ಜಿಲ್ಲೆ, ಬಿಜಾಪುರ, ಇವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಬಿಡುಗಡೆ ಮಾಡಿ ಆದೇಶಿಸಿದೆ.

1. ಈ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಕೆಯಾಗುವಂತೆ ಇಲಾಖೆಯು ನೋಡಿಕೊಳ್ಳತಕ್ಕದ್ದು ಹಾಗೂ ಈ ಯೋಜನೆಯನ್ನು ಇಲಾಖೆಯು ನಿಗದಿತ ಅವಧಿಯೊಳಗೆ ಮುಕ್ತಾಯಗೊಳಿಸಲು ಕ್ರಮ ವಹಿಸತಕ್ಕದ್ದು.
2. ಈ ಮೊತ್ತವು ಸದರಿ ಯೋಜನೆಗೆ ಒಂದು ಸಮಯದ ಅನುದಾನವಾಗಿರುತ್ತದೆ.
3. ಈ ಸ್ಮಾರಕದ ಕಾಮಗಾರಿಯನ್ನು ಜಿಲ್ಲಾಧಿಕಾರಿಗಳು, ಬಿಜಾಪುರ ಜಿಲ್ಲೆ, ಬಿಜಾಪುರ ಇವರ ಉಸ್ತುವಾರಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ಅದರ ನಿಯಮಗಳ 2000ರ ಅಡಿ ಟೆಂಡರ್ ಪ್ರಕ್ರಿಯೆ ಪೂರೈಸಿ ತೆಗೆದುಕೊಳ್ಳಬೇಕೆಂದು ನಿರ್ವಹಣೆ ಆದೇಶಿಸಿದೆ.
4. ಈ ಸ್ಮಾರಕ ನಿರ್ಮಾಣದ ನಂತರ – ಸ್ಮಾರಕ ನಿರ್ವಹಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಡತಕ್ಕದ್ದು.

ಈ ಮೊತ್ತವನ್ನು 2009-10ನೇ ಸಾಲಿನ ಲೆಕ್ಕ ಶೀರ್ಷಿಕೆ 2205-00-800-0-10-059 (ಸ್ವಾತಂತ್ರ್ಯ ಹೋರಾಟಗಾರರ ಸ್ಮಾರಕ ಅಭಿವೃದ್ಧಿ) (ಯೋಜನೆ) ಅಡಿಯಲ್ಲಿ ಒದಗಿಸಲಾಗಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 844 ವೆಚ್ಚ-7/2009, ದಿನಾಂಕ: 07.09.2009 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಯೋಇ 76 ಜಶ 2009, ದಿನಾಂಕ: 26.08.09ರಲ್ಲಿ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಕೆ. ಧರ್ಮರಾಜಪ್ಪ

ಪಿ.ಆರ್. 2182 ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ: ಶ್ರೀ ಹೆಚ್.ಎಸ್. ಪ್ರಕಾಶ್, ಜಂಟಿ ನಿರ್ದೇಶಕರು, ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ವಿಚಾರಣಾಧಿಕಾರಿಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ:
1. ಕೈಗಾರಿಕಾಭಿವೃದ್ಧಿ ಆಯುಕ್ತರ ಪತ್ರದ ಸಂಖ್ಯೆ: ಆಡಳಿತ/ಸಿಬ್ಬಂಧಿ/ ಇ2/ 138/ 2007-08, ದಿನಾಂಕ: 11.03.2008.
2. ಸರ್ಕಾರದ ಆದೇಶ ಸಂಖ್ಯೆ: ವಾಕೈ 51 ಕೈಸೇವಿ 2008, ಬೆಂಗಳೂರು, ದಿ: 09.04.2008.
3. ಸರ್ಕಾರದ ಆದೇಶ ಸಂಖ್ಯೆ: ವಾಕೈ 44 ಕೈಸೇವಿ 2009, ಬೆಂಗಳೂರು, ದಿ: 07.03.2009.
4. ಕಾರಣ ಕೇಳುವ ನೋಟೀಸ್ ದಿ: 29.04.2009.
5. ಕಾರಣ ಕೇಳುವ ನೋಟೀಸಿಗೆ ಹೇಳಿಕೆ ದಿ: 16.05.2009.

ಪ್ರಸ್ತಾವನೆ:

ಮೇಲೆ ಓದಲಾದ (1) ರ ಪತ್ರದಲ್ಲಿ ಕೈಗಾರಿಕಾಭಿವೃದ್ಧಿ ಆಯುಕ್ತರು, ಶ್ರೀ ಹೆಚ್.ಎಸ್. ಪ್ರಕಾಶ್, ಹಿಂದಿನ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೀದರ್, ಪ್ರಸ್ತುತ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಡಗು, ರವರು ದಿ: 06.03.2008 ರಂದು ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ಕರೆಯಲಾದ ಇಲಾಖೆಯಲ್ಲಿನ ಜಂಟಿ ನಿರ್ದೇಶಕರ ಸಭೆಗೆ ಪೂರ್ವಾನುಮತಿ ಇಲ್ಲದೇ ಗೈರು ಹಾಜರಾಗಿರುವುದು ಹಾಗೂ ಸದರಿ ಸಭೆಗೆ ಯಾವುದೇ ಅಧಿಕಾರಿಯನ್ನು ನೇಮಿಸದೇ ಇರುವುದರಿಂದ ಜಿಲ್ಲೆಯ ಅಭಿವೃದ್ಧಿ ಯೋಜನೆಗಳ ಪ್ರಗತಿಯನ್ನು ಸಮರ್ಪಕವಾಗಿ ಪರಿಶೀಲಿಸಲು ಸಾಧ್ಯವಾಗದೇ ಇರುವ ಕಾರಣ ಸಹಾಯಧನ ಬಿಡುಗಡೆಗಾಗಿ ಅರ್ಹವಿರುವ ಘಟಕಗಳನ್ನು ತಪಾಸಣೆಮಾಡಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸದರಿ ಅಧಿಕಾರಿಗೆ ಸೂಚಿಸಲಾಗಿದ್ದು ಹಾಗೂ ಸದರಿ ಅಧಿಕಾರಿಯವರು ನಿಗಧಿತ ಅವಧಿಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸದೇ ಇರುವ ಕಾರಣ ನಂತರ ಸಹಾಯಧನ ಮಂಜೂರಾತಿ ವಿವರಗಳನ್ನು ನೀಡುವಲ್ಲಿ ಕೆಲವೊಂದು ನ್ಯೂನತೆ ಕಂಡುಬಂದ ಹಿನ್ನೆಲೆಯಲ್ಲಿ ಸದರಿಯವರಿಗೆ ಕೈಗಾರಿಕಾ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರು ವಿವರಣೆ ನೀಡುವಂತೆ ಸೂಚಿಸಿದರು ಸಹ ವಿವರಣೆಯನ್ನು ನೀಡದೇ ಇರುವ ಬಗ್ಗೆ ಹಾಗೂ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಬೇಕಾದ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿಯಲ್ಲಿಯೂ ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಪಿ.ಎಮ್.ಆರ್.ವೈ. ಸುವರ್ಣ ಕಾಯಕ ಉದ್ಯೋಗ ಯೋಜನೆ ಕಛೇರಿಯ ಸಾಮಾನ್ಯ ಹಾಜರಾತಿಯಲ್ಲಿ ನ್ಯೂನತೆ ಕಂಡುಬಂದಿರುವುದರಿಂದ ಮತ್ತು ಸದರಿ ಅಧಿಕಾರಿಯು ವೈದ್ಯಕೀಯ ರಜೆಯನ್ನು ಸಲ್ಲಿಸಿದ್ದು ರಜೆಯ ಮೇಲೆ ತೆರಳುವ ಮೊದಲು ಕೇಂದ್ರ ಕಛೇರಿಗೆ ತಿಳಿಸದೇ ಹಾಗೂ ರಜೆಯ ಅವಧಿಯಲ್ಲಿ ಕಾರ್ಯನಿರ್ವಹಿಸಲು ಪ್ರಭಾರ ವ್ಯವಸ್ಥೆಯನ್ನು ಮಾಡದೇ ರಜೆಯ ಮೇಲೆ ತೆರಳುವ ಬಗ್ಗೆ ಸ್ಪಷ್ಟೀಕರಣವನ್ನು ಕೋರಿದರೂ ಉತ್ತರಿಸದೇ ಇದ್ದು, ಮುಂತಾದ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ಅನುವಾಗುವಂತೆ ಅಮಾನತ್ತಿನಲ್ಲಿಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ಮೇಲೆ ಓದಲಾದ (2) ರ ಆದೇಶದಲ್ಲಿ ಶ್ರೀ ಹೆಚ್.ಎಸ್. ಪ್ರಕಾಶ್ ಹಿಂದಿನ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೀದರ್, ರವರು ಇಲಾಖಾ ಜಂಟಿ ನಿರ್ದೇಶಕರ ಸಭೆಗೆ ಪೂರ್ವಾನುಮತಿ ಇಲ್ಲದೇ ಗೈರು ಹಾಜರಾಗಿರುವುದು ಸಹಾಯಧನ ಬಿಡುಗಡೆಯಲ್ಲಿ ನ್ಯೂನತೆ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿಯಲ್ಲಿ ಕುಂಠಿತ ಹಾಗೂ ಕೆಲಸ ಕಾರ್ಯಗಳ ನಿರ್ವಹಣೆಯಲ್ಲಿ ಅಸಡ್ಡೆ, ನಿರಾಸಕ್ತಿ ಹಾಗೂ ಬೇಜವಾಬ್ದಾರಿತನ ತೋರಿರುವುದು ಕಂಡುಬಂದಿದ್ದು ಇವರ ಕಾರ್ಯನಿರ್ವಹಣೆಯು ತೃಪ್ತಿಕರವಾಗಿಲ್ಲದೇ ಇರುವ ಕಾರಣ ಮುಂತಾದ ಆರೋಪಗಳ ಬಗ್ಗೆ ಇವರ ವಿರುದ್ಧ ಇಲಾಖಾ ವಿಚಾರಣೆ ಕಾಯ್ದಿರಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10 (1)ರ ಅನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು.

ಮೇಲೆ ಓದಲಾದ (3) ರ ಸರ್ಕಾರದ ಆದೇಶದಲ್ಲಿ ಶ್ರೀ ಹೆಚ್.ಎಸ್. ಪ್ರಕಾಶ್, ಹಿಂದಿನ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೀದರ್, ಇವರ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ/ ಶಿಸ್ತು ಕ್ರಮಗಳನ್ನು ಕಾಯ್ದಿರಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 10 (5) (ಸಿ) ರ ಅನ್ವಯ ಇವರ ಅಮಾನತ್ತನ್ನು ತಕ್ಷಣದಿಂದ ಜಾರಿಗೆ ಬರುವಂತೆ ತೆರವುಗೊಳಿಸಿ ಸೇವೆಗೆ ಪುನರ್ ಸ್ಥಾಪಿಸಲಾಗಿತ್ತು.

ಮೇಲೆ ಓದಲಾದ (4) ರ ನೋಟೀಸಿನಲ್ಲಿ ಶ್ರೀ ಹೆಚ್.ಎಸ್. ಪ್ರಕಾಶ್, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಇವರು ಎಸಗಿರುವ ಆರೋಪಗಳ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರಡಿ ಇಲಾಖಾ ವಿಚಾರಣೆ ನಡೆಸಲು ಉದ್ದೇಶಿಸಿ ಕಾರಣ ಕೇಳುವ ನೋಟೀಸಿನೊಂದಿಗೆ ದೋಷಾರೋಪಣಾ ಪಟ್ಟಿ ಇನ್ನಿತರೆ ಅನುಬಂಧಗಳನ್ನು ದಿ: 29.04.2009 ರಂದು ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ (5) ರ ಪತ್ರದಲ್ಲಿ ಕಾರಣ ಕೇಳುವ ನೋಟೀಸಿಗೆ ಶ್ರೀ ಹೆಚ್.ಎಸ್. ಪ್ರಕಾಶ್, ಜಂಟಿ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಇವರು ಲಿಖಿತ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿ ತನ್ನ ಮೇಲೆ ಹೊರಡಿಸಿರುವ ಆರೋಪಗಳಿಂದ ಮುಕ್ತರನ್ನಾಗಿ ಮಾಡಿ ವಿಚಾರಣೆಯನ್ನು ಕೈಬಿಡಲು ಕೋರಿದ್ದಾರೆ. ಸರ್ಕಾರವು ವಿಚಾರಣೆಯನ್ನು ನಡೆಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ವಾಕೈ 51 ಕೈಸೇವಿ 2008, ಬೆಂಗಳೂರು, ದಿನಾಂಕ: 11ನೇ ಸೆಪ್ಟೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಶೀಲಿಸಿದ ನಂತರ ಶ್ರೀ ಹೆಚ್.ಎಸ್. ಪ್ರಕಾಶ್, ಜಂಟಿ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಇವರು ಜಿಲ್ಲಾ ಕೈಗಾರಿಕಾ ಕೇಂದ್ರ, ಬೀದರ್, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಜಂಟಿ ನಿರ್ದೇಶಕರ ಸಭೆಗೆ ಪೂರ್ವಾನುಮತಿ ಇಲ್ಲದೇ ಗೈರು ಹಾಜರಾಗಿರುವುದು ಜಿಲ್ಲೆಯ ಅಭಿವೃದ್ಧಿ ಯೋಜನೆಗಳ ಪ್ರಗತಿಯನ್ನು ಸಮರ್ಪಕವಾಗಿ ಪರಿಶೀಲಿಸದೇ ಇರುವುದು, ಸಹಾಯಧನ ಬಿಡುಗಡೆಗಾಗಿ ಅರ್ಹವಿರುವ ಘಟಕಗಳನ್ನು ತಪಾಸಣೆ ಮಾಡದೇ ಇರುವುದು, ಸಹಾಯಧನ ಮಂಜೂರಾತಿಯಲ್ಲಿ ನ್ಯೂನ್ಯತೆ ಕಂಡುಬರುವುದು, ಪಿ.ಎಮ್.ಆರ್.ವೈ.

ಸುವರ್ಣ ಕಾಯಕ ಉದ್ಯೋಗ ಯೋಜನೆಯಲ್ಲಿ ನ್ಯೂನ್ಯತೆ ಕಂಡುಬಂದಿರುವುದು, ಕಾರ್ಯಕ್ರಮಗಳನ್ನು ನಿರ್ವಹಿಸುವಲ್ಲಿ, ಅನುಷ್ಠಾನಗೊಳಿಸುವಲ್ಲಿ ನಿಯಮಾವಳಿಗಳನ್ನು ಪಾಲಿಸದೇ ಕರ್ತವ್ಯ ಲೋಪ, ಎಸಗಿರುವುದರಿಂದ ಕೆ.ಸಿ.ಎಸ್. (ಸಿ.ಸಿ.ಎ) ನಿಯಮಾವಳಿ 1957ರ ನಿಯಮ 11ರಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಶ್ರೀ ಬಿ.ಎಲ್. ಶ್ರೀಕಂಠಯ್ಯ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ನಂ. 239/1, ನಾಗಶ್ರೀ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯಾಗಿ ಹಾಗೂ ಶಿಸ್ತು ಪ್ರಾಧಿಕಾರದ ಪರವಾಗಿ ಪ್ರಕರಣವನ್ನು ವಿಚಾರಣಾಧಿಕಾರಿಗಳ ಮುಂದೆ ಮಂಡಿಸಲು ಶ್ರೀ ಬಿ. ಮಹೇಶ್, ಉಪ ನಿರ್ದೇಶಕರು, (ಆಡಳಿತ) ಕೇಂದ್ರ ಕಛೇರಿ, ಬೆಂಗಳೂರು, ಇವರನ್ನು ಅಥವಾ ಇವರ ಸ್ಥಾನದಲ್ಲಿ ವರ್ಗಾವಣೆಗೊಂಡು ಕರ್ತವ್ಯ ನಿರ್ವಹಿಸುವ ಅಧಿಕಾರಿಯವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಿದೆ.

ವಿಚಾರಣಾಧಿಕಾರಿಗಳು, ವಿಚಾರಣೆಯನ್ನು ಕೈಗಾರಿಕಾಭಿವೃದ್ಧಿ ಆಯುಕ್ತರ ಕಛೇರಿಯಲ್ಲಿ ಅಥವಾ ಅವರು ಗುರುತಿಸಿ ನಿಗಧಿಪಡಿಸಿರುವ ಸ್ಥಳದಲ್ಲಿ ನಡೆಸತಕ್ಕದ್ದು. ಈ ಉದ್ದೇಶಕ್ಕಾಗಿ ಲಭ್ಯವಿರುವ ಶೀಘ್ರಲಿಪಿಗಾರರು/ಬೆರಳಚ್ಚುಗಾರರ ಸಹಾಯವನ್ನು ಮತ್ತು ಲೇಖನ ಸಾಮಗ್ರಿಗಳನ್ನು ಒದಗಿಸಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯವರಿಗೆ ಸೂಚಿಸಲಾಗಿದೆ.

ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ಈ ಸಂಬಂಧ ವಿಚಾರಣಾಧಿಕಾರಿಗಳಿಗೆ ನಿಗಧಿತ ಸಂಚಿತ ಸಂಭಾವನೆಯಾದ ರೂ. 8,000/- (ರೂಪಾಯಿ ಎಂಟು ಸಾವಿರ ರೂಪಾಯಿಗಳು ಮಾತ್ರ) ಗಳು ಹಾಗೂ ವಾಹನ ಭತ್ಯೆ ರೂ. 1,500/- (ರೂಪಾಯಿ ಒಂದು ಸಾವಿರದ ಐದು ನೂರು ರೂಪಾಯಿಗಳು ಮಾತ್ರ)ಗಳನ್ನು ಸಂಬಂಧಿಸಿದ ಕಛೇರಿಯ ಲೆಕ್ಕ ಶೀರ್ಷಿಕೆಯಿಂದ ಕೈಗಾರಿಕಾಭಿವೃದ್ಧಿ ಆಯುಕ್ತರೇ ಪಾವತಿ ಮಾಡುವುದು. ವಿಚಾರಣಾಧಿಕಾರಿಗಳು 3 ತಿಂಗಳೊಳಗಾಗಿ ವಿಚಾರಣೆಯನ್ನು ಪೂರೈಸಿ ವಿಚಾರಣಾ ವರದಿಯನ್ನು ಸಲ್ಲಿಸುವಂತೆ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಸಿ. ಪ್ರಕಾಶ್

ಪಿ.ಆರ್. 2159 ಸರ್ಕಾರದ ಅಧೀನ ಕಾರ್ಯದರ್ಶಿ,

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, (ಸೇವೆಗಳು/ಸಮನ್ವಯ)

ವಿಷಯ: ಶ್ರೀ ಎಸ್.ಆರ್.ನಿಡಗುಂದಿ, ಉಪನಿರ್ದೇಶಕರು (ಅಮಾನತ್ತು), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ಬಾಕಿಯಿರಿಸಿ, ಅಮಾನತ್ತು ತೆರವುಗೊಳಿಸುವ ಕುರಿತು.

ಓದಲಾಗಿದೆ: 1) ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಅ.ಸ.ಪತ್ರ ಸಂಖ್ಯೆ:ಗಭೂಇ/ಆ.ಶಾ./ 2008-09/3622, ದಿನಾಂಕ:07.01.2009.

2) ದಿ:19-01-09 ರ ಸರ್ಕಾರಿ ಆದೇಶ ಸಂಖ್ಯೆ:ಸಿಐ 04 ಎಂಜಿಎಸ್ 2009.

3) ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಅ.ಸ.ಪತ್ರ ಸಂಖ್ಯೆ:ಗಭೂಇ/ ಸಿಬ್ಬಂದಿ ಅ1/2009-10/2725, ದಿನಾಂಕ:29.08.2009.

ಪ್ರಸ್ತಾವನೆ:

ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು ಮೇಲೆ (1)ರಲ್ಲಿ ಓದಲಾದ ದಿ:07-01-09 ರ ಪತ್ರದಲ್ಲಿ ಸೇಡಂ ನ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕಛೇರಿಯಲ್ಲಿ ಉಪನಿರ್ದೇಶಕರು, ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಎಸ್.ಆರ್.ನಿಡಗುಂದಿ, ಇವರು ಕರ್ತವ್ಯ ನಿರ್ಲಕ್ಷ್ಯತೆಯನ್ನು ತೋರಿಸಿ, ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡಿರುವುದು ಮತ್ತು ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟಾಗಲು ಕಾರಣಕರ್ತರಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಇವರನ್ನು ಅಮಾನತ್ತುಗೊಳಿಸಲು ಶಿಫಾರಸ್ಸು ಮಾಡಿದ್ದರ ಮೇರೆಗೆ, ಮೇಲೆ (2) ರಲ್ಲಿ ಓದಲಾದ ದಿ:19-01-09 ರ ಸರ್ಕಾರಿ ಆದೇಶದಲ್ಲಿ ಶ್ರೀ ಎಸ್.ಆರ್.ನಿಡಗುಂದಿ, ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಸೇಡಂ ಇವರನ್ನು, ಇವರ ವಿರುದ್ಧದ ಆರೋಪಗಳ ಕುರಿತು ವಿಚಾರಣೆಯನ್ನು ಕಾಯ್ದಿರಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 10(1)(ಡಿ)ರ ಪ್ರಕಾರ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸರ್ಕಾರವು ಸೇವೆಯಿಂದ ಅಮಾನತ್ತುಗೊಳಿಸಿತ್ತು.

ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು ಮೇಲೆ (3) ರಲ್ಲಿ ಓದಲಾದ ದಿ:29.08.2009 ರ ಅರೆ ಸರ್ಕಾರಿ ಪತ್ರದಲ್ಲಿ, ಶ್ರೀ ಎಸ್.ಆರ್.ನಿಡಗುಂದಿ, ಉಪನಿರ್ದೇಶಕರು (ಅಮಾನತ್ತು), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಮೇಲಿನ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಸೇವೆಯಲ್ಲಿ ಪುನರ್ ಸ್ಥಾಪಿಸಿ ಉಪನಿರ್ದೇಶಕರು, ಕಾರವಾರ, ಇಲ್ಲಿಗೆ ನಿಯುಕ್ತಿಗೊಳಿಸಲು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸಿದೆ:

ಸರ್ಕಾರದ ಆದೇಶ ಸಂಖ್ಯೆ:ಸಿಐ.04.ಎಂಜಿಎಸ್.2009, ಬೆಂಗಳೂರು, ದಿನಾಂಕ: 8ನೇ ಸೆಪ್ಟೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಮೇರೆಗೆ, ಶ್ರೀ ಎಸ್.ಆರ್.ನಿಡಗುಂದಿ, ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ವಿರುದ್ಧದ ಆರೋಪಗಳ ಕುರಿತು ನಿಯಮಾನುಸಾರ ವಿಚಾರಣೆಯನ್ನು ಕಾಯ್ದಿರಿಸಿ, ಅಮಾನತ್ತನ್ನು ತೆರವುಗೊಳಿಸಿದೆ.

ಅಮಾನತ್ತು ತೆರವುಗೊಳಿಸಿದ ನಂತರ, ಶ್ರೀ ಎಸ್.ಆರ್.ನಿಡಗುಂದಿ, ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರನ್ನು ಉಪನಿರ್ದೇಶಕರು, ಕಾರವಾರ, ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಿ ಆದೇಶಿಸಿದೆ.

ಶ್ರೀ ಎಸ್.ಆರ್.ನಿಡಗುಂದಿ ಇವರು ಸೇರಿಕೆ ಕಾಲ, ಪ್ರಯಾಣಭತ್ಯೆ ಮತ್ತು ಇತರೆ ಭತ್ಯೆಗಳನ್ನು ಪಡೆಯಲು ಅರ್ಹರಾಗಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2160 **ಎ.ಪಿ. ರಾಮಕೃಷ್ಣ**

ಪೀಠಾಧಿಕಾರಿ(ಗಣಿ) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ವಿಷಯ: ಶ್ರೀ ಹೆಚ್.ಪಿ. ಮಲ್ಲೇಶ್, ಹಿರಿಯಭೂವಿಜ್ಞಾನಿ (ಖನಿಜ)(ಪ್ರ) (ಅಮಾನತ್ತು), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ಬಾಕಿಯಿರಿಸಿ, ಅಮಾನತ್ತು ತೆರವುಗೊಳಿಸುವ ಕುರಿತು.

ಓದಲಾಗಿದೆ:
1) ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಅ.ಸ.ಪತ್ರ ಸಂಖ್ಯೆ:ಗಭೂಇ/ಆ.ಶಾ./2008–09, ದಿನಾಂಕ:16.03.2009.
2) ದಿ:17–03–09 ರ ಸರ್ಕಾರಿ ಆದೇಶ ಸಂಖ್ಯೆ:ಸಿಐ 25 ಎಂಜಿಎಸ್ 2009.
3) ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಅ.ಸ.ಪತ್ರ ಸಂಖ್ಯೆ:ಗಭೂಇ/ಸಿಬ್ಬಂದಿ ಅ1/2009–10/2725, ದಿನಾಂಕ:29.08.2009.

ಪ್ರಸ್ತಾವನೆ:

ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು ಮೇಲೆ (1)ರಲ್ಲಿ ಓದಲಾದ ದಿ:16–03–09ರ ಪತ್ರದಲ್ಲಿ ಬಳ್ಳಾರಿಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕಛೇರಿಯಲ್ಲಿ ಹಿರಿಯಭೂವಿಜ್ಞಾನಿ(ಖನಿಜ)(ಪ್ರ) ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಹೆಚ್.ಪಿ. ಮಲ್ಲೇಶ್, ಇವರು, ಕರ್ತವ್ಯ ನಿರ್ಲಕ್ಷ್ಯತೆಯನ್ನು ತೋರಿಸಿ, ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಇವರ ವಿರುದ್ಧ ಶಿಸ್ತಿನ ಕ್ರಮವನ್ನು ಬಾಕಿಯಿರಿಸಿ, ಇವರನ್ನು ಅಮಾನತ್ತಿನಲ್ಲಿಡಲು ಶಿಫಾರಸ್ಸು ಮಾಡಿದ್ದರ ಮೇರೆಗೆ, ಮೇಲೆ (2) ರಲ್ಲಿ ಓದಲಾದ ದಿ:17–03–09ರ ಸರ್ಕಾರಿ ಆದೇಶದಲ್ಲಿ ಶ್ರೀ ಹೆಚ್.ಪಿ. ಮಲ್ಲೇಶ್, ಹಿರಿಯ ಭೂವಿಜ್ಞಾನಿ (ಖನಿಜ)(ಪ್ರ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬಳ್ಳಾರಿ ಇವರನ್ನು, ಇವರ ವಿರುದ್ಧದ ಆರೋಪಗಳ ಕುರಿತು ವಿಚಾರಣೆಯನ್ನು ಕಾಯ್ದಿರಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 10(1)(ಡಿ)ರ ಪ್ರಕಾರ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸರ್ಕಾರವು ಸೇವೆಯಿಂದ ಅಮಾನತ್ತುಗೊಳಿಸಿತ್ತು.

ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು ಮೇಲೆ (3) ರಲ್ಲಿ ಓದಲಾದ ದಿ:29.08.2009 ರ ಅರೆ ಸರ್ಕಾರಿ ಪತ್ರದಲ್ಲಿ, ಶ್ರೀ ಹೆಚ್.ಪಿ. ಮಲ್ಲೇಶ್, ಹಿರಿಯಭೂವಿಜ್ಞಾನಿ(ಖನಿಜ)(ಪ್ರ) (ಅಮಾನತ್ತು), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಮೇಲಿನ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಸೇವೆಯಲ್ಲಿ ಪುನರ್ ಸ್ಥಾಪಿಸಿ ಹಿರಿಯಭೂವಿಜ್ಞಾನಿ, ದಾವಣಗೆರೆ (ನೂತನ ಕಛೇರಿ), ಇಲ್ಲಿಗೆ ನಿಯುಕ್ತಿಗೊಳಿಸಲು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸಿದೆ:

ಸರ್ಕಾರದ ಆದೇಶ ಸಂಖ್ಯೆ:ಸಿಐ.25.ಎಂಜಿಎಸ್.2009, ಬೆಂಗಳೂರು, ದಿನಾಂಕ: 8ನೇ ಸೆಪ್ಟೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಮೇರೆಗೆ, ಶ್ರೀ ಹೆಚ್.ಪಿ. ಮಲ್ಲೇಶ್, ಹಿರಿಯಭೂವಿಜ್ಞಾನಿ(ಖನಿಜ) (ಪ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ವಿರುದ್ಧದ ಆರೋಪಗಳ ಕುರಿತು ನಿಯಮಾನುಸಾರ ವಿಚಾರಣೆಯನ್ನು ಕಾಯ್ದಿರಿಸಿ, ಅಮಾನತ್ತನ್ನು ತೆರವುಗೊಳಿಸಿದೆ.

ಅಮಾನತ್ತು ತೆರವುಗೊಳಿಸಿದ ನಂತರ, ಶ್ರೀ ಹೆಚ್.ಪಿ. ಮಲ್ಲೇಶ್, ಹಿರಿಯಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರನ್ನು ಹಿರಿಯ ಭೂವಿಜ್ಞಾನಿ, ದಾವಣಗೆರೆ (ನೂತನ ಕಛೇರಿ) ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಿ ಆದೇಶಿಸಿದೆ.

ಶ್ರೀ ಹೆಚ್.ಪಿ. ಮಲ್ಲೇಶ್ ಇವರು ಸೇರಿಕೆ ಕಾಲ, ಪ್ರಯಾಣಭತ್ಯೆ ಮತ್ತು ಇತರೆ ಭತ್ಯೆಗಳನ್ನು ಪಡೆಯಲು ಅರ್ಹರಾಗಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2161 ಎ.ಪಿ. ರಾಮಕೃಷ್ಣ

ಪೀಠಾಧಿಕಾರಿ(ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

COMMERCE AND INDUSTRIES SECRETARIAT

Sub: Sanction of land to M/s JSW Steel Ltd., Bellary to fill up the discrepancies of land allotment in earlier Govt. Orders – Reg.

Read: 1. Govt. Order No. CI 153 SPI 2003 dated 22.07.2003.

2. Govt. Order No. CI 82 SPI 2005 dated 06.08.2007.
3. M/s JSW Steel Ltd. letter No. JSW/L&L/2007-08 dated 11.12.2007.
4. Letter No. ಕಂ:ಭೂಸ್ವಾ:106:07-08 dated 23.03.2009 of Deputy Commissioner, Bellary District.
5. M/s JSW Steel Ltd. letter No. JSW/Blr dated 02.05.2009.
6. Letter No. VNSL/Land/2009-10 dated 12.05.2009 of Managing Director, Vijayanagar Steel Limited.

Preamble:

Land to an extent of 615 acres was allotted to M/s JSW Steel Ltd. vide Govt. Order No. CI 153 SPI 2003 dated 22.07.2003 read at (1) above for slime disposal at Rs. 45,000/- per acre. Likewise, land to an extent of 1700 acres was allotted to M/s JSW Steel Ltd. vide Govt. Order No. CI 82 SPI 2005 dated 06.08.2007 read at (2) above for 10 MT expansion project at Rs.1,22,199/- per acre.

M/s JSW Steel Ltd. vide their letter dated 11.12.2007 read at (3) above has intimated that there are discrepancies in the lands allotted to their unit on lease-cum-sale basis, which was allotted vide Government Orders read at (1) & (2) above.

As per request of the said unit, letter No. CI 314 SPI 2002 dated 24.01.2008 was addressed to the Deputy Commissioner, Bellary District for examining the discrepancies and to survey land at Sy. Nos., where discrepancies are noticed. Similarly, the Managing Director, Vijayanagar Steel Ltd. (VNSL) has also written a letter to Deputy Commissioner, Bellary District vide letter No.VNSL/Land/2007-08 dated 20.12.2007.

The Deputy Commissioner, Bellary District vide his letter dated 23.03.2009 read at (4) above has intimated that in lease-cum-sale agreement made on 24.10.2007 by M/s JSW Steel Ltd., the land at Toranagallu village, Sy. No. 382(P) 194.50 acres and 9.44 acres totaling to 203.94 acres handed over to M/s JSW Steel Ltd. by Commerce & Industries Department. But as per Khata extract of Toranagallu village Sy. No. 382, 1041.82 acres of land belongs to Indian Army, wherein there is prohibition for taking any of the activities.

Further there is discrepancy (short fall) to an extent of 72.25 acres at various Sy. Nos. indicated at Annexure-II at Yerabanahalli and Musenayakanahalli which was allotted in the lease-cum-sale agreement made on 15.04.2004.

The Deputy Commissioner, Bellary District has recommended for allotment of alternative land to an extent of 203.94 acres and 72.25 acres totaling to 276.19 acres to M/s JSW Steel Ltd.

The Managing Director of Vijayanagar Steel Ltd. vide his letter dated 12.05.2009 read at (6) above has also intimated that as per their records, land to an extent of 242.92 acres is available with Government.

We have to make rectifications in the lease-cum-sale agreement made on 15.04.2004 for allotment of 615 acres of land for slime disposal. In the said lease-cum-sale agreement, the land to an

extent of 72.25 acres, has to be deducted at various Sy. Nos. indicated in Annexure-II and also 9.44 acres will have to be deducted at Sy.No. 382(P), Toranagallu village.

Likewise, we have to make rectifications in the lease-cum-sale agreement made on 24.10.2007 for allotment of 1700 acres of land for 10 MT expansion project of M/s JSW Steel Ltd. In the said lease-cum-sale agreement, land to an extent of 194.50 acres will have to be deducted from Sy. No. 382(P) of Toranagallu village.

Hence the following order.

Government Order No. CI 314 SPI 2007, Bangalore, Dated: 28th August 2009

Under the circumstances explained above, land to an extent of 242.92 acres is allotted to M/s JSW Steel Ltd. out of balance land available which was acquired for erstwhile Vijayanagar Steel Ltd. for filling up the discrepancies in earlier allotments made in Govt. Orders No. CI 153 SPI 2003 dated 22.07.2003 and No. CI 82 SPI 2005 dated 06.08.2007 at a cost of Rs.1,22,199/- per acre. The Sy. Nos. and extent of land for allotment of 242.92 acres are indicated in the Annexure-I.

72.25 acres of land at various Sy.Nos. indicated in Annexure-II and 9.44 acres at Sy. No. 382(P) will have to be deducted in the lease-cum-sale agreement made on 15.04.2004 for allotment of 615 acres of land for slime disposal. The rectification deed will have to be made accordingly with M/s JSW Steel Ltd.

194.50 acres of land will have to be deducted at Sy.No. 382(P) in lease-cum-sale agreement made on 24.10.2007 for allotment of 1700 acres of land for 10 MT expansion project. The rectification deed will have to be made accordingly with M/s JSW Steel Ltd.

M/s JSW Steel Ltd. will have to make lease cum sale agreement for the lands allotted to an extent of 242.92 acres in lieu of discrepancies in earlier allotment of land. The terms and conditions as stipulated in earlier lease-cum-sale agreements shall be adopted.

The financial implications are indicated below:

I.(a) 72.25 Acres at Rs.45,000/- per acre	Covered under lease cum sale document I	32,51,250
(b) 9.44 Acres (Sy.No. 382(P)) at Rs. 45,000/- per acre		4,24,800
(c) 194.5 Acres (Sy.No. 382(P)) at Rs.1,22,199/- per acre	Covered under lease cum sale document II	2,37,67,705
		Rs.2,74,43,755
II. The value of the land payable for 242.92 acres at Rs.1,22,199/-		**Rs.2,96,84,581**
III. The difference value of the land payable by JSW to Government		**Rs.22,40,825**

M/s JSW Steel Ltd. has to remit an amount of Rs.22,40,825/- (Rupees twenty two lakhs forty thousand eight twenty five only) to the Head of Account "4852-02-800-0-01".

Desk Officer (Technical Cell), Commerce & Industries Department is authorized to sign the lease-cum-sale agreement, rectification of lease-cum-sale agreement and possession certificate.

By order and in the name of Governor of Karnataka

APARNA PAVATE

Desk Officer (Technical Cell), Commerce & Industries Department

ANNEXURE-I

for Govt. Order No. CI 314 SPI 2007 dated 28th August 2009

SY. NOS. AND EXTENT OF LAND FOR ALLOTMENT OF 242.92 ACRES OF LAND TO M/S JSW STEEL LTD.

Village	Survey No.	Extent (In acres)
Musenayakanahalli	18	1.98
	20	7.11

Village	Survey No.	Extent (In acres)
	21	7.00
	22/1	6.80
	22/2	9.00
	23	10.65
	28/1	5.63
	28/2	4.85
	45	93.36
	46	8.06
	47	5.33
	49	7.90
	50	7.00
	58	68.25
GRAND TOTAL		**242.92 Acres**

APARNA PAVATE

Desk Officer (Technical Cell), Commerce & Industries Department

ANNEXURE-II

for Govt. Order No. CI 314 SPI 2007 dated 28th August 2009

Statement indicating the survey number and extent of lands indicating short fall in extent areas

Village	Survey No.	Area allotted to JSW for Slime Pond (as per Lease cum Sale Deed dated 26.5.2004) (In Acres)	Area as per RoR (Pahani) (In Acres)	Shortfall in land (In Acres)
Yerabanahalli	10	11.60	8.57	3.03
"	17	16.80	12.25	4.55
"	18	8.03	3.60	4.43
"	20	7.56	6.94	0.62
"	21	7.00	4.04	2.96
"	23	10.65	4.13	6.52
"	25	16.12	3.22	12.90
"	28	19.00	13.55	5.45
"	29	20.48	16.21	4.27
"	31	13.00	12.18	0.82
"	40	3.50	0.90	2.60
"	41A	22.70	15.98	6.72
"	47	7.43	5.23	2.20
Musenayakanahalli	53	17.42	6.40	11.02
"	54	8.99	4.95	4.04
"	57	3.92	3.80	0.12
Total		**194.20**	**121.95**	**72.25**

RoR – Records of Rights (Pahani)

APARNA PAVATE

P.R. 2107

Desk Officer (Technical Cell), Commerce & Industries Department

Sub: Selection of Organisations for providing services of Event Management, Media Consultancy and Knowledge Partnership for Global India business Meet 2010 – Approval for Selection of preferred Organisation-reg.

Read: 1. G.O.NO.CI 192 SPI 2009dated 06.08.2009.

2. ADDENDUM No.CI 192 SPI 2009 dated 26.8.2009.

Preamble:

Karnataka Udyog Mitra, the Nodal Agency for organizing Global Investors Meet 2010 proposes to engage the services of reputed organizations for providing services of Event Management, Media Consultancy and Knowledge Partnership for Global Investors Meet 2010.

TECSOK was entrusted with the work of calling for EOIs, preparing the tender documents, receiving the duly filled technical and financial bids from prospective tenderers, assisting Karnataka Udyog Mitra, Scrutiny Committee and Selection Committee for evaluation of technical bids and combined evaluation of technically qualified financial bids.

After following all procedures M/s JWT, Bangalore [Lead Partner of the Consortium & Media Consultant, M/s IPAN being the Knowledge Partner and M/s Encompass, the Event Manager] is selected for Media Consultancy, Knowledge Partnership and Event Management for Global Investors Meet 2010.

Hence the following order.

Government Order No: CI 215 SPI 2009, Bangalore, Dated: 9th September 2009

In the circumstances explained above, approval is hereby accorded for the selection of M/s JWT, Bangalore [Lead Partner of the Consortium & Media Consultant, M/s IPAN being the Knowledge Partner and M/s Encompass, the Event Manager] as Media Consultant, Knowledge Partner and Event Manager for Global Investors Meet 2010.

The said organization will have to participate and contribute in all the 4 main Task Forces and 12 sector wise Task Force Committee meetings as Media Consultant/ Knowledge Partner/ Event Manager as it is nominated as member of the said Task Forces constituted in the Government Orders read at [1] & [2] above.

The Terms of reference etc., will be issued separately.

By order and in the name of the Governor of Karnataka

P.R. 2162

APARNA PAVATE

Desk Officer (Technical Cell), Commerce & Industries Dept.

ಜಲ ಸಂಪನ್ಮೂಲ ಸಚಿವಾಲಯ

ವಿಷಯ: ಬೆಳಗಾಂ ಜಿಲ್ಲೆ, ಅಥಣಿ ತಾಲ್ಲೂಕು ಸುಟ್ಟಟ್ಟಿ(ಅಸಂಗಿ ತೋಟ) ಹತ್ತಿರ ಬಾಂದಾರ ನಿರ್ಮಾಣ ಕಾಮಗಾರಿಯ ಇ.ಐ.ಆರ್.ಎಲ್. ಹಾಗೂ ವರ್ಕ್‌ಸ್ಲಿಪ್‌ಗೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ: 1. ಸರ್ಕಾರದ ದಿನಾಂಕ 25/05/2006ರ ಆದೇಶ ಸಂಖ್ಯೆ: ಸನೀಇ 65 ನಯೋಕಾ 2006

2. ಮುಖ್ಯ ಅಭಿಯಂತರರು, ಸಣ್ಣ ನೀರಾವರಿ ಉತ್ತರ ವಲಯ. ಬಿಜಾಪುರ ಇವರ ದಿನಾಂಕ 02/12/08 ರಂದು ಕೊನೆಗೊಂಡ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಎಇ–1/ 2008–09/6345.

ಪ್ರಸ್ತಾವನೆ:

ಬೆಳಗಾಂ ಜಿಲ್ಲೆ, ಅಥಣಿ ತಾಲ್ಲೂಕು ಸುಟ್ಟಟ್ಟಿ(ಅಸಂಗಿ ತೋಟ) ಹತ್ತಿರ ಬಾಂದಾರ ನಿರ್ಮಾಣ ಕಾಮಗಾರಿಯ 43.75 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ (1)ರಲ್ಲಿ ಓದಲಾದ ದಿನಾಂಕ 25/05/2006ರ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ ಹಾಗೂ 2006–07ನೇ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತ ರೂ.47,99,754–57ಗಳ ಮೇಲೆ ಶೇ.5.95ರಷ್ಟು ಹೆಚ್ಚುವರಿ ಮೊತ್ತಕ್ಕೆ ಅಂದರೆ ರೂ.51,91,239–68ಗಳಿಗೆ ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸಲಾಗಿತ್ತು.

2) ಕಾಮಗಾರಿಯು ಜಾರಿಯಲ್ಲಿದ್ದ ಸಂದರ್ಭದಲ್ಲಿ ಮುಖ್ಯ ಇಂಜಿನಿಯರ್‌ರವರು ಸ್ಥಳ ಪರಿವೀಕ್ಷಣೆ ಮಾಡಿ ನೀಡಿದ ಸೂಚನೆಯಂತೆ ಟೆಂಡರ್‌ನಲ್ಲಿ ನಿಗಧಿಪಡಿಸಿದ್ದಕ್ಕಿಂತ ಹೆಚ್ಚುವರಿ ಪರಿಮಾಣಗಳನ್ನು ಹಾಗೂ ಕೆಲವು ಕೆಲಸಗಳನ್ನು ಹೆಚ್ಚುವರಿಯಾಗಿ ಗುತ್ತಿಗೆದಾರರು ನಿರ್ವಹಿಸಿದ್ದು ಈ ಬಗ್ಗೆ ಉಂಟಾಗಿರುವ ರೂ.13,36,169–00ಗಳ (ಇ.ಐ.ಆರ್.ಎಲ್ ಮತ್ತು ವರ್ಕ್‌ಸ್ಲಿಪ್

ಸೇರಿದಂತೆ) ಹೆಚ್ಚಿನ ಆರ್ಥಿಕ ಹೊರೆಗೆ ಅನುಮೋದನೆ ಕೋರಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಹೆಚ್ಚುವರಿಯಾದ ಈ ಮೊತ್ತವನ್ನು ಮಂಜೂರಾದ ಅಂದಾಜು ಮೊತ್ತಕ್ಕೆ ಹೋಲಿಸಿದಾಗ ಶೇ.30.54ರಷ್ಟು ಹೆಚ್ಚವರಿಯಾಗಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 34 ಅಪಿಬಂ 2008, ಬೆಂಗಳೂರು, ದಿನಾಂಕ: 17ನೇ ಸೆಪ್ಟೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಳಗಾಂ ಜಿಲ್ಲೆ, ಅಥಣಿ ತಾಲ್ಲೂಕು ಸುಟ್ಟಟ್ಟಿ(ಅಸಂಗಿ ತೋಟ) ಹತ್ತಿರ ಬಾಂದಾರ ನಿರ್ಮಾಣ ಕಾಮಗಾರಿಯಲ್ಲಿ ನಿರ್ವಹಿಸಲಾಗಿರುವ ಇ.ಐ.ಆರ್.ಎಲ್. ಹಾಗೂ ವರ್ಕ್‌ಸ್ಲಿಪ್‌ನ ಒಳಗೊಂಡ ಒಟ್ಟು ಮೊತ್ತ ರೂ.13,36,169–00ಗಳ (ಹದಿಮೂರು ಲಕ್ಷದ ಮೂವತ್ತಾರು ಸಾವಿರದ ನೂರ ಅರವತ್ತೊಂಭತ್ತು ರೂ.ಗಳು ಮಾತ್ರ) ಹೆಚ್ಚಿನ ಆರ್ಥಿಕ ಹೊರೆಗೆ ಸರ್ಕಾರವು ಅನುಮೋದನೆ ನೀಡಿದೆ.

2) ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಬ್ಲ್ಯೂಡಿ 560 ಎಫ್‌ಸಿ–1/09, ದಿನಾಂಕ 18/07/2009 ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2202

ಕೆ. ಸುಧಾಕರಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ವಿಷಯ: ಬಿಜಾಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕಿನ ಅರೇಶಂಕರ ಮಧ್ಯಮ ನೀರಾವರಿ ಕೆರೆಯನ್ನು ಜಲ ಮೂಲವಾಗಿ ಪರಿಗಣಿಸಿ ಅರೇಶಂಕರ ಮತ್ತು 16 ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಗಾಗಿ ಬಳಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ: ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜೆಪಿ/ಪಿಬಿ–9/2009–10/3565 ದಿ: 19/06/09.

ಪ್ರಸ್ತಾವನೆ:

ಬಿಜಾಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕಿನ ಅರೇಶಂಕರ ಮಧ್ಯಮ ನೀರಾವರಿ ಕೆರೆಯನ್ನು ಜಲಮೂಲವಾಗಿ ಪರಿಗಣಿಸಿ ಅರೇಶಂಕರ ಮತ್ತು ಇತರೇ 16 ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ಕೈಗೊಳ್ಳ ಲಾಗುತ್ತಿದ್ದು, ಸದರಿ ಯೋಜನೆಯಡಿಯಲ್ಲಿ 26.03 ಎಂ.ಸಿ.ಎಫ್.ಟಿ ನೀರು ಬೇಕಾಗಿದೆ. ಈ ಯೋಜನೆಯಡಿ ಕುಡಿಯುವ ನೀರಿನ ಶೇಕರಣೆಗಾಗಿ ಬೇಕಾಗುವ 26.03 ಎಂ.ಸಿ.ಎಫ್.ಟಿ ನೀರನ್ನು ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಎಡದಂಡೆ ಕಾಲುವೆಯಿಂದ ತಾತ್ಕಾಲಿಕವಾಗಿ ರೈಜಿಂಗ್ ಮೇನ್ ಹಾಕಿ ನೀರನ್ನು ಕೆರೆಗೆ ಪಂಪ್ ಮಾಡಿ ಬಳಸಿಕೊಳ್ಳುವ ಸಲುವಾಗಿ ಸಣ್ಣ ನೀರಾವರಿ ಇಲಾಖೆಯ ಉಸ್ತುವಾರಿಯಲ್ಲಿರುವ ಬಸವನ ಬಾಗೇವಾಡಿ ತಾಲ್ಲೂಕಿನ ಅರೇಶಂಕರ ಮಧ್ಯಮ ನೀರಾವರಿ ಕೆರೆಯನ್ನು "ಇಂಪೌಂಡಿಂಗ್ ರಿಜರ್ವಾಯರ್" ಎಂದು ಪರಿಗಣಿಸಲು ಅನುಮತಿ ನೀಡುವಂತೆ ಕೋರಿ ಮೇಲೆ ಓದಲಾದ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 49 ಕೆಜಿದು 2008 ಬೆಂಗಳೂರು, ದಿನಾಂಕ: 14ನೇ ಸೆಪ್ಟೆಂಬರ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯು ಬಿಜಾಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕಿನ ಅರೇಶಂಕರ ಹಾಗೂ ಇತರೇ 16 ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ಕೈಗೊಳ್ಳುವ ಸಲುವಾಗಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯ ಅರೇಶಂಕರ ಮಧ್ಯಮ ನೀರಾವರಿ ಕೆರೆಯನ್ನು "ಇಂಪೌಂಡಿಂಗ್ ರಿಜರ್ವಾಯರ್" ಎಂಬುದಾಗಿ ಪರಿಗಣಿಸಲು ಕೆಳಕಂಡ ಷರತ್ತುಗಳೊಂದಿಗೆ ಸರ್ಕಾರವು ಅನುಮೋದನೆ ನೀಡಿದೆ.

1. ಕುಡಿಯುವ ನೀರಿಗಾಗಿ ಬೇಕಾಗುವ 26.03 ಎಂ.ಸಿ.ಎಫ್.ಟಿ ನೀರನ್ನು ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಎಡದಂಡೆ ಕಾಲುವೆಯಿಂದ ತಾತ್ಪೂರ್ತಿಕವಾಗಿ ರೈಜಿಂಗ್ ಮೈನ್ ಹಾಕಿ ನೀರನ್ನು ಕೆರೆಗೆ ಪಂಪ್ ಮಾಡಿಕೊಳ್ಳಲು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯು ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.
2. ಹಾಲಿ ಇರುವ ಕೆರೆಯ ಅಚ್ಚುಕಟ್ಟುದಾರರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವುದು.
3. ಪ್ರಸ್ತಾಪಿತ ಯೋಜನೆ ಕೈಗೊಳ್ಳುವಾಗ ಕೆರೆಯ ಮೂಲ ಸ್ವರೂಪಕ್ಕೆ ಧಕ್ಕೆಯಾದಲ್ಲಿ ಅದರ ವೆಚ್ಚವನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯು ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2166

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ವಿಷಯ: ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು ಮುರುಕಣಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ದಿನಾಂಕ02/03/09 ರಂದು ಕೊನೆಗೊಂಡ ಪತ್ರ ಸಂಖ್ಯೆ:ಮುಸನೀ(ದ)/ಲೆಶಾ/ ಲೆಸ–1/3/ಭೂಸ್ವಾಧೀನ/2008–09/524.

ಪ್ರಸ್ತಾವನೆ:

ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್ ರವರು ಮೇಲೆ ಓದಲಾದ ಪತ್ರದಲ್ಲಿ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು ಮುರುಕಣಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಸೋಮೇದ್ವಾಪನಹಳ್ಳಿ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 01/10/1981
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 31/07/1985

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ರಾಮನಗರ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣ ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ದಿನಾಂಕ 19/04/97ರಂದು ನೀಡಿದ ತೀರ್ಪಿನಲ್ಲಿ ಪರಿಹಾರ ಧನವನ್ನು ಪ್ರತಿ ಎಕರೆಗೆ ರೂ.22,500/–ಕ್ಕೆ ಹೆಚ್ಚಿಸಿದೆ. ಸದರಿ ತೀರ್ಪಿನ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಎಂಎಫ್ಎ ಸಂಖ್ಯೆ:3717/97 ದಾಖಲಿಸಿದ್ದು, ನ್ಯಾಯಾಲಯವು ದಿನಾಂಕ 12/06/03ರ ತೀರ್ಪಿನಲ್ಲಿ ಪ್ರಕರಣವನ್ನು ಮರು ಪರಿಶೀಲಿಸಲು ಕೆಳ ನ್ಯಾಯಾಲಯಕ್ಕೆ ನಿರ್ದೇಶನ ನೀಡಿದೆ. ಈ ಬಗ್ಗೆ ಮಾನ್ಯ ಸಿವಿಲ್ ನ್ಯಾಯಾಲಯವು ಪ್ರಕರಣವನ್ನು ಪುನರ್ ಪರಿಶೀಲಿಸಿ ದಿನಾಂಕ 09/12/04ರಲ್ಲಿ ನೀಡಿದ ತೀರ್ಪಿನಲ್ಲಿ ಪ್ರತಿ ಎಕರೆಗೆ ರೂ.22,500/–ಗಳ ಪರಿಹಾರ ಧನ ಹಾಗೂ ಪಂಪ್‌ಸೆಟ್/ಬಾವಿಗೆ ಹೆಚ್ಚುವರಿಯಾಗಿ ರೂ.20,970/–ಗಳ ಪರಿಹಾರ ಧನವನ್ನು ನೀಡಲು ಆದೇಶಿಸಿದೆ.

ಸಿವಿಲ್ ನ್ಯಾಯಾಲಯದ ತೀರ್ಪನ್ನು ಅನುಷ್ಠಾನಗೊಳಿಸುವಂತೆ ಕಂದಾಯ ಇಲಾಖೆಯು ಅಭಿಪ್ರಾಯ ಪಟ್ಟಿದೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣದ ವಿವರ ಕೆಳಕಂಡಂತಿದೆ:

ಕ್ರ ಸಂ	ಎಲ್ಎಸಿ ಸಂಖ್ಯೆ	ಎಂಎಫ್ಎ ಸಂಖ್ಯೆ	ಸ.ನಂ.	ವಿಸ್ತೀರ್ಣ ಎ–ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	2/88	3717/97	92 & 99	9 – 01	8,22,996–00

- **ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.**

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸನೀಇ 73 ಭೂಸ್ವಾಪ್ರ 2008, ಬೆಂಗಳೂರು, ದಿನಾಂಕ 10ನೇ ಸೆಪ್ಟೆಂಬರ್ 2009.

ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು ಮುರುಕಣಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಸೋಮೇದ್ವಾಪನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್‌ಗಳ ಜಮೀನುಗಳಿಗೆ ನ್ಯಾಯಾಲಯವು ಪ್ರಕರಣದಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ.8,22,996–00ಗಳನ್ನು(ಎಂಟು ಲಕ್ಷದ ಇಪ್ಪತ್ತೆರಡು ಸಾವಿರದ ಒಂಬೈನೂರ ತೊಂಭತ್ತಾರು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2167

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ಆರ್ಥಿಕ ಸಚಿವಾಲಯ

ವಿಷಯ : ಶ್ರೀ ಹೆಚ್.ಪಿ. ಹಬೀಬುಲ್ಲಾ ಬೇಗ್, ವಾಣಿಜ್ಯ ತೆರಿಗೆ ಅಧಿಕಾರಿ, (ಗುಪ್ತವಾರ್ತೆ), ಚಿಕ್ಕಮಗಳೂರು, ಇವರ ವಿರುದ್ಧದ ಅಭಿಯೋಜನಾ ಆದೇಶದ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ : 1) ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ :ಲೋಕ್/ಐಎನ್‌ವಿ (ಜಿ)/ ಎಂ–1/ಸಿಆರ್–1/2008/ಚಿಕ್ಕಮಗಳೂರು ದಿನಾಂಕ :4.10.2008

2) ತನಿಖಾಧಿಕಾರಿಯವರ ವರದಿ ಸಂಖ್ಯೆ :ಪಿವಿ/ಕಲೋ/ಚಿಮ/ಮೊ.ಸಂ.1/2008 ದಿನಾಂಕ :28.8.2008.

3) ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿಧಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.

4) ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ :ಲೋಕ್/ಐಎನ್‌ವಿ(ಜಿ)/ ಎಂ–1/ಸಿಆರ್–1/2008/ಚಿಕ್ಕಮಗಳೂರು ದಿನಾಂಕ :6.12.2008 8.4.2009 ಮತ್ತು 30.6.2009.

ಪ್ರಸ್ತಾವನೆ:

ಶ್ರೀ ಹೆಚ್. ಪಿ. ಹಬೀಬುಲ್ಲಾ ಬೇಗ್, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ವಿರುದ್ಧ ಗುನ್ನೆ ಸಂಖ್ಯೆ:1/2008 ರಲ್ಲಿ ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಯುಕ್ತ, ಚಿಕ್ಕಮಗಳೂರು ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯವರ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, (ಪೊಲೀಸ್ ವಿಭಾಗ), ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ(3)ರ ಪತ್ರ ದಿನಾಂಕ:4.10.2008 ರೊಡನೆ ಕಳುಹಿಸುತ್ತಾ, ಆಪಾದಿತ ಅಧಿಕಾರಿಯವರನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ 1988ರ 19ನೇ ಕಲಂನ ಅಡಿಯಲ್ಲಿ ಮಂಜೂರಾತಿಗಾಗಿ ಸಕ್ಷಮ ಪ್ರಾಧಿಕಾರವಾದ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, (ಪೊಲೀಸ್ ವಿಭಾಗ), ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಆಪಾದಿತ ಅಧಿಕಾರಿಯನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ 1988ರ ಕಲಂ 7, 13 (1) (ಡಿ) ಜೊತೆಯಲ್ಲಿ ಓದಲಾದ 13(2)ರ ಅಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಉಲ್ಲೇಖಿತ ಕಾಯ್ದೆಯ 19ನೇಯ ಕಲಂ ಅಡಿಯಲ್ಲಿ ಮಂಜೂರಾತಿಗಾಗಿ ಸರ್ಕಾರವನ್ನು ಕೋರಿರುತ್ತಾರೆ. ಮೇಲೆ ಓದಲಾಗಿರುವ ಕ್ರಮ ಸಂಖ್ಯೆ(6)ರ ಸರ್ಕಾರಿ ಆದೇಶದಲ್ಲಿ ಈ ಅಧಿಕಾರಿಯನ್ನು ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿಯನ್ನು ನೀಡಲಾಗಿತ್ತು. ಆದರೆ ತದನಂತರದ ಬೆಳವಣಿಗೆಯ ಹಿನ್ನೆಲೆಯಲ್ಲಿ ಪ್ರಕರಣವನ್ನು ಮತ್ತೊಮ್ಮೆ ಪರಿಶೀಲಿಸಲಾಗಿದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಅಪರ ಪೊಲೀಸ್ ಮಹಾನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ(3)ರ ಪತ್ರ ದಿನಾಂಕ:4.10.2008 ರೊಂದಿಗೆ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1) ಶ್ರೀ ಎ.ವಿ. ಸುರೇಶ್, ಬಿನ್. ವೆಂಕಟಾಚಲ, ವ್ಯಾಪಾರಿ, ಕನ್ನಿಕಾ ಪ್ಲಾಸ್ಟಿಕ್, ನಾಯ್ಡು ಬೀದಿ, ಚಿಕ್ಕಮಗಳೂರವರ ಫಿರ್ಯಾದು ದಿನಾಂಕ:7.1.2008.
2) ಪ್ರಥಮ ವರ್ತಮಾನ ವರದಿ: ಚಿಕ್ಕಮಗಳೂರು ಲೋಕಾಯುಕ್ತ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:1/2008 ದಿನಾಂಕ:7.1.2008.
15	ಎಂ.ಎನ್. ಅಕ್ಬರ್ ತಹಶೀಲ್ದಾರ್, ಸುರಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ	ತಹಶೀಲ್ದಾರ್, ಇಂಡಿ ತಾಲ್ಲೂಕು ಬಿಜಾಪುರ ಜಿಲ್ಲೆ- ಶ್ರೀ ಎಂ. ಶರಣಬಸಪ್ಪ ಇವರ ಸ್ಥಳಕ್ಕೆ

ಮೇಲ್ಕಂಡ ತಹಶೀಲ್ದಾರರುಗಳನ್ನು ವರ್ಗಾವಣೆ ಆಗಿರುವ ಸ್ಥಳಕ್ಕೆ ಹಾಜರಾಗುವಂತೆ ಸೂಚಿಸಿ ತಕ್ಷಣದಿಂದ ಬಿಡುಗಡೆಗೊಳಿಸುವಂತೆ ನಿಯಂತ್ರಣಾಧಿಕಾರಿಗಳಿಗೆ ಸೂಚಿಸಿದೆ. ಬಿಡುಗಡೆಗೊಂಡ ತಹಶೀಲ್ದಾರರುಗಳು ವರ್ಗಾವಣೆ ಹೊಂದಿದ ಸ್ಥಳಕ್ಕೆ ಕೂಡಲೇ ಹಾಜರಾಗಿ ಸರ್ಕಾರಕ್ಕೆ ವರದಿ ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1349

ಎಸ್.ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಲಾ 142 ಎಲ್ಎಸಿ 2009, ಬೆಂಗಳೂರು, ದಿನಾಂಕ: 3ನೇ ಅಕ್ಟೋಬರ್, 2009.

ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆ ಸಂಖ್ಯೆ ಜಿಓಬಿ (I) 1/2009 ದಿನಾಂಕ:1.10.2009ರಲ್ಲಿ ಆದೇಶಿಸಿರುವ ಮೇರೆಗೆ ಕೆಳಕಂಡ ಜಿಲ್ಲಾ ನ್ಯಾಯಾಧೀಶರ ವೃಂದದ ಅಧಿಕಾರಿಗಳನ್ನು ಅವರುಗಳ ಹೆಸರಿನ ಮುಂದೆ ನಮೂದಿಸಿರುವ ಹುದ್ದೆಗಳಿಗೆ ತಕ್ಷಣದಿಂದಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿದೆ.

ಕ್ರ.ಸಂ	ಅಧಿಕಾರಿಯ ಹೆಸರು ಮತ್ತು ಪದನಾಮ	ನೇಮಕ ಮಾಡಲಾದ ಹುದ್ದೆ
1	ಶ್ರೀ ಎಂ.ಜಿ. ಸುಧೀಂದ್ರ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗುಲ್ಬರ್ಗಾ	ಪ್ರಧಾನ ನ್ಯಾಯಾಧೀಶರು, ಕುಟುಂಬ ನ್ಯಾಯಾಲಯ, ಬೆಂಗಳೂರು-ದಿನಾಂಕ:30.9.2009 ರಂದು ಶ್ರೀ ಹೆಚ್.ಎಸ್. ರಾಮಣ್ಣ ಅವರ ನಿವೃತ್ತಿಯಿಂದ ತೆರವಾದ ಹುದ್ದೆಗೆ

1	2	3
2	ಶ್ರೀ ಎಸ್.ಎನ್. ನವಲಗುಂದ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಅ.ಕ.ಮೇ. ನಿರ್ದೇಶಕರು, ಬೆಂಗಳೂರು ಸಮನ್ವಯ ಕೇಂದ್ರ, ಬೆಂಗಳೂರು	1ನೇ ಹೆಚ್ಚುವರಿ ನ್ಯಾಯಾಧೀಶರು, ಕುಟುಂಬ ನ್ಯಾಯಾಲಯ, ಬೆಂಗಳೂರು–ದಿನಾಂಕ 30.9.2009ರಂದು ಶ್ರೀ ಟಿ. ರಾಜಶೇಖರಯ್ಯ ಅವರ ನಿವೃತ್ತಿಯಿಂದ ತೆರವಾದ ಹುದ್ದೆಗೆ
3	ಶ್ರೀ ಪಿ.ಜಿ. ನಾಡಗೌಡ ಜಿಲ್ಲಾ ನ್ಯಾಯಾಧೀಶರು ಅ.ಕ.ಮೇ. ಸರ್ಕಾರದ ಅಪರ ಕಾರ್ಯದರ್ಶಿ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ವಿಧಾನ ಸೌಧ, ಬೆಂಗಳೂರು	2ನೇ ಹೆಚ್ಚುವರಿ ನ್ಯಾಯಾಧೀಶರು ಕುಟುಂಬ ನ್ಯಾಯಾಲಯ, ಬೆಂಗಳೂರು–(ವರ್ಗಾವಣೆಗೊಂಡ ಶ್ರೀಮತಿ ಹೆಚ್.ಎಸ್. ಕಮಲ ಅವರ ಸ್ಥಾನದಲ್ಲಿ ದಿನಾಂಕ:9.10.2009ರಿಂದ ಜಾರಿಗೆ ಬರುವಂತೆ)
4	ಶ್ರೀಮತಿ ಹೆಚ್.ಎಸ್. ಕಮಲ 2ನೇ ಹೆಚ್ಚುವರಿ ನ್ಯಾಯಾಧೀಶರು ಕುಟುಂಬ ನ್ಯಾಯಾಲಯ, ಬೆಂಗಳೂರು	3ನೇ ಹೆಚ್ಚುವರಿ ನ್ಯಾಯಾಧೀಶರು, ಕುಟುಂಬ ನ್ಯಾಯಾಲಯ, ಬೆಂಗಳೂರು–(ದಿನಾಂಕ:9.10.2009ರಿಂದ ಜಾರಿಗೆ ಬರುವಂತೆ–ದಿನಾಂಕ:8.10.2009ರಂದು ನಿವೃತ್ತರಾಗುವ ಶ್ರೀ ಕೆ. ರಾಧಾಕೃಷ್ಣ ಹೊಳ್ಳ ಅವರ ಸ್ಥಾನ)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1350

ಎಸ್. ಸಿದ್ದಲಿಂಗೇಶ್

ಸರ್ಕಾರದ ಕಾರ್ಯದರ್ಶಿ

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಅಧಿಸೂಚನೆ

ಸಂಖ್ಯೆ: ಲಾ 167 ಎಲ್‌ಸಿಇ 2009, ಬೆಂಗಳೂರು, ದಿನಾಂಕ: 15ನೇ ಸೆಪ್ಟೆಂಬರ್, 2009.

ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳ (1977) ನಿಯಮ 26(2)ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಸದರಿ ನಿಯಮಗಳ ಷರತ್ತಿಗಳಿಗೊಳಪಟ್ಟು ಶ್ರೀ ಆರ್.ಪಿ. ಪ್ರಕಾಶ್, ಇವರನ್ನು ಹುದ್ದೆಯ ಅಧಿಕಾರ ವಹಿಸಿಕೊಳ್ಳುವ ದಿನಾಂಕದಿಂದ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ತುಮಕೂರು 2ನೇ ಶೀಘ್ರಗತಿ ನ್ಯಾಯಾಲಯಕ್ಕೆ ವಿಶೇಷ ಸರ್ಕಾರಿ ಅಭಿಯೋಜಕರನ್ನಾಗಿ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1351

ಇ. ಶಿವಾನಂದ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಅಧಿಸೂಚನೆ

ಸಂಖ್ಯೆ: ಲಾ 132 ಎಲ್‌ಎಜಿ 2008, ಬೆಂಗಳೂರು, ದಿನಾಂಕ: 19ನೇ ಸೆಪ್ಟೆಂಬರ್, 2009.

ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳ 1977 ನಿಯಮ 5(2)ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಶ್ರೀ ಹೆಚ್.ಬಿ.ಎಸ್. ಮೂರ್ತಿ, ಜಿಲ್ಲಾ ಸರ್ಕಾರಿ ವಕೀಲರು, ಚಾಮರಾಜನಗರ, ಇವರನ್ನು ಸದರಿ ಹುದ್ದೆಯ ಕರ್ತವ್ಯಗಳಿಂದ ವಿಮುಕ್ತಿಗೊಳಿಸಿ ನಿಯಮ 26(3)ರ ಮೇರೆಗೆ ಹುದ್ದೆಯ ಪ್ರಭಾರವನ್ನು ವಹಿಸಿಕೊಳ್ಳುವ ದಿನಾಂಕದಿಂದ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಶ್ರೀ ಕೆ. ಬಾಲಸುಬ್ರಮಣ್ಯಂ, ಇವರನ್ನು ಚಾಮರಾಜನಗರ ಜಿಲ್ಲೆಯ ಜಿಲ್ಲಾ ಸರ್ಕಾರಿ ವಕೀಲರ ಹುದ್ದೆಗೆ ನೇಮಿಸಲಾಗಿದೆ.

ಶ್ರೀ ಹೆಚ್.ಬಿ.ಎಸ್. ಮೂರ್ತಿ, ಇವರಿಗೆ ನಿಯಮ 5(6)ರನ್ವಯ ಒಂದು ತಿಂಗಳ ಹೆಚ್ಚುವರಿ ರಿಟೈನರ್ ಫೀ ಪಾವತಿಸಲು ಅನುಮತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1352

ಇ. ಶಿವಾನಂದ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಅಧಿಸೂಚನೆ ಸಂಖ್ಯೆ: ಲಾ 170 ಎಲ್‌ಸಿಇ 2009, ಬೆಂಗಳೂರು, ದಿನಾಂಕ: 23ನೇ ಸೆಪ್ಟೆಂಬರ್, 2009.

ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತು) ನಿಯಮಗಳು 1977 ನಿಯಮ 26(3)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಬೆಳಗಾವಿಯ 2ನೇ ತ್ವರಿತಗತಿ ನ್ಯಾಯಾಲಯಕ್ಕೆ ಶ್ರೀ ಕೆ.ಟಿ. ಪಾಟೀಲ, ವಿಶೇಷ ಸರ್ಕಾರಿ ಅಭಿಯೋಜಕರು, ದಿನಾಂಕ:15.10.2009ರಂದು ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಮುಂದುವರಿಸಲಾಗಿದೆ.

ಬೆಳಗಾವಿಯ 3ನೇ ತ್ವರಿತಗತಿ ನ್ಯಾಯಾಲಯಕ್ಕೆ ಶ್ರೀ ಜಿ.ಎ. ಬಿರಾದಾರಪಾಟೀಲ, ವಿಶೇಷ ಸರ್ಕಾರಿ ಅಭಿಯೋಜಕರನ್ನು ದಿನಾಂಕ:15.10.2009ರಿಂದ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1353

ಇ. ಶಿವಾನಂದ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-1)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಅಧಿಸೂಚನೆ ಸಂಖ್ಯೆ: ಲಾ 127 ಎಲ್‌ಎಜಿ 2007, ಬೆಂಗಳೂರು, ದಿನಾಂಕ: 23ನೇ ಸೆಪ್ಟೆಂಬರ್, 2009.

ಶ್ರೀ ಸತ್ಯನಾರಾಯಣ ರಾಮಭಟ್, ಇವರನ್ನು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 1977ರ ನಿಯಮ 26(2)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ನಿಯಮಗಳಲ್ಲಿನ ಷರತ್ತಿಗಳಿಗೊಳಪಟ್ಟು ಹುದ್ದೆಯ ಕಾರ್ಯಭಾರ ವಹಿಸಿಕೊಳ್ಳುವ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಅಪರ ಸರ್ಕಾರಿ ವಕೀಲರನ್ನಾಗಿ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1354

ಇ. ಶಿವಾನಂದ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-1)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

KARNATAKA GOVERNOR'S SECRETARIAT

NOTIFICATION No. GS 7 AUD 2009, Bangalore, Dated: 26th September, 2009

Consequent on the expiry of the term of Dr. J.H. Kulkarni, Vice-Chancellor, University of Agricultural Sciences,Dharwad on the afternoon of 29th September 2009, and a vacancy remaining unfilled in the office of the Vice-Chancellor, University of Agricultural Sciences, Dharwad, I, H.R. BHARDWAJ, Governor of Karnataka and Chancellor of Universities in Karnataka, hereby appoint Dr. H.S. Vijaya Kumar, Registrar, University of Agricultural Sciences, Dharwad, to act as Vice-Chancellor until further orders but not exceeding a period of six months.

H.R. BHARDWAJ

Governor and Chancellor

P.R. 1355

SHARADA SUBRAMANIAM

Secretary to Governor

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 134 ಆಡಳಿತ 2009, ಬೆಂಗಳೂರು, ದಿನಾಂಕ: 1ನೇ ಅಕ್ಟೋಬರ್, 2009.

ಭಾಷಾಂತರ ನಿರ್ದೇಶನಾಲಯದಲ್ಲಿ ತೆರವಾಗಿರುವ ನಿರ್ದೇಶಕರ ಹುದ್ದೆಯಲ್ಲಿ ಇದೇ ನಿರ್ದೇಶನಾಲಯದ ಸೇವೆಗೆ ಸೇರಿದ ಉಪ ನಿರ್ದೇಶಕರ ವೃಂದದಲ್ಲಿ ಜೇಷ್ಠತೆಯಲ್ಲಿರುವ ಶ್ರೀ ಎಂ.ಜೈಕುಮಾರ್‌ರವರನ್ನು ದಿನಾಂಕ:5.10.2009ರಿಂದ ಜಾರಿಗೆ ಬರುವಂತೆ ಕರ್ನಾಟಕ ಸಿವಿಲ್ ಸೇವಾ ನಿಯಮಾವಳಿಯ 68ನೇ ನಿಯಮದನ್ವಯ ಹೆಚ್ಚುವರಿ ಪ್ರಭಾರದಲ್ಲಿರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1356

ಜಿ. ಶ್ರೀಧರ್

ಸಹಾಯಕ ಪ್ರಾರೂಪಕಾರ ಮತ್ತು ಪದನಿಮಿತ್ತ

ಸರ್ಕಾರದ ಉಪ ಕಾರ್ಯದರ್ಶಿ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

ಒಳಾಡಳಿತ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಒಇ 78 ಕಸ್ಸೆಸೇ 2009, ಬೆಂಗಳೂರು, ದಿನಾಂಕ: 29ನೇ ಸೆಪ್ಟೆಂಬರ್, 2009.

ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಮಾಜಿ ಸೈನಿಕರ ಮತ್ತು ವಿಧವೆಯರ ಕಲ್ಯಾಣ ಕಾರ್ಯಗಳಿಗೆ ವಿನಿಯೋಗಿಸಲು ಕರ್ನಾಟಕ ರಾಜ್ಯಪಾಲರ ರಕ್ಷಣಾ ನಿಧಿ ಮತ್ತು ಕರ್ನಾಟಕ ಮಾಜಿ ಸೈನಿಕರ ವಿಶೇಷ ನಿಧಿ ಹೊಂದಿದ್ದು, ಇದಕ್ಕೆ ಘನತೆವೆತ್ತ ರಾಜ್ಯಪಾಲರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ. ಘನತೆವೆತ್ತ ರಾಜ್ಯಪಾಲರ ಅಧ್ಯಕ್ಷತೆಯಲ್ಲಿ ದಿನಾಂಕ:17.6.2009ರಂದು ನಡೆದ ರಾಜ್ಯಪಾಲರ ರಕ್ಷಣಾ ನಿಧಿ ವ್ಯವಸ್ಥಾಪಕ ಸಮಿತಿ ಸಭೆಯಲ್ಲಿ ತೆಗೆದುಕೊಂಡಿರುವ ತೀರ್ಮಾನದಂತೆ ಯುದ್ಧ ಸಂತ್ರಸ್ಥರು, ಮಾಜಿ ಸೈನಿಕರು, ಸೇವಾ ನಿರತ ಸೈನಿಕರು ಮತ್ತು ಅವರ ಅವಲಂಬಿತರ ಏಳಿಗೆಗಾಗಿ ತೆಗೆದುಕೊಳ್ಳಲಾದ ವಿವಿಧ ಕಲ್ಯಾಣ ಯೋಜನೆಗಳ ಪ್ರಗತಿಯನ್ನು ಪರಿಶೀಲಿಸಲು ಈ ಕೆಳಗೆ ಕಾಣಿಸಿರುವ ಅಧಿಕಾರಿಗಳು ಮತ್ತು ಅಧಿಕಾರೇತರ ಸದಸ್ಯರನ್ನೊಳಗೊಂಡ ಒಂದು ಉಪ ಸಮಿತಿಯನ್ನು ರಚಿಸಲಾಗಿದೆ.

1)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು	ಅಧ್ಯಕ್ಷರು
2)	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು	ಸದಸ್ಯರು
3)	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು	ಸದಸ್ಯರು
4)	ಸರ್ಕಾರದ ಕಾರ್ಯದರ್ಶಿಗಳು (ಪಿಸಿಎಎಸ್) ಒಳಾಡಳಿತ ಇಲಾಖೆ ವಿಧಾನಸೌಧ, ಬೆಂಗಳೂರು	ಸದಸ್ಯರು
5)	ರಾಜ್ಯಪಾಲರ ಕಾರ್ಯದರ್ಶಿಗಳು ರಾಜ್ ಭವನ್, ಬೆಂಗಳೂರು	ಸದಸ್ಯರು
6)	ಕಮಾಂಡರ್ ಕರ್ನಾಟಕ ಮತ್ತು ಕೇರಳ ಏರಿಯಾ ಬೆಂಗಳೂರು	ಸದಸ್ಯರು
5)	ರಾಜ್ಯಪಾಲರ ಕಾರ್ಯದರ್ಶಿಗಳು ರಾಜ್‌ಭವನ್, ಬೆಂಗಳೂರು	ಸದಸ್ಯರು
6)	ಕಮಾಂಡರ್ ಕರ್ನಾಟಕ ಮತ್ತು ಕೇರಳ ಏರಿಯಾ ಬೆಂಗಳೂರು	ಸದಸ್ಯರು
7)	ಏರ್ ಆಫೀಸರ್ ಕಮಾಂಡಿಂಗ್–ಇನ್–ಚೀಫ್ ರವರ ಪ್ರತಿನಿಧಿ ಟ್ರೈನಿಂಗ್ ಕಮಾಂಡ್ ಐ.ಎ.ಎಫ್. ಜೆಸಿನಗರ ಅಂಚೆ, ಬೆಂಗಳೂರು	ಸದಸ್ಯರು
8)	ಜಿಲ್ಲಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು	ಸದಸ್ಯರು
9)	ರಾಜ್ಯ ಸರ್ಕಾರದ ವತಿಯಿಂದ ಎರಡು ವರ್ಷಗಳಿಗೊಮ್ಮೆ ನೇಮಿಸಲ್ಪಡುವ ಹಿರಿಯ ಎರಡು ನಿವೃತ್ತ ಸೇನಾಧಿಕಾರಿಗಳು	ಅಧಿಕಾರೇತರ ಸದಸ್ಯರು
10)	ಕಮಾಂಡೆಂಟ್ ಕಮಾಂಡ್ ಹಾಸ್ಪಿಟಲ್, ಐ.ಎ.ಎಫ್., ಬೆಂಗಳೂರು	ವಿಶೇಷ ಆಹ್ವಾನಿತರು
11)	ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು	ಸದಸ್ಯ ಕಾರ್ಯದರ್ಶಿಗಳು

ಮೇಲಿನ ಉಪ ಸಮಿತಿಯು ಮೂರು ತಿಂಗಳಿಗೊಮ್ಮೆ ರಾಜ್ ಭವನದಲ್ಲಿ ಸಭೆ ಸೇರಿ ಮೇಲಿನ ಎರಡು ನಿಧಿಗಳ ವ್ಯವಸ್ಥಾಪಕ ಸಮಿತಿಯಲ್ಲಿ ಕೈಗೊಂಡ ನಿರ್ಣಯಗಳ ಪ್ರಗತಿ ವರದಿಯನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಅಗತ್ಯವಿದ್ದಲ್ಲಿ ಉಪ ಸಮಿತಿ ಸಭೆಯ ವರದಿಯನ್ನು ರಾಜ್ಯಪಾಲರ ಘನ ಅಧ್ಯಕ್ಷತೆಯಲ್ಲಿ ನಡೆಯಲಿರುವ ವ್ಯವಸ್ಥಾಪಕ ಸಮಿತಿಗೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1357

ಜಿ.ಆರ್. ಶ್ರೀನಿವಾಸ್ ರಾವ್

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)

ಒಳಾಡಳಿತ ಇಲಾಖೆ

(ಪೊಲೀಸ್ ಸಹಾಯಕ ಸೇವೆಗಳು)

ಅಧಿಸೂಚನೆ

ಸಂಖ್ಯೆ: ಒಇ 407 ಪಿಪಿಇ 2009, ಬೆಂಗಳೂರು, ದಿನಾಂಕ: 5ನೇ ಅಕ್ಟೋಬರ್, 2009.

ಶ್ರೀ ವಿ.ಆರ್. ಹೊಸೂರ್, ಪ್ರಧಾನ ಸರ್ಕಾರಿ ಅಭಿಯೋಜಕರು, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ ಇವರನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕಾನೂನು ಅಧಿಕಾರಿ ಹುದ್ದೆಗೆ ನಿಯೋಜನೆ ಮೇಲೆ ನೇಮಿಸಲು ಇವರ ಸೇವೆಯನ್ನು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ವಶಕ್ಕೆ ಮುಂದಿನ ಆದೇಶದವರೆಗೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1358

ಕೆ.ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ

(ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸಾ ಮತ್ತು ಅಭಿಯೋಗಗಳು)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 147 ಸೇಇಮು 2008, ಬೆಂಗಳೂರು, ದಿನಾಂಕ: 22ನೇ ಸೆಪ್ಟೆಂಬರ್, 2009.

ಶ್ರೀಮತಿ ಕುಮುದಿನಿ ಬೈರಣ್ಣವರ್, ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರನ್ನು ರೂ. 24450–600–26250–675–30300–750–31800ರ ವೇತನ ಶ್ರೇಣಿಯಲ್ಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸ್ಥಾನಪನ್ನ ಬಡ್ತಿ ನೀಡಿ ಖಾಲಿ ಇರುವ ನಿರ್ದೇಶಕರು. ಅಪರ ಆಯುಕ್ತಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ, ಈ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1359

ಎಂ.ಎಸ್ .ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಅಧಿಸೂಚನೆ ಸಂಖ್ಯೆ: ಸಿಆಸುಇ 115 ಸೇಇಮು 2009, ಬೆಂಗಳೂರು, ದಿನಾಂಕ: 22ನೇ ಸೆಪ್ಟೆಂಬರ್, 2009.

ಸಾರ್ವಜನಿಕ ಶಿಕ್ಷಣ ಇಲಾಖೆಯ ಈ ಕೆಳಕಂಡ ನಿರ್ದೇಶಕರುಗಳನ್ನು ಅವರ ಹೆಸರುಗಳ ಮುಂದೆ ಸೂಚಿಸಿರುವ ಸ್ಥಳಕ್ಕೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವರ್ಗಾಯಿಸಿ ನೇಮಿಸಿದೆ.

ಕ್ರ.ಸಂ.	ಅಧಿಕಾರಿಯ ಹೆಸರು ಮತ್ತು ಹುದ್ದೆ	ವರ್ಗಾಯಿಸಲಾದ ಸ್ಥಳ
1	ಶ್ರೀ ಡಿ.ಎಸ್. ರಾಜಣ್ಣ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು	ನಿರ್ದೇಶಕರು, (ಪ್ರಾಥಮಿಕ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು –ಶ್ರೀ ಮೀರ್ ಓಬೇದುಲ್ಲಾ ಅವರ ವರ್ಗಾವಣೆಯಿಂದ ತೆರವಾದ ಸ್ಥಾನದಲ್ಲಿ
2	ಶ್ರೀ ಎನ್.ಎಚ್. ಸತ್ಯಮೂರ್ತಿ, ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ ಬೆಂಗಳೂರು	ನಿರ್ದೇಶಕರು, ಡಿಎಸ್ ಇ.ಆರ್.ಟಿ. ಬೆಂಗಳೂರು, ಶ್ರೀ ಎಂ.ಎನ್. ಬೇಗ್ ಅವರ ವರ್ಗಾವಣೆಯಿಂದ ತೆರವಾದ ಸ್ಥಾನದಲ್ಲಿ ಹೆಚ್ಚುವರಿ ಪ್ರಭಾರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಪಠ್ಯ ಪುಸ್ತಕಗಳ ಸಂಘ, ಡಿ.ಎಸ್.ಇ.ಆರ್.ಟಿ. ಬೆಂಗಳೂರು

3	ಶ್ರೀ ಎಂ.ಎನ್. ಬೇಗ್ ನಿರ್ದೇಶಕರು ಡಿ.ಎಸ್.ಇ.ಆರ್.ಟಿ. ಬೆಂಗಳೂರು	ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು–ಶ್ರೀ ಡಿ.ಎಸ್. ರಾಜಣ್ಣ ಅವರ ವರ್ಗಾವಣೆಯಿಂದ ತೆರವಾದ ಸ್ಥಾನದಲ್ಲಿ.
4	ಶ್ರೀ ಎಸ್. ದೇವಿಪ್ರಸಾದ್, ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಅಪರ ಆಯುಕ್ತರ ಕಾರ್ಯಾಲಯ, ಗುಲ್ಬರ್ಗಾ,	ನಿರ್ದೇಶಕರು, (ಕಾರ್ಯಕ್ರಮಗಳು) ಸರ್ವ ಶಿಕ್ಷಣ ಅಭಿಯಾನ ರಾಜ್ಯ ಕಛೇರಿ, ಬೆಂಗಳೂರು–ಶ್ರೀ ಎನ್.ಎಚ್. ಸತ್ಯಮೂರ್ತಿ ಅವರ ವರ್ಗಾವಣೆಯಿಂದ ತೆರವಾದ ಸ್ಥಾನದಲ್ಲಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1360

ಎಂ.ಎಸ್ .ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ಅಧಿಸೂಚನೆ

ಸಂಖ್ಯೆ: ಸಿಆಸುಇ 147 ಸೇಇಮು 2009, ಬೆಂಗಳೂರು, ದಿನಾಂಕ: 23ನೇ ಸೆಪ್ಟೆಂಬರ್, 2009.

ಶ್ರೀ ಪ್ರಭಾಕರ ಹೆಚ್. ಚಿಣಿ, ಮುಖ್ಯ ಇಂಜಿನಿಯರ್, ನೇಮಕಾತಿ ನಿರೀಕ್ಷಣೆಯಲ್ಲಿ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಮುಖ್ಯ ಇಂಜಿನಿಯರ್, ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ಧಿ ಯೋಜನೆ, ಬೆಂಗಳೂರು ಈ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1361

ಎಂ.ಎಸ್ .ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

PERSONNEL AND ADMINISTRATIVE REFORMS SECRETARIAT

NOTIFICATION

No. DPAR 350 SAS 2009, Bangalore, Dated: 11th September, 2009

The post of Managing Director, Karnataka Public Lands Corporation, Bangalore is redesignated as Secretary to Government, Revenue Department & E/o Managing Director, Karnataka Public Lands Corporation Bangalore with immediate effect. In exercise of the powers conferred under the second proviso of sub-rule (2) of Rule 4 of the Indian Administrative Service (Cadre) Rules, 1954, the said redesignated post is temporarily added to the IAS cadre of Karnataka in the Super Time Scale viz., Pay Band 4 Rs. 37400-67000+GP 10000, for a period of two years or until it is regularily encadred in the IAS during the next Mid term Cadre Review of IAS, whichever is earlier.

By Order and in the name of the Governor of Karnataka,

ASHOK P. ATRE

P.R. 1362

Under Secretary to Government,

Department of Personnel and Administrative Reforms (Services-I)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಸಿಆಸುಇ 746 ಸಅಸೇ 2008, ಬೆಂಗಳೂರು, ದಿನಾಂಕ: 17ನೇ ಸೆಪ್ಟೆಂಬರ್, 2009.

ಡಾ: ಪಿ. ಪ್ರಭು, ಉಪ ವ್ಯವಸ್ಥಾಪಕರು, ಕೋಲಾರ ಹಾಲು ಒಕ್ಕೂಟ, ಕೋಲಾರ ಇವರನ್ನು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 16ರ ಪ್ರಕಾರ ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 746 ಸಅಸೇ 2008, ದಿನಾಂಕ:17.9.2009 ರಲ್ಲಿ ಸೃಜಿಸಲಾದ ಮುಖ್ಯ ಮಂತ್ರಿಗಳ ಪತ್ರಿಕಾ ಕಾರ್ಯದರ್ಶಿಗಳ ಕಛೇರಿಯ ವಾರ್ತಾಧಿಕಾರಿ ಹುದ್ದೆಗೆ ದಿನಾಂಕ:1.10.2008 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಲಾಗಿದೆ.

ಇವರ ನೇಮಕಾತಿಯ ಷರತ್ತು & ನಿಬಂಧನೆಗಳನ್ನು ಪ್ರತ್ಯೇಕವಾಗಿ ಹೊರಡಿಸುವುದು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1363

ಎಂ.ಎಸ್ .ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

PERSONNEL AND ADMINISTRATIVE REFORMS SECRETARIAT

NOTIFICATION

No. DPAR 402 SAS 2009, Bangalore, Dated: 26th September, 2009

The Director, Women & Child Development Department is placed in additional charge of the post of Secretary, Karnataka State Child Rights Commission with immediate effect and until further orders, relieving Secretary to Government, Women and Child Development Department of the concurrent charge.

By Order and in the name of the Governor of Karnataka,

K.G. ANANTHA

P.R. 1364

Under Secretary to Government,

Department of Personnel and Administrative Reforms (Services-I)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 131 ಸೇಇಮು 2009, ಬೆಂಗಳೂರು, ದಿನಾಂಕ: 22ನೇ ಸೆಪ್ಟೆಂಬರ್, 2009.

ಶ್ರೀ ಕೆ.ಎಲ್. ಲೋಕನಾಥ್, ಅಪರ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಪ್ರಸ್ತುತ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇವರನ್ನು ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ಇಲ್ಲಿ ಖಾಲಿ ಇರುವ ನಿರ್ದೇಶಕರು (ತಾಂತ್ರಿಕ) ಈ ಹುದ್ದೆಗೆ ದಿನಾಂಕ:29.9.2009 ರಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವರ್ಗಾಯಿಸಿ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1365

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಅಧಿಸೂಚನೆ

ಸಂಖ್ಯೆ: ಸಿಆಸುಇ 183 ಸೇಇಮು 2009, ಬೆಂಗಳೂರು, ದಿನಾಂಕ: 16ನೇ ಸೆಪ್ಟೆಂಬರ್, 2009.

ಈ ಕೆಳಕಂಡ ಮುಖ್ಯ ಇಂಜಿನಿಯರ್‌ಗಳನ್ನು ಅವರ ಹೆಸರುಗಳ ಮುಂದೆ ಸೂಚಿಸಿರುವ ಸ್ಥಳಕ್ಕೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವರ್ಗಾಯಿಸಿ ನೇಮಿಸಿದೆ.

ಕ್ರ.ಸಂ.	ಅಧಿಕಾರಿಯ ಹೆಸರು ಮತ್ತು ಹುದ್ದೆ	ವರ್ಗಾಯಿಸಲಾದ ಸ್ಥಳ
1	ಶ್ರೀ ಎಸ್ ರಾಜಶೇಖರ್, ಮುಖ್ಯ ಇಂಜಿನಿಯರ್, ನೀರಾವರಿ ಕೇಂದ್ರ ವಲಯ, ಮುನಿರಾಬಾದ್	ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು -ಶ್ರೀ ಸಿ.ವಿ. ಪಾಟೀಲ್ ಅವರ ಸ್ಥಾನದಲ್ಲಿ
2	ಶ್ರೀ ಸದಾಶಿವ ರೆಡ್ಡಿ ಬಿ. ಪಾಟೀಲ್ ಮುಖ್ಯ ಇಂಜಿನಿಯರ್ ಕಾಲುವೆ ವಲಯ-1, ಭೀಮರಾಯನ ಗುಡಿ	ಮುಖ್ಯ ಇಂಜಿನಿಯರ್, ನೀರಾವರಿ ಯೋಜನಾ ವಲಯ, ಗುಲ್ಬರ್ಗಾ-ಶ್ರೀ ವಿ.ಪಿ. ಉದ್ದಿಹಾಳ್ ಅವರ ಸ್ಥಾನಕ್ಕೆ
3	ಶ್ರೀ ವಿ.ಪಿ. ಉದ್ದಿಹಾಳ್ ಮುಖ್ಯ ಇಂಜಿನಿಯರ್ ನೀರಾವರಿ ಯೋಜನಾ ವಲಯ, ಗುಲ್ಬರ್ಗಾ	ಮುಖ್ಯ ಇಂಜಿನಿಯರ್, ಮಲಪ್ರಭಾ ಯೋಜನಾ ವಲಯ, ಧಾರವಾಡ ಶ್ರೀ ಎಂ.ಎನ್. ಮಹೇಶ್ವರಪ್ಪ ಅವರ ಸ್ಥಾನಕ್ಕೆ
4	ಶ್ರೀ ಎಂ.ಎನ್. ಮಹೇಶ್ವರಪ್ಪ, ಮುಖ್ಯ ಇಂಜಿನಿಯರ್, ಮಲಪ್ರಭಾ ಯೋಜನಾ ವಲಯ, ಧಾರವಾಡ	ಮುಖ್ಯ ಇಂಜಿನಿಯರ್,, ಕಾಲುವೆ ವಲಯ-1, ಭೀಮರಾಯನ ಗುಡಿ-ಶ್ರೀ ಸದಾಶಿವರೆಡ್ಡಿ ಬಿ. ಪಾಟೀಲ ಅವರ ಸ್ಥಾನಕ್ಕೆ
5	ಶ್ರೀ ಎಸ್. ನಟರಾಜ್ ಮುಖ್ಯ ಇಂಜಿನಿಯರ್, ಅಣೆಕಟ್ಟು ವಲಯ, ಆಲಮಟ್ಟಿ	ಮುಖ್ಯ ಇಂಜಿನಿಯರ್,, ವಾರಾಹಿ ಯೋಜನಾ ವಲಯ, ಸಿದ್ದಾಪುರ-ಶ್ರೀ ಎಸ್.ಎಂ. ವಾಘಮಾರೆ ಅವರ ಸ್ಥಾನಕ್ಕೆ
6	ಶ್ರೀ ಎಸ್.ಎಂ. ವಾಘಮಾರೆ, ಮುಖ್ಯ ಇಂಜಿನಿಯರ್, ವಾರಾಹಿ ಯೋಜನಾ ವಲಯ, ಸಿದ್ದಾಪುರ	ಮುಖ್ಯ ಇಂಜಿನಿಯರ್, ಅಣೆಕಟ್ಟು ವಲಯ, ಆಲಮಟ್ಟಿ-ಶ್ರೀ ಎಸ್. ನಟರಾಜ್ ಅವರ ಸ್ಥಾನಕ್ಕೆ

ಕ್ರ.ಸಂ.	ಅಧಿಕಾರಿಯ ಹೆಸರು ಮತ್ತು ಹುದ್ದೆ	ವರ್ಗಾಯಿಸಲಾದ ಸ್ಥಳ
7	ಶ್ರೀ ಕೆ.ಬಿ. ದೇವರಾಜ್ ಮುಖ್ಯ ಇಂಜಿನಿಯರ್, ನೇಮಕಾತಿ ನಿರೀಕ್ಷಣೆಯಲ್ಲಿ	ಮುಖ್ಯ ಇಂಜಿನಿಯರ್, ನೀರಾವರಿ ಕೇಂದ್ರ ವಲಯ, ಮುನಿರಾಬಾದ್- ಶ್ರೀ ಎಸ್ ರಾಜಶೇಖರ್, ಅವರ ಸ್ಥಾನಕ್ಕೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1366

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

PERSONNEL AND ADMINISTRATIVE REFORMS SECRETARIAT

NOTIFICATION

No. DPAR 53 SAS 2009, Bangalore, Dated: 17th September, 2009

Sri Abhijit Dasgupta, IAS (KN 75), Commissioner, Bangalore Metropolitan Regional Development Authority, Bangalore is promoted to officiate in the Above Super Time Scale of IAS carrying the pay scale of Rs. 80000/- (fixed) Grade Pay Nil, with immediate effect and his services are continued until further orders in the Urban Development Department as Commissioner, Bangalore Metropolitan Regional Development Authority, Bangalore.

Government hereby declare u/r 9 of IAS (Pay) Rules, 2007 that the post of Commissioner, Bangalore Metropolitan Regional Development Authority, Bangalore in the Above Super Time Scale of IAS i.e., Rs. 80000/- (fixed) Grade Pay Nil, is equivalent in status and responsibilities to the Cadre post of Additional Chief Secretary to Government included in the Schedule II to the said Rules.

By Order and in the name of the Governor of Karnataka,

K.G. ANANTHA

P.R. 1367

Under Secretary to Government,

Department of Personnel and Administrative Reforms (Services-I)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 193 ಎಸ್‌ಐಎಸ್ 2009, ಬೆಂಗಳೂರು, ದಿನಾಂಕ: 1ನೇ ಅಕ್ಟೋಬರ್, 2009.

ಶ್ರೀ ರಾಜೀವ್ ಚಾವ್ಲಾ, ಐ.ಎ.ಎಸ್., ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ರವರು ದಿನಾಂಕ:14.10.2009 ರಿಂದ 20.10.2009ರವರೆಗಿನ ಸಾಂದರ್ಭಿಕ ರಜೆ ಹಾಗೂ ಸಾರ್ವತ್ರಿಕ ರಜಾ ಅವಧಿಯಲ್ಲಿ ಅವರ ಮಗ ಶ್ರೀ ಜಯಂತ್ ಚಾವ್ಲಾರವರೊಂದಿಗೆ ಹಾಗೂ ಅವರ ಪತ್ನಿ ಶ್ರೀಮತಿ, ರೋಜಿ ಚಾವ್ಲಾರವರು ದಿನಾಂಕ:1.10.2009 ರಿಂದ 22.10.2009ರವರೆಗಿನ ಅವಧಿಯಲ್ಲಿ ಪ್ರಸಕ್ತ 2008-09ರ ಬ್ಲಾಕ್ ಅವಧಿಯ ಸ್ವಗ್ರಾಮ ಪ್ರಯಾಣ ರಿಯಾಯಿತಿಯನ್ನು ಉಪಯೋಗಿಸಿಕೊಂಡು ಅವರ ಸ್ವಗ್ರಾಮವಾದ ಬರೇಲಿ, ಉತ್ತರ ಪ್ರದೇಶ ರಾಜ್ಯಕ್ಕೆ ಹೋಗಿ-ಬರಲು ಅನುಮತಿ ನೀಡಲಾಗಿದೆ.

ಸದರಿ ಉದ್ದೇಶಕ್ಕಾಗಿ ತಗಲುವ ವಾಸ್ತವಿಕ ಪ್ರಯಾಣ ವೆಚ್ಚದ ಶೇಕಡ 90ರಷ್ಟು ಹಣವನ್ನು ಅಂತಿಮ ಪ್ರಯಾಣಭತ್ಯೆ ಬಿಲ್ಲಿನಲ್ಲಿ ಹೊಂದಾಣಿಕೆ ಮಾಡುವ ಷರತ್ತಿಗೆ ಒಳಪಟ್ಟು ಮುಂಗಡ ಪ್ರಯಾಣಭತ್ಯೆಯನ್ನು ಮಂಜೂರು ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1368

ಕೆ.ಜಿ. ಅನಂತ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-I)

PERSONNEL AND ADMINISTRATIVE REFORMS SECRETARIAT

NOTIFICATION

No. DPAR 407 SAS 2009, Bangalore, Dated: 29th September, 2009

Secretary to Government, Social Welfare Department is placed in additional charge of the post of Principal Secretary to Government, Agriculture Department until further orders vice Dr. S. Subramanya, IAS retiring from service on 30.9.2009 u/r 16(2) of AIS (DCRB) Rules, 1958.

By Order and in the name of the Governor of Karnataka,

K.G. ANANTHA

P.R. 1369 Under Secretary to Government,

Department of Personnel and Administrative Reforms (Services-I)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 178 ಆಸೇವ 2009, ಬೆಂಗಳೂರು, ದಿನಾಂಕ: 25ನೇ ಸೆಪ್ಟೆಂಬರ್, 2009.

ಡಾ:ರಾಮೇಗೌಡ, ಕೆ.ಎ.ಎಸ್ (ಸೂಪರ್ ಟೈಂ ಸ್ಕೇಲ್) ಅಧಿಕಾರಿ, ಹಾಲಿ ಅಪರ ನಿರ್ದೇಶಕರು (ಆಡಳಿತ), ಕೃಷಿ ಇಲಾಖೆ, ಬೆಂಗಳೂರು ಇವರನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾಯಿಸಿ ಮಾನ್ಯ ಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿ ಹುದ್ದೆಗೆ ಮುಂದಿನ ಆದೇಶದವರೆಗೆ ಅಥವಾ ಸಾಮಾನ್ಯ ಸಚಿವರ ಪದಾವಧಿಯವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1370 ಎಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2)

PERSONNEL AND ADMINISTRATIVE REFORMS SECRETARIAT

NOTIFICATION

No. DPAR 361 SAS 2009, Bangalore, Dated: 29th September, 2009

Smt Vatsala Watsa, IAS (KN-73), Additional Chief Secretary to Government is transferred with immediate effect and the services of the officer are placed at the disposal of Urban Development Department until further orders for being posted as Chairperson, Bangalore Development Authority Bangalore vice Smt. Tara Ajai, Singh, IAS transferred.

The services of Smt. Tara Ajai Singh IAS (KN-75), Chairperson Bangalore Development Authority are withdrawn from Urban Development with immediate effect and posted until orders as Additional Chief Secretary to Government vice Smt. Vatsala Watsa, IAS transferred.

By Order and in the name of the Governor of Karnataka,

K.G. ANANTHA

P.R. 1371 Under Secretary to Government,

Department of Personnel and Administrative Reforms (Services-I)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 177 ಎಸ್‌ಎಫ್‌ಪಿ 2009, ಬೆಂಗಳೂರು, ದಿನಾಂಕ: 29ನೇ ಸೆಪ್ಟೆಂಬರ್, 2009.

ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 177 ಎಸ್‌ಎಫ್‌ಪಿ 2009, ದಿನಾಂಕ:2.9.2009ನ್ನು ಭಾಗಶಃ ಮಾರ್ಪಡಿಸಿ, ಶ್ರೀಮತಿ, ರೀತು ಕಕ್ಕರ್, ಭಾ.ಅ.ಸೇ., ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಜನರಲ್ ಮ್ಯಾನೇಜರ್ (ದಕ್ಷಿಣ), ಕರ್ನಾಟಕ ಸ್ಟೇಟ್

ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೋರೇಷನ್, ಬೆಂಗಳೂರು ಇವರಿಗೆ ವೈಯಕ್ತಿಕ ಕಾರಣಗಳ ನಿಮಿತ್ತ ದಿನಾಂಕ:4.9.2009 ರಿಂದ 10.9.2009ರವರೆಗೆ (ಉದಿಸೇ) ಒಟ್ಟು 07 ದಿನಗಳ ಗಳಿಕೆ ರಜೆಯನ್ನು ಮಂಜೂರು ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1372

ಅಶೋಕ್ ಪಿ. ಅತ್ರೆ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–IV)

PERSONNEL AND ADMINISTRATIVE REFORMS SECRETARIAT

NOTIFICATION

No. DPAR 108 SFP 2009, Bangalore, Dated: 3rd October, 2009

Dr. U.S. Ravindran,IFS (KN-86), Conservator of Forests and CEO, Centre for E-Governance, Bangalore is promoted to officiate in the Grade of Chief Conservator of Forests carrying the Super Time Scale of IFS viz., Pay Band-4 Rs 37,400-67, 000+ Grade Pay Rs. 10,000/- with immediate effect and he is posted until further orders as Chief Conservator of Forests & CEO, Centre for E-Governance, Bangalore in the upgraded post.

Dr. G.N. Srikantaiah, IFS (KN -86), Conservator of Forests and Director, Department of Ayush, Bangalore is promoted to officiate in the Grade of Chief Conservator of Forests carrying the Super, Time Scale of IFS viz., Pay Band-4 Rs. 37, 400-67,000+Grade Pay Rs, 10,000/- with immediate effect and he is posted until further orders as Chief Conservator of Forests & Director, Department of Ayush, Bangalore in the upgraded post.

Sri Ajai Misra, IFS (KN-86), Conservator of Forests and Registrar, Mysore University, Mysore is promoted to officiate in the Grade of Chief Conservator of Forests carrying the Super Time Scale of IFS viz., Pay Band-4 Rs. 37,400-67,000+ Grade Pay Rs. 10,000/-with immediate effect and his services are continued with Education Department until further orders for being posted as Chief Conservator of Forests & Registrar, Mysore University, Mysore in the upgraded post.

Sri Raj Kishore Singh IFS (KN-86), Conservator of Forests and Jungle Lodges & Resorts, Bangalore is promote to officiate in the Grade of Chief Conservator of Forests carrying the Super Time Scale of IFS viz., pay Band-4 Rs. 37,400-67,000+Grade Pay Rs. 10,000/- with immediate effect and his services are continued with Information & Tourism, Kannada & Culture Department until further orders for being posted as Chief Conservator of Forests, Jungle Lodges & Resorts, Bangalore in the upgraded post.

Sri Shiv Raj Singh, IFS (KN-86), Conservator of Forests, presently on deputation as Joint Director, Forest Survey of India, Ministry of Environment & Forests, Dehradun is accorded proforma promotion to the Grade of Chief Conservator of Forests carrying the Super Time Scale of IFS viz., Pay Band-4 Rs. 37, 400-67,000+Grade Pay Rs. 10,000/- with immediate effect in terms of Government of India letter No. 11030/17/93-AIS(II), dated 11.4.2001.

By Order and in the name of the Governor of Karnataka,

P.R. 1373

ASHOK P. ATRE

Under Secretary to Government,

Department of Personnel and Administrative Reforms (Services-IV)

NOTIFICATION No. DPAR 75 SAS 2009 (P-I), Bangalore, Dated: 19th September, 2009

Sri K.S. Sathyamurthy, IAS (KN-99), Deputy Commissioner, Gulbarga District is transferred with immediate effect and posted until further orders as Deputy Commissioner, Koppal District, Koppal vice Sri Chakravarthi Mohan, IAS transferred.

Sri Chakravarthi Mohan, IAS (KN 99), Deputy Commissioner, Koppal District is transferred with immediate effect and his services are placed at the disposal of Commerce & Industries Department until

further orders for being posted as Managing Director, Mysore Sugar Company Limited, Bangalore in the existing vacancy.

Dr. R. Vishal, IAS (KN-2004), Deputy Secretary to Government Budget & Resources, Finance Department, Bangalore is transferred with immediate effect and posted until further orders as Deputy Commissioner, Gulbarga District vice Sri K.S. Sathyamurthy, IAS transferred.

Sri D. Randeep, IAS (KN 2006), Assistant Commissioner, Gadag Sub-Division, is transferred with immediate effect and his services are placed at the disposal of Urban Development Department until further orders for being posted as Commissioner, City Municipal Corporation, Gulbarga vice B.C. Pujari transferred.

By Order and in the name of the Governor of Karnataka,

K.G. ANANTHA

P.R. 1374

Under Secretary to Government,

Department of Personnel and Administrative Reforms (Services-I)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 61367 ಸೇ–ಇ 2009, ಬೆಂಗಳೂರು, ದಿನಾಂಕ: 23ನೇ ಸೆಪ್ಟೆಂಬರ್, 2009.

ಶ್ರೀ ಡಿ. ದೇವಣ್ಣ, ಶಾಖಾಧಿಕಾರಿ, ಸಿಆಸುಇ (ಐಆರ್ಎಲ್ಎ) ಅವರನ್ನು ರಜೆಯ ಮೇಲೆ ತೆರಳಿರುವ ಶ್ರೀ ಕೆ. ನಾಗೇಶ್ ಅವರ ಸ್ಥಾನದಲ್ಲಿ ಅಧೀನ ಕಾರ್ಯದರ್ಶಿ, ಸಿಆಸುಇ (ಐಆರ್ಎಲ್ಎ) ಈ ಹುದ್ದೆಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕೆ.ಸಿ.ಎಸ್.ಆರ್. ನಿಯಮ 68 ರನ್ವಯ ಹೆಚ್ಚುವರಿ ಪ್ರಭಾರದಲ್ಲಿಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1375

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ಅಧಿಸೂಚನೆ

ಸಂಖ್ಯೆ: ಸಿಆಸುಇ 461 ಸಅಸೇ 2009, ಬೆಂಗಳೂರು, ದಿನಾಂಕ: 29ನೇ ಸೆಪ್ಟೆಂಬರ್, 2009.

ಕರ್ನಾಟಕ ಸರ್ಕಾರ ಸಚಿವಾಲಯದ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಜಂಟಿ ಕಾರ್ಯದರ್ಶಿ ಹುದ್ದೆಯನ್ನು ದಿನಾಂಕ:5.9.2009ರಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವೇತನ ಶ್ರೇಣಿ ರೂ. 26250–36500ರ ಸರ್ಕಾರದ ಅಪರ ಕಾರ್ಯದರ್ಶಿ ಹುದ್ದೆಯೆಂದು ಉನ್ನತೀಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1376

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ಅಧಿಸೂಚನೆ

ಸಂಖ್ಯೆ: ಸಿಆಸುಇ 166 ಆಸೇಇ 2009, ಬೆಂಗಳೂರು, ದಿನಾಂಕ: 24ನೇ ಸೆಪ್ಟೆಂಬರ್, 2009.

ಶ್ರೀ ಅಬ್ದುಲ್ ರಹೀಂ ನಿವೃತ್ತ ಕೆ.ಎ.ಎಸ್ (ಹಿ.ಶ್ರೇ) ಅಧಿಕಾರಿ ಇವರಿಗೆ ಅಧಿಸೂಚನೆ ಸಂಖ್ಯೆ:ಸಿಆಸುಇ 102 ಆಸೇವ 09, ದಿ:14.6.07ರಲ್ಲಿ ಕೆ.ಎ.ಎಸ್ ಸಮೂಹ–ಎ (ಹಿರಿಯ ಶ್ರೇಣಿ) ವೃಂದಕ್ಕೆ ನೀಡಿರುವ ಸ್ಥಾನಪನ್ನ ಬಡ್ತಿಯನ್ನು ಕರ್ನಾಟಕ ನಾಗರೀಕ ಸೇವಾ (ಆರ್.ಪಿ.ಪಿ) ನಿಯಮಗಳು 1978ರ ನಿಯಮ 2(1)(ಎ)ರನ್ವಯ ದಿ:19.6.06 ರಿಂದಲೇ ಜಾರಿಗೆ ಬರುವಂತೆ ಪೂರ್ವಾನ್ವಯವಾಗಿ ಬಡ್ತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1377

ಎಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–2)

ಅಧಿಸೂಚನೆ

ಸಂಖ್ಯೆ: ಸಿಆಸುಇ 20 ಸೇಲುನ್ಯಾ 2009, ಬೆಂಗಳೂರು, ದಿನಾಂಕ: 29ನೇ ಸೆಪ್ಟೆಂಬರ್, 2009.

ಶ್ರೀ ಬೆಳವಿಗಿ ಬಸವರಾಜ ಬಸಪ್ಪ, 4ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾಂ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಕರ್ನಾಟಕ ನಾಗರೀಕಾ ಸೇವಾ ನಿಯಮಾವಳಿಯ ನಿಯಮ 66 ರನ್ವಯ ಅಧ್ಯಕ್ಷಾಧಿಕಾರಿ, ಕರ್ನಾಟಕ ವಕ್ಫ್ ನ್ಯಾಯಾಧೀಕರಣ, ಬೆಳಗಾಂ ಈ ಹುದ್ದೆಯಲ್ಲಿ ಸಮವರ್ತಿ ಪ್ರಭಾರದಲ್ಲಿಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1378

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

PERSONNEL AND ADMINISTRATIVE REFORMS SECRETARIAT

NOTIFICATION

No. DPAR 371 SAS 2009, Bangalore, Dated: 26th September, 2009

Sri M.R. Sreenivasa Murthy, IAS, Principal Secretary to Government, Finance Department is placed in additional charge of the post of Additional Chief Secretary to Government –Cum-Development Commissioner with immediate effect and until further orders.

By Order and in the name of the Governor of Karnataka,

K.G. ANANTHA

P.R. 1379

Under Secretary to Government,

Department of Personnel and Administrative Reforms (Services-I)

NOTIFICATION

No. DPAR 371 SAS 2009, Bangalore, Dated: 29th September, 2009

Sri S.V. Ranganath, IAS (KN-75), on repatriation from Government of India is appointed as Chief Secretary to Government of Karnataka with effect from 30.9.2009 (Afternoon) vice Sri Sudhakar Rao, IAS retiring from service on superannuation.

By Order and in the name of the Governor of Karnataka,

K.G. ANANTHA

P.R. 1380

Under Secretary to Government,

Department of Personnel and Administrative Reforms (Services-I)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 366 ಸಅಸೇ 2009, ಬೆಂಗಳೂರು, ದಿನಾಂಕ: 30ನೇ ಜುಲೈ, 2009.

ಸರ್ಕಾರದ ಕಾರ್ಯದರ್ಶಿ (ಅಲ್ಪ ಸಂಖ್ಯಾತರ ಕಲ್ಯಾಣ) ಸಮಾಜ ಕಲ್ಯಾಣ ಇಲಾಖೆ ಈ ಹುದ್ದೆಯನ್ನು ದಿನಾಂಕ:1.01.2008 ರಿಂದ 8.6.2008ರವರೆಗೆ ವೇತನ ಶ್ರೇಣಿ 37,400–67,000 + ಜಿ.ಪಿ. ರೂ. 12,000ದ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಅಲ್ಪ ಸಂಖ್ಯಾತರ ಕಲ್ಯಾಣ) ಸಮಾಜ ಕಲ್ಯಾಣ ಇಲಾಖೆ ಎಂದು ಉನ್ನತೀಕರಿಸಲಾಗಿದೆ.

ಸರ್ಕಾರದ ಕಾರ್ಯದರ್ಶಿ ಕೃಷಿ ಇಲಾಖೆ, ಈ ಹುದ್ದೆಯನ್ನು ದಿನಾಂಕ:13.6.2009ರಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವೇತನ ಶ್ರೇಣಿ, 37,400–67,000+ಜಿ.ಪಿ.ರೂ. 12,000ದ ಸರ್ಕಾರದ ಪ್ರಧಾನ ಕಾರ್ಯದರ್ಶಿ ಕೃಷಿ ಇಲಾಖೆ ಎಂದು ಉನ್ನತೀಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1381

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಮಮಇ 510 ಎಸ್‌ಜೆಡಿ 2009, ಬೆಂಗಳೂರು, ದಿನಾಂಕ: 15ನೇ ಸೆಪ್ಟೆಂಬರ್, 2009.

ಶ್ರೀ ಮೊಹಮ್ಮದ್, ಕಲೀಮುಲ್ಲಾ, ಕೆ.ಎ.ಎಸ್ (ಹಿರಿಯ ಶ್ರೇಣಿ ಅಧಿಕಾರಿ) (ಪ್ರಸ್ತುತ ಯೋಜನಾ ನಿರ್ದೇಶಕರು, ಕೆಯುಐಡಿಎಫ್‌ಸಿ. ಬೆಳಗಾವಿ, ಹುದ್ದೆಗೆ ವರ್ಗಾವಣೆ ಆದೇಶದಲ್ಲಿರುವ) ಇವರ ಸೇವೆಯನ್ನು ಅಧಿಸೂಚನೆ ಸಂಖ್ಯೆ:ಸಿಆಸುಇ 159 ಆಸೇವ 2009 ದಿ:14.9.2009 ರನ್ವಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಶಕ್ಕೆ ನೀಡಿದ್ದು, ಸದರಿಯವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕಾರ್ಯದರ್ಶಿ, ಬಾಲಭವನ ಸೊಸೈಟಿ. ಬೆಂಗಳೂರು ಇಲ್ಲಿನ ಖಾಲಿ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1382

ಆರ್. ನರಸಿಂಹಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ -2(ಪ್ರಭಾರ)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

LAW, JUSTICE AND HUMAN RIGHTS SECRETARIAT

NOTIFICATION

No. LAW 5 HRS 2009, Bangalore, Dated: 29th September, 2009

Sri N.S. MEGHARIKH, IPS (KN 87) whose services are placed at the disposal of Law, Justice and Human Rights Department under Notification No. DPAR 147 SPS 2009 dated19.9.2009 is posted with immediate effect and until further orders as Inspector General of Police, Karnataka State Human Rights Commission, Bangalore, in the existing vacancy.

By Order and in the name of the Governor of Karnataka,

K.G.V. MURTHY

P.R. 1383

Additional Secretary to Government

(Inter-state Water Dispute),

Department of Law, Justice and Human Rights

PERSONNEL AND ADMINISTRATIVE REFORMS SECRETARIAT

NOTIFICATION

No. DPAR 408 SAS 2009, Bangalore, Dated: 26th September, 2009

Sri P. Manivannan, IAS Deputy Commissioner, Mysore District is placed in additional charge of the post of Chairman, Mysore Development Authority, Mysore with immediate effect and until further orders.

By Order and in the name of the Governor of Karnataka,

K.G. ANANTHA

P.R. 1384

Under Secretary to Government,

Department of Personnel and Administrative Reforms (Services-I)

OFFICE OF THE CITY CIVIL COURT, BANGALORE

NOTIFICATION

No. ADM-I(E), 1343/2009, Bangalore, Dated: 29th September, 2009

Sri K.B. Virupaksha Goud, Asst. Registrar of City Civil Court, Bangalore is granted 20 days of earned leave from 6.7.2009 to 25.7.2009(bdi), with permission to avail general holidays on 5.7.2009 and 26.7.2009 on medical ground.

Sri C.K. Venkatesh, Sheristedar, is placed in additional charge of Sri K.B. Virupaksha Goud, Asst., Registrar, City Civil Court, Bangalore, during the above leave period.

Sri K.B. Virupaksha Goud, Asst. Registrar, City Civil Court, Bangalore would have continued in the same post, but for proceedings on leave.

By Order of the Prl City Civil & Sessions Judge, Bangalore,

P.R. 1385

REGISTRAR,

City Civil Court, Bangalore

HIGH COURT OF KARNATAKA

NOTIFICATION No. HCE 1009/2004, Bangalore, Dated: 29th September, 2009

Sri Nagaraj, K. Assistant Registrar, is hereby posted to work as Assistant Registrar-cum-Private Secretary to Hon'ble the Chief Justice, with immediate effect.

By order of the Hon'ble the Chief Justice,

P.R. 1386

R.B. BUDIHAL

Registrar General

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಮಮಇ 522 ಎಸ್‌ಜೆಡಿ 2009, ಬೆಂಗಳೂರು, ದಿನಾಂಕ: 26ನೇ ಸೆಪ್ಟೆಂಬರ್, 2009.

ದಿನಾಂಕ:14.9.2009 ಅಧಿಸೂಚನೆ ಸಂಖ್ಯೆ:ಮಮಇ 341 ಎಸ್‌ಜೆಡಿ 2009ನ್ನು ಭಾಗಶಃ ಮಾರ್ಪಾಡು ಮಾಡಿ ಶ್ರೀ ಮಲ್ಲಿಕಾರ್ಜುನ ಆರ್. ರೆಡ್ಡಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಇಂಡಿ, ಇವರನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಜೋಯಿಡಾ, ಉತ್ತರ ಕನ್ನಡ ಜಿಲ್ಲೆಗೆ ವರ್ಗಾಯಿಸಿ ಆದೇಶಿಸಿರುವುದನ್ನು ರದ್ದುಪಡಿಸಿ ಶ್ರೀ ಮಲ್ಲಿಕಾರ್ಜುನ ಆರ್. ರೆಡ್ಡಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಪ್ರಸ್ತುತ ವರ್ಗಾವಣೆ ಆದೇಶದಲ್ಲಿರುವ ಇವರನ್ನು ಜಮಖಂಡಿಯಲ್ಲಿ ಖಾಲಿ ಇರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹುದ್ದೆಗೆ ವರ್ಗಾಯಿಸಿ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1387

ಎಂ.ಎಸ್. ಮಂಜುನಾಥ್

ಸರ್ಕಾರದ ಉಪ ಕಾರ್ಯದರ್ಶಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

KARNATAKA GOVERNOR'S SECRETARIAT

NOTIFICATION No.GS 3 KOM 2007, Bangalore, Dated: 29th September, 2009

WHEREAS Prof .B.A. Viveka Rai, Vice Chancellor, Karnataka State open University, Mysore was appointed as Vice-Chancellor, Karnataka State Open University, Mysore. vide Notification No. GS 3 KOM 2007 dated:27.6.2007 for a period of three years w.e.f. 28.6.2007 .His tenure in the normal course would expire on 27.6.2010.

WHEREAS Prof. B.A. Viveka Rai, vide his letter dated 25.9.2009 has tendered his resignation for the post of Vice-Chancellor, Karnataka State Open University, Mysore, on his selection for an assignment as a Guest Professorship at the University of Wurzburg, Germany from 16.10.2009 to 31.7.2010.

NOW, THERE FORE, I H.R. BHARDWAJ,GOVERNOR OF KARNATAKA AND CHANCELLOR OF THE UNIVERSITIES IN KARNATAKA in exercise of the powers conferred on me by Sub Clause 6 of Clause 1 of First Statutes of the Second Schedule of Karnataka State Open University, am. Pleased to accept the resignation of Prof. B.A. Viveka Rai, Vice-Chancellor, Karnataka State Open University Mysore, with effect from 30.9.2009 afternoon.

P.R. 1388

H.R. BHARDWAJ

Governor & Chancellor

SHARADA SUBRAMANIAM

Secretary to Governor

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 134 ಆಡಳಿತ 2009, ಬೆಂಗಳೂರು, ದಿನಾಂಕ: 1ನೇ ಅಕ್ಟೋಬರ್, 2009.

ಭಾಷಾಂತರ ನಿರ್ದೇಶನಾಲಯದಲ್ಲಿ ತೆರವಾಗಿರುವ ನಿರ್ದೇಶಕರ ಹುದ್ದೆಯಲ್ಲಿ ಇದೇ ನಿರ್ದೇಶನಾಲಯದ ಸೇವೆಗೆ ಸೇರಿದ ಉಪ ನಿರ್ದೇಶಕರ ವೃಂದದಲ್ಲಿ ಜೇಷ್ಠತೆಯಲ್ಲಿರುವ ಶ್ರೀ ಎಂ. ಜೈಕುಮಾರ್ ರವರನ್ನು ದಿನಾಂಕ [illegible].10.2009ರಿಂದ ಜಾರಿಗೆ ಬರುವಂತೆ ಕರ್ನಾಟಕ ಸಿವಿಲ್ ಸೇವಾ ನಿಯಮಾವಳಿಯ 68ನೇ ನಿಯಮದನ್ವಯ ಹೆಚ್ಚುವರಿ ಪ್ರಭಾರದಲ್ಲಿರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1389

ಜಿ. ಶ್ರೀಧರ್

ಸಹಾಯಕ ಪ್ರಾರೂಪಕಾರ ಮತ್ತು ಪದನಿಮಿತ್ತ

ಸರ್ಕಾರದ ಉಪ ಕಾರ್ಯದರ್ಶಿ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಅಕ್ಟೋಬರ್ ೨೨, ೨೦೦೯ (ಆಶ್ವಯುಜ ೩೦, ಶಕ ವರ್ಷ ೧೯೩೧)	ಸಂಚಿಕೆ ೪೨

ಭಾಗ–೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕೆ ಮತ್ತು ಇತರೆ) ಇವರ ನ್ಯಾಯಾಲಯ, ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ–ಆಸ್ಕರ್ ರಸ್ತೆ, ಬೆಂಗಳೂರು–52,

ಅಧಿಭಾರ ಸಂಖ್ಯೆ:ಎ (ಐ & ಎಂ) ಅಧಿಭಾರ/ಡಿ–2/01/2009–10

ಅರ್ಜಿದಾರರು	ಪ್ರತಿವಾದಿ
ಕಾರ್ಯದರ್ಶಿ, ವಾಯುವ್ಯ ಕರ್ನಾಟಕ ರಸ್ತೆಸಾರಿಗೆ ನೌಕರರ ಸಹಕಾರಿ ಪತ್ತಿನ ಸಂಘ ನಿ., ಹೊಸೂರ, ಹುಬ್ಬಳ್ಳಿ–5800021.	ಹನುಮಂತ @ ಶ್ರೀ ಹನುಮಂತಪ್ಪ ಬಿನ್ ಶ್ರೀ ಗಿರಿಯಪ್ಪ ಕೊಪ್ಪದ, (ಮಾಜಿ ಕಾರ್ಯದರ್ಶಿ), ಅಸಿಸ್ಟೆಂಟ್ ಟ್ರಾಫಿಕ್ ಇನ್‌ಸ್ಪೆಕ್ಟರ್, NWKRTC., ನಂ.58, ಪ್ರಸನ್ನ ಕಾಲೋನಿ, ಬಸವೇಶ್ವರನಗರ, ಗೋಕುಲ ರಸ್ತೆ, ಹುಬ್ಬಳ್ಳಿ–21.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 103ರಡಿ ಷರತ್ತಿಗೊಳಪಟ್ಟ ತೀರ್ಪು ಪೂರ್ವ ಜಪ್ತಿ ಆದೇಶದ ನೋಟೀಸ್

ಅರ್ಜಿದಾರರು ಈ ದಾವೆಯನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 69ರಡಿ ದಾಖಲಿಸಿ, ಪ್ರತಿವಾದಿಯಿಂದ 2005–06 ಮತ್ತು 2006–07ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಲೆಕ್ಕ ಪರಿಶೋಧಕರು ನಮೂದಿಸಿರುವ ಹಣ ದುರುಪಯೋಗದ ಮೊತ್ತ ರೂ.1,85,000–00 ಗಳನ್ನು ಮತ್ತು ಇದಕ್ಕೆ ಶೇ.18% ಬಡ್ಡಿ ಸೇರಿ ಒಟ್ಟು ಮೊತ್ತ ರೂ.2,86,820–00 ಗಳನ್ನು (ದಿನಾಂಕ:31.05.2009 ರವರೆಗೆ) ಜೊತೆಗೆ ಅಧಿಭಾರ ಅರ್ಜಿಯ ಅಂತಿಮ ಆದೇಶದ ನಂತರ ಪ್ರತಿವಾದಿಯಿಂದ ಸದರಿ ಮೊತ್ತ ವಸೂಲಾತಿ ಆಗುವವರೆಗೂ ಸಹ ಶೇ.18%ರ ಬಡ್ಡಿ ಸಹಿತ ವಸೂಲು ಮಾಡಲು ಡಿಕ್ರಿ ನೀಡಬೇಕೆಂದು ಕೋರಿರುತ್ತಾರೆ.

ಸದರಿ ಅಧಿಭಾರ ಅರ್ಜಿಯೊಂದಿಗೆ ಅರ್ಜಿದಾರರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 103ರಡಿ ಮಧ್ಯಂತರ ಅರ್ಜಿ ಸಲ್ಲಿಸಿ, ಪ್ರತಿವಾದಿಗೆ ಮತ್ತು ಅವರ ಹೆಂಡತಿಗೆ ಸೇರಿದ ಸ್ಥಿರಾಸ್ತಿಗಳನ್ನು ಷರತ್ತುಗೊಳಪಟ್ಟು ತೀರ್ಪು ಪೂರ್ವ ಜಪ್ತಿ ಆದೇಶ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ಅಧಿಭಾರ ಅರ್ಜಿಯನ್ನು ಕಡತಕ್ಕೆ ತೆಗೆದುಕೊಂಡು ದಿನಾಂಕ:01.08.2009 ರಂದು ಪ್ರಕರಣದ ವಿಚಾರಣೆ ನಡೆಸಲಾಯಿತು. ಅರ್ಜಿದಾರರು ವಕೀಲರ ಸಹಾಯ ಕೋರಿ ನಿಯಮ 55ರಡಿ ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಿದೆ. ಆದರಂತೆ ಅರ್ಜಿದಾರರ ಪರ ವಕೀಲರಾದ ಶ್ರೀ ಡಿ.ಕೆ. ಶ್ರೀರಾಮಪ್ಪ ರವರು ಸಲ್ಲಿಸಿರುವ ವಕಾಲತ್ತನ್ನು ಅಂಗೀಕರಿಸಲಾಗಿದೆ. ಮಧ್ಯಂತರ ಆದೇಶದ ಬಗ್ಗೆ ಅರ್ಜಿದಾರರ ಪರ ವಕೀಲರು ತಮ್ಮ ವಾದ ಮಂಡಿಸಿರುತ್ತಾರೆ. ಹಾಗೂ ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ಅರ್ಜಿದಾರರ ಪರ ವಕೀಲರು ತಮ್ಮ ಮಧ್ಯಂತರ ಅರ್ಜಿಯ ಬಗ್ಗೆ ತಮ್ಮ ವಾದ ಮಂಡಿಸುತ್ತಾ, ಪ್ರತಿವಾದಿಯು 2005–06 ಮತ್ತು 2006–07ನೇ ಸಾಲಿನಲ್ಲಿ ಅರ್ಜಿದಾರರ ಸಹಕಾರ ಸಂಘದಲ್ಲಿ ಕಾರ್ಯದರ್ಶಿಯಾಗಿ ಕಾರ್ಯ

III -F1 -(O)

ನಿರ್ವಹಿಸಿದ್ದು, ಆ ಸಂದರ್ಭದಲ್ಲಿ ಮುದ್ರಣ ಮತ್ತು ಸ್ಟೇಶನರಿ ಶೀರ್ಷಿಕೆಯಲ್ಲಿ ರೂ.1,59,000/- ಮತ್ತು ಸಾದಿಲ್ವಾರು ವೆಚ್ಚ ರೂ.6,000/- ಹಾಗೂ 2006-07ನೇ ಸಾಲಿನ ಮಾರ್ಚ್-2007ನೇ ಮಾಹೆಯಲ್ಲಿ ಆಡಳಿತ ಮಂಡಳಿಯಲ್ಲಿನ ಅನುಮೋದನೆ ಪಡೆದುಕೊಳ್ಳುವಾಗ್ಗೆ ಒಂದು ಅಂಕಿ ಸಂಖ್ಯೆಗಳನ್ನು ತೋರಿಸಿ, ನಂತರ ದುರುದ್ದೇಶ ಪೂರ್ವಕವಾಗಿ ಹೆಚ್ಚಿಸ ಮೊತ್ತದ ಖರ್ಚಿಗೆ ಮಂಜೂರಾತಿ ಕೊಟ್ಟಿರುತ್ತಾರೆಂದು ಅರ್ಥ ಬರುವ ರೀತಿಯಲ್ಲಿ ಲೆಕ್ಕ ಪತ್ರಗಳನ್ನು ಹೊಂದಾಣಿಕೆ ಮಾಡಿಕೊಂಡು ರೂ.20,000/-ಗಳನ್ನು ದುರುಪಯೋಗ ಮಾಡಿಕೊಂಡಿರುತ್ತಾರೆಂದು, ಹೀಗೆ ಒಟ್ಟು ಮೊತ್ತ ರೂ.1,85,000/-ಗಳನ್ನು ದುರುಪಯೋಗ ಪಡಿಸಿಕೊಂಡಿದ್ದು, ಅರ್ಜಿದಾರರ ಸಹಕಾರ ಸಂಘಕ್ಕೆ ನಷ್ಟ ಉಂಟುಮಾಡಿರುತ್ತಾರೆಂದು, ಆದುದರಿಂದ ಈ ದುರುಪಯೋಗ ಮೊತ್ತಕ್ಕೆ ಸಂಬಂಧಿಸಿದಂತೆ ಪ್ರತಿವಾದಿಯು ತನ್ನ ಮತ್ತು ಹೆಂಡತಿಯ ಹೆಸರಿನಲ್ಲಿರುವ ಸ್ಥಿರಾಸ್ತಿಯನ್ನು ಮಾರಾಟ ಮಾಡಬಹುದೆಂದು, ಸದರಿ ಮೊತ್ತವು 2005-06 ಮತ್ತು 2006-07ನೇ ಲೆಕ್ಕ ಪರಿಶೋಧನೆಯಲ್ಲಿ ಪ್ರತಿವಾದಿಯು ದುರುಪಯೋಗ ಮಾಡಿರುವುದು ದೃಢಪಟ್ಟಿರುವುದರಿಂದ ಷರತ್ತುಗೊಳಪಟ್ಟ ತೀರ್ಪು ಪೂರ್ವ ಜಪ್ತಿ ಆದೇಶ ಮಾಡಲು ನ್ಯಾಯಾಲಯವನ್ನು ಕೋರಿರುತ್ತಾರೆ.

ಅರ್ಜಿದಾರರ ಸಹಕಾರ ಸಂಘದ ಪರ ವಕೀಲರು ಮಂಡಿಸಿರುವ ವಾದವನ್ನು ಹಾಗೂ ಅರ್ಜಿದಾರರ ಸಹಕಾರ ಸಂಘದ ಪರ ಸಲ್ಲಿಸಿರುವ ದಾಖಲೆಗಳು, ಪ್ರಮಾಣ ಪತ್ರದ ಅಂಶಗಳನ್ನು ಪರಿಶೀಲಿಸಿದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 103ರಡಿ ಷರತ್ತಿಗೊಳಪಟ್ಟ ತೀರ್ಪು ಪೂರ್ವ ಜಪ್ತಿ ಅರ್ಜಿಯನ್ನು ಅಂಗೀಕರಿಸುವುದು ಈ ಹಂತದಲ್ಲಿ ನ್ಯಾಯಸಮ್ಮತವೆಂದು ಮನಗಂಡು, ಕೆಳಕಂಡ ಮಧ್ಯಂತರ ಆದೇಶವನ್ನು ಹೊರಡಿಸಿದೆ.

ಮಧ್ಯಂತರ ಆದೇಶ

ಈ ಆದೇಶದ ಅನುಬಂಧದಲ್ಲಿ ವಿವರಿಸಿರುವ ಪ್ರತಿವಾದಿಯ ಮತ್ತು ಅವರ ಹೆಂಡತಿಯ ಹೆಸರಿನಲ್ಲಿನ ಸ್ಥಿರಾಸ್ತಿಗಳನ್ನು ಈ ನ್ಯಾಯಾಲಯದಲ್ಲಿ ಅರ್ಜಿದಾರರು ದಾಖಲು ಮಾಡಿರುವ ಅಧಿಭಾರ ಅರ್ಜಿಯ ಅಂತಿಮ ಆದೇಶಕ್ಕೆ ಒಳಪಟ್ಟು, ಸದರಿ ಸ್ಥಿರಾಸ್ತಿಗಳನ್ನು ಷರತ್ತಿಗೊಳಪಟ್ಟು ತೀರ್ಪು ಪೂರ್ವ ಜಪ್ತಿ ಮಾಡಿ, ಆದೇಶ ಹೊರಡಿಸಿದೆ. ಪ್ರತಿವಾದಿಯು ಈ ಆದೇಶವನ್ನು ತೆರವುಗೊಳಿಸಲು ಇಚ್ಛಿಸಿದಲ್ಲಿ, ಅರ್ಜಿದಾರರ ಸಹಕಾರ ಸಂಘದಲ್ಲಾಗಲೀ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಾಗಲೀ, ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನಲ್ಲಾಗಲೀ ಅಥವಾ ಇನ್ನಾವುದೇ ಸಹಕಾರ ಬ್ಯಾಂಕಿನಲ್ಲಿ ರೂ.2,86,820-00 (ರೂಪಾಯಿ ಎರಡು ಲಕ್ಷ ಎಂಬತ್ತಾರುಸಾವಿರದ ಎಂಟುನೂರ ಇಪ್ಪತ್ತು ಮಾತ್ರ) ಗಳಿಗೆ ಠೇವಣಿ ಮಾಡಿ, ಸಂಬಂಧಿಸಿದ ರಶೀದಿಯನ್ನು ಈ ಆದೇಶ ಪಡೆದ ದಿನದಿಂದ 30 ದಿವಸಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಸೂಚಿಸಿದೆ. ವಿಫಲರಾದಲ್ಲಿ ಪ್ರತಿವಾದಿಯಾದ ನಿಮ್ಮ ಆಕ್ಷೇಪಣೆ ಏನೂ ಇಲ್ಲವೆಂದು ಪರಿಗಣಿಸಿ, ಲಭ್ಯವಿರುವ ದಾಖಲೆಗಳು ಮತ್ತು ಅರ್ಹತೆಯ ಅನುಸಾರ ಸದರಿ ಸ್ಥಿರಾಸ್ತಿಗಳನ್ನು ಷರತ್ತಿಗೊಳಪಟ್ಟು ತೀರ್ಪು ಪೂರ್ವ ಜಪ್ತಿ ಮಾಡಿಕೊಂಡಿರುವುದನ್ನು ಸ್ಥಿರೀಕರಣಗೊಳಿಸಿ, ಆದೇಶಿಸಲಾಗುವುದೆಂದು ಈ ಮೂಲಕ ಪ್ರತಿವಾದಿಯಾದ ನಿಮಗೆ ಆದೇಶಿಸಿದೆ. **ಈ ಪ್ರಕರಣದ ಮುಂದಿನ ವಿಚಾರಣೆಯನ್ನು ದಿನಾಂಕ:05.09.2009 ಮಧ್ಯಾಹ್ನ 3-00 ಗಂಟೆಗೆ ನಿಗದಿಪಡಿಸಿದೆ.**

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಸೂಕ್ತ ತಿದ್ದುಪಡಿ ಆದ ನಂತರ, ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ:03.08.2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

ಹೆಚ್.ಡಿ. ರಮೇಶ್
ಸಹಕಾರ ಸಂಘಗಳ ಅಪರ ನಿಬಂಧಕರು
(ಕೈಗಾರಿಕೆ ಮತ್ತು ಇತರೆ).

ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕೆ ಮತ್ತು ಇತರೆ) ಇವರ ನ್ಯಾಯಾಲಯ, ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ-ಆಸ್ಕರ್ ರಸ್ತೆ, ಬೆಂಗಳೂರು-52,
ಅಧಿಭಾರ ಸಂಖ್ಯೆ:ಎ (ಐ & ಎಂ) ಅಧಿಭಾರ/ಡಿ-2/01/2009-10

ಹನುಮಂತ @ ಶ್ರೀ ಹನುಮಂತಪ್ಪ ಬಿನ್ ಶ್ರೀ ಗಿರಿಯಪ್ಪ ಕೊಪ್ಪದ, ಮತ್ತು ಶ್ರೀಮತಿ ರೇಣುಕಾ ಕೋಂ ಹನುಮಂತ @ ಶ್ರೀ ಹನುಮಂತಪ್ಪ ಗಿರಿಯಪ್ಪ ಕೊಪ್ಪದ ಇವರುಗಳಿಗೆ ಸೇರಿದ, ಷರತ್ತಿಗೊಳಪಟ್ಟು, ತೀರ್ಪು ಪೂರ್ವ ಜಪ್ತಿ ಆದೇಶಕ್ಕೆ ಒಳಪಡಿಸಿದ ಸ್ಥಿರಾಸ್ತಿಗಳ ವಿವರಗಳು.

ಕ್ರ. ಸಂ.	ಗ್ರಾಮದ ಹೆಸರು	ಸರ್ವೆ ನಂಬರ್	ವಿಸ್ತೀರ್ಣ	ಚಕ್ಕುಬಂದಿ	ಷರಾ
1.	ಅಳಗವಾಡಿ ಗ್ರಾಮ, ನವಲಗುಂದ ತಾಲ್ಲೂಕು.	264/2ಕ	6 ಎಕರೆ	ಪೂರ್ವಕ್ಕೆ ರಿಸರ್ವೇ ನಂಬರ್ 265 ಪಶ್ಚಿಮಕ್ಕೆ ರಿಸರ್ವೇ ನಂಬರ್ 264/2ಡ ರಲ್ಲಿ ಉಳಿದ ಸ್ವತ್ತು ಉತ್ತರಕ್ಕೆ ರಿಸರ್ವೇ ನಂಬರ್ 310 ದಕ್ಷಿಣಕ್ಕೆ ರಿಸರ್ವೇ ನಂಬರ್ 212	

ಕ್ರ. ಸಂ.	ಗ್ರಾಮದ ಹೆಸರು	ಸರ್ವೆ ನಂಬರ್	ವಿಸ್ತೀರ್ಣ	ಚಕ್ಕುಬಂದಿ	ಷರಾ
2.	ಅಳಗವಾಡಿ ಗ್ರಾಮ, ನವಲಗುಂದ ತಾಲ್ಲೂಕು.	264/2ಡ	2.25 ಎಕರೆ		
3.	ಅಳಗವಾಡಿ ಗ್ರಾಮ ನವಲಗುಂದ ತಾಲ್ಲೂಕು	294 1ಎ/1	3.25 ಎಕರೆ		
4.	ಶ್ರೀಮತಿ ರೇಣುಕಾ ಕೋಂ ಹನುಮಂತ @ ಶ್ರೀ ಹನುಮಂತಪ್ಪ ಗಿರಿಯಪ್ಪ ಕೊಪ್ಪದ ಇವರ ಹೆಸರಿನಲ್ಲಿರುವ, ಧಾರವಾಡ ಜಿಲ್ಲೆ, ಹುಬ್ಬಳ್ಳಿ ನಗರದ ಉಣಕಲ್ ವ್ಯಾಪ್ತಿಗೆ ಸೇರಿದ ಮನೆ ನಂಬರ್:606/ಬಿ, ಪ್ಲಾಟ್ ನಂಬರ್ 58 ವಿಸ್ತೀರ್ಣ, 458 ಚದರ ಅಡಿ ಹಾಗೂ ದರ ಮೇಲಿನ ಕಟ್ಟಡ ಹಾಗೂ ನಿವೇಶನ ವಿಸ್ತೀರ್ಣ ಪೂರ್ವ-ಪಶ್ಚಿಮಕ್ಕೆ 60 ಅಡಿ ಉತ್ತರ-ದಕ್ಷಿಣಕ್ಕೆ 85 ಅಡಿಗಳು. ಪೂರ್ವಕ್ಕೆ- ಪ್ಲಾಟ್ ನಂಬರ್ 59, ಪಶ್ಚಿಮಕ್ಕೆ- ಪ್ಲಾಟ್‌ನಂಬರ್ 57, ಉತ್ತರಕ್ಕೆ- 30 ಅಡಿ ರಸ್ತೆ, ದಕ್ಷಿಣಕ್ಕೆ- ಗೌಳಿಯವರ ಖಾಲಿ ಜಾಗ.				

ಹೆಚ್.ಡಿ. ರಮೇಶ್
ಸಹಕಾರ ಸಂಘಗಳ ಅಪರ ನಿಬಂಧಕರು
(ಕೈಗಾರಿಕೆ ಮತ್ತು ಇತರೆ).

ಪಿ.ಆರ್.759

IN THE COURT OF COMMISSIONER FOR WORKMEN'S COMPENSATION, BIDAR

No.LOB/WCA/cr-F-41/2009,

Applicants:
1) Shushila Bai W/o Late Maruthi Wagge, Age: Major, Occup: Labour, R/o Village Khasimpur, Tq: & Dist: Bidar.

V/s

Respondents:
1) The M.D. Ravindra Distillary Pvt. Ltd., Village: Khasimpur, Tq:& Dist. Bidar.

PROCLAIMATION

Sri/Smt: Shushila Bai W/o.F/o.M/o. Late Pandit R/o Village Age, Khasimpur, Tq: & Dist. Bidar, have has filed application in this Court claiming compensation stating that Late Pandit was working as Labour Under the Respondent No I he met with an accident arising out of and during the course of employment as a result he died on 15.02.2009.

Wherefore, it is hereby notified for the information of these concerned that other dependents if any may file their claim application and objections within 30 days from the date of publication of this proclaimation, if no applications on objections are received within the specified date the Court will proceeded further in the matter.

Commissioner for Workmen's
Compensation, Bidar.

PR-967

ಸಹಾಯಕ ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ, ಲೋ ಬಂ ಮತ್ತು ಒ ಜ ಸಾ ಇಲಾಖೆ, ಉಪವಿಭಾಗ, ಬೇಲೂರು

ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿಯಲ್ಲಿ

ಸೆಕ್ಷನ್ 4(1) (ಬಿ) 17 ಅಂಶಗಳ ಕೈಪಿಡಿ

ಸಹಾಯಕ ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ, ಲೋ ಬಂ ಮತ್ತು ಒ ಜ ಸಾ ಇಲಾಖೆ, ಉಪವಿಭಾಗ, ಬೇಲೂರು

ಅಧಿಕೃತ ಜ್ಞಾಪನಾ ಪತ್ರ

ಸಂ. ಸ.ಕಾ.ಇಂ/ ಲೋ.ಬ.ಒ.ಜ.ಸಾ.ಇ.ಉ.ವಿ/ಬೇಲೂರು/ಮಾಹಿತಿ ಹಕ್ಕು/2009-10/ 193, ದಿನಾಂಕ:9ನೇ ಸೆಪ್ಟೆಂಬರ್, 2009

ವಿಷಯ: ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005ರ ಪ್ರಕಾರ ಪರಿಷ್ಕೃತ ಆದೇಶಗಳು ಮತ್ತು ಸೂಚನೆಗಳು.

ಉಲ್ಲೇಖ: 1. ಸರ್ಕಾರದ ಸುತ್ತೋಲೆ ಸಂ:ಗ್ರಾ.ಅಪ:324:ಕೆ.ಎಸ್.ಎಸ್.2005:ದಿನಾಂಕ:25.08.2005.

2. ಮುಖ್ಯ ಇಂಜನಿಯರ್ ಸಂಪರ್ಕ ಮತ್ತು ಕಟ್ಟಡಗಳು (ದ) ಬೆಂಗಳೂರು ಇವರ ಅಧಿಸೂಚನೆ ಸಂ:ಸಿಬಿಎಸ್: ಮಾಹಿತಿ ಹಕ್ಕು ಕೈಪಿಡಿ 2005 ಇಎಸ್ಎಸ್: 2005-06 ದಿನಾಂಕ:19.09.2005.

3. ಅಧೀಕ್ಷಕ ಇಂಜನಿಯರ್, ಲೋಕೋಪಯೋಗಿ ಇಲಾಖೆ ಹಾಸನ ವೃತ್ತ, ಹಾಸನ ಇವರ ಅಧಿಸೂಚನೆ ಸಂ ಸೂಇಂ: ಲೋಇ: ಹಾವೃ:ಸಿ-1: ಮಾಹಿತಿಹಕ್ಕು 2006-07:737 ದಿನಾಂಕ:23.06.2007.

4. ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಸ.ಕಾ.ಇಂ/ಲೋ.ಬಿ.ಒ.ಜ.ಸಾ.ಇ.ಉ.ವಿ/ಬೇಲೂರು/ ಮಾಹಿತಿ ಹಕ್ಕು/ 2008-09/173 ದಿನಾಂಕ:11.08.2008.

ರಾಜ್ಯದಲ್ಲಿ ನಾಗರೀಕರಿಗೆ ಮಾಹಿತಿ ಪಡೆಯಲು ಅವಕಾಶದ ಹಕ್ಕಿಗಾಗಿ ರಚಿತವಾಗಿರುವ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ-2005 (2005ರ ಕೇಂದ್ರ ಕಾಯ್ದೆ ಸಂಖ್ಯೆ-22) ಅನ್ನು ಜಾರಿಗೊಳಿಸುವಲ್ಲಿ ಅನುಕೂಲವಾಗುವಂತೆ ಮುಖ್ಯ ಇಂಜನಿಯರ್ ಸಂಪರ್ಕ ಮತ್ತು ಕಟ್ಟಡಗಳು (ದ) ಬೆಂಗಳೂರು ಇವರ ಅಧಿಸೂಚನೆ ಸಂ:ಸಿಬಿಎಸ್: ಮಾಹಿತಿ ಹಕ್ಕು ಕೈಪಿಡಿ 2005 ಇಎಸ್ಎಸ್: 2005-06 ದಿನಾಂಕ:19.09.2005 ರಲ್ಲಿ ಇಲಾಖಾ ಮುಖ್ಯಸ್ಥರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರ ಕಛೇರಿಗಳಲ್ಲಿನ ಕಾರ್ಯವಿಧಾನದ ಬಗ್ಗೆ ಮಾಹಿತಿ ನೀಡಲು ಸೆಕ್ಷನ 5(1)ರ ಅಡಿಯಲ್ಲಿ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಒಳನಾಡು ಜಲ ಸಾರಿಗೆ ಇಲಾಖೆ ಹಾಸನ ವಿಭಾಗ ಹಾಸನ ರವರನ್ನು "ಸಾರ್ವಜನಿಕ ಮಾಹಿತಿ ಅಧಿಕಾರಿ" ಎಂದು ಹಾಗೂ ಸೆಕ್ಷನ್ 19(1) ರ ಅಡಿಯಲ್ಲಿ ಅಧೀಕ್ಷಕ ಇಂಜನಿಯರ್, ಲೋಕೋಪಯೋಗಿ ಬಂದರು ಒಳನಾಡು ಜಲ ಸಾರಿಗೆ ಇಲಾಖೆ ಹಾಸನ ವೃತ್ತ, ಹಾಸನ ರವರನ್ನು ಮೇಲ್ಮನವಿ ಪ್ರಾಧಿಕಾರಿಯನ್ನಾಗಿ ನೇಮಿಸಿರುತ್ತಾರೆ. ಹಾಗೂ ಸೆಕ್ಷನ್ 5 (2) ರ ಅಡಿಯಲ್ಲಿ ಸಹಾಯಕ ಕಾರ್ಯಪಾಲಕ ಇಂಜನಿಯರ್, ಲೋಕೋಪಯೋಗಿ ಬಂದರು ಒಳನಾಡು ಜಲ ಸಾರಿಗೆ ಇಲಾಖೆ ಉಪ-ವಿಭಾಗ ಬೇಲೂರು ಇವರನ್ನು "ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ" ಎಂದು ನೇಮಿಸಲ್ಪಟ್ಟಿರುವುದರಿಂದ ಈ ಕೆಳಕಂಡಂತೆ ಪರಿಷ್ಕರಿಸಿ ಪ್ರಕಟಿಸಲಾಗಿದೆ.

ಕ್ರ. ಸಂ.	ಸಂಸ್ಥೆಗಳ ಸಾರ್ವಜನಿಕ ಪ್ರಾಧಿಕಾರ	ಸಾರ್ವಜನಿಕ ಮಾಹಿತಿ ಅಧಿಕಾರಿ	ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ	ಮೇಲ್ಮನವಿ ಪ್ರಾಧಿಕಾರಿ
1.	ಲೋಕೋಪಯೋಗಿ ಇಲಾಖೆ ಉಪ-ವಿಭಾಗ, ಬೇಲೂರು.	ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಒಳನಾಡು ಜಲ ಸಾರಿಗೆ ಇಲಾಖೆ ವಿಭಾಗ, ಹಾಸನ.	ಸಹಾಯಕ ಕಾರ್ಯಪಾಲಕ ಇಂಜನಿಯರ್, ಲೋಕೋಪಯೋಗಿ ಬಂದರು ಒಳನಾಡು ಜಲ ಸಾರಿಗೆ ಇಲಾಖೆ ಉಪ-ವಿಭಾಗ ಬೇಲೂರು.	ಅಧೀಕ್ಷಕ ಇಂಜನಿಯರ್, ಲೋಕೋಪಯೋಗಿ ಬಂದರು ಒಳನಾಡು ಜಲ ಸಾರಿಗೆ ಇಲಾಖೆ ಹಾಸನ ವೃತ್ತ, ಹಾಸನ.

ಅದೇ ರೀತಿ ಅಧಿನಿಯಮದ ಸೆಕ್ಷನ್ 19(1) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಲು ಮೇಲ್ಮನವಿ ಸಾರ್ವಜನಿಕ ಪ್ರಾಧಿಕಾರದಲ್ಲಿ ಪ್ರಾಧಿಕಾರ ಎಂದು ಗುರುತಿಸಲಾಗಿದೆ.

ಆದುದರಿಂದ ನಾಗರೀಕರು ಲೋಕೋಪಯೋಗಿ ಇಲಾಖೆ ಉಪ ವಿಭಾಗ, ಬೇಲೂರು ವ್ಯಾಪ್ತಿಯಲ್ಲಿ ನಿರ್ವಹಿಸಲ್ಪಡುವ ಅಥವಾ ಅನುಷ್ಠಾನಗೊಳಿಸಲ್ಪಡುವ ವಿವಿಧ ಅಭಿವೃದ್ಧಿ ಕಾರ್ಯಗಳ ಸಂಬಂಧವಾಗಿ ಮಾಹಿತಿ ಪಡೆಯಲು ಮೇಲಿನ ಮೇಲ್ಮನವಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನು ಸಂಪರ್ಕಿಸಿ ನಿಯಮದಲ್ಲಿ ತಿಳಿಸಿರುವಂತೆ ನಿಯಮಾನುಸಾರ ಮಾಹಿತಿಯನ್ನು ಪಡೆಯಬಹುದಾಗಿದೆ.

ಸಹಾಯಕ ಕಾರ್ಯಪಾಲಕ ಇಂಜನಿಯರ್,
ಲೋ ಬಂ ಮತ್ತು ಒ ಜ ಸಾ ಇಲಾಖೆ,
ಉಪವಿಭಾಗ, ಬೇಲೂರು.

ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005(2005ರ ಕೇಂದ್ರ ಕಾಯ್ದೆ ಸಂಖ್ಯೆ:22)

ಸಾರ್ವಜನಿಕ ಪ್ರಾಧಿಕಾರಗಳಿಂದ ಮಾಹಿತಿ ಪಡೆಯಲು ನಾಗರೀಕರಿಗೆ ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ 2005ರ ಅನುಸಾರ (ಕೇಂದ್ರ ಕಾಯ್ದೆ ಸಂಖ್ಯೆ:22:2005ರ ಅಡಿ) ಸೆಕ್ಷನ್ (3) ಮತ್ತು (4) ರಂತೆ ಅವಶ್ಯ ಪ್ರಚಾರವನ್ನು ಕಛೇರಿಯ ಪ್ರಕಟಣಾ ಫಲಕದಿಂದ ದಿನಪತ್ರಿಕೆಗಳು ಸಾರ್ವತ್ರಿಕ ಪ್ರಚಾರ ಮಾಧ್ಯಮಗಳ ಮೂಲಕ ಪ್ರಚಾರ ಇಂಟರ್‌ನೆಟ್ ಇತ್ಯಾದಿ ಪ್ರಚಾರ ಸಾಧನೆಗಳ ಮೂಲಕ ಪ್ರಚಾರಪಡಿಸಿ ಮಾಹಿತಿ ಪಡೆಯಲು ನಾಗರೀಕರಿಗೆ ಬೇಕಾದ ವಿವರಗಳನ್ನು ಒದಗಿಸಲು ಸೂಚನೆ ಇರುತ್ತದೆ. ಇದಕ್ಕಾಗಿ "ದಿ ಗೆಜೆಟ್ ಇಂಡಿಯಾ ಎಕ್ಸ್ಟ್ರಾರ್ಡಿನರಿ" ಸಂಚಿಕೆಯಲ್ಲಿ ಪ್ರಕಟಿಸಿರುವಂತೆ.

ಲೋಕೋಪಯೋಗಿ ಇಲಾಖೆ ಉಪ ವಿಭಾಗ, ಬೇಲೂರು ಕಛೇರಿಗೆ ಸಂಬಂಧಿಸಿದ ಕಾರ್ಯಚಟುವಟಿಕೆಗಳು. 2008-09ನೇ ಸಾಲಿಗೆ ಕಾರ್ಯಗತಗೊಳಿಸಬೇಕಾದ ವಿವರ ಮತ್ತು ವಿವಿಧ ಹಂತಗಳಲ್ಲಿ ಇರುವ ಹಣಕಾಸಿನ ಪ್ರತ್ಯಾಯೋಜಿತ ಅಧಿಕಾರ. ಮತ್ತು ಮಾಹಿತಿ ಪಡೆಯಲು ನಾಗರೀಕರು ಅನುಸರಿಸಬೇಕಾದ ವಿಧಾನಗಳು ಅವಶ್ಯ ನಮೂನೆ ಶುಲ್ಕದ ವಿವರ

ಇತ್ಯಾದಿ ಸಂಪೂರ್ಣ ವಿವರಗಳನ್ನೊಳಗೊಂಡ ಮಾಹಿತಿಯನ್ನು ಸಂಘಟನಾ ಫಲಕದಲ್ಲಿ (ಆರ್ಗನೈಸೇಷನ್ ಚಾರ್ಟ್ ಸಹಿತ) ಸಿದ್ಧಪಡಿಸಿದೆ.

ಕೇಂದ್ರ ಗೆಜೆಟ್‌ನಲ್ಲಿ ಪ್ರಕಟಪಡಿಸಿರುವಂತೆ ಪ್ರತಿಯೊಂದು ಸಕ್ಷಮ ಪ್ರಾಧಿಕಾರವು ಸೆಕ್ಷನ್ (3).(4). (1) ರ ಅಡಿಯಲ್ಲಿ ಹೊರಡಿಸಬೇಕಾದ ಕೈಪಿಡಿಯನ್ನು ನಾಗರೀಕರು ಉತ್ತಮ ರೀತಿಯಲ್ಲಿ ಬಳಸಿಕೊಂಡು ಸ್ವಾಸ್ಥ ಸಮಾಜದ ನಿರ್ಮಾಣದೆಡೆ ದೇಶವನ್ನು ಕೊಂಡೊಯ್ಯಲು ಮತ್ತು ಪ್ರತಿಯೊಬ್ಬ ಪ್ರಜೆಗೂ ಸಂವಿಧಾನದತ್ತವಾಗಿ ಬಂದಿರುವ ಮೂಲಭೂತ ಹಕ್ಕುಗಳಂತೆ ದೇಶದ ಉನ್ನತಿ ಬಗ್ಗೆ ಚಿಂತಿಸುವಂತಾಗಲು ಕ್ರೋಢಿಕೃತ ಸಂಪನ್ಮೂಲಗಳ ಸಮರ್ಥ ಬಳಕೆ ಆಗುತ್ತದೆಯೇ ಅಥವಾ ಯಾವುದೇ ಅನುಮಾನಕ್ಕೆ ಆಸ್ಪದವಿಲ್ಲದಂತೆ ಪಾರದರ್ಶಕತೆ ಪಾಲಿಸಲಾಗುತ್ತಿದೆಯೇ ಎಂಬುದನ್ನು ಅರಿಯಲು ಈ ಕೈಪಿಡಿ ಸಹಕಾರಿಯಾಗಲಿ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್,
ಲೋ ಬಂ ಮತ್ತು ಒ ಜ ಸಾ ಇಲಾಖೆ,
ಉಪವಿಭಾಗ, ಬೇಲೂರು.

1. ಇಲಾಖೆಯ ಪ್ರಾಧಿಕಾರದ ಕಾರ್ಯಚಟುವಟಿಕೆಗಳು ಮತ್ತು ಕರ್ತವ್ಯಗಳ ವಿವರ:

ಕರ್ನಾಟಕ ರಾಜ್ಯದ ಲೋಕೋಪಯೋಗಿ ಇಲಾಖೆ(ದಕ್ಷಿಣ) ಅಧೀನದಲ್ಲಿ ಮುಖ್ಯ ಇಂಜಿನಿಯರ್ ರವರನ್ನು ಮುಖ್ಯಸ್ಥರೆಂದು ಗುರುತಿಸಲಾಗಿದ್ದು ಬೆಂಗಳೂರಿನಲ್ಲಿ ಕೇಂದ್ರಸ್ಥಾನ ಹೊಂದಿರುತ್ತಾರೆ. ವೃತ್ತ ಕಛೇರಿಗೆ ಅಧೀಕ್ಷಕ ಇಂಜಿನಿಯರ್‌ರವರು ಮುಖ್ಯಸ್ಥರಾಗಿದ್ದು ಹಾಸನ ವಿಭಾಗವು ಹಾಸನ ವೃತ್ತದ ವ್ಯಾಪ್ತಿಯಲ್ಲಿ ಬರುತ್ತದೆ. ಈ ಉಪ ವಿಭಾಗ ಮಟ್ಟದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಮುಖ್ಯಸ್ಥರಾಗಿರುತ್ತಾರೆ. ಉಪ-ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುವ ತಾಂತ್ರಿಕ ಸಿಬ್ಬಂದಿಗಳು ಕಾಮಗಾರಿಯ ಅನುಷ್ಠಾನದಲ್ಲಿ ಮುಖ್ಯ ಪಾತ್ರ ವಹಿಸುತ್ತಾರೆ. ಪೂರಕವಾಗಿ ಆಡಳಿತ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಾರೆ.

ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸರ್ಕಾರದ ಪಾರದರ್ಶಕ ನಿಯಮಗಳನ್ನು ಅನುಸರಿಸಿ ಅಂದಾಜು ತಯಾರಿಕೆ, ಟೆಂಡರ್ ಮತ್ತು ಕೊಟೇಷನ್, ಬಜೆಟ್ ಕಾಮಗಾರಿಗಳು, 3054 ಯೋಜನೆಯ ಕಾಮಗಾರಿಗಳು, ನಬಾರ್ಡ ಕಾಮಗಾರಿಗಳು, ರಾಜ್ಯ ಹೆದ್ದಾರಿ ನಿರ್ವಹಣೆ ಕಾಮಗಾರಿಗಳು, ನೈಸರ್ಗಿಕ ವಿಕೋಪಕ್ಕೆ ಸಂಬಂಧಪಟ್ಟ ಕಾಮಗಾರಿಗಳು, ಸಂಸತ್ ಸದಸ್ಯರ: ಶಾಸಕರ ಪ್ರದೇಶ ಅಭಿವೃದ್ಧಿ ಕಾಮಗಾರಿಗಳು ಇತ್ಯಾದಿಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಗಳು ಲೋಕೋಪಯೋಗಿ ಇಲಾಖೆ ಉಪ-ವಿಭಾಗಗಳ ಬೇಲೂರು ಮುಖ್ಯ ಕಾರ್ಯ ಚಟುವಟಿಕೆಗಳಾಗಿರುತ್ತವೆ. ಸಂಘಟನಾಚಾರ್ಟನ್ನು ಇದರೊಂದಿಗೆ ಲಗತ್ತಿಸಿದೆ.

2. ಅಧಿಕಾರಿಗಳ:ಸಿಬ್ಬಂದಿವರ್ಗದವರ ಅಧಿಕಾರ ಮತ್ತು ಕರ್ತವ್ಯಗಳು:

ಲೋಕೋಪಯೋಗಿ ಈ ಉಪ-ವಿಭಾಗಕ್ಕೆ ಸಹಾಯಕ ಕಾರ್ಯಪಾಲಕ ಇಂಜಿನಿಯರವರು ಕಛೇರಿ ಮುಖ್ಯಸ್ಥರಾಗಿರುತ್ತಾರೆ. ಉಪ-ವಿಭಾಗ ಕಚೇರಿಯ ಅಧೀನದಲ್ಲಿ ಸಹಾಯಕ: ಕಿರಿಯ ಇಂಜಿನಿಯರುಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಪೂರಕವಾಗಿ ಆಡಳಿತ ಸಿಬ್ಬಂದಿಯವರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಈ ಉಪ-ವಿಭಾಗದಿಂದ ಅಂದಾಜು ಪಟ್ಟಿಗಳನ್ನು ತಯಾರಿಸಿ ಸಲ್ಲಿಸುವುದು ಅನುಮೋದನೆಗೊಂಡ ಕಾಮಗಾರಿಗಳ ನಿರ್ವಹಿಸಿದ ಬಾಬ್ತು ಬಿಲ್ಲುಗಳನ್ನು ತಯಾರಿಸಿ ವಿಭಾಗ ಕಛೇರಿಗೆ ಸಲ್ಲಿಸುವುದು, ನಕ್ಷೆಗಳನ್ನು ತಯಾರಿಸುವುದು, ಕಾಮಗಾರಿಗಳ ಉಸ್ತುವಾರಿ ನೋಡಿಕೊಳ್ಳುವುದು. ಹಾಗೂ ನಿರ್ವಹಣೆ.

3.ಉಸ್ತುವಾರಿಕೆ: ಲೆಕ್ಕ ಪತ್ರಗಳ ನಿರ್ವಹಣೆ: ಇತ್ಯಾದಿ ವಿಚಾರಗಳ ಪಾಲನೆ: ಸಮೂಚಿತ ಮಾರ್ಗ:

ಲೋಕೋಪಯೋಗಿ ಇಲಾಖೆಯಲ್ಲಿ ಈ ಉಪ ವಿಭಾಗಕ್ಕೆ ಸಂಬಂಧಿಸಿದ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಸಂಬಂಧಿಸಿದ ಅಂದಾಜು ಪಟ್ಟಿಯನ್ನು ಹಾಗೂ ನಕ್ಷೆಯನ್ನು ತಯಾರಿಸಿ ವಿಭಾಗ ಕಛೇರಿಗೆ ಸಲ್ಲಿಸಲಾಗುವುದು. ಹಾಗೂ ನಿರ್ವಹಿಸಲಾದ ಕಾಮಗಾರಿಗಳ ಬಿಲ್ಲುಗಳನ್ನು ತಯಾರಿಸಿ ವಿಭಾಗ ಕಛೇರಿಗೆ ಸಲ್ಲಿಸಲಾಗುವುದು.

4. ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಬದ್ಧತೆಹಾಗೂ ಅನುಸರಿಸುವ ಮಾನದಂಡಗಳು:

ಸರ್ಕಾರದಿಂದ ಅನುಮೋದನೆಯಾಗುವ ಕಾರ್ಯಕ್ರಮದಂತೆ ಇಲಾಖಾ ನಿಯಮಾನುಸಾರ ಕಾಮಗಾರಿಗಳನ್ನು ನಿರ್ವಹಿಸಲಾಗುವುದು.

ನಿಬಂಧನೆಗಳು ಸೂಚನೆಗಳು ಕೈಪಿಡಿ ಮತ್ತು ದಾಖಲೆಗಳು

1. ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958
2. ಕರ್ನಾಟಕ ಆರ್ಥಿಕ ಸಂಹಿತೆ ನಿಯಮ.
3. ಖಜಾನೆ ಸಂಹಿತೆ.
4. ಸಾದಿಲ್ವಾರು ವೆಚ್ಚದ ಕೈಪಿಡಿ.
5. ಕೆ.ಪಿ.ಡಬ್ಲ್ಯೂ.ಡಿ-ಎ. ಕೋಡ್.
6. ಕೆ.ಪಿ.ಡಬ್ಲ್ಯೂ.ಡಿ-ಡಿ. ಕೋಡ್.

7. ಕರ್ನಾಟಕ ನಾಗರೀಕ ಸೇವೆಗಳು (ನಡೆತೆ ನಿಯಮಗಳು 1966)
8. ಕರ್ನಾಟಕ ನಾಗರೀಕ ಸೇವೆಗಳು (ಸಿ ಸಿ ಎ) ನಿಯಮಗಳು 1957
9. ಕರ್ನಾಟಕ ಸರ್ಕಾರಿ ವಸತಿ ಗೃಹಗಳು ಕಂಡಿಕೆ ನಿಯಮಗಳು 1986
10. ಕಾರ್ಯಾಲಯ ಕೈಪಿಡಿ
11. ಉಗ್ರಾಣದ ಕೈಪಿಡಿ
12. ಆರ್ಥಿಕ ಅಧಿಕಾರ ಪ್ರತ್ಯಾ ಯೋಜನೆಯ ನಿಯಮಗಳು (ಆದೇಶ 02-02-2001)
13. ಸೇವಾ ನಿಯಮಗಳು ಇತ್ಯಾದಿ ವಿಚಾರದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆರ್ಥಿಕ ಇಲಾಖೆ ಲೋ.ಇ. ಹೊರಡಿಸಿದ ಆದೇಶದ ಸುತ್ತೋಲೆ ಸೂಚನೆಗಳು.
14. ಇಲಾಖೆ ಮುಖ್ಯಸ್ಥರು ಹೊರಡಿಸಿದ ಸುತ್ತೋಲೆ ಮತ್ತು ಆದೇಶಗಳು.

ಇಲಾಖೆಯು ಹೊರಡಿಸಿರುವ ದಸ್ತಾವೇಜುಗಳ ಪಟ್ಟಿ:

1. ವಿಷಯ ವಹಿ : ಸಿಬ್ಬಂದಿ ವಹಿ
2. ನಗದು ಪುಸ್ತಕ (ಸಾಮಾನ್ಯ)
3. ವರ್ಕ್ ಕ್ಯಾಷ್ ಬುಕ್
4. ಉಗ್ರಾಣ ದಾಸ್ತಾನು ಸ್ವೀಕೃತಿ ವಹಿ
5. ಉಗ್ರಾಣ ದಾಸ್ತಾನು ನೀಡಿಕೆ ವಹಿ
6. ಟಿ ಅಂಡ್ ಪಿ ಸ್ವೀಕೃತಿ ವಹಿ
7. ಟಿ ಅಂಡ್ ಪಿ ನೀಡಿಕೆ ವಹಿ
8. ಅರ್ಧವಾರ್ಷಿಕ ದಾಸ್ತಾನು ವಹಿ
9. ವಾರ್ಷಿಕ ಟಿ ಅಂಡ್ ಪಿ ವಹಿ
10. ಎನ್‌ಕ್ಯಾಷ್‌ಮೆಂಟ್ ರಿಜಿಸ್ಟರ್
11. ಚೆಕ್ ಬರೆಯುವ ಆದೇಶದ ವಹಿ
12. ಚೆಕ್ ಪುಸ್ತಕ ಕಾವಲು ವಹಿ
13. ಸೇವಾ ಪುಸ್ತಕ ಕಾವಲು ವಹಿ
14. ವಸತಿ ಗೃಹ ಬಾಡಿಗೆ ವಹಿ
15. ಸಾರ್ವಜನಿಕ ಕಟ್ಟಡ ವಹಿ
16. ಸಿಡಿ / ಸೇತುವೆ ವಹಿ
17. ರಸ್ತೆ ವರ್ಗವಾರು ಬಾರ್ ಚಾರ್ಟ್
18. ತುಂಡುಗುತ್ತಿಗೆ ಪ್ರಸ್ತಾವನೆ ವಹಿ
19. ಎಸ್ ಬಿ ಅರ್ ವಹಿ
20. ಕಛೇರಿ ಆದೇಶ ವಹಿ
21. ನೌಕರರ ಸೇವಾ ಪುಸ್ತಕಗಳು
22. ಆಮದು ವಹಿ
23. ರವಾನೆ ವಹಿ
24. ಸ್ಟ್ಯಾಂಪ್ ವಹಿ.

5. **ನಿಯಮಗಳು ನಿರ್ಣಯಗಳು ಸೂಚನೆಗಳು ನಿಯಮಾವಳಿಗಳು ದಾಖಲೆಗಳನ್ನು ಅನುಸರಿಸಿ ಕಾರ್ಯಕ್ರಮಗಳನ್ನು ಇಲಾಖೆಯ ಅರ್ಹ ಸಿಬ್ಬಂದಿಗಳಿಂದ ಜಾರಿಗೊಳಿಸುವ್ ಬಗ್ಗೆ:**

ಸರ್ಕಾರದ ನಿಯಮ ನಿರ್ಣಯ ನಿರ್ದೇಶನ ಸೂಚನೆಗಳನ್ನು ಹಾಗೂ ಇಲಾಖೆಗೆ ನಿಗಧಿಪಡಿಸಿರುವ ಇಲಾಖೆ ಸಂಹಿತೆ ಹಾಗೂ ದಾಖಲೆಗಳನ್ನು ಅನುಸರಿಸಿ ಕಾನೂನಿನ ಚೌಕಟ್ಟಿನಲ್ಲಿ ಅರ್ಹ ಸಿಬ್ಬಂದಿಗಳಿಂದ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುವುದು.

6. **ವಿವಿಧ ವಿಷಯಗಳಿಗನುಸಾರ (ಕೆಟಗರಿಗನುಗುಣವಾಗಿ) ದಾಖಲೆಗಳನ್ನು ನಿರ್ವಹಿಸುವುದು ಮತ್ತು ನಿಯಂತ್ರಣ:**

ತಾಂತ್ರಿಕ: ಹಾಗೂ ಆಡಳಿತ ಇತ್ಯಾದಿ ವಿಚಾರಗಳ ಅನುಸಾರವಾಗಿ ಉಪ-ವಿಭಾಗ ಮಟ್ಟದಲ್ಲಿ ಕಛೇರಿ ಮುಖ್ಯಸ್ಥರ ನಿಯಂತ್ರಣದಲ್ಲಿ ದಾಖಲೆಗಳನ್ನು ಶಾಖಾ ಮುಖ್ಯಸ್ಥರ ಉಸ್ತುವಾರಿಕೆಯಲ್ಲಿ ನಿರ್ವಹಿಸಲಾಗುವುದು.

7. ಕಾರ್ಯಕ್ರಮದ ಅನುಷ್ಠಾನದಲ್ಲಿ ಇರುವ ಏರ್ಪಾಡುಗಳು ಪ್ರತಿನಿಧಿತ್ವ ಸಾರ್ವಜನಿಕ ಅಹವಾಲು ಸಂಪರ್ಕಗಳ ವಿವರಗಳು:

ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಜನಪ್ರತಿನಿಧಿಗಳ ಪಾತ್ರ ಹಿರಿದು ನೈಸರ್ಗಿಕ ವಿಕೋಪಗಳಾದ ನೆರೆ ಬರಪರಿಹಾರ ಕಾಮಗಾರಿಗಳು ವಾಸ್ತವಿಕ ಸ್ಥಿತಿಯನ್ನು ಅವಲಂಭಿಸಿರುತ್ತದೆ. ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳ ನಿರ್ದೇಶನ ಕಾಲಕಾಲಕ್ಕೆ ಸರ್ಕಾರದಿಂದ ಜಾರಿಗೊಳಿಸುವ ಸುತ್ತೋಲೆ ಮಾರ್ಗದರ್ಶಿ ಸೂತ್ರಗಳ ಅನುಸಾರ ಪಾರದರ್ಶಕ ನಿಯಮಾನುಸಾರ ಅನುಷ್ಠಾನಗೊಳಿಸಲಾಗುವುದು. ಸಾರ್ವಜನಿಕರ ಮಾಹಿತಿಗೆ ಬಾರದೆ ಯಾವುದೇ ಕಾರ್ಯಕ್ರಮದ ಅನುಷ್ಠಾನಕ್ಕೆ ಆಸ್ಪದ ಇರುವುದಿಲ್ಲ.

8. ಸಾರ್ವಜನಿಕ ಹಿತಾಸಕ್ತಿ ಸಲುವಾಗಿ ರಚಿತವಾಗಿರುವ ಬೋರ್ಡುಗಳು, ಕೌನ್ಸಿಲ್‌ಗಳು ಸಮಿತಿಗಳು ಮತ್ತು ಅದರ ಪದಾಧಿಕಾರಿಗಳು ಸದಸ್ಯರುಗಳ ನಿರ್ಣಯಗಳ ಅನುಸಾರ ಕಾರ್ಯಕ್ರಮ:

ಕರ್ನಾಟಕ ಸರ್ಕಾರದಿಂದ ಸಾರ್ವಜನಿಕ ಹಿತಾಸಕ್ತಿ ಅನುಸರಿಸಿ ತೆಗೆದುಕೊಳ್ಳುವ ನಿರ್ಣಯಗಳು:ಸೂಚನೆಗಳು ನಿರ್ದೇಶನಗಳನ್ನು ಮಾರ್ಗದರ್ಶಿ ಸೂಚನೆಯನುಸಾರ ಅನುಷ್ಠಾನಗೊಳಿಸಲಾಗುವುದು.

9. ಅಧಿಕಾರಿಗಳ : ಸಿಬ್ಬಂದಿ ವರ್ಗದವರ ವಿವರ (ಡೈರೆಕ್ಟರಿ):

ಈ ಲೋಕೋಪಯೋಗಿ ಉಪ-ವಿಭಾಗದಲ್ಲಿ ಮುಖ್ಯಸ್ಥರಾಗಿ ಸಹಾಯಕ ಕಾರ್ಯಪಾಲಕ ಇಂಜಿನಿಯರವರು ಕಾರ್ಯನಿರ್ವಹಿಸುತ್ತಾರೆ. ಉಪ-ವಿಭಾಗ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ತಾಂತ್ರಿಕ ಸಿಬ್ಬಂದಿ ಹಾಗೂ ಆಡಳಿತ ಸಿಬ್ಬಂದಿ ವಿವರಗಳನ್ನು ಈ ಪುಸ್ತಕದಲ್ಲಿ ಲಗತ್ತಿಸಿದೆ.

ಸಾರ್ವಜನಿಕ ಮಾಹಿತಿಗಾಗಿ ವಿವರ ಪಡೆಯುವ ದೂರವಾಣಿ-ಮೊಬೈಲ್‌ಗಳ ವಿವರಗಳು ಈ ಕೆಳಗಿನಂತಿವೆ:

ಕ್ರ. ಸಂ.	ಹೆಸರು	ಹುದ್ದೆ	ದೂರವಾಣಿ ಮೊಬೈಲ್‌ಗಳ ಸಂಖ್ಯೆ
			ಕಛೇರಿ 08177-222348
1.	ಶ್ರೀ.ಯು ಪಿ. ವಿಜಯಶಂಕರ್	ಸಹಾಯಕ ಕಾರ್ಯಪಾಲಕ ಇಂಜಿನಿಯರ್	9448033864
2.	ಶ್ರೀ ಎ.ಬಿ. ಮಂಜೇಗೌಡ	ಸಹಾಯಕ ಇಂಜಿನಿಯರ್	9632265022
3.	ಖಾಲಿ ಇದೆ	ಸಹಾಯಕ ಇಂಜಿನಿಯರ್	–
4.	ಶ್ರೀ.ಜಿ.ಹೆಚ್. ಸೋಮಶೇಖರ್	ಕಿರಿಯ ಇಂಜಿನಿಯರ್	9448655662
5.	ಶ್ರೀ ಎಂ. ಶಿವಕುಮಾರ್	ಪ್ರಥಮ ದರ್ಜೆ ಸಹಾಯಕರು	9980746500
6.	ಶ್ರೀ ಶಂಕರ ಲಿಂಗೇಗೌಡ	ದ್ವಿತೀಯ ದರ್ಜೆ ಸಹಾಯಕರು (ನಿಯೋಜನೆ)	9448655557
7.	ಶ್ರೀಮತಿ ಕೆ.ಆರ್. ವಿಜಯಲಕ್ಷ್ಮಿ	ಬೆರಳಚ್ಚುಗಾರರು	–

10. ಅಧಿಕಾರಿ: ಸಿಬ್ಬಂದಿ ವರ್ಗದವರಿಗೆ ಪ್ರತಿ ಮಾಹೆಯಲ್ಲಿ ಭರಿಸುವ ವೆಚ್ಚ ಸಂಬಳ ಸಾರಿಗೆ ಮತ್ತು ಇತರೆ ಭತ್ಯೆಗಳು ಪರಿಹಾರಗಳು ಇತ್ಯಾದಿಗಳಿಗೆ ವಾರ್ಷಿಕ ವೆಚ್ಚ:

ಲೋಕೋಪಯೋಗಿ ಈ ಉಪ-ವಿಭಾಗಕ್ಕೆ ಸರಾಸರಿ ತಿಂಗಳಿಗೆ ರೂ. 2.50 ಲಕ್ಷ ವೇತನ ಮತ್ತು ಇತರೆ ಭತ್ಯೆಗಳಿಗಾಗಿ ವೆಚ್ಚವಾಗುತ್ತಿದೆ. ವಾರ್ಷಿಕ ಬಜೆಟ್ ಅಂದಾಜು ಸುಮಾರು ರೂ.30.00 ಲಕ್ಷ ಆಗಿರುತ್ತದೆ.

11. ವಾರ್ಷಿಕ ಬಜೆಟ್ ಅಂದಾಜು ಹಂಚಿಕೆ ಎಲ್ಲ ಯೋಜನೆಗಳು ಸೇರಿ ಮತ್ತು ಉದ್ದೇಶಿತ ವೆಚ್ಚ ಮತ್ತು ವಿತರಣೆ ಮೇಲಿನ ವರದಿಗಳು:

2009-10 ನೇ ಸಾಲಿಗೆ ಹಂಚಿಕೆಯಾಗಿರುವ ಅನುದಾನದ ವಿವರ

	ಅಂದಾಜು ಮೊತ್ತ
ನಬಾರ್ಡ ಕಟ್ಟಡ ಕಾಮಗಾರಿಗಳು ಆರ್.ಐ.ಡಿ.ಎಫ್-12&13	154.97 ಲಕ್ಷ
ನಬಾರ್ಡ ಪ್ರಥಮ ದರ್ಜೆ ಕಟ್ಟಡ ಆರ್.ಐ.ಡಿ.ಎಫ್-13	100.00 ಲಕ್ಷ
ಪ್ರಥಮ ದರ್ಜೆ ಕಟ್ಟಡಕ್ಕೆ ಹೆಚ್ಚುವರಿ ಕೊಠಡಿ	46.00 ಲಕ್ಷ
ಪಾಲಿಟೆಕ್ನಿಕ್ ಕಾಲೇಜು ಕಟ್ಟಡ ನಿರ್ಮಾಣ	800.00 ಲಕ್ಷ
5054 ಓ.ಆರ್. ಎಫ್ ರಸ್ತೆ ಅಭಿವೃದ್ಧಿ ಕೆಲಸ	225.00 ಲಕ್ಷ
5054 ನಬಾರ್ಡ್ ರಸ್ತೆ ಆರ್.ಐ.ಡಿ.ಎಫ್-12 & 13	194.00 ಲಕ್ಷ
8441 ಠೇವಣಿ ವಂತಿಕೆ ರಸ್ತೆ ಅಭಿವೃದ್ಧಿ ಕೆಲಸ	65.00 ಲಕ್ಷ
5054 ಸುವರ್ಣ, ನಂಜುಂಡಪ್ಪ, ಎಸ್‌ಸಿ.ಪಿ. & ಟಿಎಸ್.ಪಿ ರಸ್ತೆ ಅಭಿವೃದ್ಧಿ ಕೆಲಸ	222.30 ಲಕ್ಷ
5054 ನಬಾರ್ಡ್ ರಸ್ತೆ ಆರ್.ಐ.ಡಿ.ಎಫ್-15ರ (ಹೊಸ ಕೆಲಸ)	90.00 ಲಕ್ಷ

3054-12ನೇ ಹಣಕಾಸು ಯೋಜನೆ ಜಿ.ಮು. ರಸ್ತೆ ನಿರ್ವಹಣೆ 61.24 ಲಕ್ಷ

3054 ಯೋಜನೆ ರಾ.ಹೆ ರಸ್ತೆ ನಿರ್ವಹಣೆ 22.03 ಲಕ್ಷ

ಬಿಡುಗಡೆಯಾಗಲಿರುವ ಅನುದಾನ ಅವಲಂಬಿಸಿ ಕಾರ್ಯಕ್ರಮ ರೂಪಿಸಲಾಗುವುದು.

12. ಕಾರ್ಯಗತಗೊಳಿಸುವ ವಿಧಾನ ಸಬ್ಸಿಡಿ ಕಾರ್ಯಕ್ರಮಗಳು ಅನುದಾನ ಹಂಚಿಕೆ, ಫಲಾನುಭವಿಗಳ ವಿವರ ಇತ್ಯಾದಿ ಕಾರ್ಯಕ್ರಮಗಳ ವಿವರ:

ಲೋಕೋಪಯೋಗಿ ಇಲಾಖೆ ಉಪ-ವಿಭಾಗ ವ್ಯಾಪ್ತಿಯಲ್ಲಿ ನಿರ್ವಹಿಸುವ ಕಾಮಗಾರಿಗಳನ್ನು ಟೆಂಡರ್ ಹಾಗೂ ತುಂಡು ಗುತ್ತಿಗೆ ವಿಧಾನದಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ಕಾರ್ಯಗತಗೊಳಿಸಲಾಗುವುದು. ಯಾವುದೇ ಸಹಾಯಧನ ಯೋಜನೆ (ಸಬ್ಸಿಡಿ) ಕಾರ್ಯಕ್ರಮ ಇರುವುದಿಲ್ಲ.

13. ಸ್ವೀಕೃತಿದಾರರಿಗೆ ರಿಯಾಯಿತಿ ಪರವಾನಗಿ ಅಥವಾ ಕ್ರೋಢೀಕರಣ ಪತ್ರ ಮಂಜೂರಾತಿ ಇತ್ಯಾದಿ:

-ಅಂತಹ ಯಾವುದೇ ಕಾರ್ಯಕ್ರಮ ಇರುವುದಿಲ್ಲ-

14. ಮಾಹಿತಿಗಾಗಿ ಸಂಕ್ಷಿಪ್ತಗೊಳಿಸಲಾದ ನಮೂನೆಗಳ ಲಭ್ಯತೆ:

ಸಾರ್ವಜನಿಕರು ಮಾಹಿತಿ ಪಡೆಯಲು ಇಚ್ಚಿಸಿದಲ್ಲಿ ಸಂಕ್ಷಿಪ್ತ ರೀತಿಯಲ್ಲಿ ಮಾಹಿತಿ ಕೋರಿ ಅರ್ಜಿ ಸಲ್ಲಿಸಲು ನಮೂನೆಗಳನ್ನು ಒದಗಿಸಲಾಗುವುದು.

15. ಸಾರ್ವಜನಿಕರಿಗೆ ಮಾಹಿತಿ ಪಡೆಯಲು ಇರುವ ಸೌಲಭ್ಯಗಳ ವಿವರ:

ಕಛೇರಿ ಕೆಲಸದ ಅವಧಿಯಲ್ಲಿ ಸಾರ್ವಜನಿಕರು ಮಾಹಿತಿ ಕೋರಿ ಅರ್ಜಿ ಸಲ್ಲಿಸಿದ್ದಲ್ಲಿ ದಾಖಲೆಗಳ ಪ್ರಾಮುಖ್ಯತೆ ವರ್ಷ ಇತ್ಯಾದಿಗಳನ್ನು ಮಾಹಿತಿ ಪಡೆಯಲು ಹಕ್ಕು ಅಧಿನಿಯಮ-2005 (2005ರ ಕೇಂದ್ರ ಕಾಯ್ದೆ ಸಂಖ್ಯೆ:22) ರಲ್ಲಿ ಜಾರಿಗೊಳಿಸಿರುವ ಸೂಚನೆಯಂತೆ ಒದಗಿಸಲಾಗುವುದು.

16. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು ಮತ್ತು ಪದನಾಮ ಹಾಗೂ ಇತರೆ ವಿವರಗಳು:

ಲೋಕೋಪಯೋಗಿ ಉಪ ವಿಭಾಗ ಬೇಲೂರು ಕಛೇರಿ ವ್ಯಾಪ್ತಿಯಲ್ಲಿ ಸಾರ್ವಜನಿಕರು ಮಾಹಿತಿ ಪಡೆಯಲು ಹಕ್ಕು ಅಧಿನಿಯಮದ 2005ರ ಪ್ರಕಾರ ಹಾಗೂ ಸೆಕ್ಷನ್ 5(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ, ಸೆಕ್ಷನ್ 5(2)ರ ಪ್ರಕಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ, ಸೆಕ್ಷನ್ 19(1)ರ ಪ್ರಕಾರ ಅಧೀಕ್ಷಕ ಇಂಜಿನಿಯರ್, ಲೋಕೋಪಯೋಗಿ ಬಂದರು ಒಳನಾಡು ಜಲ ಸಾರಿಗೆ ಇಲಾಖೆ ಹಾಸನ ವೃತ್ತ, ಹಾಸನ ಇವರನ್ನು ಮೇಲ್ಮನವಿ ಪ್ರಾಧಿಕಾರಿಯನ್ನಾಗಿ ನೇಮಿಸಿ ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಬೆಂಗಳೂರು ಇವರು ಆದೇಶ ಹೊರಡಿಸಿರುತ್ತಾರೆ. ಅದರಂತೆ ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂ:ಸಕಾಇ:ಲೋಬ.ಒ.ಜ.ಸಿ.ಉ.ವಿಭಾಗ:ಬೇಲೂರು ಮಾಹಿತಿ ಹಕ್ಕು: 193 ದಿನಾಂಕ:09.09.2009 ಪ್ರಕಾರ ಈ ಕೆಳಕಂಡ ಅಧಿಕಾರಿಗಳನ್ನು ಸಾರ್ವಜನಿಕರು ಸಂಪರ್ಕಿಸಬಹುದಾಗಿರುತ್ತದೆ.

1. ಶ್ರೀ ಸಿ.ಪಿ. ಪಾಟೀಲ್, ಅಧೀಕ್ಷಕ ಇಂಜಿನಿಯರ್
ಮೇಲ್ಮನವಿ ಪ್ರಾಧಿಕಾರಿ ಲೋಕೋಪಯೋಗಿ ಬಂದರು
ಒಳನಾಡು ಜಲ ಸಾರಿಗೆ ಇಲಾಖೆ ಹಾಸನ ವೃತ್ತ. ಹಾಸನ.
2. ಶ್ರೀ ಹೆಚ್.ಸಿ. ರಾಮಚಂದ್ರ, ಕಾರ್ಯಪಾಲಕ ಇಂಜಿನಿಯರ್
ಸಾರ್ವಜನಿಕ ಮಾಹಿತಿ ಅಧಿಕಾರಿ ಲೋಕೋಪಯೋಗಿ ಬಂದರು
ಒಳನಾಡು ಜಲ ಸಾರಿಗೆ ಇಲಾಖೆ ಹಾಸನ ವಿಭಾಗ ಹಾಸನ.
3. ಶ್ರೀ ಯು.ಪಿ. ವಿಜಯಶಂಕರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್,
ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಲೋಕೋಪಯೋಗಿ ಬಂದರು
ಒಳನಾಡು ಜಲ ಸಾರಿಗೆ ಇಲಾಖೆ ಉಪ-ವಿಭಾಗ ಬೇಲೂರು.

ಮೇಲಿನಂತೆ ನೇಮಕಾತಿಯಾಗಿದ್ದು ಸಾರ್ವಜನಿಕರು ಈ ಇಲಾಖೆಗೆ ಸಂಬಂಧಪಟ್ಟ ಮಾಹಿತಿಯನ್ನು ಪಡೆಯಲು ನಿಗಧಿಪಡಿಸಿದ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

17) ಸಾರ್ವಜನಿಕರು ಮಾಹಿತಿ ಪಡೆಯಲು ಉಪ ವಿಭಾಗ ಕಛೇರಿಯಲ್ಲಿ ಇರುವ ಸೌಲಭ್ಯಗಳ ವಿವರಗಳು.

ತಾಂತ್ರಿಕ ಶಾಖೆ

ಶ್ರೀ ಎ.ಬಿ. ಮಂಜೇಗೌಡ, ಸಹಾಯಕ ಇಂಜಿನಿಯರ್, ಇವರು ನಿರ್ವಹಿಸುತ್ತಿರುವ ರಸ್ತೆ ಹಾಗೂ ಕಟ್ಟಡ ಕಾಮಗಾರಿಗಳ ವಿವರ.

ಕ.ಸಂ.	ರಸ್ತೆಯ ಹೆಸರು
	ಜಿಲ್ಲಾ ಮುಖ್ಯ ರಸ್ತೆಗಳು
1.	ಹಗರೆ-ಹಳೇಬೀಡು ರಸ್ತೆ 0.00 ರಿಂದ 9.60 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ
2.	ಅಡಗೂರು-ಸಂಕೇನಹಳ್ಳಿ ರಸ್ತೆ 0.00 ರಿಂದ 12.00 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ

ಕ್ರ.ಸಂ.	ರಸ್ತೆಯ ಹೆಸರು
3.	ಯಲಗುಂದ-ಜಾವಗಲ್ ರಸ್ತೆ 5.40 ರಿಂದ 21.70 ಕಿ.ಮೀ. ವರಗೆ ರಸ್ತೆ ನಿರ್ವಹಣೆ
4.	ಹಳೇಬೀಡು ದೇವಸ್ಥಾನ ಕೂಡು ರಸ್ತೆ 0.00 ರಿಂದ 1.60 ಕಿ.ಮೀ. ವರಗೆ ರಸ್ತೆ ನಿರ್ವಹಣೆ
5.	ಸಿ.ಎಂ. ರಸ್ತೆಯಿಂದ ದ್ಯಾವಪ್ಪನಹಳ್ಳಿ ಲಿಂಗಪ್ಪನಕೊಪ್ಪಲು ಮತ್ತಿಘಟ್ಟ ದಿಂದ ವೈ.ಜಿ. ರಸ್ತೆಯನ್ನು ಸೇರುವ ರಸ್ತೆ 0.00 ರಿಂದ 10.00 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ.
6.	ಹಳೇಬೀಡು- ಗಂಗೂರು ರಸ್ತೆ 0.00 ರಿಂದ 8.00 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ
7.	ಹೆಚ್.ಹೆಚ್.ಎ.ಪಿ.ಸಿ. ರಸ್ತೆಯಿಂದ ತಿರುಮನಹಳ್ಳಿ ಮಾರ್ಗವಾಗಿ ಸಾಣೇನಹಳ್ಳಿ ಸೇರುವ ರಸ್ತೆ 0.00 ರಿಂದ 5.00 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ
8.	ಅಡಗೂರು-ಸಂಕೇನಹಳ್ಳಿ ರಸ್ತೆಯಿಂದ ಮೊನ್ನಾಥಪುರ ಮೂಲಕ ಸಿ.ಎಂ. ರಸ್ತೆಯನ್ನು ಸೇರುವ ರಸ್ತೆ 0.00 ರಿಂದ 8.00 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ
9.	ಬಿ.ಟಿ. ರಸ್ತೆಯಿಂದ ಶಿವಾಲದಹಳ್ಳಿ ಮೂಲಕ ಸಿ.ಎಂ. ರಸ್ತೆಯನ್ನು ಸೇರುವ ರಸ್ತೆ 0.00 ರಿಂದ 6.00 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ.
10.	ಸಿ.ಎಂ. ರಸ್ತೆಯಿಂದ ಜೋಡಿತಿಪ್ಪನಹಳ್ಳಿ ಗೌರಿಕೊಪ್ಪಲು ಮಾರ್ಗ ಕೆ.ಬಿ. ಹಾಳ್ ರಸ್ತೆ ಸೇರುವ ರಸ್ತೆ 0.00 ರಿಂದ 6.00 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ.
11.	ಹಳೇಬೀಡು ಹಾಸನ ರಸ್ತೆಯಿಂದ ಗೋಣಿಸೋಮೇನಹಳ್ಳಿ ಮಹಮ್ಮದಪುರ ಮಾಚೇನಹಳ್ಳಿ ನಿಂಗಪ್ಪನಕೊಪ್ಪಲು ಸೇರುವ ರಸ್ತೆ 0.00 ರಿಂದ 10.00 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ
12.	ಬಿ.ಟಿ. ರಸ್ತೆಯಿಂದ ಚಿಲಕೂರು ಹೊಸಳ್ಳಿ ಹಾರೋಹಳ್ಳಿ ಕಲ್ಲುಶೆಟ್ಟಿಹಳ್ಳಿ ಬಿ.ಟಿ. ರಸ್ತೆ ಸೇರುವ ರಸ್ತೆ 0.00 ರಿಂದ 10.00 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ
13.	ಮೂಡಿಗೆರೆ-ಬೇಲೂರು ರಸ್ತೆ 13.20 ರಿಂದ 32.00 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ
14.	ಕೆ.ಆರ್.ಪೇಟೆ ಗೆಂಡೇಹಳ್ಳಿ ರಸ್ತೆ 13.40ರಿಂದ 17.45ಕಿ.ಮೀ ವರೆಗೆ ರಸ್ತೆ ನಿರ್ವಹಣೆ.
15.	ಬಿ.ಬಿ.ರಸ್ತೆಯಿಂದ ಪ್ರಸಾದಿಹಳ್ಳಿ ರಣಗಟ್ಟ ಹಾಡ್ಲಗೆರೆ, ಮಾಳಗೆರೆ ಮೂಲಕ ಕೆ.ಜಿ.ಪಿ.ಬಿ.ರಸ್ತೆ ಸೇರುವ ರಸ್ತೆ 0.00ರಿಂದ 10.60ಕಿಮೀ ವರೆಗೆ ರಸ್ತೆ ನಿರ್ವಹಣೆ.
16.	ತಗರೆ-ತೊಳಲು ರಸ್ತೆ 0.00 ರಿಂದ 7.90 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ.
	ನಬಾರ್ಡ್ ರಸ್ತೆ ಕಾಮಗಾರಿಗಳು
1.	ಸಿ.ಎಂ. ರಸ್ತೆಯಿಂದ ತಿಪ್ಪನಹಳ್ಳಿ ಕಲ್ಲುಶೆಟ್ಟಿಹಳ್ಳಿ ಮಾರ್ಗ ಹನಿಕೆ-ಕೆ.ಬಿ. ಹಾಳ್ ಸೇರುವ ರಸ್ತೆ ಅಭಿವೃದ್ಧಿ **ನಬಾರ್ಡ್ - 13**
2.	ಬಾಗೇ-ಬೇಲೂರು ರಸ್ತೆಯಿಂದ ಪ್ರಸಾದಿಹಳ್ಳಿ ಮಾರ್ಗ ತಾರೀಮರ ರಸ್ತೆ ಸೇರುವ ರಸ್ತೆ ಅಭಿವೃದ್ಧಿ (5.60ರಿಂದ 7.60ಉಳಿದ ಉದ್ದ)ನಬಾರ್ಡ-13
	ಕಟ್ಟಡಗಳ ನಿರ್ವಹಣೆ ಕೆಲಸ.
1.	ಹಳೇಬೀಡು ಪವಾಸಿ ಮಂದಿರ ಹಾಗೂ ಪವಾಸಿ ಮಂದಿರ ನೌಕರರ ವಸತಿ ಗೃಹ ಕಟ್ಟಡ ನಿರ್ವಹಣೆ ಕೆಲಸ.
2.	ಹಳೇಬೀಡು-ಶಾಖಾಧಿಕಾರಿಗಳ ಕಟ್ಟಡ ನಿರ್ವಹಣೆ ಕೆಲಸ
3.	ಹಳೇಬೀಡು ಶಿಕ್ಷಕರ ವಸತಿಗೃಹ ನಿರ್ವಹಣೆ ಕೆಲಸ.
4.	ಹಳೇಬೀಡು ನಾಡ ಕಛೇರಿ ಕಟ್ಟಡ ನಿರ್ವಹಣೆ ಕೆಲಸ.
5.	ಹಗರೆ-ಶಾಖಾಧಿಕಾರಿಗಳ ಕಟ್ಟಡ ನಿರ್ವಹಣೆ ಕೆಲಸ
6.	ಹಗರೆ ನಾಡ ಕಛೇರಿ ಕಟ್ಟಡ ನಿರ್ವಹಣೆ ಕೆಲಸ
7.	ಬೇಲೂರು ಟೌನ್ ಮಿನಿವಿಧಾನ ಸೌಧ ಕಟ್ಟಡದ ನಿರ್ವಹಣೆ ಕೆಲಸ.
8.	ಬೇಲೂರು ಪವಾಸಿ ಮಂದಿರ ಹಾಗೂ ಪವಾಸಿ ಮಂದಿರ ನೌಕರರ ವಸತಿ ಗೃಹ ಕಟ್ಟಡ
9.	ಲೋಕೋಪಯೋಗಿ ಉಪ ವಿಭಾಗ ಕಚೇರಿ ಕಟ್ಟಡ ನಿರ್ವಹಣೆ
10.	ಬೇಲೂರು ಲೋಕೋಪಯೋಗಿ ಇಲಾಖೆ ಸಿಬ್ಬಂದಿ ವಸತಿ ಗೃಹ ಕಟ್ಟಡಗಳು.
11.	ಬೇಲೂರು ಸರ್ಕಾರಿ ಪಥಮ ದರ್ಜೆ ಕಾಲೇಜು ಕಟ್ಟಡ.
	ಕಟ್ಟಡಗಳ ನಿರ್ಮಾಣ ಕೆಲಸ
1.	ಹಳೇಬೀಡಿನಲ್ಲಿ ಪದವಿ ಪೂರ್ವ ಕಾಲೇಜಿಗೆ ಎರಡು ಕೊಠಡಿ ನಿರ್ಮಾಣ
2.	ಹಗರೆಯಲ್ಲಿ ಪದವಿ ಪೂರ್ವ ಕಾಲೇಜಿಗೆ ಎರಡು ಕೊಠಡಿ ನಿರ್ಮಾಣ
3.	ಜಿ.ಸಾಣೇನಹಳ್ಳಿಯಲ್ಲಿ ಪದವಿ ಪೂರ್ವ ಕಾಲೇಜು ನಿರ್ಮಾಣ
4.	ಬೇಲೂರಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಟ್ಟಡ ನಿರ್ಮಾಣ.

2. ಶ್ರೀ ಜಿ.ಹೆಚ್. ಸೋಮಶೇಖರ್, ಕಿರಿಯ ಇಂಜನಿಯರ್. ಇವರು ನಿರ್ವಹಿಸುತ್ತಿರುವ ರಸ್ತೆ ಹಾಗೂ ಕಟ್ಟಡ ಕಾಮಗಾರಿಗಳ ವಿವರ

ಕ.ಸಂ.	ರಸ್ತೆಯ ಹೆಸರು
	ರಾಜ್ಯ ಹೆದ್ದಾರಿ
1.	ಬಾಗಲಕೋಟೆ-ಬಿಳಿಗಿರಿರಂಗನಬೆಟ್ಟ ರಸ್ತೆ 443.54 ರಿಂದ 475.84 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ.
2.	ಬೇಲೂರು-ಕೊಡ್ಲಿಪೇಟೆ ರಸ್ತೆ ಎಸ್.ಹೆಚ್. 110 (ಬೇಲೂರು-ಬಿಕ್ಕೋಡು-ಮದಘಟ್ಟ-ವಾಟೇಹೊಳೆ)
3.	ಬಿಕ್ಕೋಡು-ಸೋಮವಾರಪೇಟೆ ರಸ್ತೆ ಎಸ್.ಹೆಚ್.-112 (ಬೇಲೂರು-ಸೋಮವಾರಪೇಟೆ ರಸ್ತೆ) 0.00 ರಿಂದ 9.00 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ.
4.	ಹಳೇಬೀಡು-ಅಣೇಚಿಕ್ಕೂರು ರಸ್ತೆ 0.00 ರಿಂದ 12.90 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ.
5.	ಮೂಡಿಗೆರೆ-ವೆಂಕಟಗಿರಿ ಕೋಟೆ ರಸ್ತೆ 17.00 ರಿಂದ 54.97 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ .
6.	ವಿರಾಜಪೇಟೆ-ಬೈಂದೂರು ರಸ್ತೆ ಎಸ್.ಹೆಚ್.-27 ರಸ್ತೆ 146.27 ರಿಂದ 169.25 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ
	ಜಿಲ್ಲಾ ಮುಖ್ಯ ರಸ್ತೆಗಳು
1.	ಕಂದಲಿ-ಬೈಲಹಳ್ಳಿ-ಪಡುವಳಲು-ಬಿಕ್ಕೋಡು ರಸ್ತೆ 16.40 ರಿಂದ 26.30 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ.
2.	ಆಲೂರು-ಬಿಕ್ಕೋಡು ರಸ್ತೆ 10.00 ರಿಂದ 22.00 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ.
3.	ಅರೇಹಳ್ಳಿ-ಬಿಕ್ಕೋಡು ರಸ್ತೆ 0.00 ರಿಂದ 8.40 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ
4.	ಬಿ.ಟಿ. ರಸ್ತೆಯಿಂದ ಹನಿಕೆ ಹುಲುಗುಂಡಿ ಕಾಮೇನಹಳ್ಳಿ ಮಾರ್ಗ ಕೆ.ಬಿ.ಪಿ.ಬಿ. ಸೇರುವ ರಸ್ತೆ 0.00 ರಿಂದ 6.70 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ
5.	ಗೆಂಡೇಹಳ್ಳಿ-ಕೆ.ಆರ್.ಪೇಟೆ ರಸ್ತೆಯಿಂದ ಯಮಸಂಧಿ ಮೂಲಕ ಕುಡ್ಲೂರು ಸೇರುವ ರಸ್ತೆ 0.00 ರಿಂದ 11.00 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ
6.	ಸಿ.ಎಂ. ರಸ್ತೆಯಿಂದ ಮಲ್ಲನಹಳ್ಳಿ ಮುತ್ತುಗನ್ನೆ ಹೊನ್ನೇನಹಳ್ಳಿ ಮಾರ್ಗವಾಗಿ ಹನಿಕೆ ಕೆ.ಬಿ. ಹಾಳ್ ಸೇರುವ ರಸ್ತೆ 0.00 ರಿಂದ 8.00 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ
7.	ಬಿ.ಬಿ.ರಸ್ತೆಯಿಂದ ಕೋಗಿಲ ಮಾಳಗೆರೆ ಸೇರುವ ರಸ್ತೆ 0.00ರಿಂದ 5.70ಕಿಮೀ ವರೆಗೆ ರಸ್ತೆ ನಿರ್ವಹಣೆ.
8.	ಬಿರಡಳ್ಳಿ-ನಾರ್ವೆ-ಸೊಳೆಗುಡ್ಡ ರಸ್ತೆ 0.00 ರಿಂದ 18.35 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ.
9.	ಹನಿಕೆ-ಕೆ.ಬಿ. ಹಾಳ್ ರಸ್ತೆ 0.00 ರಿಂದ 21.40 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ.
10.	ಅರೇಹಳ್ಳಿ-ತೊಳಲು ರಸ್ತೆ 0.00 ರಿಂದ 11.50 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ
11.	ಸಿ.ಎಂ. ರಸ್ತೆಯಿಂದ ಕಸ್ಸಾಪುರ ಸೇರುವ ರಸ್ತೆ 0.00 ರಿಂದ 9.00 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ
12.	ಸಿ.ಎಂ. ರಸ್ತೆಯಿಂದ ಗೌತಹಳ್ಳಿ-ದಬ್ಬೆ ಸೇರುವ ಮಾರ್ಗ ನಾಗೇನಹಳ್ಳಿ ಮುಖಾಂತರ ಕಿ.ಮೀ. 0.00 ರಿಂದ 6.00 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ
13.	ಸಿ.ಎಂ. ರಸ್ತೆಯಿಂದ ರಾಜನಶಿರಿಯೂರು ಮಾರ್ಗ ಮಲ್ಲಾಪುರ 0.00 ರಿಂದ 4.90 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ
14.	ಹಾನುಬಾಳ್-ಹಾದಿಗೆ-ನಾರ್ವೆ ರಸ್ತೆ 2.05 ರಿಂದ 4.55 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ.
15.	ಕೋಗೋಡು, ನೇರಳಕಟ್ಟೆ ಮೂಲಕ ಎ.ಟಿ. ರಸ್ತೆ ಸೇರುವ ರಸ್ತೆ 0.00 ರಿಂದ 6.20 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ.
16.	ಎಸ್.ಎ.ಸಿ. ರಸ್ತೆಯಿಂದ ಹಸಿರುಗುಡ್ಡ-ಮುರೇಹಳ್ಳಿ ಮೂಲಕ ಬಿ.ಎನ್.ಎಸ್. ರಸ್ತೆ ಸೇರುವ ರಸ್ತೆ 0.00 ರಿಂದ 3.70 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ.
17.	ಸಿ.ಎಂ. ರಸ್ತೆಯಿಂದ ಚಿನ್ನೇನಹಳ್ಳಿ ಮೂಲಕ ಚಿಕ್ಕಮೇದೂರು ಸೇರುವ ರಸ್ತೆ 0.00 ರಿಂದ 4.00 ಕಿ.ಮೀ. ವರೆಗೆ ರಸ್ತೆ ನಿರ್ವಹಣೆ.
	ನಬಾರ್ಡ್ ರಸ್ತೆ ಕಾಮಗಾರಿಗಳು
1.	ಕಂದಲಿ-ಬಿಕ್ಕೋಡು ರಸ್ತೆಯಿಂದ ಮದಘಟ್ಟ-ಮಾಳೇಗರೆ ರಸ್ತೆ ಮಾರ್ಗ ಕೋಗಿಲಮನೆ ಸೇರುವ ರಸ್ತೆ 0.00 ರಿಂದ 1.45 ಕಿ.ಮೀ. ವರೆಗೆ ರಸ್ತೆ ಅಭಿವೃದ್ಧಿ **ನಬಾರ್ಡ್-12**

ಕ.ಸಂ.	ರಸ್ತೆಯ ಹೆಸರು
2.	ಜಿ.ಬಿ. ರಸ್ತೆಯಿಂದ ಆಲೂರು-ಬಿಕ್ಕೋಡು ರಸ್ತೆ ಮಾರ್ಗ ಕೆಸಗೋಡು ಸೇರುವ ರಸ್ತೆ 0.00 ರಿಂದ 1.50 ಕಿ.ಮೀ. ವರೆಗೆ ಅಭಿವೃದ್ಧಿ **ನಬಾರ್ಡ್-12**
3.	ಗೆಂಡೇಹಳ್ಳಿ-ಕೆ.ಆರ್.ಪೇಟೆ ರಸ್ತೆಯಿಂದ ಯಮಸಂಧಿ ಕುಡ್ಲೂರು ಸೇರುವ ರಸ್ತೆಯ ಅಭಿವೃದ್ಧಿ **ನಬಾರ್ಡ್13**
4.	ಎಸ್.ಎ.ಸಿ. ರಸ್ತೆಯಿಂದ ಬಿಳಗುಲಿ ಸೇರುವ ರಸ್ತೆ 0.00 ರಿಂದ 1.80 ಕಿ.ಮೀ. ವರೆಗೆ ರಸ್ತೆ ಅಭಿವೃದ್ಧಿ **ನಬಾರ್ಡ್ ೯-12**
	ಕಟ್ಟಡಗಳ ನಿರ್ವಹಣೆ ಕೆಲಸ
1.	ಅರೇಹಳ್ಳಿ ಶಾಖಾಧಿಕಾರಿಗಳ ವಸತಿ ಗೃಹ ಕಟ್ಟಡ ನಿರ್ವಹಣೆ ಕೆಲಸ
2.	ಬಿಕ್ಕೋಡು ಶಾಖಾಧಿಕಾರಿಗಳ ವಸತಿ ಗೃಹ ಕಟ್ಟಡ ನಿರ್ವಹಣೆ ಕೆಲಸ
3.	ಬಿಕ್ಕೋಡು ನಾಡ ಕಛೇರಿ ಕಟ್ಟಡ ನಿರ್ವಹಣೆ ಕೆಲಸ
4.	ಬೇಲೂರು ಟೌನ್ ಜೆ.ಎಂ.ಎಫ್.ಸಿ. ನ್ಯಾಯಾಲಯ ಕಟ್ಟಡದ ನಿರ್ವಹಣೆ ಕೆಲಸ
5.	ಬೇಲೂರು ಪಟ್ಟಣದಲ್ಲಿ ಅಗ್ನಿಶಾಮಕ ಠಾಣೆ ಕಟ್ಟಡ ನಿರ್ವಹಣೆ ಕೆಲಸ
	ನಬಾರ್ಡ್ ಕಟ್ಟಡಗಳ ನಿರ್ಮಾಣ ಕೆಲಸ
1.	ಬೇಲೂರಿನಲ್ಲಿ ಪದವಿ ಪೂರ್ವ ಕಾಲೇಜಿಗೆ ನಾಲ್ಕು ಕೊಠಡಿ ನಿರ್ಮಾಣ.

ಆಡಳಿತ ಶಾಖೆ

1. ಶ್ರೀ ಎಂ ಶಿವಕುಮಾರ್ ಪ್ರಥಮ ದರ್ಜೆ ಸಹಾಯಕರು ಇವರು ನಿರ್ವಹಿಸುವ ಕಡತಗಳ ನಿರ್ವಹಣೆ ವಿವರ.

1. ಕಛೇರಿ ನೌಕರರ ಸೇವಾ ಪುಸ್ತಕಗಳ ನಿರ್ವಹಣೆ.
2. ನೌಕರರ ವೇತನ ಬಿಲ್ಲು ತಯಾರಿಸುವುದು, ಪ್ರಯಾಣ ಭತ್ಯೆ ಬಿಲ್ಲು ಹಾಗೂ ಸಾದಿಲ್ವಾರು ವೆಚ್ಚ ಬಿಲ್ಲುಗಳ ತಯಾರಿಕೆ ಮಾಡುವುದು.
3. ಕಾಮಗಾರಿ ನಗದು ಪುಸ್ತಕ ಹಾಗೂ ನಗದು ಪುಸ್ತಕ ಲೆಕ್ಕ ನಿರ್ವಹಣೆ ಹಾಗೂ ಮಾಸಿಕ ಕಾಮಗಾರಿ ನಗದು ಪುಸ್ತಕ ಲೆಕ್ಕ ಸಲ್ಲಿಸುವುದು.
4. ರಹಸ್ಯ ವರದಿಗಳ ನಿರ್ವಹಣೆ.
5. ಆಸ್ತಿ ಮತ್ತು ಋಣಪಟ್ಟಿ ನಿರ್ವಹಣೆ.
6. ಪ್ರವಾಸಿ ಮಂದಿರಗಳ ಹಂಚಿಕೆ ನಿರ್ವಹಣೆ.
7. ಸರ್ಕಾರಿ ವಸತಿ ಗೃಹಗಳ ಹಂಚಿಕೆ ಹಾಗೂ ಬಾಡಿಗೆ ರಿಜಿಸ್ಟಾರ್‌ಗಳ ನಿರ್ವಹಣೆ ಹಾಗೂ ಇದಕ್ಕೆ ಸಂಬಂಧಿಸಿದ ಪತ್ರ ವ್ಯವಹಾರಗಳು.
8. ಕಾರ್ಮಿಕ ನ್ಯಾಯಾಲಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಹಾಗೂ ಉಚ್ಚನ್ಯಾಯಾಲಯಕ್ಕೆ, ಆಡಳಿತ ಶಾಖೆಗೆ ಸಂಬಂಧಿಸಿದ ಪತ್ರ ವ್ಯವಹಾರಗಳು.
9. ಎಸ್.ಬಿ.ಆರ್. ರಿಜಿಸ್ಟರ್ ನಿರ್ವಹಣೆ.
10. ಮಾಹಿತಿ ಸಿಂಧು ಹಕ್ಕು ಅಧಿನಿಯಮ 2005 ಕ್ಕೆ ಸಂಬಂಧಿಸಿದ ಕಡತ ನಿರ್ವಹಣೆ.

2. ಶ್ರೀ ಡಿ. ಶಂಕರಲಿಂಗೇಗೌಡ ದ್ವಿತೀಯ ದರ್ಜೆ ಸಹಾಯಕರು ಇವರು ನಿರ್ವಹಿಸುವ ಕಡತಗಳ ನಿರ್ವಹಣೆ ವಿವರ. (ನಿಯೋಜನೆ **ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರು**)

1. ಆಕೃತಿ ರಚನಾಕಾರರ ಶಾಖೆಗೆ ಸಂಬಂಧಿಸಿದ ವಹಿಗಳ ನಿರ್ವಹಣೆ ಮತ್ತು ಪತ್ರ ವ್ಯವಹಾರಗಳು.
2. ತುಂಡು ಗುತ್ತಿಗೆ ಕರಾರು ತಯಾರಿಸುವುದು ಹಾಗೂ ರಿಜಿಸ್ಟರ್ ನಿರ್ವಹಣೆ.
3. ಉಗ್ರಾಣಕ್ಕೆ ಸಂಬಂಧಪಟ್ಟ ದಾಸ್ತಾನು ಲೆಕ್ಕಗಳ ನಿರ್ವಹಣೆ ಟಿ. ಅಂಡ್ ಪಿ. ಲೆಕ್ಕ ಸಲ್ಲಿಸುವುದು ಹಾಗೂ ಅಳತೆ ಪುಸ್ತಕಗಳ ನಿರ್ವಹಣೆ ಹಾಗೂ ಎಂ.ಎ.ಎಸ್ ಲೆಕ್ಕ ಸಲ್ಲಿಸುವುದು.
4. ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹಾಗೂ ಶಾಖಾಧಿಕಾರಿಗಳ ದಿನಚರಿ ನಿರ್ವಹಣೆ.
5. ಮಾಸಿಕ, ತ್ರೈಮಾಸಿಕ ಹಾಗೂ ಅರ್ಧವಾರ್ಷಿಕ ನಿಯತಕಾಲಿಕೆಗಳ ತಯಾರಿಕೆ.
6. ಹಾಗೂ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವಹಿಸಿದ ಕೆಲಸಗಳ ನಿರ್ವಹಣೆ.

3. **ಶ್ರೀಮತಿ ಕೆ.ಆರ್. ವಿಜಯಲಕ್ಷ್ಮಿ ಬೆರಳಚ್ಚುಗಾರರು ಇವರು ನಿರ್ವಹಿಸುವ ಕಡತಗಳ ನಿರ್ವಹಣೆ ವಿವರ.**

1. ಕನ್ನಡ ಪತ್ರಗಳ ಬೆರಳಚ್ಚುಮಾಡುವುದು ಹಾಗೂ ಎಫ್.ಸಿ.ಆರ್. ರಿಜಿಸ್ಟರ್ ನಿರ್ವಹಣೆ.
2. ಸ್ವೀಕೃತಿ ಹಾಗೂ ರವಾನೆ ರಿಜಿಸ್ಟರ್‌ಗಳ ನಿರ್ವಹಣೆ.
3. ಸಾಂದರ್ಭಿಕ ರಜೆ ವಹಿ ಹಾಜರಾತಿ ವಹಿ ನಿರ್ವಹಣೆ.

4. ಸ್ಟಾಂಪ್ ರಿಜಿಸ್ಟರ್ ನಿರ್ವಹಣೆ.

ಸಹಾಯಕ ಕಾರ್ಯಪಾಲಕ ಇಂಜನಿಯರ್.
ಲೋ ಬಂ ಮತ್ತು ಒ ಜ ಸಾ ಇಲಾಖೆ.
ಉಪವಿಭಾಗ. ಬೇಲೂರು.

ಲೋಕೋಪಯೋಗಿ ಇಲಾಖೆ ಉಪ ವಿಭಾಗ ಬೇಲೂರು ಕಛೇರಿಯ ಮಂಜೂರಾದ / ಭರ್ತಿಮಾಡಿದ ಹಾಗೂ ಖಾಲಿ ಹುದ್ದೆಗಳ ವಿವರಗಳು

ಕ್ರ. ಸಂ.	ಅಧಿಕಾರಿ / ನೌಕರರ ಹೆಸರು	ಹುದ್ದೆಯ ವಿವರಗಳು	ಮಂಜೂರಾದ ಹುದ್ದೆಗಳ ಸಂಖ್ಯೆ	ಹಾಲಿ ಕೆಲಸ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
1.	ಶ್ರೀ ಯು.ಪಿ.ವಿಜಯಶಂಕರ್	ಸಹಾಯಕ ಕಾರ್ಯಪಾಲಕ ಇಂಜನಿಯರ್	1	1	ಇಲ್ಲ
2.	ಶ್ರೀ ಎ.ಬಿ. ಮಂಜೇಗೌಡ	ಸಹಾಯಕ ಇಂಜನಿಯರ್	2	1	1
3.	ಖಾಲಿ ಇದೆ	ಸಹಾಯಕ ಇಂಜನಿಯರ್			
4.	ಶ್ರೀ ಜಿ.ಹೆಚ್. ಸೋಮಶೇಖರ್	ಜ್ಯೂನಿಯರ್ ಇಂಜನಿಯರ್	1	1	ಇಲ್ಲ
5.	ಶ್ರೀ ಎಂ. ಶಿವಕುಮಾರ್	ಪ್ರಥಮ ದರ್ಜೆ ಸಹಾಯಕರು	1	1	ಇಲ್ಲ
6.	ಶ್ರೀಮತಿ ಕೆ.ಆರ್.ವಿಜಯಲಕ್ಷ್ಮಿ	ಬೆರಳಚ್ಚುಗಾರರು	1	1	ಇಲ್ಲ
7.	ಶ್ರೀ ರಂಗಸ್ವಾಮಿ	'ಡಿ' ಗ್ರೂಪ್ ನೌಕರರು	1	1	ಇಲ್ಲ
8.	ಶ್ರೀ ಅಂತೋಣಿ ಸ್ಟೀಫನ್	ಮೇಟಿ' (ಗ್ರೂಪ್ 'ಡಿ' ಹುದ್ದೆಗಳು)	2	2	ಇಲ್ಲ
9.	ಶ್ರೀ ಚಂದ್ರಶೇಖರ				
10.	ಶ್ರೀ ಎ.ಬಿ. ಛಾಯಾಕುಮಾರ್	ವಾಟರ್‌ಮೆನ್ (ಗ್ರೂಪ್ 'ಡಿ' ಹುದ್ದೆಗಳು)	2	2	ಇಲ್ಲ
11.	ಶ್ರೀ ಮಂಜೇಗೌಡ				
12.	ಶ್ರೀ ಹೆಚ್.ಕೆ. ರಮೇಶ್ ಶೆಟ್ಟಿ	ತೋಟಿ (ಗ್ರೂಪ್ 'ಡಿ' ಹುದ್ದೆಗಳು)	2	2	ಇಲ್ಲ
13.	ಶ್ರೀಮತಿ ರೇಣುಕಮ್ಮ				
	"ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ನೌಕರರ ವಿವರಗಳು"				
1.	ಶ್ರೀ ಡಿ. ಶಂಕರಲಿಂಗೇಗೌಡ	ದ್ವಿತೀಯ ದರ್ಜೆ ಸಹಾಯಕರು	ಇಲ್ಲ	1	ಇಲ್ಲ
	"ವರ್ಕ್‌ಚಾರ್ಜ್‌ನಿಂದ ಕ್ರಮಬದ್ಧಗೊಂಡು ಸೂಪರ್‌ನ್ಯೂಮರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು"				
1.	ಶ್ರೀ ಅಬ್ದುಲ್ ಅಲೀಮ್	ಜ್ಯೂನಿಯರ್ ವರ್ಕ್ ಇನ್ಸ್‌ಪೆಕ್ಟರ್	ಇಲ್ಲ	1	ಇಲ್ಲ

ಸೆಕ್ಷನ್ (1) ಬಿ (X) ಪ್ರತಿ ಅಧಿಕಾರಿಗಳು ಮತ್ತು ನೌಕರರು ಮಾಹೆಯಾನ ಪಡೆಯುವ ವೇತನ ವಿವರಗಳು

ಕ್ರ. ಸಂ.	ಹೆಸರು	ಹುದ್ದೆ	ವೇತನ ಶ್ರೇಣಿ	ಮೂಲ ವೇತನ
1.	ಶ್ರೀ ಯು.ಪಿ. ವಿಜಯಶಂಕರ್	ಸಹಾಯಕ ಕಾರ್ಯಪಾಲಕ ಇಂಜನಿಯರ್	14050-25050	25650.00
2.	ಶ್ರೀ ಎ.ಬಿ. ಮಂಜೇಗೌಡ.	ಸಹಾಯಕ ಇಂಜನಿಯರ್	13000-23850	18150.00
3	ಖಾಲಿ ಇದೆ	ಸಹಾಯಕ ಇಂಜನಿಯರ್	11400-21600	-
4	ಶ್ರೀ ಜಿ.ಹೆಚ್. ಸೋಮಶೇಖರ್	ಜ್ಯೂನಿಯರ್ ಇಂಜನಿಯರ್	8825-16000	9750.00

ಕ್ರ. ಸಂ.	ಹೆಸರು	ಹುದ್ದೆ	ವೇತನ ಶ್ರೇಣಿ	ಮೂಲ ವೇತನ
5.	ಶ್ರೀ ಎಂ. ಶಿವಕುಮಾರ್	ಪ್ರಥಮ ದರ್ಜೆ ಸಹಾಯಕರು	7275–13350	11100.00
6.	ಶ್ರೀಮತಿ ಕೆ.ಆರ್. ವಿಜಯಲಕ್ಷ್ಮಿ	ಬೆರಳಚ್ಚುಗಾರರು	7275–13350	9500.00
7.	ಶ್ರೀ ರಂಗಸ್ವಾಮಿ	'ಡಿ' ಗ್ರೂಪ್ ನೌಕರರು	5800–10500	8825.00
8.	ಶ್ರೀ ಅಬ್ದುಲ್ ಅಲೀಮ್	ಜ್ಯೂನಿಯರ್ ವರ್ಕ್ ಇನ್ಸ್‌ಪೆಕ್ಟರ್	7275–13350	12000.00
9.	ಶ್ರೀ ಅಂತೋಣಿ ಸ್ಟೀಫನ್	ಮೇಟಿ (ಗ್ರೂಪ್ 'ಡಿ')	5500–9500	7625.00
10.	ಶ್ರೀ ಚಂದ್ರಶೇಖರ್	ಮೇಟಿ (ಗ್ರೂಪ್ 'ಡಿ')	5200–8200	7100.00
11.	ಶ್ರೀ ಎ.ಬಿ.ಛಾಯಾಕುಮಾರ್	ವಾಟರ್‌ಮೆನ್ (ಗ್ರೂಪ್ 'ಡಿ')	5500–9500	8200.00
12.	ಶ್ರೀ ಮಂಜೇಗೌಡ	ವಾಟರ್‌ಮೆನ್ (ಗ್ರೂಪ್ 'ಡಿ')	5200–8200	7100.00
13.	ಶ್ರೀ ಹೆಚ್.ಕೆ.ರಮೇಶ್ ಶೆಟ್ಟಿ	ತೋಟಿ (ಗ್ರೂಪ್ 'ಡಿ')	5200–8200	5400.00
14.	ಶ್ರೀಮತಿ ರೇಣುಕಮ್ಮ	ತೋಟಿ (ಗ್ರೂಪ್ 'ಡಿ')	5200–8200	5300.00

ಸಕ್ಷಮ ಪ್ರಾಧಿಕಾರ ಅರ್ಜಿಯನ್ನು ಸ್ವೀಕರಿಸಿದ ನಂತರ

1) ಅರ್ಜಿಯಲ್ಲಿ ಉದ್ದೇಶವನ್ನು ಸ್ಪಷ್ಟವಾಗಿ ಸೂಚಿಸಿಲ್ಲದಿದ್ದರೆ.
2) ಅರ್ಜಿಯು ಅಪೂರ್ಣವಾಗಿದ್ದರೆ ಅಥವಾ ಅನ್ಯಥಾ ದೋಷಪೂರಕವಾಗಿದ್ದರೆ.
3) ಯಾವ ದಾಖಲೆಯಿಂದ ಮಾಹಿತಿಯನ್ನು ಒದಗಿಸಬೇಕಾಗಿದೆಯೋ ಆ ದಾಖಲೆಯ ಸಾರ್ವಜನಿಕ ಪ್ರಾಧಿಕಾರದ ಬಳಿ ಆಗ ಲಭ್ಯವಿಲ್ಲದಿದ್ದರೆ ಮತ್ತು ಅರ್ಜಿಯನ್ನು ಸ್ವೀಕರಿಸಿದ ಸಮಯದಲ್ಲಿ ಅದು ನ್ಯಾಯಾಲಯ, ಲೋಕಾಯುಕ್ತ ಪೋಲೀಸರು ಅಥವಾ ಇತರೆ ಪ್ರಾದಿಕಾರದಲ್ಲಿ ಇತ್ಯರ್ಥದಲ್ಲಿದ್ದರೆ ಅರ್ಜಿದಾರರಿಗೆ ಅರ್ಜಿಯನ್ನು ಹಿಂದಿರುಗಿಸಲಾಗುವುದು.

ಲೋಕೋಪಯೋಗಿ ಬೇಲೂರು ಉಪ-ವಿಭಾಗದ ಸಂಘಟನೆ ಕಾರ್ಯವೈಖರಿ, ಜವಾಬ್ದಾರಿ ಅನುಷ್ಠಾನ ವಿವರವನ್ನು ಸಂಕ್ಷಿಪ್ತವಾಗಿ ವಿವರಿಸಿದ್ದು ಸಾರ್ವಜನಿಕರಿಗೆ ಯಾವುದೇ ಮಾಹಿತಿ ಅವಶ್ಯವಿದ್ದಲ್ಲಿ ನಿಯಮಾನುಸಾರ ಒದಗಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಸಹಾಯಕ ಕಾರ್ಯಪಾಲಕ ಇಂಜಿನಿಯರ್,
ಲೋ ಬಂ ಮತ್ತು ಒ ಜ ಸಾ ಇಲಾಖೆ,
ಉಪವಿಭಾಗ, ಬೇಲೂರು

ಮಾಹಿತಿ ಪಡೆಯಲು ಹಕ್ಕು ಅಧಿನಿಯಮ-2005

ನಮೂನೆ-ಎ

(4 (1) ನೇ ನಿಯಮ ನೋಡಿ)

1.	ಅರ್ಜಿದಾರನ ಪೂರ್ಣ ಹೆಸರು	
2.	ವಿಳಾಸ	
3.	ಕೋರಿರುವ ದಸ್ತಾವೇಜಿನ ವಿವರಗಳು	
4.	ದಸ್ತಾವೇಜಿಗೆ ಸಂಬಂಧಪಟ್ಟಿರುವ ವರ್ಷ	
5.	ಯಾವ ಉದ್ದೇಶಗಳಿಗಾಗಿ ಮಾಹಿತಿಯ ಆವಶ್ಯಕತೆ ಇದೆ ಮತ್ತು ಮಾಹಿತಿಯನ್ನು ಪಡೆಯುವಲ್ಲಿ ಅರ್ಜಿದಾರನ ಆಸಕ್ತಿ ಏನು?	

ರಶೀದಿ ಸಂಖ್ಯೆ: ದಿನಾಂಕ:

ಸ್ಥಳ :

ಅರ್ಜಿದಾರನ/ಳ ಸಹಿ.

ದಿನಾಂಕ:

ಟಿಪ್ಪಣಿ: ದೋಷಪೂರಿತವಾಗಿರುವ/ ಅಪೂರ್ಣವಾಗಿರುವ ಅರ್ಜಿಗಳನ್ನು ಹಿಂದಿರುಗಿಸಲಾಗುವುದು.

1) ಮಾಹಿತಿ ಒದಗಿಸಲು ನಮೂನೆ-ಎ ಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸತಕ್ಕದ್ದು.
2) ಸಕ್ಷಮ ಪ್ರಾಧಿಕಾರವು ಅರ್ಜಿಯನ್ನು ಸ್ವೀಕರಿಸಿದ್ದಕ್ಕೆ ಲಿಖಿತದಲ್ಲಿ ಸ್ವೀಕೃತಿ ಪತ್ರವನ್ನು ನೀಡಲಾಗುವುದು. ಹಾಗೂ ರಿಜಿಸ್ಟರಿನಲ್ಲಿ ನಮೂದಿಸಲಾಗುವುದು.
3) ದಸ್ತಾವೇಜಿನ ಪ್ರತಿಗಳನ್ನು ಒದಗಿಸುವುದಕ್ಕಾಗಿ ನಿಗಧಿಪಡಿಸಿರುವ ಶುಲ್ಕ ಈ ಕೆಳಗಿನ ಕೋಷ್ಟಕದಲ್ಲಿ ನಿಗದಿಪಡಿಸಿರುವಂತೆ ಇರುತ್ತದೆ.

ಕೋಷ್ಟಕ (ಅರ್ಜಿ ಶುಲ್ಕ)

ವಿವರ	ಶುಲ್ಕ
1) ಅರ್ಜಿ ಜೊತೆಗೆ	ರೂ. ಹತ್ತು
2) ಎ-4 ಗಾತ್ರದ ಕಾಗದದಲ್ಲಿ ಪ್ರತಿ ಪುಟಕ್ಕೆ ಎ-4 ಗಾತ್ರದ ಕಾಗದದಲ್ಲಿ ಪ್ರತಿ ಪುಟಕ್ಕೆ ಕಾಲಂ 4(1)(ಬಿ) ಪ್ರಕಾರ	ರೂ. ಎರಡು ರೂ. ಒಂದು
3) ಭೂಪಟಗಳು, ನಕಾಶೆಗಳು ವರದಿಗಳು ಅಥವಾ ಯಾವುದೇ ತಾಂತ್ರಿಕ ದತ್ತಾಂಶ ಅಥವಾ ಮಾದರಿ ಅಥವಾ ಆಕೃತಿಗಳು	ಅಗತ್ಯವಿರುವ ಸಾಮಗ್ರಿಗಳು ಮತ್ತು ಶ್ರಮಿಕ ವೆಚ್ಚ ಆಧರಿಸಿ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ ನಿಗದಿಪಡಿಸುವ ಯುಕ್ತವಾದ ಶುಲ್ಕ
4) ಕಾಮಗಾರಿ ಪರಿವೀಕ್ಷಣೆ	ನಿಯಮ 4(1)ರಡಿ ಗೊತ್ತುಪಡಿಸಿರುವ ಆರಂಭಿಕ ಶುಲ್ಕ ಬಿಟ್ಟು ನಿಯೋಜನೆಗೆ ಅಗತ್ಯವಿರುವ ಸಾಮಗ್ರಿಗಳು ಮತ್ತು ಶ್ರಮಿಕ ವೆಚ್ಚ ಆಧರಿಸಿ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ ನಿಗದಿಪಡಿಸುವ ನ್ಯಾಯೋಚಿತ ಮತ್ತು ಯುಕ್ತವಾದ ಶುಲ್ಕ
5) ಪ್ರತಿ ಡಿಸ್ಕೆಟ್ ಅಥವಾ ಫ್ಲಾಪಿ ಅಥವಾ ಸಿ.ಡಿ. ಅಥವಾ ಇತರೆ ಯಾವುದೇ ವಿದ್ಯುನ್ಮಾನ ಪ್ರಕಾರ	ರೂ. ಐವತ್ತು
6) ದಸ್ತಾವೇಜು ಮತ್ತು ದಾಖಲೆಗಳ ಪರಿವೀಕ್ಷಣೆ ಮೊದಲನೆಯ ಗಂಟೆ ಮುಂದಿನ ಗಂಟೆಗೆ	ಶುಲ್ಕವಿಲ್ಲ ½ ಗಂಟೆಗೆ ಅಥವಾ ಅದರ ಭಾಗಕ್ಕೆ ರೂ.10.00
7) ಅರ್ಜಿಯನ್ನು ಸ್ವೀಕರಿಸಿದ ಏಳು ದಿನಗಳ ಒಳಗೆ ಶುಲ್ಕವನ್ನು ಸಕ್ಷಮ ಪ್ರಾಧಿಕಾರಕ್ಕೆ ಪಾವತಿಸತಕ್ಕದ್ದು. ಶುಲ್ಕ ಸಂದಾಯವಾದ ನಂತರ ದಾಖಲೆ ನೀಡುವ ದಿನಾಂಕವನ್ನು ಅರ್ಜಿದಾರರಿಗೆ ತಿಳಿಸಲಾಗುವುದು.	
8) ಈ ಕಚೇರಿಯಲ್ಲಿ ಮಾಹಿತಿ ಬಯಸುವ ಅರ್ಜಿದಾರರು ರೂ.10.00 ಶುಲ್ಕವನ್ನು ನಗದಾಗಿಯಾಗಲಿ ಅಥವಾ ಅಂಚೆ ಪೋಸ್ಟಲ್ ಆರ್ಡರ್‌ನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಹೆಸರಿನಲ್ಲಿ ಪಡೆದು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.	
9) ಒಂದು ಅರ್ಜಿಯಲ್ಲಿ ಒಂದೇ ವಿಷಯ ಒಳಗೊಂಡಿರಬೇಕು. ಬೇರೆ ಬೇರೆ ವಿಷಯಗಳುಳ್ಳ ಮಾಹಿತಿಗಳಿಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕು.	

ಸಕ್ಷಮ ಪ್ರಾಧಿಕಾರ ಅರ್ಜಿಯನ್ನು ಸ್ವೀಕರಿಸಿದ ನಂತರ:

1. ಅರ್ಜಿಯಲ್ಲಿ ಉದ್ದೇಶವನ್ನು ಸ್ಪಷ್ಟವಾಗಿ ಸೂಚಿಸಿಲ್ಲದಿದ್ದರೆ, ನಿಗದಿಪಡಿಸಿದ ಶುಲ್ಕ ಕಟ್ಟದಿದ್ದರೆ
2. ಅರ್ಜಿಯು ಅಪೂರ್ಣವಾಗಿದ್ದರೆ ಅಥವಾ ಅನ್ಯಥಾ ದೋಷಪೂರಕವಾಗಿದ್ದರೆ ಅಥವಾ ನಿಯಮಾವಳಿ (8)ರ ಪ್ರಕಾರ ಮಾಹಿತಿ ನೀಡಲು ವಿನಾಯಿತಿ ಇರುವ ವಿಷಯಕ್ಕೆ ಸಂಬಂಧಿಸಿದ್ದರೆ
3. ಯಾವ ದಾಖಲೆಯಿಂದ ಮಾಹಿತಿಯನ್ನು ಒದಗಿಸಬೇಕಾಗಿದೆಯೋ ಆ ದಾಖಲೆಯು ಸಾರ್ವಜನಿಕ ಪ್ರಾಧಿಕಾರದ ಬಳಿ ಆಗ ಲಭ್ಯವಿಲ್ಲದಿದ್ದರೆ ಮತ್ತು ಅರ್ಜಿಯನ್ನು ಸ್ವೀಕರಿಸಿದ ಸಮಯದಲ್ಲಿ ಅದು ನ್ಯಾಯಾಲಯ, ಲೋಕಾಯುಕ್ತ ಪೊಲೀಸರು ಅಥವಾ ಇತರೆ ಪ್ರಾಧಿಕಾರದಲ್ಲಿ ಇತ್ಯರ್ಥದಲ್ಲಿದ್ದರೆ ಅರ್ಜಿದಾರರಿಗೆ ಅರ್ಜಿಯನ್ನು ಹಿಂದಿರುಗಿಸಲಾಗುವುದು
4. ಲೋಕೋಪಯೋಗಿ, ಇಲಾಖೆ ಬೇಲೂರು ಉಪ ವಿಭಾಗದ ಸಂಘಟಣೆ ಕಾರ್ಯವೈಖರಿ ಜವಾಬ್ದಾರಿ ಅನುಷ್ಠಾನ ವಿವರವನ್ನು ಸಂಕ್ಷಿಪ್ತವಾಗಿ ವಿವರಿಸಿದ್ದು ಸಾರ್ವಜನಿಕರಿಗೆ ಯಾವುದೇ ಮಾಹಿತಿ ಅವಶ್ಯವಿದ್ದಲ್ಲಿ ನಿಯಮಾನುಸಾರ ಒದಗಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಯು.ಪಿ. ವಿಜಯಶಂಕರ್

ಸಹಾಯಕ ಕಾರ್ಯಪಾಲಕ ಇಂಜಿನಿಯರ್,

ಲೋ ಬಂ ಮತ್ತು ಒ ಜ ಸಾ ಇಲಾಖೆ,

ಉಪವಿಭಾಗ, ಬೇಲೂರು.

ಪಿ.ಆರ್.933

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ, ಆಂಜನೇಯ ದೇವಸ್ಥಾನ ಎದುರು, ವಿದ್ಯಾನಗರ, ದಾವಣಗೆರೆ ಇವರ ಕಾರ್ಯಾಲಯ

ವಿಷಯ: ಸ್ಥಗಿತಗೊಂಡಿರುವ ಪದ್ಮಾವತಿ ಪತ್ತಿನ ಸಹಕಾರ ಸಂಘ ನಿ., ದಾವಣಗೆರೆ ಇದನ್ನು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72 ಮತ್ತು 73ರನ್ವಯ ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ: (1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಪ್ರಸ್ತಾವನೆ ಸಂಖ್ಯೆ: ಸನಿ31/ಸ್ಥಗಿತ/ಪಕ್ರೆಸಿಎಸ್/ಸಿಆರ್-02/2009-10, ದಿನಾಂಕ:22.06.2009.

ಪ್ರಸ್ತಾವನೆ:

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರು ಉಲ್ಲೇಖ (1)ರಲ್ಲಿ ಸಲ್ಲಿಸಿದ ಪ್ರಸ್ತಾವನೆ ಪ್ರಕಾರ ವಿಷಯ ಸೂಚಿತ ಸಂಘದ ಕಾರ್ಯ ಚಟುವಟಿಕೆಗಳು ಹಲವು ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಸಂಘದ ಆಡಳಿತ ಸಮಿತಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಿಸುವಲ್ಲಿ ವಿಫಲರಾಗಿರುತ್ತಾರೆ ಮತ್ತು ಸಂಘವನ್ನು ಪುನಶ್ಚೇತನಗೊಳಿಸುವಲ್ಲಿ ಆಸಕ್ತಿ ಇರುವುದಿಲ್ಲ. ಸಂಘದ ಆಡಳಿತ ಮಂಡಳಿ ನಿರ್ದೇಶಕರ/ ಕಾರ್ಯದರ್ಶಿಯವರ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಲೆಕ್ಕಪುಸ್ತಕಗಳು, ಲೆಕ್ಕಪರಿಶೋಧನಾ, ವರದಿಗಳು ಲಭ್ಯವಿರುವುದಿಲ್ಲ. ಈ ಸಂಘದಿಂದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ, ಕಾರಣ, ಈ ಸಂಘವನ್ನು ಇದೇ ರೀತಿ ಮುಂದುವರಿಸಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿಗೆ ಹೋಗಲು ಸಂಭವವಿರುವುದರಿಂದ ಸಮಾಪನೆಗೊಳಿಸುವುದೇ ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಡಿಆರ್/ಡಿವಿಜಿ/ಎಲ್‌ಕ್ಯೂಡಿ/ಸಿಆರ್-10/2009-10, ದಿನಾಂಕ:31ನೇ ಜುಲೈ, 2009

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮತ್ತು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72(2)ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್ಎಂ:2001, ದಿನಾಂಕ:21.11.2001ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಬಿ. ಕುಬೇರಪ್ಪ ಕೆ.ಸಿ.ಎಸ್., ಆದ ನಾನು ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸ್ಥಗಿತಗೊಂಡಿರುವ ಪದ್ಮಾವತಿ ಪತ್ತಿನ ಸಹಕಾರ ಸಂಘ ನಿ., ದಾವಣಗೆರೆ, ಇದನ್ನು ಸಮಾಪನೆಗೊಳಿಸಿ, 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1)ರನ್ವಯ ಮೇಲ್ವಿಚಾರಕರು 2ನೇ ವೃತ್ತ, ಡಿ.ಡಿ.ಸಿ.ಸಿ. ಬ್ಯಾಂಕ್ ನಿ., ದಾವಣಗೆರೆ. ಇವರನ್ನು ಸಂಘದ ಸಮಾಪನಾಧಿಕಾರಿಯನ್ನಾಗಿ ಅಧಿಕ ಪ್ರಭಾರದಲ್ಲಿ ನೇಮಿಸಿರುತ್ತೇನೆ. ಸಮಾಪನಾಧಿಕಾರಿಯು ಸಂಘದ ವಿಶಿಷ್ಟ ಪ್ರಭಾರವನ್ನು ಮತ್ತು ಸಂಘದ ಆಸ್ತಿಗಳನ್ನು ಸಂಘದ ಕಾರ್ಯದರ್ಶಿ ಅಥವಾ ಸಂಘದ ಪ್ರಭಾರ ಹೊಂದಿದ ಯಾವುದೇ ವ್ಯಕ್ತಿಯಿಂದ 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1) ಮತ್ತು 74ರ ನಿಯಮದ ಪ್ರಕಾರ ಪಡೆದುಕೊಳ್ಳತಕ್ಕದ್ದು.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:31.07.2009 ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಬಿ. ಕುಬೇರಪ್ಪ
ಸಹಕಾರ ಸಂಘಗಳ ಉಪನಿಬಂಧಕರು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.773

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ, ಆಂಜನೇಯ ದೇವಸ್ಥಾನ ಎದುರು, ವಿದ್ಯಾನಗರ, ದಾವಣಗೆರೆ ಇವರ ಕಛೇರಿಯ ನಡುವಳಿಗಳು

ವಿಷಯ: ಸಮಾಪನೆಗೊಂಡಿರುವ ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ., ಬಾಗಳಿ, ಹರಪನಹಳ್ಳಿ-ತಾ: ಇದರ ನೋಂದಣಿಯನ್ನು ರದ್ದುಪಡಿಸುವ ಕುರಿತು.

ಉಲ್ಲೇಖ:(1) ಈ ಕಛೇರಿ ಆದೇಶ ಸಂಖ್ಯೆ:ಡಿಆರ್/ಡಿವಿಜಿ/ಸಮಾಪನೆ/ಸಿಆರ್-32/2008-09, ದಿನಾಂಕ: 16.4.2009.
2) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ, ಇವರ ಪತ್ರ ದಿನಾಂಕ:31.07.2009.

ಪ್ರಸ್ತಾವನೆ:

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಈ ಮೇಲ್ಕಂಡ ಸಹಕಾರ ಸಂಘವು ನೋಂದಣಿ ಸಂಖ್ಯೆ: ಸನಿ/ಹೆಚ್‌ಆರ್‌ಪಿ/26568/2000-2001 ದಿನಾಂಕ:16.10.2000ರಲ್ಲಿ ನೋಂದಣಿಯಾಗಿರುತ್ತದೆ. ಸಂಘದ ಕಾರ್ಯಚಟುವಟಿಕೆಗಳು ಪೂರ್ಣವಾಗಿ ಸ್ಥಗಿತಗೊಂಡಿದ್ದರಿಂದ, ಈ ಸಂಘವನ್ನು ಮುಂದುವರಿಸಿಕೊಂಡು ಹೋಗುವುದು ಸೂಕ್ತವಲ್ಲವೆಂದು ಭಾವಿಸಿ, ಉಲ್ಲೇಖ (1)ರ ದಿನಾಂಕ:16.04.2009ರ ಆದೇಶದಲ್ಲಿ ಸಮಾಪನೆಗೊಳಿಸಿ ಸಹಕಾರ ಅಭಿವೃದ್ಧಿ,

ಹರಪನಹಳ್ಳಿ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು. ಸಮಾಪನಾಧಿಕಾರಿಗಳು ಸಂಘದ ಆಸ್ತಿ ಮತ್ತು ಜವಾಬ್ದಾರಿಗಳನ್ನು ವಿಲೇಮಾಡಿ ಶೂನ್ಯಗೊಳಿಸಿ ಸಂಘದ ನೋಂದಣಿಯನ್ನು ರದ್ದುಗೊಳಿಸಲು ಉಲ್ಲೇಖ (2)ರ ರೀತ್ಯಾ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಇವರ ಮುಖಾಂತರ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಅಂಶಗಳನ್ನು ಪರಿಗಣಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಡಿಆರ್:ಡಿವಿಜಿ/ನೋಸಂರ/ಸಿಆರ್-32/2008-09, ದಿನಾಂಕ:17ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್ಎಂ:2001, ದಿನಾಂಕ:21.11.2001ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಬಿ.ಕುಬೇರಪ್ಪ ಕೆ.ಸಿ.ಎಸ್. ಆದ ನಾನು ಸಮಾಪನೆಗೊಂಡ ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ., ಬಾಗಳಿ, ಹರಪನಹಳ್ಳಿ-ತಾ: ಇದರ ನೋಂದಣಿಯನ್ನು ರದ್ದುಗೊಳಿಸಿ ಆದೇಶ ಹೊರಡಿಸಿರುತ್ತೇನೆ.

ಈ ರದ್ಧತಿಯ ಆದೇಶದ ದಿನಾಂಕದಿಂದ ಸದರಿ ಸಹಕಾರ ಸಂಘದ ಕಾರ್ಯ ಚಟುವಟಿಕೆಗಳು ನಿಂತು ಹೋಗಿರುತ್ತವೆಂದು ಭಾವಿಸಲ್ಪಡತಕ್ಕದ್ದು. ಈ ಸಂಘವು ಅಸ್ತಿತ್ವದಲ್ಲಿರುವುದಿಲ್ಲವೆಂದು ಪರಿಗಣಿಸತಕ್ಕದ್ದು ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 33(ಎನ್) ರನ್ವಯ ಈ ಸಂಘದ ದಾಖಲಾತಿಗಳನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಇವರ ಕಛೇರಿಯಲ್ಲಿಡಲು ಆದೇಶಿಸಿದೆ.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:17.08.2009 ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಬಿ. ಕುಬೇರಪ್ಪ
ಸಹಕಾರ ಸಂಘಗಳ ಉಪನಿಬಂಧಕರು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.796

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾತಿ ಅಧಿಕಾರಿಗಳು ತುಮಕೂರು ಉಪವಿಭಾಗ, ತುಮಕೂರು ಇವರ ನಡವಳಿಕೆಗಳು

ವಿಷಯ: ಶ್ರೀ ನಾರಾಯಣಿ ಕಂಭಯ್ಯ ಬಿನ್. ದೊಡ್ಡಕಂಬಯ್ಯ ಬೊಮ್ಮನಹಳ್ಳಿ, ತುಮಕೂರು ತಾಲ್ಲೂಕು, ಇವರ ಸ್ಥಿರಾಸ್ತಿಯನ್ನು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ತುಮಕೂರು ಈ ಬ್ಯಾಂಕಿನ ಹೆಸರಿಗೆ ವರ್ಗಾಯಿಸಿರುವ ಸ್ಥಿರಾಸ್ತಿಯನ್ನು ಪುನಃ ಸಾಲಗಾರರ ಹೆಸರಿಗೆ ವರ್ಗಾವಣೆ ಮಾಡಿ ಸ್ಥಿರೀಕರಣ ಆದೇಶ ನೀಡುವ ಬಗ್ಗೆ.

ಉಲ್ಲೇಖ:(1) ಈ ಕಛೇರಿ ಆದೇಶ ಸಂಖ್ಯೆ:ಎಆರ್‌ಟಿ/ಎಬಿಎನ್/ಸಿಆರ್.2/2003-2004, ದಿನಾಂಕ:14.05.2003.

2) ವ್ಯವಸ್ಥಾಪಕರು, ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ತುಮಕೂರು ಇವರ ಪತ್ರದ ದಿನಾಂಕ:17.12.2008.

ಪ್ರಸ್ತಾವನೆ:

ಶ್ರೀ ನಾರಾಯಣಿ ಕಂಭಯ್ಯ ಬಿನ್ ದೊಡ್ಡಕಂಭಯ್ಯ, ಬೊಮ್ಮನಹಳ್ಳಿ, ಊರ್ಡಿಗೆರೆ ಹೋಬಳಿ, ತುಮಕೂರು ತಾಲ್ಲೂಕು, ಇವರು ತುಮಕೂರು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ತುಮಕೂರು ಈ ಬ್ಯಾಂಕಿನಲ್ಲಿ ಸ್ಥಿರಾಸ್ತಿಯ ಆಧಾರ ಮಾಡಿ ಸಾಲ ಪಡೆದು ಸುಸ್ತಿದಾರರಾಗಿರುವುದರಿಂದ ಇವರಿಂದ ಬರಬೇಕಾದ ಅಸಲು, ಬಡ್ಡಿ, ಇತರೆ ಖರ್ಚು, ಒಟ್ಟು ರೂ.3,80,482-00ಗಳ ವಸೂಲಾತಿಗಾಗಿ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 70ರ ಅಡಿಯಲ್ಲಿ ಸಹಕಾರ ಸಂಘಗಳ ಉಪನಿಬಂಧಕರು ತುಮಕೂರು ಜಿಲ್ಲೆ, ತುಮಕೂರು ಇವರ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ:323/99-2000ರಂತೆ ದಾವೆ ಹೂಡಿ ದಿನಾಂಕ:13.12.1999 ರಂದು ಅವಾರ್ಡ್ ಪಡೆದು, ತೀರ್ಪಿನ ನಂತರವೂ ಸಹ ಬಾಕಿ ಹಣವನ್ನು ಬ್ಯಾಂಕಿಗೆ ಜಮಾ ಮಾಡದ ಕಾರಣದಿಂದ ಡಿಕ್ರಿ ಹಣದ ವಸೂಲಾತಿಗಾಗಿ ಅಮಲ್ಜಾರಿ ಸಂಖ್ಯೆ:535/2000-2001 ರಂತೆ ಅಮಲ್ಜಾರಿ ಪಡೆದು, ದಿನಾಂಕ:28.03.2002 ರಂದು ಬಹಿರಂಗ ಹರಾಜಿಗೆ ಗುರಿಪಡಿಸಿದ್ದು, ಬಿಡ್ಡುದಾರರು ಬಾರದೇ ಇದ್ದುದರಿಂದ ಡಿಕ್ರಿ ಬಾಕಿದಾರರ ಸ್ಥಿರ ಸ್ವತ್ತುಗಳನ್ನು ಉಲ್ಲೇಖ (1)ರಲ್ಲಿ ನಮೂದಿಸಿರುವ ಆದೇಶದ ರೀತ್ಯಾ ತಾಲ್ಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ತುಮಕೂರು ಈ ಬ್ಯಾಂಕಿನ ಹೆಸರಿಗೆ ವರ್ಗಾಯಿಸಿ ಆದೇಶ ನೀಡಲಾಗಿತ್ತು.

ವ್ಯವಸ್ಥಾಪಕರು, ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ತುಮಕೂರು ಇವರು ಉಲ್ಲೇಖ (2)ರಲ್ಲಿ ನಮೂದಿಸಿರುವ ಪತ್ರದಲ್ಲಿ, ಸಾಲಗಾರರು ದಿನಾಂಕ:31.05.2007ರಂದು ರಸೀತಿ ನಂ.368ರ ಪ್ರಕಾರ ಸಾಲ ತೀರುವಳಿ ಮಾಡಿರುತ್ತಾರೆ ಎಂಬುದಾಗಿ ಸಾಲ ತೀರುವಳಿ ದೃಢೀಕರಣ ಪತ್ರ ನೀಡಿರುತ್ತಾರೆ, ಹಾಗೂ ದಿನಾಂಕ:18.11.2008ರಂದು ನಡೆದ ಆಡಳಿತ ಮಂಡಳಿ ಸಭೆಯ ನಡವಳಿಕೆಯಲ್ಲಿ ಸಾಲಗಾರರು ಸಾಲ ತೀರುವಳಿ ಮಾಡಿರುವ ಹಿನ್ನೆಲೆಯಲ್ಲಿ, ಸಾಲಗಾರರಾಗಿದ್ದ ಶ್ರೀ ನಾರಾಯಣಿ ಕಂಬಯ್ಯ ಬಿನ್, ದೊಡ್ಡಕಂಬಯ್ಯ, ಬೊಮ್ಮನಹಳ್ಳಿ, ಊರ್ಡಿಗೆರೆ ಹೋಬಳಿ, ತುಮಕೂರು ತಾಲ್ಲೂಕು, ಇವರ ಸ್ಥಿರಾಸ್ತಿಯನ್ನು ವರ್ಗಾವಣೆ ಮಾಡಲು ಕೋರಿ ತೀರ್ಮಾನಿಸಿರುತ್ತಾರೆ.

ಇವರ ಮನವಿಯನ್ನು ಒಪ್ಪಿ ಉಲ್ಲೇಖ (1)ರಲ್ಲಿ ದಿನಾಂಕ:14.05.2003 ರಂದು ಹೊರಡಿಸಿದ ಆದೇಶದ ಸ್ಥಿರಾಸ್ತಿಗಳನ್ನು, ಪುನಃ ಶ್ರೀ ನಾರಾಯಣಿ ಕಂಬಯ್ಯ ಬಿನ್, ದೊಡ್ಡಕಂಬಯ್ಯ, ಬೊಮ್ಮನಹಳ್ಳಿ, ಊರ್ಡಿಗೆರೆ ಹೋಬಳಿ, ತುಮಕೂರು ತಾಲ್ಲೂಕು, ಇವರಿಗೆ ವಾಪಾಸ್ಸು ನೀಡಲು ಈ ಕೆಳಕಂಡ ಆದೇಶ ಹೊರಡಿಸಿದೆ.

ಆದೇಶ

ಕ್ರಮ ಸಂಖ್ಯೆ: ಸನಿ–32/ಎಬಿಎನ್/ಸ್ಥಿರಾಸ್ತಿ ವರ್ಗಾವಣೆ/113/2008–09, ದಿನಾಂಕ:17ನೇ ಆಗಸ್ಟ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಗಮನಿಸಿ, ಶ್ರೀ ಗೋಪಾಲರೆಡ್ಡಿ, ಕೆ.ಸಿ.ಎಸ್. ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾತಿ ಅಧಿಕಾರಿಗಳು ತುಮಕೂರು ಉಪವಿಭಾಗ ತುಮಕೂರು ಆದ ನಾನು ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 38(ಎ) (15) ರನ್ವಯ ಹಾಗೂ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ/69/ಸಿಎಲ್ಎಂ/2001, ದಿನಾಂಕ:21.11.2001 ರ ರೀತ್ಯಾ ಪ್ರತ್ಯಾಯೋಜಿಸಲ್ಪಟ್ಟ ಅಧಿಕಾರವನ್ನು ಉಪಯೋಗಿಸಿ, ಶ್ರೀ ನಾರಾಯಣಿ ಕಂಭಯ್ಯ ಬಿನ್ ದೊಡ್ಡಕಂಬಯ್ಯ, ಬೊಮ್ಮನಹಳ್ಳಿ, ಊರ್ಡಿಗೆರೆ ಹೋಬಳಿ, ತುಮಕೂರು ತಾಲ್ಲೂಕು, ಇವರ ಸ್ಥಿರಾಸ್ತಿಯನ್ನು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ತುಮಕೂರು ಈ ಬ್ಯಾಂಕಿನ ಹೆಸರಿಗೆ ವರ್ಗಾಯಿಸಿ ನೀಡಿದ್ದ ಸ್ಥಿರಾಸ್ತಿಯನ್ನು, ಈಗ ಶ್ರೀ ನಾರಾಯಣಿ ಕಂಭಯ್ಯ ಬಿನ್ ದೊಡ್ಡಕಂಬಯ್ಯ, ಬೊಮ್ಮನಹಳ್ಳಿ, ಊರ್ಡಿಗೆರೆ ಹೋಬಳಿ, ತುಮಕೂರು ತಾಲ್ಲೂಕು, ಇವರ ಹೆಸರಿಗೆ ಪುನರ್ ವರ್ಗಾವಣೆ ಮಾಡಿ ಆದೇಶ ನೀಡಿರುತ್ತೇನೆ. ಈ ಆದೇಶಕ್ಕೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಅನ್ವಯ ನಮೂನೆ 8ರಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ಸ್ಥಿರ ಸ್ವತ್ತುಗಳ ವರ್ಗಾವಣೆ ಪತ್ರವನ್ನು ಲಗತ್ತಿಸಿದೆ.

ನನ್ನ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿಯ ಮುದ್ರೆಯೊಂದಿಗೆ ದಿನಾಂಕ:17.08.2009 ರಂದು ನೀಡಿದೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ತುಮಕೂರು ಉಪವಿಭಾಗ, ತುಮಕೂರು.

ನಮೂನೆ–VIII

ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ಅನುಬಂಧ 38(ಎ) ನೋಡಿ ಅದರ ರೀತ್ಯಾ ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 101 ರನ್ವಯ ಪರಭಾರೆ ಬಗ್ಗೆ ಪ್ರಮಾಣ ಪತ್ರ

ಸ್ಥಿರ ಸ್ವತ್ತುಗಳ ವರ್ಗಾವಣೆ ಪ್ರಮಾಣ ಪತ್ರ

ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ಬೊಮ್ಮನಹಳ್ಳಿ ಗ್ರಾಮದ ವಾಸಿಯಾದ ಶ್ರೀ ನಾರಾಯಣಿ ಕಂಭಯ್ಯ ಬಿನ್ ದೊಡ್ಡಕಂಬಯ್ಯ, ಊರ್ಡಿಗೆರೆ ಹೋಬಳಿ, ತುಮಕೂರು ತಾಲ್ಲೂಕು, ಇವರ ಸ್ಥಿರಾಸ್ತಿಯನ್ನು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 71ರನ್ವಯ ಆದೇಶವನ್ನು ಜಾರಿ ಮಾಡಿದ್ದರಿಂದ ಸದರಿಯವರ ಸ್ಥಿರ ಸ್ವತ್ತುಗಳನ್ನು ದಿನಾಂಕ:14.05.2003ರಂದು ಈ ಕಛೇರಿ ಆದೇಶದ ಅಡಿಯಲ್ಲಿ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ತುಮಕೂರು, ಇವರಿಗೆ ವರ್ಗಾಯಿಸಿದ್ದು ಸದರಿ ಸಾಲಗಾರರಿಂದ ಬ್ಯಾಂಕಿಗೆ ಬರಬೇಕಾಗಿದ್ದ ಪೂರಾ ಹಣ ಸಂದಾಯವಾಗಿದ್ದು, ಸದರಿ ಸ್ಥಿರಾಸ್ತಿಯನ್ನು ಮೂಲ ಹಕ್ಕುದಾರರಿಗೆ ಮರುವರ್ಗಾಯಿಸುವಂತೆ ಬ್ಯಾಂಕಿನ ವ್ಯವಸ್ಥಾಪಕರು ಕೋರಿರುವ ಮೇರೆಗೆ ಈ ಕೆಳಕಂಡ ಸ್ಥಿರಾಸ್ತಿಗಳ ಹಕ್ಕು, ಹಕ್ಕುಬಾಧ್ಯತೆಗಳು ಶ್ರೀ ನಾರಾಯಣಿ ಕಂಭಯ್ಯ ಬಿನ್ ದೊಡ್ಡಕಂಬಯ್ಯ, ಬೊಮ್ಮನಹಳ್ಳಿ, ಊರ್ಡಿಗೆರೆ ಹೋಬಳಿ, ತುಮಕೂರು ತಾಲ್ಲೂಕು, ಇವರಿಗೆ ನಿರ್ದಿಷ್ಟವಾಗಿರತಕ್ಕದ್ದು, ಮತ್ತು ಈ ಆದೇಶದಂತೆ ಸ್ಥಿರಾಸ್ತಿಯನ್ನು ಮೂಲ ಹಕ್ಕುದಾರರಿಗೆ ಒಪ್ಪಿಸತಕ್ಕದ್ದೆಂದು ಅಧಿನಿಯಮ 101ರನ್ವಯ ಈ ಪ್ರಮಾಣ ಪತ್ರ ನೀಡಲಾಗಿದೆ.

ಸ್ಥಿರ ಸ್ವತ್ತುಗಳ ವಿವರ

ಗ್ರಾಮ	ಸರ್ವೆ ನಂಬರ್	ವಿಸ್ತೀರ್ಣ	ತರಹೆ	ಹಕ್ಕುದಾರರ ವಿಳಾಸ
1. ಬೊಮ್ಮನಹಳ್ಳಿ	53	3.22	ತರಿ	ಶ್ರೀ ನಾರಾಯಣಿ ಕಂಭಯ್ಯ ಬಿನ್ ದೊಡ್ಡಕಂಬಯ್ಯ
2. ಬೊಮ್ಮನಹಳ್ಳಿ	8	5.13	ಖುಷ್ಕಿ	ಶ್ರೀ ನಾರಾಯಣಿ ಕಂಭಯ್ಯ ಬಿನ್ ದೊಡ್ಡಕಂಬಯ್ಯ

ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ತುಮಕೂರು ಉಪವಿಭಾಗ, ತುಮಕೂರು.

ಪಿ.ಆರ್.810

III -F2 -(O)

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ನ್ಯಾಯಾಲಯದಲ್ಲಿ

ಡಿಟಿಸಿಆರ್/396/2008-09, ದಿನಾಂಕ:27ನೇ ಆಗಸ್ಟ್, 2009

ಆರಕ್ಷಕ ಉಪ ನಿರೀಕ್ಷಕರು, ಗ್ರಾಮಾಂತರ ಪೊಲೀಸ್ ಠಾಣೆ, ಮಂಡ್ಯ ತಾಲ್ಲೂಕು, ಇವರ ಅಪರಾಧ ಸಂಖ್ಯೆ:219/2008, ದಿನಾಂಕ:10.05.2008

ಉಪಸ್ಥಿತರು: ಡಾ: ವೈ. ಮಂಜುನಾಥ್

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, (ಪ್ರಭಾರ), ಮಂಡ್ಯ ಜಿಲ್ಲೆ, ಮಂಡ್ಯ.

ಪಿರ್ಯಾದುದಾರರು	**ಆರೋಪಿಗಳು**
ಆರಕ್ಷಕ ಉಪ ನಿರೀಕ್ಷಕರು, ಗ್ರಾಮಾಂತರ ಪೊಲೀಸ್ ಠಾಣೆ, ಮಂಡ್ಯ ತಾಲ್ಲೂಕು.	ತಲೆಮರೆಸಿಕೊಂಡಿರುತ್ತಾನೆ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:10.05.2008 ರಂದು ಬೆಳಿಗ್ಗೆ 6-10ರ ಸಮಯದಲ್ಲಿ ಮಂಡ್ಯ ತಾಲ್ಲೂಕಿನ ಕೊಮ್ಮೇರಹಳ್ಳಿ-ಉಮ್ಮಡಹಳ್ಳಿ ರಸ್ತೆಯಲ್ಲಿ ವಿಶ್ವಮಾನವ ಪ್ರೌಢಶಾಲೆ ಎದುರು ಅಕ್ರಮವಾಗಿ 13.680 ಲೀ. ಮದ್ಯವನ್ನು ಟಿವಿಎಸ್ ಫಿಯಾರೋ ಬೈಕ್ ಸಂಖ್ಯೆ: ಕೆಎ-11/ಕೆ-6018 ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಮಾಡಿದ ಪಿರ್ಯಾದುದಾರರು ಇದು ಕರ್ನಾಟಕ ಅಬಕಾರಿ ಕಾಯ್ದೆ 32 ಮತ್ತು 34ರ ರೀತ್ಯಾ ಅಪರಾಧವಾದ್ದರಿಂದ ಮೇಲ್ಕಂಡ ವಾಹನ, ಮತ್ತು ಮದ್ಯವನ್ನು ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಂಡು ಈ ಬಗ್ಗೆ ಅಪರಾಧ ಸಂಖ್ಯೆ:219/2008ರಂತೆ ಮೊಕದ್ದಮೆಯನ್ನು ದಾಖಲು ಮಾಡಿ ಈ ಪ್ರಾಧಿಕಾರದ ಪೂರ್ವಾನುಮತಿಯಂತೆ ಅಬಕಾರಿ ನಿರೀಕ್ಷಕರು, ಮಂಡ್ಯ ವಲಯ, ಮಂಡ್ಯ ಇವರಿಗೆ ವಶಪಡಿಸಿಕೊಂಡಿರುವ ವಸ್ತುಗಳನ್ನು ಹಸ್ತಾಂತರಿಸಿರುತ್ತಾರೆ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತುಪಡಿಸಿದ ಮದ್ಯದ ರಾಸಾಯನಿಕ ವಿಶ್ಲೇಷಣಾ ವರದಿಯ ಪ್ರಕಾರ ಮಾದರಿ ಸೀಸೆಗಳಲ್ಲಿ ಎಥನಾಲ್ ಅಂಶ ಇರುವುದು ದೃಢಪಟ್ಟಿರುವುದರ ಮೇರೆ ಪ್ರಕರಣದಲ್ಲಿ ಜಪ್ತುಪಡಿಸಿರುವ ವಾಹನ ಮತ್ತು ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:26.05.2009 ಮತ್ತು 19.08.2009ರ ಪತ್ರಗಳ ಮೂಲಕ ಕೋರಿರುತ್ತಾರೆ.

ಈ ಮಧ್ಯೆ ಪ್ರಾಧಿಕಾರದಲ್ಲಿ ಮುಟ್ಟುಗೋಲು ನಡುವಳಿಗಳನ್ನು ಕೈಗೊಂಡಿದ್ದು ತನಿಖಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಪ್ರಕರಣದಲ್ಲಿ ವಶಪಡಿಸಿಕೊಂಡಿರುವ 13.680 ಲೀ. ಮದ್ಯ ಮತ್ತು ಇತರೆ ವಸ್ತುಗಳನ್ನು ತನ್ನದೆಂದು ಕೋರಿ ಯಾರು ಮುಂದೆ ಬಾರದ ಕಾರಣ ದಿನಾಂಕ:29.05.2009ರಂದು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ಟಿ.ವಿ.ಎಸ್. ಫಿಯಾರೋ ಬೈಕ್ ಸಂಖ್ಯೆ: ಕೆಎ-11/ಕೆ-6018 ವಾಹನಕ್ಕೆ ಸಂಬಂಧಪಟ್ಟಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಡ್ಯ ಇವರು ನೀಡಿರುವ "ಬಿ" ವಹಿಯ ಪರಿಶೀಲನೆಯಿಂದ ನೋಂದಣಿ ಸಂಖ್ಯೆ: ಕೆಎ-11/ಕೆ-6018 ವಾಹನಕ್ಕೆ ಸಂಬಂಧಿಸಿದಂತೆ ಶ್ರೀ ಕೆ.ವಿ. ರಮೇಶ್ ಬಿನ್ ಕೋಡಿ ಬೋರಯ್ಯ, ಉಮ್ಮಡಹಳ್ಳಿ ಗ್ರಾಮ ಮತ್ತು ಅಂಚೆ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ- ಇವರು ವಾಹನದ ಮಾಲೀಕರೆಂದು ತಿಳಿದು ಬಂದಿದ್ದು, ಸದರಿಯವರಿಗೆ ದಿನಾಂಕ:13.08.2009ರಂದು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ) ರನ್ವಯ ಕಾರಣ ಕೇಳುವ ನೋಟೀಸ್‌ನ್ನು ನೊಂದಣಿ ಅಂಚೆಯ ಮೂಲಕ ನೀಡಲಾಗಿತ್ತು. ನೋಟೀಸ್ ಮೇಲ್ಕಂಡ ವಿಳಾಸದಲ್ಲಿ ಸ್ವೀಕೃತಿಯಾಗಿರುತ್ತದೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಟಿ.ವಿ.ಎಸ್. ಫಿಯಾರೋ ಬೈಕ್ ಸಂಖ್ಯೆ: ಕೆಎ-11/ಕೆ-6018 ವಾಹನದಲ್ಲಿ ದಿನಾಂಕ:10.05.2008ರಂದು ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುತ್ತದೆ. ಅಲ್ಲದೇ ಜಪ್ತುಪಡಿಸಿರುವ ವಾಹನವನ್ನು ತನ್ನದೆಂದು ಕೋರಿ ಈವರೆವಿಗೂ ಪ್ರಾಧಿಕಾರದ ಮುಂದೆ ಯಾರು ಹಾಜರಾಗದೇ ಇರುವ ಹಿನ್ನೆಲೆಯಲ್ಲಿ, ವಾಹನವನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿಭಾಗಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ. ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ವಾಹನವನ್ನು ವಾರಸುದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ, ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿವೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/396/2008-09, ದಿನಾಂಕ:27ನೇ ಆಗಸ್ಟ್, 2009

ಡಾ: ವೈ.ಮಂಜುನಾಥ್, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರಕ್ಷಕ ಉಪ ನಿರೀಕ್ಷಕರು, ಗ್ರಾಮಾಂತರ ಪೊಲೀಸ್ ಠಾಣೆ, ಮಂಡ್ಯ ತಾಲ್ಲೂಕು ಇವರ ಅಪರಾಧ

ಸಂಖ್ಯೆ:219/2008, ದಿನಾಂಕ:10.05.2008ರ ಪ್ರಕರಣದಲ್ಲಿ ಜಪ್ತುಪಡಿಸಿರುವ ಟಿವಿಎಸ್ ಫಿಯಾರೋ ಬೈಕ್ ಸಂಖ್ಯೆ: ಕೆಎ-11/ಕೆ-6018 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ:27.08.2009ರಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ ಮೂವತ್ತು (30) ದಿವಸಗಳ ನಂತರ ಜಾರಿಗೆ ಬರುವುದು.

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್
ಪಿ.ಆರ್.832 ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ.

ಪ್ರಾಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ನ್ಯಾಯಾಲಯ, ವನ್ಯಜೀವಿ ವಿಭಾಗ, ಶಿವಮೊಗ್ಗ

ಸಂ.ಎ3:ಎಸಿಟ:ಅಮೊ:ಟೆಂಪೊ ಟ್ರಾಕ್ಸ್:ಸಬೈ-6570:2008-09, ದಿನಾಂಕ:18ನೇ ಜೂನ್, 2009

ವಿಷಯ: ಅರಣ್ಯ ಉತ್ಪನ್ನಗಳ ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ್ದಾಗ ಸರ್ಕಾರದ ಪರ ವಶಪಡಿಸಿಕೊಂಡಿರುವ ಟೆಂಪೊ ಟ್ರಾಕ್ಸ್ ನೊಂದಣಿ ಸಂಖ್ಯೆ: ಕೆಎ-17-6570 ನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ.

ಉಲ್ಲೇಖ:1) ವಲಯ ಅರಣ್ಯಾಧಿಕಾರಿ, ಸಕ್ರೆಬೈಲು ವನ್ಯಜೀವಿ ವಲಯ, ಗಾಜನೂರು ಇವರ ಪತ್ರದ ಸಂಖ್ಯೆ: ವಅಅ:ಸಬೈ:ವಜೀ:ಅಮೊ-22/2008-09, ದಿನಾಂಕ:24.05.2008.

2) ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದಾವಣಗೆರೆ ಇವರ ಪತ್ರದ ಸಂಖ್ಯೆ: ಆರ್‌ಟಿಓ:ಡಿವಿಜಿ:ಪಿಆರ್-996: 2008-09, ದಿನಾಂಕ:20.08.2008.

3) ಈ ಪ್ರಾಧಿಕಾರದ ವತಿಯಿಂದ ವಾಹನದ ಮಾಲೀಕತ್ವದ ಬಗ್ಗೆ ರುಜುವಾತುಪಡಿಸಲು ಸಂಬಂಧಿಸಿದವರಿಗೆ ನೀಡಲಾದ ನೋಟೀಸುಗಳ ದಿನಾಂಕ:04.11.2008, 08.12.2008 ಮತ್ತು 27.05.2009.

ಪ್ರಕರಣದ ಹಿನ್ನೆಲೆ:

ದಿನಾಂಕ:24.05.2008 ರಂದು ಬೆಳಿಗ್ಗೆ ಸಕ್ರೆಬೈಲು ಶಾಖೆ ವನಪಾಲಕ ಮತ್ತು ಸಿಬ್ಬಂದಿಗಳು ಇಲಾಖಾ ಜೀಪು ಕೆಎ-18-ಜಿ-445ರಲ್ಲಿ ಬಸವಾಪುರ ಎಮ್‌ಎಫ್ ನಿಂದ ಹರಕೆರೆ ಗ್ರಾಮದ ಕಡೆ ಬರುವ ರಾಮಿನಕೊಪ್ಪ- ಹರಕೆರೆ ಮುಖ್ಯರಸ್ತೆಯಲ್ಲಿ ಅರಣ್ಯ ಗಸ್ತು ತಿರುಗಿ ಬರುತ್ತಿರುವಾಗ ಸದರಿ ರಸ್ತೆಯಲ್ಲಿ ಹಾದುಹೋಗುತ್ತಿದ್ದ ಟೆಂಪೋ ಟ್ರಾಕ್ಸ್ ವಾಹನವನ್ನು ಕಂಡು ಅನುಮಾನಾಸ್ಪದವಾಗಿ ಕಂಡುಬಂದ ಈ ವಾಹನವನ್ನು ತಪಾಸಣೆ ಮಾಡಲು ನಿಲ್ಲಿಸುವಂತೆ ಚಾಲಕನಿಗೆ ಸೂಚಿಸಿರುತ್ತಾರೆ. ಸೂಚಿಸಿದ ಜಾಗದಲ್ಲಿ ವಾಹನವನ್ನು ಚಾಲಕ ನಿಲ್ಲಿಸದೇ ಸ್ವಲ್ಪ ದೂರದಲ್ಲಿ ನಿಲ್ಲಿಸಿ ಓಡಲು ಪ್ರಾರಂಭಿಸಿರುತ್ತಾನೆ. ಕರ್ತವ್ಯ ನಿರತ ಸಿಬ್ಬಂದಿಗಳು ಆತನನ್ನು ಹಿಡಿಯಲು ಪ್ರಯತ್ನಿಸಿದ್ದು, ಇವರ ಕೈಗೆ ಸಿಗದೇ ಪರಾರಿಯಾಗಿರುತ್ತಾನೆ. ನಂತರ ವಾಹನದ ಬಳಿಬಂದು ವಾಹನದ ಒಳಭಾಗವನ್ನು ಕೂಲಂಕುಷವಾಗಿ ಪರಿಶೀಲಿಸಿ ನೋಡಿದಾಗ 3 ಬೀಟೆ ತುಂಡುಗಳು ಮತ್ತು 5 ಸಾಗುವಾನಿ ಸೈಜುಗಳಿದ್ದು, ಇವುಗಳ ಮೇಲೆ ಯಾವುದೇ ಇಲಾಖಾ ಛಾಪಾ ಅಚ್ಚಿಸದೇ ಇದ್ದುದರಿಂದ ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದ ಬೀಟೆ ನಾಟಾ ಮತ್ತು ಸಾಗುವಾನಿ ಸೈಜುಗಳು 8=0.239 ಘ.ಮೀ. ಮತ್ತು ಸಾಗಾಣಿಕೆಗೆ ಬಳಸಿದ ಟೆಂಪೊ ಟ್ರಾಕ್ಸ್ ವಾಹನ ನೊಂದಣಿ ಸಂಖ್ಯೆ: ಕೆಎ-17-6570 ನ್ನು ಸರ್ಕಾರದ ಪರ ಅಮಾನತ್ತುಪಡಿಸಿ 1963ರ ಕರ್ನಾಟಕ ಅರಣ್ಯ ಕಾಯಿದೆ ಕಲಂ 24, 50, 71ಎ ಮತ್ತು 1969ರ ಕರ್ನಾಟಕ ಅರಣ್ಯ ಕಾನೂನು ನಿಯಮ 144ರ ಪ್ರಕಾರ (ಅರಣ್ಯ ಮೊಕದ್ದಮೆ ಸಂಖ್ಯೆ:2/2008-09, ದಿನಾಂಕ:28.05.2008) ಮೊಕದ್ದಮೆ ದಾಖಲಿಸಿ, ಪ್ರಥಮ ಮಾಹಿತಿ ವರದಿ, ಅಮಾನತ್ತು ವರದಿ, ವಾಹನ, ಬೀಟೆ ತುಂಡುಗಳು ಮತ್ತು 5 ಸಾಗುವಾನಿ ಸೈಜುಗಳ ಸಮೇತ ಕರ್ನಾಟಕ ಅರಣ್ಯ ಕಾಯಿದೆ 1963ರ ಕಲಂ 71ಎ ಪ್ರಕಾರ ಮುಂದಿನ ಕ್ರಮ ಕೈಗೊಳ್ಳಲು ಪ್ರಾಧಿಕೃತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವನ್ಯಜೀವಿ ವಿಭಾಗ, ಶಿವಮೊಗ್ಗ ಇವರ ಸಮ್ಮುಖದಲ್ಲಿ ಹಾಜರುಪಡಿಸಿರುತ್ತಾರೆ.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದಾವಣಗೆರೆ ಇವರು ದಿನಾಂಕ:20.08.2008ರಂದು ನೀಡಿದ "ಬಿ" ಎಕ್ಸ್‌ಟ್ರಾಕ್ಟ್‌ನಲ್ಲಿ ವಾಹನದ ಮೂಲ ವಾರಸುದಾರರು ವಾಹನವನ್ನು ಪರಭಾರೆ ಮಾಡಿದರೆಂದು ತಿಳಿಸಿದ್ದರಿಂದ, ಸದರಿ ಪರಭಾರೆ ಮಾಡಿದ ವ್ಯಕ್ತಿಗೆ ದಿನಾಂಕ:04.11.2008 ಮತ್ತು 08.12.2008 ರಂದು ನೊಂದಾಯಿತ ಅಂಚೆ ಮೂಲಕ ನೋಟೀಸು ಜಾರಿ ಮಾಡಿ, ನೋಟೀಸ್ ತಲುಪಿದ 15 ದಿವಸದೊಳಗಾಗಿ ಈ ಪ್ರಾಧಿಕಾರದ ಮುಂದೆ ವಾಹನದ ಮೂಲ ದಾಖಲಾತಿಗಳೊಂದಿಗೆ ಮಾಲೀಕತ್ವದ ಹಕ್ಕು ಬಾಧ್ಯತೆಗಳನ್ನು ಹಾಜರುಪಡಿಸಲು ಹಾಗೂ ಅರಣ್ಯ ಮೊಕದ್ದಮೆ ದಾಖಲಿಸಿರುವ ಬಗ್ಗೆ ಹೇಳಿಕೆ ನೀಡಲು ತಿಳಿಸಲಾಗಿರುತ್ತದೆ. ನೋಟೀಸ್ ಜಾರಿಯಾಗಿರುವುದಕ್ಕೆ ಈ ಪ್ರಾಧಿಕಾರಕ್ಕೆ ಸ್ವೀಕೃತಿಗಳು ಬಂದಿರುತ್ತವೆ. ಇದೇ ರೀತಿ ವಾಹನದ ಮೂಲ ವಾರಸುದಾರರಿಗೂ ಸಹ ದಿನಾಂಕ:27.05.2009 ರಂದು ನೋಟೀಸ್ ಜಾರಿ ಮಾಡಿದ್ದು, ಇವರಿಂದಲೂ ಸಹ ನೋಟೀಸ್ ಸ್ವೀಕೃತಿ ಈ ಪ್ರಾಧಿಕಾರಕ್ಕೆ ಬಂದಿರುತ್ತದೆ. ಹೀಗೆ ನೋಟೀಸ್ ನೀಡಿ ವಾಹನದ ಮಾಲೀಕತ್ವದ ಬಗ್ಗೆ ಮತ್ತು ಅರಣ್ಯ ಮೊಕದ್ದಮೆಯಲ್ಲಿ ವಾಹನ ಸಿಲುಕಿರುವ ಬಗ್ಗೆ ಹೇಳಿಕೆ ನೀಡಲು ಸಾಕಷ್ಟು ಸಮಯಾವಕಾಶ ನೀಡಿದ್ದಾಗ್ಯೂ ಸದರಿ ವಾಹನದ ವಾರಸುದಾರರುಗಳು ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಅಹವಾಲನ್ನು ಮಂಡಿಸಿರುವುದಿಲ್ಲ ಹಾಗೂ ಲಿಖಿತವಾಗಿಯೂ ಸಹ ಏನನ್ನು ನೀಡಿರುವುದಿಲ್ಲ.

ಕರ್ನಾಟಕ ಅರಣ್ಯ ಕಾಯಿದೆ ಕಲಂ 80ರ ಪ್ರಕಾರ ಯಾವುದೇ ಅರಣ್ಯ ಉತ್ಪನ್ನಗಳನ್ನು ಸರ್ಕಾರದ ಪರ ಅಮಾನತ್ತುಪಡಿಸಿಕೊಂಡಲ್ಲಿ ಪ್ರಾಥಮಿಕ ಹಂತದಲ್ಲಿ ಸದರಿ ಸ್ವತ್ತನ್ನು ಸರ್ಕಾರದೆಂದು ಭಾವಿಸಬೇಕಾಗುತ್ತದೆ. ಆಪಾದನೆ ಹೊರಿಸಲ್ಪಟ್ಟ ವ್ಯಕ್ತಿ ಅಮಾನತ್ತುಪಡಿಸಿಕೊಂಡ ಉತ್ಪನ್ನ ತನಗೆ ಸೇರಿದೆ ಎಂಬುದನ್ನು ಸಾಬೀತು ಮಾಡುವ ಹೊಣೆ ಅವರದಾಗಿರುತ್ತದೆ.

ಮುಂದುವರೆದು, ಈ ಮೊಕದ್ದಮೆಗೆ ಸಂಬಂಧಪಟ್ಟಂತೆ ಸಾಕಷ್ಟು ಕಾಲಾವಕಾಶ ಕೊಟ್ಟಿದ್ದರೂ ಸಹ ವಾಹನದ ಮಾಲೀಕರು ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಹಾಜರುಪಡಿಸಲು ವಿಫಲರಾಗಿರುತ್ತಾರೆ. ಅಲ್ಲದೆ ವಾಹನದ ಮಾಲೀಕರಿಗೆ ಮಾಲೀಕತ್ವವನ್ನು ಸಾಭೀತುಪಡಿಸಲು ಸಾಕಷ್ಟು ಕಾಲಾವಕಾಶ ನೀಡಿದರೂ ಮುಂದೆ ಬಾರದೇ ಇರುವುದನ್ನು ನೋಡಿದರೆ ವಾಹನದ ಮಾಲೀಕರು ತನ್ನ ತಿಳುವಳಿಕೆಯಿಂದಲೇ ಈ ಕೃತ್ಯವನ್ನು ಎಸಗಿದ್ದಾರೆಂದು ಭಾವಿಸಬೇಕಾಗಿರುತ್ತದೆ. ದಿನಾಂಕ:24.05.2008ರಂದು ವಾಹನದಲ್ಲಿ ಸಾಗುವಾನಿ ತುಂಡುಗಳನ್ನು ಸಾಗಾಣಿಕೆ ಮಾಡುತ್ತಿದ್ದಾಗ ಫಿರ್ಯಾದುದಾರರು ಪತ್ತೆ ಹಚ್ಚಿ ಸ್ಥಳ ಪಂಚನಾಮೆಯೊಂದಿಗೆ ಈ ಪ್ರಾಧಿಕಾರಕ್ಕೆ ಒಪ್ಪಿಸಿರುತ್ತಾರೆ. ಈ ಪ್ರಾಧಿಕಾರಕ್ಕೆ ಒಪ್ಪಿಸಿದ ಪಂಚನಾಮೆಯನ್ನು ಯಾರೂ ಸಹ ಪ್ರಶ್ನಿಸಿಲ್ಲವಾದ್ದರಿಂದ ಹಾಗೂ ಈ ಪ್ರಕರಣದಲ್ಲಿ ಮಾಲೀಕರು ವಶಪಡಿಸಿಕೊಂಡ ಉತ್ಪನ್ನ ತಮಗೆ ಸೇರಿದವುಗಳೆಂದು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲವಾದ್ದರಿಂದ ಈ ಪ್ರಕರಣದಲ್ಲಿ ಬೀಟೆ ತುಂಡುಗಳು 3=0.072 ಘ.ಮೀ. ಮತ್ತು ಸಾಗುವಾನಿ ಸೈಜುಗಳು 5=0.167 ಘ.ಮೀ. ಅರಣ್ಯ ಕಾಯಿದೆ 80ರಂತೆ ಸರ್ಕಾರದ ಸ್ವತ್ತೆಂದು ಭಾವಿಸಬೇಕಾಗುತ್ತದೆ.

ಆದ್ದರಿಂದ, ದಿನಾಂಕ:24.05.2008 ರಂದು ಟೆಂಪೋ ಟ್ರಾಕ್ಸ್ ನೊಂದಣಿ ಸಂಖ್ಯೆ: ಕೆಎ-17-6570ರಲ್ಲಿ ಅಕ್ರಮವಾಗಿ ಸಾಗುವಾನಿ ತುಂಡುಗಳನ್ನು ಕಾನೂನು ಬಾಹಿರವಾಗಿ ಸಾಗಾಣಿಕೆ ಮಾಡುತ್ತಿರುವುದು ಸಂಬಂಧಪಟ್ಟ ದಾಖಲೆಗಳಿಂದ ದೃಢಪಟ್ಟಿರುವುದರಿಂದ ಇನ್ನು ಹೆಚ್ಚಿನ ಕಾಲಾವಕಾಶ ನೀಡುವುದು ಸೂಕ್ತವಲ್ಲವೆಂದು ಭಾವಿಸಿ, ಸದರಿ ವಾಹನ ಮತ್ತು ಉತ್ಪನ್ನಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಯೋಗ್ಯವೆಂದು ತೀರ್ಮಾನಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿರುತ್ತದೆ.

ವಾಹನದ ಮಾಲಿಕತ್ವವನ್ನು ದೃಢೀಕರಿಸಿ, ವಾಹನವನ್ನು ವಶಕ್ಕೆ ತೆಗೆದುಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಿದರೂ ಯಾರೊಬ್ಬರೂ ವಶಕ್ಕೆ ಇದುವರೆಗೆ ಕೋರದಿರುವುದನ್ನು ನೋಡಿದರೆ ಈ ವಾಹನ ಅಭಯಾರಣ್ಯ ಉತ್ಪನ್ನಗಳ ಕಳ್ಳಸಾಗಾಣಿಕೆಯಲ್ಲಿ ತೊಡಗಿಸಿ ಉಪಯೋಗಿಸಲ್ಪಟ್ಟ ವಾಹನವೆಂದು ದೃಢಪಡುತ್ತದೆ. ವಾಹನದ ಮಾಲೀಕರು ಮಾಲೀಕತ್ವದ ಬಗ್ಗೆ ಮೂಲ ದಾಖಲಾತಿಗಳನ್ನು ಹಾಜರುಪಡಿಸಿ ತಾವು ತಪ್ಪಿತಸ್ಥರಲ್ಲ ಎಂಬುದನ್ನು ಸಾಭೀತುಪಡಿಸಲು ವಿಫಲರಾದ ಕಾರಣ ಮೇಲ್ಕಂಡ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಆದೇಶ ನೀಡಿರುತ್ತೇನೆ.

ಆದೇಶ

ಮೇಲ್ಕಂಡ ವಿದ್ಯಾಮಾನಗಳ ಅನುಸಾರವಾಗಿ ಶ್ರೀಮತಿ ಸ್ಮಿತಾ ಬಿಜ್ಜೂರ್, ಭಾ.ಅ.ಸೇ., ಪ್ರಾಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಶಿವಮೊಗ್ಗ ಆದ ನಾನು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್ 71ಎ ಪ್ರಕಾರ ಈ ಪ್ರಕರಣದಲ್ಲಿ ಅಮಾನತ್ತುಪಡಿಸಿರುವ ಟೆಂಪೊ ಟ್ರಾಕ್ಸ್ ನೊಂದಣಿ ಸಂಖ್ಯೆ: ಕೆಎ-17-6570 (ಎಂಜಿನ್ ಸಂಖ್ಯೆ:D01004147, ಛಾಸೀಸ್ ಸಂಖ್ಯೆ:153001289697) ಬೀಟೆ ತುಂಡುಗಳು 3=0.072 ಘ.ಮೀ. ಮತ್ತು ಸಾಗುವಾನಿ ಸೈಜುಗಳು 5=0.167 ಘ.ಮೀ. ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಂಡಿರುವ ವಾಹನ ಮತ್ತು ಅದರ ಬಿಡಿ ಭಾಗಗಳನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇಮಾಡಲು ಆದೇಶಿಸಿದ್ದೇನೆ. ಸದರಿ ವಾಹನ ಮತ್ತು ಬೀಟೆ ತುಂಡುಗಳು ಹಾಗೂ ಸಾಗುವಾನಿ ಸೈಜುಗಳು ಎಲ್ಲಾ ಋಣಭಾರಗಳಿಂದ ಮುಕ್ತವಾಗಿರುತ್ತದೆ.

ಈ ಆದೇಶವನ್ನು ಹೊರಡಿಸಿದ 30 ದಿನಗಳೊಳಗೆ ವಾಹನದ ವಾರಸುದಾರರು ನಿಯಮಾನುಸಾರ ಮೇಲ್ಮನವಿ ಸಲ್ಲಿಸಿದಿದ್ದರೆ ಇದೇ ಅಂತಿಮ ಆದೇಶವಾಗಿ ಊರ್ಜಿತಗೊಳ್ಳುತ್ತದೆ. ಈ ಆದೇಶವನ್ನು ದಿನಾಂಕ:18.06.2009 ರಂದು ಬೆರಳಚ್ಚಿಸಿ ಈ ನ್ಯಾಯಾಲಯದ ಮೋಹರು ಹಾಕಿ ನನ್ನ ಸಹಿಯೊಂದಿಗೆ ಹೊರಡಿಸಿರುತ್ತೇನೆ.

ಸ್ಮಿತಾ ಬಿಜ್ಜೂರ್, ಭಾ.ಅ.ಸೇ.,
ಪ್ರಾಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ
ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಶಿವಮೊಗ್ಗ.

ಪಿ.ಆರ್.581

ಪ್ರಾಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ನ್ಯಾಯಾಲಯ, ವನ್ಯಜೀವಿ ವಿಭಾಗ, ಶಿವಮೊಗ್ಗ

ಸಂ.ಎ3:ಎಪಿಟಿ:ಅಮೊ:ಟಿವಿಎಸ್‌ಸ್ಟಾರ್‌ಬೈಕ್:ಹವ-0133:2008-09, ದಿನಾಂಕ:18ನೇ ಜೂನ್, 2009

ವಿಷಯ: ಅರಣ್ಯ ಉತ್ಪನ್ನಗಳ ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ್ದಾಗ ಸರ್ಕಾರದ ಪರ ವಶಪಡಿಸಿಕೊಂಡಿರುವ ಟಿವಿಎಸ್ ಸ್ಟಾರ್ ಮೋಟರ್ ಬೈಕ್ಸ್ ನೊಂದಣಿ ಸಂಖ್ಯೆ: ಕೆಎ-14-ಯು-0133 ನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ.

ಉಲ್ಲೇಖ:1) ವಲಯ ಅರಣ್ಯಾಧಿಕಾರಿ, ಹಣಗೆರೆ ವನ್ಯಜೀವಿ ವಲಯ, ಸಿರಿಗೆರೆ ಇವರ ದಿನಾಂಕ:30.10.2007ರ ವರದಿ.

2) ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಶಿವಮೊಗ್ಗ ಇವರ ಪತ್ರ ಸಂಖ್ಯೆ: ಪ್ರಸಾಅಶಿ:ನೊಂ:2007-08, ದಿನಾಂಕ:03.01.2008.

3) ಈ ಪ್ರಾಧಿಕಾರದಿಂದ ವಾಹನದ ಮಾಲೀಕರಿಗೆ ನೀಡಲಾದ ನೋಟೀಸುಗಳ ದಿನಾಂಕ:29.01.2008 ಮತ್ತು 08.12.2008.

ಪ್ರಕರಣದ ಹಿನ್ನೆಲೆ:

ಖಚಿತ ವರ್ತಮಾನದ ಮೇರೆಗೆ ಸಿರಿಗೆರೆ ಶಾಖೆಯ ವನಪಾಲಕರು ಮತ್ತು ಸಿಬ್ಬಂದಿಗಳು ದಿನಾಂಕ:29.10.2007 ರಂದು ಬೆಳಗಿನ ಜಾವ ಕೂಡಿ ಮಸ್ನಾಜಂಗಲಿಯಲ್ಲಿ ಬರುವ ಕೆಂಪುಕಟ್ಟೆ ಜಾಗದಲ್ಲಿ ಇಲಾಖಾ ಜೀಪನ್ನು ಮರೆಯಲ್ಲಿ ನಿಲ್ಲಿಸಿ, ಕಾಯುತ್ತಿರುವಾಗ ಸುಮಾರು 5.00 ಗಂಟೆಯ ಸಮಯದಲ್ಲಿ ಸಾಗುವಾನಿ ನೆಡುತೋಪಿನಿಂದ ಕೆಲವು ಜನರು ತುಂಡುಗಳನ್ನು ಹೊತ್ತು ತಂದು ದಾಸ್ತಾನು ಮಾಡಲು ತೊಡಗಿದಾಗ, ಕಾರ್ಯ ಪ್ರವೃತ್ತರಾದ ಸಿಬ್ಬಂದಿಗಳು ತುಂಡುಗಳ ಸಾಗಾಣಿಕೆಗೆ ಯಾವುದಾದರೂ ವಾಹನ ಬರಬಹುದೆಂದು ಸ್ವಲ್ಪ ಸಮಯ ಕಾದು, ನಂತರ ದಾಸ್ತಾನು ಮಾಡಿದ ತುಂಡುಗಳ ಜಾಗವನ್ನು ಸುತ್ತುವರೆದು ಹತ್ತಿರ ಬರುತ್ತಿದ್ದಂತೆ ಅಲ್ಲಿದ್ದ ಮೂರು ಜನ ಆಸಾಮಿಗಳು ಇಲಾಖಾ ಸಿಬ್ಬಂದಿಗಳನ್ನು ಕಂಡೊಡನೆ ಓಡಲು ಪ್ರಾರಂಭಿಸಿರುತ್ತಾರೆ. ತಕ್ಷಣ ಸಿಬ್ಬಂದಿಗಳು ಅವರನ್ನು ಬೆನ್ನುಹತ್ತಿ ಒಬ್ಬನನ್ನು ಹಿಡಿಯಲು ಸಫಲರಾಗಿದ್ದು, ಎರಡು ಜನ ಕಾಡಿನ ಒಳಗಡೆ ತಪ್ಪಿಸಿಕೊಂಡು ಓಡಿ ಹೋಗಿರುತ್ತಾರೆ. ನಂತರ ದಾಸ್ತಾನಿನ ಬಳಿ ಬಂದು ಕೂಲಂಕುಷವಾಗಿ ಪರಿಶೀಲಿಸಲಾಗಿ, ಸದರಿ ತುಂಡುಗಳು ಸಾಗುವಾನಿ ಜಾತಿಯವುಗಳು ಎಂದು ಕಂಡುಬಂದ ಮೇರೆಗೆ, ಇವುಗಳ ಮೇಲೆ ಯಾವುದೇ ಇಲಾಖಾ ಛಾಪಾ ಅಚ್ಚಿಸಿದ್ದಾರೆಯೇ ಎಂಬುದನ್ನು ಪರಿಶೀಲಿಸಿರುತ್ತಾರೆ. ಸದರಿ ತುಂಡುಗಳ ಮೇಲೆ ಇಲಾಖಾ ಛಾಪ ಇಲ್ಲದಿರುವುದು ಕಂಡುಬಂದಿರುತ್ತದೆ. ಇದರಿಂದ ದಾಸ್ತಾನು ಮಾಡಿದ ತುಂಡುಗಳು ಅಕ್ರಮವಾಗಿ ಕಡಿತಲೆ ಮಾಡಿ ದಾಸ್ತಾನು ಮಾಡಿರುವುದಾಗಿ ದೃಢಪಟ್ಟಿರುತ್ತದೆ. ದಾಸ್ತಾನು ಮಾಡಿದ ತುಂಡುಗಳ ಜಾಗದಿಂದ ಸ್ವಲ್ಪ ದೂರದಲ್ಲಿ ಈ ಅಕ್ರಮ ಕೃತ್ಯಕ್ಕೆ ಬಳಸಲು ನಿಲ್ಲಿಸಿದ್ದ ದ್ವಿಚಕ್ರ ವಾಹನವನ್ನು ಕಂಡು, ಈ ವಾಹನ ಮತ್ತು ಸಾಗುವಾನಿ ತುಂಡುಗಳನ್ನು ಸರ್ಕಾರದ ಪರ ಅಮಾನತ್ತುಪಡಿಸಿ, 1963ರ ಕರ್ನಾಟಕ ಅರಣ್ಯ ಕಾಯಿದೆ ಕಲಂ 24, 62, 71ಎ ಮತ್ತು 1969ರ ಕರ್ನಾಟಕ ಅರಣ್ಯ ಕಾನೂನು ನಿಯಮ 144ರ ಪ್ರಕಾರ (ಅರಣ್ಯ ಮೊಕದ್ದಮೆ ಸಂಖ್ಯೆ: 20/2007-08 ದಿನಾಂಕ:29.10.2007) ಮೊಕದ್ದಮೆ ದಾಖಲಿಸಿ, ಪ್ರಥಮ ಮಾಹಿತಿ ವರದಿ, ಅಮಾನತ್ತು ವರದಿ, ವಾಹನ ಮತ್ತು ಸಾಗುವಾನಿ ತುಂಡುಗಳ ಸಮೇತ ಕರ್ನಾಟಕ ಅರಣ್ಯ ಕಾಯಿದೆ 1963ರ ಕಲಂ 71ಎ ಪ್ರಕಾರ ಮುಂದಿನ ಕ್ರಮ ಕೈಗೊಳ್ಳಲು ಪ್ರಾಧಿಕೃತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವನ್ಯಜೀವಿ ವಿಭಾಗ, ಶಿವಮೊಗ್ಗ ಇವರ ಸಮ್ಮುಖದಲ್ಲಿ ಹಾಜರುಪಡಿಸಿರುತ್ತಾರೆ.

ಈ ಪ್ರಕರಣದ ವಿಚಾರಣಾ ಹಂತದಲ್ಲಿ ಹಿಂದಿನ ಪ್ರಾಧಿಕೃತ ಅಧಿಕಾರಿಯವರು ಈ ವಾಹನದ ಮಾಲೀಕರನ್ನು ತಿಳಿದುಕೊಳ್ಳುವ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಯರೊಂದಿಗೆ ಪತ್ರ ವ್ಯವಹಾರ ನಡೆಸಿರುತ್ತಾರೆ. ಇದೇ ಸಮಯದಲ್ಲಿ ವಾಹನದ ಮೇಲೆ ಮಾಲೀಕತ್ವ ಹೊಂದಿದ ಇತರೆ ವ್ಯಕ್ತಿಗಳು ಯಾರಾದರೂ ಇದ್ದರೆ ಹಾಜರಾಗಲು ಪ್ರಕಟಣೆಯನ್ನು ಸಹ ದಿನಾಂಕ:10.01.2008ರ ಕರ್ನಾಟಕ ರಾಜ್ಯಪತ್ರದ ಭಾಗ-3, ಪುಟ ಸಂಖ್ಯೆ 34ರಲ್ಲಿ ಪ್ರಕಟಿಸಲಾಗಿರುತ್ತದೆ.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಶಿವಮೊಗ್ಗ ಇವರಿಂದ "ಬಿ" ಎಕ್ಸ್ಟ್ರಾಕ್ಟ್ ಪಡೆದು, ವಾಹನದ ಮಾಲೀಕರಿಗೆ ದಿನಾಂಕ:29.01.2008 ಮತ್ತು 08.12.2008 ರಂದು ನೊಂದಾಯಿತ ಅಂಚೆ ಮೂಲಕ ನೋಟೀಸು ಜಾರಿ ಮಾಡಿ, ನೋಟೀಸ್ ತಲುಪಿದ 15 ದಿವಸದೊಳಗಾಗಿ ಈ ಪ್ರಾಧಿಕಾರದ ಮುಂದೆ ವಾಹನದ ಮೂಲಕ ದಾಖಲಾತಿಗಳೊಂದಿಗೆ ಮಾಲೀಕತ್ವದ ಹಕ್ಕು ಬಾಧ್ಯತೆಗಳನ್ನು ಹಾಜರುಪಡಿಸಲು ಹಾಗೂ ಅರಣ್ಯ ಮೊಕದ್ದಮೆ ದಾಖಲಿಸಿರುವ ಬಗ್ಗೆ ಹೇಳಿಕೆ ನೀಡಲು ತಿಳಿಸಲಾಗಿರುತ್ತದೆ. ನೋಟೀಸ್ ಜಾರಿಯಾಗಿರುವುದಕ್ಕೆ ಈ ಪ್ರಾಧಿಕಾರಕ್ಕೆ ಸ್ವೀಕೃತಿಗಳು ಬಂದಿರುತ್ತವೆ. ಹೀಗೆ ನೋಟೀಸ್ ನೀಡಿ ವಾಹನದ ಮಾಲೀಕತ್ವದ ಬಗ್ಗೆ ಮತ್ತು ಅರಣ್ಯ ಮೊಕದ್ದಮೆಯಲ್ಲಿ ವಾಹನ ಸಿಲುಕಿರುವ ಬಗ್ಗೆ ಹೇಳಿಕೆ ನೀಡಲು ಸಾಕಷ್ಟು ಸಮಯಾವಕಾಶ ನೀಡಿದ್ದಾಗ್ಯೂ, ಸದರಿ ವಾಹನದ ಮಾಲೀಕರು ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಅಹವಾಲನ್ನು ಮಂಡಿಸಿರುವುದಿಲ್ಲ ಹಾಗೂ ಲಿಖಿತವಾಗಿಯೂ ಸಹ ಏನನ್ನು ನೀಡಿರುವುದಿಲ್ಲ.

ಕರ್ನಾಟಕ ಅರಣ್ಯ ಕಾಯಿದೆ ಕಲಂ 80ರ ಪ್ರಕಾರ ಯಾವುದೇ ಅರಣ್ಯ ಉತ್ಪನ್ನಗಳನ್ನು ಸರ್ಕಾರದ ಪರ ಅಮಾನತ್ತುಪಡಿಸಿಕೊಂಡಲ್ಲಿ ಪ್ರಾಥಮಿಕ ಹಂತದಲ್ಲಿ ಸದರಿ ಸ್ವತ್ತನ್ನು ಸರ್ಕಾರದೆಂದು ಭಾವಿಸಬೇಕಾಗುತ್ತದೆ. ಆಪಾದನೆ ಹೊರಿಸಲ್ಪಟ್ಟ ವ್ಯಕ್ತಿ ಅಮಾನತ್ತುಪಡಿಸಿಕೊಂಡ ಉತ್ಪನ್ನ ತನಗೆ ಸೇರಿದೆ ಎಂಬುದನ್ನು ಸಾಬೀತು ಮಾಡುವ ಹೊಣೆ ಆಪರದಾಗಿರುತ್ತದೆ.

ಮುಂದುವರೆದು, ಈ ಮೊಕದ್ದಮೆಗೆ ಸಂಬಂಧಪಟ್ಟಂತೆ ಸಾಕಷ್ಟು ಕಾಲಾವಕಾಶ ಕೊಟ್ಟಿದ್ದರೂ ಸಹ ವಾಹನದ ಮಾಲೀಕರು ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಹಾಜರುಪಡಿಸಲು ವಿಫಲರಾಗಿರುತ್ತಾರೆ. ಅಲ್ಲದೆ ವಾಹನದ ಮಾಲೀಕರಿಗೆ ಮಾಲೀಕತ್ವವನ್ನು ಸಾಬೀತುಪಡಿಸಲು ಸಾಕಷ್ಟು ಕಾಲಾವಕಾಶ ನೀಡಿದರೂ ಮುಂದೆ ಬಾರದೇ ಇರುವುದನ್ನು ನೋಡಿದರೆ ವಾಹನದ ಮಾಲೀಕರು ತನ್ನ ತಿಳುವಳಿಕೆಯಿಂದಲೇ ಈ ಕೃತ್ಯವನ್ನು ಎಸಗಿದ್ದಾರೆಂದು ಭಾವಿಸಬೇಕಾಗಿರುತ್ತದೆ. ದಿನಾಂಕ:29.10.2007ರಂದು ಸಾಗುವಾನಿ ತುಂಡುಗಳನ್ನು ಸಾಗಾಣಿಕೆ ಮಾಡಲು ಪ್ರಯತ್ನಿಸುತ್ತಿದ್ದ ಸಂದರ್ಭದಲ್ಲಿ

ಫಿರ್ಯಾದುದಾರರು ಪತ್ತೆ ಹಚ್ಚಿ ಸ್ಥಳ ಪಂಚನಾಮೆಯೊಂದಿಗೆ ಈ ಪ್ರಾಧಿಕಾರಕ್ಕೆ ಒಪ್ಪಿಸಿರುತ್ತಾರೆ. ಈ ಪ್ರಾಧಿಕಾರಕ್ಕೆ ಒಪ್ಪಿಸಿದ ಪಂಚನಾಮೆಯನ್ನು ಯಾರೂ ಸಹ ಪ್ರಶ್ನಿಸಿಲ್ಲವಾದ್ದರಿಂದ ಹಾಗೂ ಈ ಪ್ರಕರಣದಲ್ಲಿ ಮಾಲೀಕರು ವಶಪಡಿಸಿಕೊಂಡ ಉತ್ಪನ್ನ ತಮಗೆ ಸೇರಿದವುಗಳೆಂದು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲವಾದ್ದರಿಂದ ಈ ಪ್ರಕರಣದಲ್ಲಿ ಸಾಗುವಾನಿ ತುಂಡುಗಳು ಅರಣ್ಯ ಕಾಯಿದೆ 80ರಂತೆ ಸರ್ಕಾರದ ಸ್ವತ್ತೆಂದು ಭಾವಿಸಬೇಕಾಗುತ್ತದೆ.

ಆದ್ದರಿಂದ, ದಿನಾಂಕ:29.10.2007ರಂದು ಅಕ್ರಮವಾಗಿ ಸಾಗುವಾನಿ ತುಂಡುಗಳನ್ನು ಸಾಗಾಣಿಕೆ ಮಾಡಲು ಈ ದ್ವಿಚಕ್ರ ವಾಹನವಾದ ಟಿವಿಎಸ್ ಸ್ಟಾರ್ ಡೀಲಕ್ಸ್ ಮೋಟರ್ ಬೈಕ್ ನೊಂದಣಿ ಸಂಖ್ಯೆ: ಕೆಎ-14-ಯು-0133 ನ್ನು ಆರೋಪಿತರು ಈ ಕೃತ್ಯದಲ್ಲಿ ಬಳಸಲು ತಂದಿರುವುದು ದೃಢಪಡುತ್ತದೆ. ನಿಸ್ಸಂಶಯವಾಗಿ ಈ ವಾಹನ ಅರಣ್ಯ ಅಪರಾಧದಲ್ಲಿ ತೊಡಗಿರುವುದು ಸಾಭೀತಾಗುವುದರಿಂದ ಇನ್ನು ಹೆಚ್ಚಿನ ಕಾಲಾವಕಾಶ ನೀಡುವುದು ಸೂಕ್ತವಲ್ಲವೆಂದು ಭಾವಿಸಿ, ಸದರಿ ವಾಹನ ಮತ್ತು ಉತ್ಪನ್ನಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಯೋಗ್ಯವೆಂದು ತೀರ್ಮಾನಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿರುತ್ತದೆ.

ಆದೇಶ

ಮೇಲ್ಕಂಡ ವಿದ್ಯಾಮಾನಗಳ ಅನುಸಾರವಾಗಿ ಶ್ರೀಮತಿ ಸ್ಮಿತಾ ಬಿಜ್ಜೂರ್, ಭಾ.ಅ.ಸೇ., ಪ್ರಾಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಶಿವಮೊಗ್ಗ ಆದ ನಾನು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್ 71ಎ ಪ್ರಕಾರ ಈ ಪ್ರಕರಣದಲ್ಲಿ ಅಮಾನತ್ತುಪಡಿಸಿರುವ ಟಿವಿಎಸ್ ಸ್ಟಾರ್ ಡೀಲಕ್ಸ್ ಮೋಟರ್ ಬೈಕ್ ನೊಂದಣಿ ಸಂಖ್ಯೆ: ಕೆಎ-14-ಯು-0133 (ಎಂಜಿನ್ ಸಂಖ್ಯೆ:0F5H5-1237219, ಛಾಸೀಸ್ ಸಂಖ್ಯೆ:MD625HF5451H13198) ಸಾಗುವಾನಿ ತುಂಡುಗಳು 6=0.248 ಘ.ಮೀ. ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಂಡಿರುವ ವಾಹನ ಮತ್ತು ಅದರ ಬಿಡಿಭಾಗಗಳನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇಮಾಡಲು ಆದೇಶಿಸಿದ್ದೇನೆ. ಸದರಿ ವಾಹನ ಮತ್ತು ಸಾಗುವಾನಿ ತುಂಡುಗಳು ಎಲ್ಲಾ ಋಣಭಾರಗಳಿಂದ ಮುಕ್ತವಾಗಿರುತ್ತದೆ. ಮುಟ್ಟುಗೋಲು ಹಾಕಿಕೊಂಡ ಸಾಗುವಾನಿ ತುಂಡುಗಳನ್ನು ಈ ಪ್ರಕರಣದಲ್ಲಿ ಬಂಧಿಸಿದ ಆರೋಪಿಗಳ ಬಗ್ಗೆ ನ್ಯಾಯಾಲಯದಲ್ಲಿ ದಾಖಲಾಗಿರುವ ಕ್ರಿಮಿನಲ್ ಕೇಸ್ ಮುಕ್ತಾಯವಾಗುವವರೆಗೂ ಕಾಯ್ದಿರಿಸಿಕೊಳ್ಳುವಂತೆ ಆದೇಶಿಸಿದೆ.

ಈ ಆದೇಶವನ್ನು ಹೊರಡಿಸಿದ 30 ದಿನಗಳೊಳಗೆ ವಾಹನದ ವಾರಸುದಾರರು ನಿಯಮಾನುಸಾರ ಮೇಲ್ಮನವಿ ಸಲ್ಲಿಸದಿದ್ದರೆ ಇದೇ ಅಂತಿಮ ಆದೇಶವಾಗಿ ಊರ್ಜಿತಗೊಳ್ಳುತ್ತದೆ. ಈ ಆದೇಶವನ್ನು ದಿನಾಂಕ:18.06.2009 ರಂದು ಬೆರಳಚ್ಚಿಸಿ ಈ ನ್ಯಾಯಾಲಯದ ಮೊಹರು ಹಾಕಿ ನನ್ನ ಸಹಿಯೊಂದಿಗೆ ಹೊರಡಿಸಿರುತ್ತೇನೆ.

ಸ್ಮಿತಾ ಬಿಜ್ಜೂರ್, ಭಾ.ಅ.ಸೇ.,
ಪ್ರಾಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ
ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಶಿವಮೊಗ್ಗ.

ಪಿ.ಆರ್.582

ಜಿಲ್ಲಾ ಅಧಿಕಾರಿ ಹಾಗೂ ಶಿಸ್ತು ಪ್ರಾಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು-ಇವರ ನಡವಳಿಗಳು

ವಿಷಯ: ಶ್ರೀ ಶಿವಪ್ಪ ಎ., ಅಡುಗೆಯವರು, ಹಿಂದುಳಿದ ವರ್ಗಗಳ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಸುಂಕದಕಟ್ಟೆ, ಮಂಗಳೂರು-ಇವರನ್ನು ಸೇವೆಯಿಂದ ವಜಾ ಮಾಡುವ ಕುರಿತು ಅಂತಿಮ ಆದೇಶ.

ಉಲ್ಲೇಖ: 1) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಮಂಗಳೂರು-ಇವರ ಕಛೇರಿ ನೋಟಿಸು ಸಂಖ್ಯೆ: ತಾಪಂಮಂ/ಇಎಸ್‌ಟಿ/ಸಿಆರ್-78/02-03, ದಿನಾಂಕ:28.12.2006, ದಿನಾಂಕ: 18.01.2007, ದಿನಾಂಕ:17.04.2007.

2) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಮಂಗಳೂರು ಇವರ ಕಛೇರಿ ನೋಟಿಸು ಸಂಖ್ಯೆ: ತಾಪಂಮಂ/ಇಎಸ್‌ಟಿ/ಸಿಆರ್-12/07-08, ದಿನಾಂಕ:16.06.2007.

3) ನಿಲಯ ಮೇಲ್ವಿಚಾರಕರು, ಹಿಂದುಳಿದ ವರ್ಗಗಳ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಸುಂಕದಕಟ್ಟೆ, ಮಂಗಳೂರು-ಇವರು ಪತ್ರ ದಿನಾಂಕ:18.04.2007.

4) ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ಕಛೇರಿ ಕಾರಣ ಕೇಳಿಕೆ ನೋಟಿಸು ಸಂಖ್ಯೆ: ಬಿಸಿಎಂ/ವಿನಿ/ಸಿಬ್ಬಂದಿ/ಸಿಆರ್-87/01-02, ದಿನಾಂಕ:26.05.2007.

5) ಪತ್ರಿಕಾ ಪ್ರಕಟಣೆ, ಉದಯವಾಣಿ, ಕನ್ನಡ ದೈನಿಕ, ದಿನಾಂಕ:28.07.2007.

6) ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು-ಇವರ ಕಛೇರಿ ಪತ್ರ ಸಂಖ್ಯೆ: ಬಿಸಿಎಂ/ವಿನಿ/ಸಿಬ್ಬಂದಿ/ಸಿಆರ್-87/01-02, ದಿನಾಂಕ:28.03.2008.

7) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಮಂಗಳೂರು-ಇವರ ಕಛೇರಿ ನೋಟಿಸು ಸಂಖ್ಯೆ: ತಾಪಂಮಂ/ಇಎಸ್‌ಟಿ/ಸಿಆರ್-78/02-03, ದಿನಾಂಕ:28.05.2008.

8) ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು-ಇವರ ಕಛೇರಿ ಪತ್ರ ಸಂಖ್ಯೆ:ಬಿಸಿಎಂ/ವಿನಿ/ಸಿಬ್ಬಂದಿ/ಸಿಆರ್-87/01-02, ದಿನಾಂಕ:31.07.2008.

9) ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು-ಇವರ ಕಛೇರಿ ಪತ್ರ ಸಂಖ್ಯೆ:ಬಿಸಿಎಂ/ವಿನಿ/ಸಿಬ್ಬಂದಿ/ಸಿಆರ್-87/01-02, ದಿನಾಂಕ:10.09.2008, 14.11.2008, 30.12.2008 ಮತ್ತು ದಿನಾಂಕ:31.01.2009.

10) ಪತ್ರಿಕಾ ಪ್ರಕಟಣೆ, ವಿಜಯ ಕರ್ನಾಟಕ, ಕನ್ನಡ ದೈನಿಕ, ದಿನಾಂಕ:05.12.2008.

ಪ್ರಸ್ತಾವನೆ:

ಶ್ರೀ ಶಿವಪ್ಪ ಎ., ಅಡುಗೆಯವರು, ಹಿಂದುಳಿದ ವರ್ಗಗಳ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಸುಂಕದಕಟ್ಟೆ, ಮಂಗಳೂರು-ಇವರು ದಿನಾಂಕ:07.09.2006 ರಿಂದ ಯಾವುದೇ ಮುನ್ಸೂಚನೆಯನ್ನು ನೀಡದೆ ಹಾಗೂ ಮೇಲಾಧಿಕಾರಿಗಳ ಪೂರ್ವಾನುಮತಿಯನ್ನು ಪಡೆಯದೆ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿದ್ದು, ಕೂಡಲೇ ಕರ್ತವ್ಯಕ್ಕೆ ಹಾಜರಾಗುವಂತೆ ಉಲ್ಲೇಖ (1)ರ ದಿನಾಂಕ:28.12.2006 ಮತ್ತು ದಿನಾಂಕ:18.01.2007 ನೋಟೀಸುಗಳಲ್ಲಿ ಸೂಚಿಸಿ ನೋಂದಣಿ ಅಂಚೆ ಮುಖಾಂತರ ಸದರಿಯವರ ವಾಸ್ತವ್ಯದ ಸ್ವವಿಳಾಸಕ್ಕೆ ಕಳುಹಿಸಿಕೊಡಲಾದ ನೋಟೀಸುಗಳು, ಈ ನೌಕರರು ಸ್ವವಿಳಾಸದಲ್ಲಿ ವಾಸವಾಗಿಲ್ಲದ ಕಾರಣ ವಾಪಸ್ಸು ಬಂದಿರುವ ಹಿನ್ನೆಲೆಯಲ್ಲಿ ಈ ನೌಕರರ ಪತ್ನಿ ಶ್ರೀಮತಿ ರಾಧ ಮತ್ತು ಸ್ಥಳೀಯ ಸಾಕ್ಷಿದಾರರ ಸಮ್ಮುಖದಲ್ಲಿ ಉಲ್ಲೇಖ (1)ರ ದಿನಾಂಕ:18.01.2007 ರ ನೋಟೀಸನ್ನು ನಿಲಯ ಮೇಲ್ವಿಚಾರಕರು, ಹಿಂದುಳಿದ ವರ್ಗಗಳ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಸುಂಕದಕಟ್ಟೆ, ಮಂಗಳೂರು-ಇವರು ನೌಕರರ ಮನೆಯ ಗೋಡೆಗೆ ಅಂಟಿಸಿ ಪಂಚರ ಸಹಿಯನ್ನು ಪಡೆದು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಮಂಗಳೂರು-ಇವರಿಗೆ ವರದಿ ಸಲ್ಲಿಸಿರುತ್ತಾರೆ. ಆದರೂ, ನೌಕರರು ಕರ್ತವ್ಯಕ್ಕೆ ಹಾಜರಾಗದೇ ಇದ್ದ ಕಾರಣ, ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಮಂಗಳೂರು-ಇವರು ಉಲ್ಲೇಖ (1)ರ ದಿನಾಂಕ:17.04.2007ರಲ್ಲಿ ಅಂತಿಮ ನೋಟಿಸನ್ನು ನೀಡಿದ್ದು, ಪ್ರತಿಯನ್ನು ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು-ಇವರಿಗೆ ಮುಂದಿನ ಸೂಕ್ತಕ್ರಮಕ್ಕಾಗಿ ಕಳುಹಿಸಿಕೊಟ್ಟಿರುತ್ತಾರೆ. ಅಲ್ಲದೆ, ಶ್ರೀ ಶಿವಪ್ಪ ಎ. ಇವರು ದಿನಾಂಕ:07.09.2006 ರಿಂದ ಅನಧಿಕೃತ ಗೈರುಹಾಜರಿರುವುದಾಗಿ ಉಲ್ಲೇಖ (2)ರಲ್ಲಿ ವರದಿ ಸಲ್ಲಿಸಿರುತ್ತಾರೆ. ಈ ನಡುವೆ ಉಲ್ಲೇಖ (3)ರಲ್ಲಿ, ಅಡುಗೆಯವರಾದ ಶ್ರೀ ಶಿವಪ್ಪ ಎ., ಇವರ ಅನಧಿಕೃತ ಗೈರು ಹಾಜರಿಯಿಂದ ನಿಲಯ ನಿರ್ವಹಣೆಗೆ ತೊಂದರೆ ಉಂಟಾಗುತ್ತಿರುವುದಾಗಿ ನಿಲಯ ಮೇಲ್ವಿಚಾರಕರು, ಹಿಂದುಳಿದ ವರ್ಗಗಳ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಸುಂಕದಕಟ್ಟೆ, ಮಂಗಳೂರು-ಇವರು ಮುಂದಿನ ಸೂಕ್ತಕ್ರಮಕ್ಕಾಗಿ ವರದಿಯನ್ನು ಸಲ್ಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಉಲ್ಲೇಖ (4)ರಲ್ಲಿ, ನೌಕರರ ಅನಧಿಕೃತ ಗೈರು ಹಾಜರಿ ವಿರುದ್ಧ ಕ.ನಾ.ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957ರ ನಿಯಮಾವಳಿಗಳನ್ವಯ ಏಕೆ ಶಿಸ್ತುಕ್ರಮ ಜರುಗಿಸಬಾರದು ಎಂಬುದರ ಬಗ್ಗೆ ನೌಕರರಿಗೆ ಕಾರಣ ಕೇಳಿಕೆ ನೋಟೀಸನ್ನು ನೀಡಲಾಯಿತು ಹಾಗೂ ನೌಕರರು ಈ ಬಗ್ಗೆ ಲಿಖಿತ ಹೇಳಿಕೆಗಳನ್ನೇನಾದರೂ ನೀಡ ಬಯಸಿದಲ್ಲಿ ಲಿಖಿತ ಹೇಳಿಕೆಯನ್ನು ನೀಡಲು ಅವಕಾಶವನ್ನು ಕಲ್ಪಿಸಲಾಯಿತು. ಆದರೆ, ನೌಕರರು ಈ ಮೇಲಿನ ಕಾರಣ ಕೇಳಿಕೆ ನೋಟಿಸಿಗೆ ಯಾವುದೇ ಉತ್ತರ ನೀಡದಿದ್ದ ಕಾರಣ, ಕರ್ತವ್ಯಕ್ಕೆ ಕೂಡಲೇ ಹಾಜರಾಗುವಂತೆ ಪತ್ರಿಕಾ ಪ್ರಕಟಣೆಯನ್ನು ನೀಡಲು ಕ್ರಮವಹಿಸಲಾಯಿತು ಹಾಗೂ ದಿನಾಂಕ:28.07.2007ರ 'ಉದಯವಾಣಿ' ಕನ್ನಡ ದೈನಿಕ ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟಣೆಯನ್ನು ಹೊರಡಿಸಲಾಯಿತು. ಆದಾಗ್ಯೂ ಇವರು ಕರ್ತವ್ಯಕ್ಕೆ ಹಾಜರಾಗಲಿಲ್ಲ.

ದಿನಾಂಕ:07.09.2006 ರಿಂದ ಇವರ ನಿರಂತರ ಅನಧಿಕೃತ ಗೈರು ಹಾಜರಿ ಹಾಗೂ ಈ ಬಗ್ಗೆ ಕಛೇರಿಯಿಂದ ನೀಡಲಾದ ಯಾವುದೇ ನೋಟಿಸಿಗೆ ಪ್ರತಿಕ್ರಿಯೆ ನೀಡದಿರುವುದನ್ನು ಗಂಭೀರವಾಗಿ ಪರಿಗಣಿಸಿ, ಇವರ ಅನಧಿಕೃತ ಗೈರು ಹಾಜರಿಗೆ ಸಂಬಂಧಿಸಿದಂತೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ ನಿಯಮಗಳನ್ವಯ ಶಿಸ್ತುಕ್ರಮವನ್ನು ಜರುಗಿಸಲು ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಅಭಿಪ್ರಾಯಿಸಿದಂತೆ, ಈ ನೌಕರರ ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ಉಲ್ಲೇಖ (6)ರ ನೋಟಿಸಿನಲ್ಲಿ ದೋಷಾರೋಪಣ ಪಟ್ಟಿಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ ನಿಯಮ 11(4)ರನ್ವಯ ಆಪಾದಿತ ನೌಕರರಿಗೆ ಜಾರಿಗೊಳಿಸಲು ಕ್ರಮವಹಿಸಲಾಯಿತು. ಆದರೆ, ನೌಕರರು ಮನೆಯಲ್ಲಿಲ್ಲದ ಕಾರಣ, ನೋಟಿಸಿನ ಪ್ರತಿಯನ್ನು ನೌಕರರ ತಾಯಿ,

ನೌಕರರ ಸಹೋದರರಾದ ಶ್ರೀ ಬಾಬು ಮತ್ತು ನೌಕರರ ಪತ್ನಿ ಶ್ರೀಮತಿ ರಾಧ-ಇವರ ಸಮ್ಮುಖದಲ್ಲಿ ದಿನಾಂಕ:29.04.2008ರಂದು, ನೌಕರರ ಮನೆಯ ಗೋಡೆಗೆ ಅಂಟಿಸಿ ಪಂಚರ ಸಹಿ ಪಡೆದು ಉಲ್ಲೇಖ (7)ರಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಮಂಗಳೂರು-ಇವರು ಸ್ವೀಕೃತಿಯೊಂದಿಗೆ ವರದಿಯನ್ನು ನೀಡಿರುತ್ತಾರೆ. ಆಪಾದಿತ ನೌಕರರು ತಿಳುವಳಿಕೆ ಪತ್ರ ಸ್ವೀಕರಿಸಿದ 15 ದಿನಗಳ ಒಳಗಾಗಿ ಲಿಖಿತ ಹೇಳಿಕೆಯನ್ನು ನೀಡುವಂತೆ ಸೂಚಿಸಲಾಗಿತ್ತು. ಆದರೆ, ಆಪಾದಿತ ನೌಕರರು ಈ ತಿಳುವಳಿಕೆ ಪತ್ರಕ್ಕೆ ಸಮಜಾಯಿಷಿಕೆಯನ್ನು ನೀಡದೇ ಇದ್ದ ಕಾರಣ, ಆಪಾದನೆಗಳ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವ ಸಲುವಾಗಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957ರ ನಿಯಮ 11(5)(ಬಿ) ರನ್ವಯ, ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು-ಆದ ನಾನು ಸ್ವತಃ ಪ್ರಕರಣದ ವಿಚಾರಣೆಯನ್ನು ನಡೆಸಲು ಉದ್ದೇಶಿಸಿದ್ದು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ ನಿಯಮ 11(5)(ಸಿ) ರನ್ವಯ, ಶಿಸ್ತು ಪ್ರಾಧಿಕಾರಿಯ ಮುಂದೆ ಪ್ರಕರಣ/ ವಾದ/ ಪ್ರತಿವಾದವನ್ನು ಮಂಡಿಸಲು ಉಲ್ಲೇಖ (8) ರಲ್ಲಿ ಅಭಿಯೋಕ್ತ ಅಧಿಕಾರಿಯನ್ನಾಗಿ ಶ್ರೀ ಪಿ. ದಯಾನಂದ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ತಾಲ್ಲೂಕು ಪಂಚಾಯತ್, ಸುಳ್ಯ-ಇವರನ್ನು ನೇಮಕ ಮಾಡಲಾಯಿತು. ಅದರಂತೆ, ಪ್ರಕರಣದ ವಿಚಾರಣೆಯನ್ನು ದಿನಾಂಕ:10.09.2008, 14.11.2008, 30.12.2008 ಮತ್ತು ದಿನಾಂಕ:31.01.2009 ರಂದು ನಿಗದಿ ಪಡಿಸಿದಂತೆ, ವಿಚಾರಣೆಗೆ ತಪ್ಪದೇ ಹಾಜರಾಗಲು ಆಪಾದಿತ ನೌಕರರಿಗೆ ಸೂಚಿಸಿ ನೋಂದಣಿ ಅಂಚೆ ಮೂಲಕ ನೋಟೀಸುಗಳನ್ನು ಕಳುಹಿಸಿಕೊಡಲಾಯಿತು. ಆದರೆ ಆಪಾದಿತ ನೌಕರರು ಮನೆಯಲ್ಲಿಲ್ಲದ ಕಾರಣ, ಅಂಚೆ ಕಛೇರಿಗೆ ಬಂದು ಪಡೆದುಕೊಳ್ಳುವಂತೆ ವಿಳಾಸದಾರರಿಗೆ ತಿಳಿಸಲು ಸದರಿಯವರ ಮನೆಯವರಿಗೆ ತಿಳಿಸಲಾಯಿತೆಂದೂ; ಅಂಚೆ ಕಛೇರಿಯಲ್ಲಿ ಆರು ದಿನಗಳವರೆಗೆ ಸದರಿ ಅಂಚೆಯನ್ನು ಕಾಯ್ದಿರಿಸಲಾಯಿತೆಂದೂ; ಆದರೆ, ವಿಳಾಸದಾರರು ಅಂಚೆಯನ್ನು ಪಡೆದುಕೊಂಡಿರುವುದಿಲ್ಲವೆಂಬ ಅಂಚೆ ಕಛೇರಿಯ ಷರಾದೊಂದಿಗೆ ನೋಟೀಸು ವಾಪಸ್ಸು ಬಂದಿರುತ್ತದೆ ಹಾಗೂ ಆಪಾದಿತ ನೌಕರರು ವಿಚಾರಣೆಗೆ ಹಾಜರಾಗಲಿಲ್ಲ. ಈ ಹಿನ್ನೆಲೆಯಲ್ಲಿ, ಉಲ್ಲೇಖ (10)ರಲ್ಲಿ, ದಿನಾಂಕ:05.12.2008ರ ವಿಜಯ ಕರ್ನಾಟಕ, ಕನ್ನಡ ದೈನಿಕದಲ್ಲಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸುವುದರ ಮೂಲಕ ವಿಚಾರಣೆಗೆ ಹಾಜರಾಗುವಂತೆಯೂ; ತಪ್ಪಿದ್ದಲ್ಲಿ, ಆಪಾದಿತ ನೌಕರರ ಅನುಪಸ್ಥಿತಿಯಲ್ಲಿ ಏಕಪಕ್ಷೀಯವಾಗಿ ತೀರ್ಮಾನ ಕೈಗೊಳ್ಳಲಾಗುವುದೆಂದೂ ಆಪಾದಿತರ ನೌಕರರಿಗೆ ಅಂತಿಮವಾಗಿ ಸೂಚಿಸಲಾಯಿತು. ಆದರೂ ಆಪಾದಿತ ನೌಕರರು ವಿಚಾರಣೆಗೆ ಹಾಜರಾಗಲಿಲ್ಲ.

ಆದ್ದರಿಂದ, ಶ್ರೀ ಶಿವಪ್ಪ ಎ., ಅಡುಗೆಯವರು, ಹಿಂದುಳಿದ ವರ್ಗಗಳ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಸುಂಕದಕಟ್ಟೆ, ಮಂಗಳೂರು-ಇವರ ನಿರಂತರ ಅನಧಿಕೃತ ಗೈರು ಹಾಜರಿಯ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ ನಿಯಮ 11(20) ರನ್ವಯ, ನಿಲಯದ ಹಾಜರಾತಿ ವಹಿ, ವೇತನ ಬಟವಾಡೆ ವಹಿ, ಸಾಕ್ಷಿ ಹೇಳಿಕೆಗಳು ಹಾಗೂ ಲಭ್ಯವಿರುವ ಇನ್ನಿತರ ದಾಖಲೆಗಳು/ ವಹಿಗಳನ್ನು ಪರಿಶೀಲಿಸಲಾಗಿ, ಈ ಕೆಳಕಂಡ ಅಂಶಗಳು ಶಿಸ್ತುಪ್ರಾಧಿಕಾರಿಯ ಗಮನಕ್ಕೆ ಬಂದಿರುತ್ತದೆ:

ಆಪಾದಿತ ನೌಕರರು ದಿನಾಂಕ:01.10.2006 ರಿಂದ ಈವರೆಗೆ ಅಂದರೆ ದಿನಾಂಕ:31.03.2009 ರವರೆಗೆ ಒಟ್ಟು 912 ದಿನಗಳು ಯಾವುದೇ ಮುನ್ಸೂಚನೆಯನ್ನು ನೀಡದೆ ಹಾಗೂ ಮೇಲಾಧಿಕಾರಿಗಳ ಪೂರ್ವಾನುಮತಿಯನ್ನು ಪಡೆಯದೆ ಕರ್ತವ್ಯಕ್ಕೆ ನಿರಂತರವಾಗಿ ಅನಧಿಕೃತ ಗೈರು ಹಾಜರಾಗಿರುವುದು; ಇವರು ಕರ್ತವ್ಯದಲ್ಲಿ ಅನಾಸಕ್ತರಾಗಿರುವುದನ್ನು ತೋರಿಸುತ್ತದೆ. ಮಾತ್ರವಲ್ಲದೆ, ನಿಲಯದ ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ಊಟೋಪಚಾರಗಳನ್ನು ನೀಡುವಂಥಹ ಗುರುತರವಾದ ಜವಾಬ್ದಾರಿಯನ್ನು ಹೊಂದಿರುವ ಅಡುಗೆಯವರಾದ ಶ್ರೀ ಶಿವಪ್ಪ ಎ. ಇವರು ಅನಧಿಕೃತ ಗೈರು ಹಾಜರಾಗುವ ಮೂಲಕ ನಿಲಯದ ನಿರ್ವಹಣೆಗೆ ತೊಂದರೆಯನ್ನುಂಟು ಮಾಡಿರುವುದು ತೀವ್ರತರವಾದ ದುರ್ನಡತೆಯಾಗಿರುತ್ತದೆ ಮತ್ತು ಇವರು ನಾಲ್ಕು ತಿಂಗಳಿಗೂ ಮೀರಿ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿರುವುದು ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರ ನಿಯಮ 108ರ ಪ್ರಕಾರ ಸರ್ಕಾರಿ ಸೇವೆಯಿಂದ ವಜಾ ಮಾಡಬಹುದಾದ ಅಥವಾ ತೆಗೆದುಹಾಕಬಹುದಾದ ಪ್ರಕರಣವಾಗಿರುತ್ತದೆ.

ಆದ್ದರಿಂದ, ಈ ಪ್ರಕರಣದಲ್ಲಿ, ಶ್ರೀ ಶಿವಪ್ಪ ಎ., ಅಡುಗೆಯವರು, ಹಿಂದುಳಿದ ವರ್ಗಗಳ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಸುಂಕದಕಟ್ಟೆ, ಮಂಗಳೂರು-ಇವರು ದಿನಾಂಕ:01.10.2006 ರಿಂದ ದಿನಾಂಕ:31.03.2009 ರವರೆಗೆ ಒಟ್ಟು 912 ದಿನಗಳು ಅಂದರೆ ನಾಲ್ಕು ತಿಂಗಳಿಗೂ ಹೆಚ್ಚಿನ ಅವಧಿಗೆ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿದ್ದು, ಆಪಾದಿತ ನೌಕರರ ಈ ಮೇಲಿನ ಅನಧಿಕೃತ ಗೈರು ಹಾಜರಾತಿ ಹಾಗೂ ದುರ್ನಡತೆ ಆರೋಪ ರುಜುವಾತಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957ರ ನಿಯಮ-8(viii)ರ ಕಠಿಣ ದಂಡನೆಯನ್ನು ವಿಧಿಸಲು ನಿರ್ಧರಿಸಿದ್ದು, ಪ್ರಯುಕ್ತ ಈ ಕೆಳಕಂಡ ಆದೇಶ:

ಆದೇಶ

ಸಂಖ್ಯೆ: ಬಿಸಿಎಂ/ವಿನಿ/ಸಿಬ್ಬಂದಿ/ಸಿಆರ್-87/01-02, ದಿನಾಂಕ:31ನೇ ಮಾರ್ಚ್, 2009

9. ನೇಮಕಾತಿ ಕುರಿತು ಅರ್ಜಿದಾರರು ಈ ಕಾರ್ಯಾಲಯಕ್ಕೆ ಯಾವುದೇ ಪತ್ರ ವ್ಯವಹಾರ ಮಾಡಲು ಅವಕಾಶ ಇರುವುದಿಲ್ಲ. ವಿಳಾಸ ಬದಲಾವಣೆ ಇದ್ದಲ್ಲಿ ಅಭ್ಯರ್ಥಿಗಳು ಲಿಖಿತ ಮನವಿಯ ಮೂಲಕ ಗದಗ ಜಿಲ್ಲಾಧಿಕಾರಿಗಳ ಕಚೇರಿಯ ಗಮನಕ್ಕೆ ತರತಕ್ಕದ್ದು. ಈ ವಿಳಾಸ ಬದಲಾವಣೆಯನ್ನು ಪರಿಗಣಿಸಲು ನೇಮಕಾತಿ ಪ್ರಾಧಿಕಾರವು ಪ್ರಯತ್ನಿಸುವುದು. ಆದಾಗ್ಯೂ ಈ ವಿಚಾರದಲ್ಲಿ ನೇಮಕಾತಿ ಪ್ರಾಧಿಕಾರವು ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ. ಈ ಬಗ್ಗೆ ಅಭ್ಯರ್ಥಿಗಳು ಎಚ್ಚರವಹಿಸತಕ್ಕದ್ದು.
10. ಮೇಲಿನ ಹುದ್ದೆಗಳಿಗೆ ನೇಮಕಾತಿ ಬಗ್ಗೆ ಅಂತಿಮ ತೀರ್ಮಾನವನ್ನು ನೇಮಕಾತಿ ಪ್ರಾಧಿಕಾರಿಯಾದ ಜಿಲ್ಲಾಧಿಕಾರಿಗಳು ಗದಗ ಇವರು ಕಾಯ್ದಿರಿಸಿಕೊಂಡಿರುತ್ತಾರೆ.
11. ಪ.ಜಾತಿ/ ಪ.ಪಂಗಡ ಮತ್ತು ಪ್ರವರ್ಗ-1 ಹಾಗೂ ಅಂಗವಿಕಲ ಅಭ್ಯರ್ಥಿಗಳು ರೂ.100 ಹಾಗೂ ಇತರರಿಗೆ ರೂ.200 ಗಳಿಗೆ ಬ್ಯಾಂಕ್ ಡಿ.ಡಿಯನ್ನು **"Secretary, V.A.R.C. GADAG"** ಇವರ ಹೆಸರಿಗೆ ಗದಗದಲ್ಲಿ

ಪಾವತಿಸುವಂತೆ ಪಡೆದು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು ಮತ್ತು ಡಿ.ಡಿ.ಗಳನ್ನು ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮಾತ್ರ ಖರೀದಿಸತಕ್ಕದ್ದು. ಹಾಗೂ ಡಿ.ಡಿ. ಹಿಂದೆ ಅಭ್ಯರ್ಥಿಯ ಹೆಸರು ಮತ್ತು ವಿಳಾಸವನ್ನು ತಪ್ಪದೇ ನಮೂದಿಸತಕ್ಕದ್ದು. ಡಿ.ಡಿ. ಗಳನ್ನು ಲಗತ್ತಿಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

12. ಸಹಿ ಮಾಡದಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

13. ಅಂಚೆ ವಿಳಂಬಕ್ಕೆ ನೇಮಕಾತಿ ಪ್ರಾಧಿಕಾರವು ಜವಾಬ್ದಾರರಾಗುವುದಿಲ್ಲ.

14. **ಜಾತಿ/ಮೀಸಲಾತಿ ಪ್ರಮಾಣ ಪತ್ರಗಳು.**

ಜಾತಿ ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು

ಎ) ಪ.ಜಾ/ಪ.ಪಂ. ಅಭ್ಯರ್ಥಿಗಳು ನಮೂನೆ 'ಡಿ' ರಲ್ಲಿ

ಬಿ) ಪ್ರವರ್ಗ-1ರ ಅಭ್ಯರ್ಥಿಗಳು ನಮೂನೆ 'ಇ' ನಲ್ಲಿ ಹಾಗೂ

ಸಿ) 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು ನಮೂನೆ 'ಎಫ್' ನಲ್ಲಿ ಸಂಬಂಧಿತ ತಹಶೀಲ್ದಾರರವರಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು. ಈ ಪ್ರಮಾಣ ಪತ್ರವು, ಈ ಹುದ್ದೆಗೆ ಅರ್ಜಿ ಸಲ್ಲಿಸಲು ನಿಗದಿ ಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು ಹಾಗೂ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರಬೇಕು. ನಂತರ ಪಡೆದ ಪ್ರಮಾಣ ಪತ್ರಗಳನ್ನು ಪರಿಗಣಿಸುವುದಿಲ್ಲ. ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಅಧಿಸೂಚನೆಯ ಕೊನೆಯಲ್ಲಿ ನೀಡಲಾಗಿರುತ್ತದೆ.

ಜಾತಿ ಮೀಸಲಾತಿ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರದ ಬಗ್ಗೆ ಜಿಲ್ಲಾಧಿಕಾರಿಗಳು (ಅಧ್ಯಕ್ಷರು ಮತ್ತು ಜಾತಿ ಆದಾಯ ಪರಿಶೀಲನಾ ಸಮಿತಿ) ರವರಿಂದ ಸಿಂಧುತ್ವ ಪ್ರಮಾಣ ಪತ್ರ ಪಡೆದ ನಂತರ ನೇಮಕಾತಿ ಆದೇಶ ನೀಡಲಾಗುವುದು.

15. **ಯೋಜನೆ ನಿರಾಶ್ರಿತರಾದ ಕುಟುಂಬದ ಅಭ್ಯರ್ಥಿಗಳು:**

ಸರಕಾರಿ ಆದೇಶ ನಂ. ಸಿಆಸುಇ/71/ಸೇನೆನಿ/2001 ದಿನಾಂಕ 24-10-2002 ರನ್ವಯ ಶೇಕಡಾ 5 ರಷ್ಟು ಹುದ್ದೆಗಳನ್ನು ಯೋಜನಾ ನಿರಾಶ್ರಿತರ ಗುಂಪಿಗೆ ಮೀಸಲಿಡಲಾಗಿದೆ, ಈ ಹುದ್ದೆಗಳನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು ಸಂಬಂಧಿಸಿದ ತಹಶೀಲ್ದಾರರಿಂದ ಪ್ರಮಾಣ ಪತ್ರ ಪಡೆದು ಲಗತ್ತಿಸಬೇಕು.

16. **ಮಾಜಿ ಸೈನಿಕರು**

(ಎ) ಮಾಜಿ ಸೈನಿಕ ಎಂದರೆ ಸಶಸ್ತ್ರದಳಗಳಾದ ನಿಯಮಿತ ಭೂದಳ, ನೌಕಾದಳ ಮತ್ತು ವಾಯುದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಅಯೋಧನಾಗಿ) ಸೇವೆ ಸಲ್ಲಿಸಿದ ವ್ಯಕ್ತಿ, ಅಂದರೆ ಡಿಫೆನ್ಸ್ ಸೆಕ್ಯುರಿಟಿಯೇಟರ್, ಜನರಲ್ ರಿಸರ್ವ್ ಇಂಜಿನೀಯರಿಂಗ್ ಫೋರ್ಸ್, ಲೋಕಸಹಾಯಕ ಸೇನಾ ಮತ್ತು ಪ್ಯಾರಾ ಮಿಲಿಟರಿ ದಳಗಳಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಸೇರ್ಪಡೆಯಾಗುವುದಿಲ್ಲ: ಮತ್ತು

(ಬಿ) ಕೇಂದ್ರ ಸಶಸ್ತ್ರ ದಳಗಳಲ್ಲಿ ಸೇವೆ ಸಲ್ಲಿಸುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ದೈಹಿಕ ಅಂಗವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು (ಸಂಧರ್ಭಾನುಸಾರ ಹೆಂಡತಿ ಅಥವಾ ಗಂಡ ಮತ್ತು ಮಲ ಮಕ್ಕಳು) ಮಾಜಿ ಸೈನಿಕ ಮೀಸಲಾತಿಗೆ ಅರ್ಹರಾಗುತ್ತಾರೆ. ಆದರೆ ಅಂತಹವರುಗಳಿಗೆ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದಿಲ್ಲ.

(ಅ) ಅಂತಹ ಸೇನೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ

ಅಥವಾ

(ಆ) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಯಿಂದ ಬಿಡುಗಡೆಯಾದ ಅಥವಾ ವ್ಯಕ್ತಿಯ ಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಸೇವೆಯಲ್ಲಿ ಬಿಡುಗಡೆಯಾದವನು

ಅಥವಾ

(ಇ) ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇನೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ.

ಅಥವಾ

(ಈ) ತನ್ನ ಸ್ವಂತ ಕೋರಿಕೆ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದ ತೆಗೆದುಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ಧಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿಯವರು.

1) ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರರು

2) ಮಿಲಿಟರಿ ಸೇವೆಯಿಂದಾಗಿ ಉಂಟಾದ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ವ್ಯಕ್ತಿ.

3) ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು.

ವಿವರಣೆ:- ಕೇಂದ್ರ ಸಶಸ್ತ್ರ ದಳದ ಸೇವೆಯಲ್ಲಿ ವ್ಯಕ್ತಿಗಳು ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಉದ್ಯೋಗಕ್ಕೆ ಅರ್ಜಿ ಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿ ಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲ್ಪಾಗಿದೆ. ಅಂದರೆ, ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವವರೆಗೆ ರಾಜ್ಯ ನಾಗರೀಕ ಸೇವೆ ಅಥವಾ ಹುದ್ದೆಗಳಿಗೆ ನೇಮಕ ಹೊಂದುವಂತಿಲ್ಲ.

17. **ಅಂಗವಿಕಲ ಅಭ್ಯರ್ಥಿಗಳು:**

ಸರಕಾರದ ಅಧಿಸೂಚನೆ ಕ್ರಮಾಂಕ: ಡಿಪಿಎಆರ್/52/ಎಸ್‌ಆರ್‌ಆರ್/99 ದಿನಾಂಕ: 29-11-2002 ರನ್ವಯ ಕಂದಾಯ ಇಲಾಖೆಯ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳಿಗೆ ಗುರುತಿಸಲಾದ ಅಂಗವಿಕಲತೆಯನ್ನು ಹೊಂದಿರುವ ಅಂದರೆ, **ಕುಷ್ಟರೋಗದಿಂದ ಗುಣಮುಖರಾದವರು, ಶ್ರವಣದೋಷವುಳ್ಳವರು ಹಾಗೂ ಮಾನಸಿಕ ಅಸ್ವಸ್ಥತೆಯನ್ನು ಹೊಂದಿದವರನ್ನು** ಮಾತ್ರ ನೇಮಕಾತಿಗೆ ಪರಿಗಣಿಸಲಾಗುವುದು.

ರಾಜ್ಯದ ಸರಕಾರಿ ಜಿಲ್ಲಾ ಮತ್ತು ತಾಲೂಕು ಆಸ್ಪತ್ರೆಗಳಲ್ಲಿರುವ ವೈದ್ಯರು ಅಂಗವಿಕಲರಿಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡಲು ಪ್ರಾಧಿಕಾರ ಹೊಂದಿರುವರಾಗಿರುತ್ತಾರೆ. ಸರಕಾರದ ಆದೇಶ ನಂ. ಸಿಆಸುಇ/115/ಸೆನೆನಿ/2005 ದಿನಾಂಕ 19-11-2005 ರಲ್ಲಿ ನಿಗಧಿಪಡಿಸಿರುವ ವೈದ್ಯಕೀಯ ಪ್ರಮಾಣ ಪತ್ರ ಮತ್ತು ಅಂಗವಿಕಲತೆ ಪ್ರಮಾಣ ಪತ್ರವು ಶೇಕಡಾ 40 ರಿಂದ 75 ಕ್ಕಿಂತ ಹೆಚ್ಚಾಗಿರಬಾರದು. ಈ ಪ್ರಮಾಣ ಪತ್ರವನ್ನು ಅರ್ಜಿ ಸ್ವೀಕರಿಸಲು ನಿಗದಿ ಪಡಿಸಿರುವ ಕಡೆಯ ದಿನಾಂಕದೊಳಗೆ ಅಭ್ಯರ್ಥಿಯು ಪಡೆದುಕೊಂಡಿರಬೇಕು.

18. **ಗ್ರಾಮೀಣ ಅಭ್ಯರ್ಥಿಗಳು:**

ಅ) ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು. ಈ ಪ್ರಮಾಣ ಪತ್ರಗಳು ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಿಂಧುವಾಗಿದ್ದು, ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

ಆ) ಗ್ರಾಮೀಣ ಮೀಸಲಾತಿಯನ್ನು ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, 2ಎ, 2ಬಿ, 3ಎ, 3ಬಿ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ನಮೂನೆ 2 ರಲ್ಲಿ ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು.

ಇ) ಗ್ರಾಮೀಣ ಮೀಸಲಾತಿ ಕೋರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ-2 ರ ಮೀಸಲಾತಿ ಪ್ರಮಾಣಪತ್ರದ ಜೊತೆಗೆ ನಮೂನೆ-1 ರಲ್ಲಿ ಅವರು ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಂಬಂದಿಸಿದ ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು.

ಈ) ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, 2ಎ, 2ಬಿ, 3ಎ, 3ಬಿ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳ ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ ಅವರು ಗ್ರಾಮೀಣ ಮೀಸಲಾತಿಗೂ ಅನರ್ಹರಾಗುತ್ತಾರೆ.

ಸೂಚನೆ: ಗ್ರಾಮೀಣ ಮೀಸಲಾತಿಗೆ ಸಂಬಂಧಿಸಿದಂತೆ ನಮೂನೆ-2ರ ಪ್ರಮಾಣ ಪತ್ರವನ್ನು ಅಭ್ಯರ್ಥಿಗಳು ತಾವು ವ್ಯಾಸಂಗ ಮಾಡಿದ ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಅದಕ್ಕೆ ಸಂಬಂಧಿತ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಪಡೆದಿರತಕ್ಕದ್ದು.

19. **ಕನ್ನಡ ಮಾಧ್ಯಮ ಅಭ್ಯರ್ಥಿಗಳು:**
ಸರಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್/71/ಎಸ್.ಆರ್.ಆರ್/2001 ದಿನಾಂಕ 24-10-2002 ರಲ್ಲಿ ಹೊರಡಿಸಿದ ಕರ್ನಾಟಕ ಸರಕಾರಿ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ (9) (1) (ಸಿ) ರ ಅನ್ವಯ ಅಭ್ಯರ್ಥಿಯು 1 ರಿಂದ 10 ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುತ್ತಾರೆ ಎನ್ನುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರಿಂದ ಸಹಿ ಹಾಗೂ ಮೊಹರು ಮಾಡಿದ ಪ್ರಮಾಣ ಪತ್ರದ ಪ್ರತಿಯೊಂದಿಗೆ ಲಗತ್ತಿಸಬೇಕು.

20. **ಅರ್ಹತಾ ಷರತ್ತುಗಳು:**

ಅ) ಭಾರತೀಯ ನಾಗರಿಕನಾಗಿರತಕ್ಕದ್ದು.

ಆ) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆಂತಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

ಇ) ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ನೇಮಕಾತಿ ಪ್ರಾಧಿಕಾರವು ಕಾಯ್ದಿರಿಸಿಕೊಳ್ಳಲಾಗಿದೆ.

ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

21. **ಕೆಳಕಂಡ ದೃಢೀಕೃತ ದಾಖಲೆಗಳನ್ನು ಅರ್ಜಿಯ ಜೊತೆಗೆ ಲಗತ್ತಿಸಲಾಗಿದೆ ಎಂದು ಅಭ್ಯರ್ಥಿಗಳು ಖಚಿತಪಡಿಸಿಕೊಳ್ಳಬೇಕು.**
1) ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಅಂಕ ಪಟ್ಟಿ. (ಕಡ್ಡಾಯ)
2) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ ವರ್ಗಾವಣೆಯ ಪ್ರಮಾಣ ಪತ್ರ/ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ. (ಕಡ್ಡಾಯ)
3) ಸೈನಿಕ ಸೇವೆಯಿಂದ ಬಿಡುಗಡೆಯಾದ/ಮುಕ್ತಿಹೊಂದಿದ ಬಗೆಗಿನ ಪ್ರಮಾಣ ಪತ್ರ. (ಮಾಜಿ ಸೈನಿಕನಾಗಿದ್ದು, ಮೀಸಲಾತಿ ಕೋರಿದ್ದಲ್ಲಿ)
4) ಪ.ಜಾತಿ/ಪ.ಪಂಗಡ, ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-2ಬಿ, ಪ್ರವರ್ಗ-3ಎ, ಪ್ರವರ್ಗ-3ಬಿ ಗಳ ಪ್ರಮಾಣ ಪತ್ರಗಳು (ಮೀಸಲಾತಿ ಕೋರಿದ್ದಲ್ಲಿ)
5) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ-1 ಮತ್ತು 2 ರಲ್ಲಿ (ಮೀಸಲಾತಿ ಕೋರಿದ್ದಲ್ಲಿ)
6) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದಲ್ಲಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)
7) ಅಂಗವಿಕಲ ಮೀಸಲಾತಿ ಪ್ರಮಾಣ ಪತ್ರ. (ಮೀಸಲಾತಿ ಕೋರಿದ್ದಲ್ಲಿ)
8) ಯೋಜನೆಗಳಿಂದ ನಿರಾಶ್ರಿತರಾದ ಬಗ್ಗೆ ಪ್ರಮಾಣ ಪತ್ರ. (ಮೀಸಲಾತಿ ಕೋರಿದ್ದಲ್ಲಿ)
9) ವಿಧವೆಯಾದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ. (ವಯೋಮಿತಿ ಸಡಿಲಿಕೆ ಕೋರಿದ್ದಲ್ಲಿ)

22. **ಇತರೆ ಸೂಚನೆಗಳು:**
ಅಭ್ಯರ್ಥಿಗಳು ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಛಾಯಾ ಪ್ರತಿಯನ್ನು ಮಾಹಿತಿಗಾಗಿ ತಮ್ಮೊಂದಿಗೆ ಇಟ್ಟುಕೊಳ್ಳಲು ಸೂಚಿಸಿದೆ.

ಜಿಲ್ಲಾಧಿಕಾರಿಗಳು, ಗದಗ ಹಾಗೂ ಅಧ್ಯಕ್ಷರು,
ಗದಗ ಜಿಲ್ಲಾ ಗ್ರಾಮಲೆಕ್ಕಾಧಿಕಾರಿಗಳ ನೇಮಕಾತಿ ಸಮಿತಿ, ಗದಗ

ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗೆ
ನೇರ ನೇಮಕಾತಿಗಾಗಿ ಅರ್ಜಿ ನಮೂನೆ.

ಅರ್ಜಿದಾರರ ಭಾವಚಿತ್ರ
(ಭಾವಚಿತ್ರಕ್ಕೆ ಅರ್ಜಿದಾರರು ಅರ್ಜಿ ಹಾಗೂ ಫೋಟೋ ಮೇಲೆ ಬರುವಂತೆ ಸಹಿ ಮಾಡಬೇಕು)

ಕಾರ್ಯದರ್ಶಿಗಳು
ಗ್ರಾಮಲೆಕ್ಕಾಧಿಕಾರಿಗಳ ನೇರ ನೇಮಕಾತಿ ಸಮಿತಿ
ಹಾಗೂ ಅಪರ ಜಿಲ್ಲಾಧಿಕಾರಿಗಳು, ಗದಗ ಇವರಿಗೆ
ಮಾನ್ಯರೇ,
ಗದಗ ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ತಾವು ಪ್ರಕಟಿಸಿದ ಅಧಿಸೂಚನೆ ಸಂಖ್ಯೆ:ಸಿಬ್ಬಂದಿ-1/ವಹಿ/78/2009-10. ದಿನಾಂಕ 26-9-2009 ನೇದ್ದರನ್ವಯ ನಾನು ಈ ಕೆಳಗಿನ ವಿವರಗಳೊಂದಿಗೆ ಅರ್ಜಿಯನ್ನು ಸಲ್ಲಿಸುತ್ತಿದ್ದೇನೆ.

ಡಿ.ಡಿ.ಪಡೆದ ಬ್ಯಾಂಕಿನ ಹೆಸರು	ಸಂದಾಯ ಮಾಡಿದ ಮೊತ್ತ	ಡಿಡಿ.ಸಂಖ್ಯೆ & ದಿನಾಂಕ

1. ಅರ್ಜಿದಾರನ /ಳ ಪೂರ್ಣ ಹೆಸರು:	
2. ತಂದೆ/ಪೋಷಕರ ಹೆಸರು:	
4. ಖಾಯಂ ವಿಳಾಸ:	
5. ಅಂಚೆ ವಿಳಾಸ:	
6. ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ:	

7. ಲಿಂಗ	ಪುರುಷ		ಮಹಿಳೆ	

8. ಜನ್ಮ ದಿನಾಂಕ (ಎಸ್.ಎಸ್.ಎಲ್.ಸಿ. ಅಂಕ ಪಟ್ಟಿಯಲ್ಲಿರುವಂತೆ)	ದಿನಾಂಕ		ತಿಂಗಳು		ವರ್ಷ			
9. ವಯಸ್ಸು (ಅರ್ಜಿ ಸಲ್ಲಿಸಲು ಗೊತ್ತುಪಡಿಸಿದ ಕೊನೆಯ ದಿನಾಂಕಕ್ಕೆ ಇದ್ದಂತೆ)								

10) ಮೀಸಲಾತಿ ಕೋರಿದ್ದಲ್ಲಿ ಅನ್ವಯಿಸುವ ಬ್ಲಾಕ್‌ನಲ್ಲಿ ( ) ಗುರುತು ಹಾಕಿ (ಧೃಡೀಕರಣ ಪತ್ರಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು).

ಅ) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದವರೇ	ಪ.ಜಾ.	ಪ.ಪಂ.	ಉಪ ಜಾತಿ ನಮೂದಿಸಬೇಕು

ಆ) ಹಿಂದುಳಿದ ವರ್ಗದವರೇ	ಪ್ರ-1	2ಎ	2ಬಿ	3ಎ	3ಬಿ	ಉಪಜಾತಿ

ಇ) ಸಾಮಾನ್ಯ ವರ್ಗದವರೇ	ಹೌದು	ಇಲ್ಲ

ಈ) ಇತರೆ ಮೀಸಲಾತಿ	ಗ್ರಾಮೀಣ ಅಭ್ಯರ್ಥಿ	ಕನ್ನಡ ಮಾಧ್ಯಮ ಅಭ್ಯರ್ಥಿ	ಅಂಗ ವಿಕಲ ಅಭ್ಯರ್ಥಿ	ಯೋಜನಾ ನಿರಾಶ್ರಿತ ಅಭ್ಯರ್ಥಿ	ಮಾಜಿ ಸೈನಿಕ	ಮಹಿಳಾ ಅಭ್ಯರ್ಥಿ

11) ವಿಧವೆಯರೇ	ಹೌದು	ಇಲ್ಲ

13) ಸರಕಾರಿ ಸೇವೆಯಲ್ಲಿರುವವರೇ (ಹೌದಾದಲ್ಲಿ ಮೇಲಾಧಿಕಾರಿಗಳ ಪ್ರಮಾಣ ಪತ್ರ ಲಗತ್ತಿಸಬೇಕು)	ಹೌದು	ಇಲ್ಲ

14) ವಿದ್ಯಾರ್ಹತೆ

ವಿದ್ಯಾರ್ಹತೆ ವಿವರಗಳು	ಒಟ್ಟು ಅಂಕಗಳು	ಗಳಿಸಿದ ಅಂಕಗಳು	ಶೇಕಡಾ
ಪಿಯುಸಿ			
ಹನ್ನೆರಡನೇ ಇಯತ್ತೆ (CBSE) / ICSE			

15) ಈ ಅರ್ಜಿಗೆ ಲಗತ್ತಿಸಿದ ದಾಖಲೆಗಳ ಪಟ್ಟಿ		ಲಗತ್ತಿಸಿದೆ	ಲಗತ್ತಿಸಿಲ್ಲ
1	ಪಿಯುಸಿ ಅಥವಾ ಹನ್ನೆರಡನೇ ಇಯತ್ತೆ (CBSE) ಅಥವಾ ICSE ಅಂಕಪಟ್ಟಿ		
2	ಎಸ್.ಎಸ್.ಎಲ್.ಸಿ. ಪ್ರಮಾಣ ಪತ್ರ ಅಥವಾ ಜನ್ಮ ದಾಖಲೆಯನ್ನು ದೃಢೀಕರಿಸುವ ಇತರೆ ದಾಖಲೆ		

3	ನಿಗದಿತ ಮೊತ್ತದ ಡಿ.ಡಿ.		
4	ಜಾತಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)		
5	ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)		
6	ಕನ್ನಡ ಮಾಧ್ಯಮ ಅಭ್ಯರ್ಥಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)		
7	ಅಂಗವಿಕಲ ಅಭ್ಯರ್ಥಿ ಪ್ರಮಾಣ ಪತ್ರ(ಮೀಸಲಾತಿ ಕೋರಿದ್ದಲ್ಲಿ)		
8	ಯೋಜನಾ ನಿರಾಶ್ರಿತ ಅಭ್ಯರ್ಥಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)		
9	ಮಾಜಿ ಸೈನಿಕ ದೃಢೀಕರಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)		
10	ಮೇಲಾಧಿಕಾರಿಗಳ ಪ್ರಮಾಣ ಪತ್ರ (ಸರಕಾರಿ ನೌಕರರಿಗೆ ಮಾತ್ರ)		
11	ವಿಧವಾ ಪ್ರಮಾಣ ಪತ್ರ (ವಯೋಮಿತಿ ಸಡಿಲಿಕೆ ಕೋರಿದ್ದಲ್ಲಿ)		

ನನಗೆ ತಿಳಿದಿರುವಂತೆ ಮೇಲಿನ ಮಾಹಿತಿಯು ನಿಜವೆಂದು ಪ್ರಮಾಣೀಕರಿಸುತ್ತೇನೆ ಮತ್ತು ಸರಕಾರಿ ಉದ್ಯೋಗಕ್ಕೆ ಸೇರಲು ಅನರ್ಹರಾಗುವಂತಹ ಯಾವ ಪೂರ್ವೋತ್ತರಗಳನ್ನು ನಾನು ಹೊಂದಿರುವುದಿಲ್ಲ ಅಂತಾ ಪ್ರಮಾಣೀಕರಿಸುತ್ತೇನೆ.

ಸ್ಥಳ :

ದಿನಾಂಕ : ಅಭ್ಯರ್ಥಿಯ ಸಹಿ

ಪಿ.ಆರ್. 872

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಗದಗ

ತಿದ್ದುಪಡಿ ಅಧಿಸೂಚನೆ

ಸಂಖ್ಯೆ ಸಿಬ್ಬಂದಿ–1/ವಹಿ– 78/2009–10, ದಿನಾಂಕ: 8ನೇ ಅಕ್ಟೋಬರ್ 2009

ಸರಕಾರದ ಸುತ್ತೋಲೆ ಸಂಖ್ಯೆ: ಕಂಇ/34/ಪ್ರ.ಕಾ 2009 ದಿನಾಂಕ: 26–09–2009 ರ ಪ್ರಕಾರ ನೀಡಿರುವ ನಿರ್ದೇಶನದ ಮೇರೆಗೆ, ಗದಗ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡಲು ಈ ಕಾರ್ಯಾಲಯದಿಂದ ಹೊರಡಿಸಲಾದ ಸಮಸಂಖ್ಯೆ ದಿನಾಂಕ:26.09.2009ರ ಅಧಿಸೂಚನೆಯಲ್ಲಿ ಅಭ್ಯರ್ಥಿಗಳಿಗೆ ನೀಡಿದ ಸೂಚನೆ ಮತ್ತು ಶರ್ತುಗಳಲ್ಲಿರುವ ಖಂಡಿಕೆ 11ರಲ್ಲಿ "ಪ.ಜಾತಿ/ ಪ.ಪಂಗಡ ಮತ್ತು ಪ್ರವರ್ಗ–1 ಹಾಗೂ ಅಂಗವಿಕಲ ಅಭ್ಯರ್ಥಿಗಳು ರೂ.100 ಹಾಗೂ ಇತರರಿಗೆ ರೂ.200" ಎಂದು ಇರುವುದನ್ನು **"ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಪ್ರ.ವರ್ಗ–1, ಅಂಗವಿಕಲರು , ಮಹಿಳೆಯರು ರೂ. 100–00 ಮತ್ತು ಇತರರು ರೂ. 200–00"** ಎಂದು ತಿದ್ದುಪಡಿ ಮಾಡಿದ್ದು, ಅಂತೆಯೇ ಓದಿಕೊಳ್ಳತಕ್ಕದ್ದು.

ಜಿಲ್ಲಾಧಿಕಾರಿಗಳು, ಗದಗ ಹಾಗೂ ಅಧ್ಯಕ್ಷರು,

ಪಿ.ಆರ್. 873 ಗದಗ ಜಿಲ್ಲಾ ಗ್ರಾಮಲೆಕ್ಕಾಧಿಕಾರಿಗಳ ನೇಮಕಾತಿ ಸಮಿತಿ, ಗದಗ

ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು ಗ್ರಾಮ ಲೆಕ್ಕಿಗರ ಆಯ್ಕೆ ಪ್ರಾಧಿಕಾರ, ಜಿಲ್ಲಾಧಿಕಾರಿಗಳ ಕಛೇರಿ, ಕೋಲಾರ ಜಿಲ್ಲೆ, ಕೋಲಾರ

ತಿದ್ದುಪಡಿ ಅಧಿಸೂಚನೆ ನಂ. ಸಿಬ್ಬಂದಿ (2) ಸಿಆರ್/88/08–09, ದಿನಾಂಕ: 5ನೇ ಅಕ್ಟೋಬರ್ 2009

ದಿನಾಂಕ:26.9.2009 ರಂದು ಈ ಕಛೇರಿಯಿಂದ ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ ಸಿಬ್ಬಂದಿ (2) ಸಿಆರ್/88/08–09 ರಂತೆ ಕೋಲಾರ ಜಿಲ್ಲಾ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಜಿಗಳನ್ನು ಕರೆಯಲಾಗಿದ್ದು, ಅರ್ಜಿ ಶುಲ್ಕ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ/ ಪ್ರವರ್ಗ–1 ಅಭ್ಯರ್ಥಿಗಳಿಗೆ ರೂ.50–00 ಹಾಗೂ ಇತರರಿಗೆ ರೂ.100–00 ಗಳಂತೆ ನಿಗದಿಪಡಿಸಿರುವುದರ ಬದಲಾಗಿ ಸರ್ಕಾರದ ಸುತ್ತೋಲೆ ಸಂಖ್ಯೆ ಕಂ ಇ 34 ಪ್ರ ಕಾ 2009 ದಿನಾಂಕ:26.9.2009 ರಂತೆ ಕೆಳಕಂಡಂತೆ ಮಾರ್ಪಡಿಸಿ ನಿಗದಿಪಡಿಸಿದೆ.

1. ಸಾಮಾನ್ಯ ಅಭ್ಯರ್ಥಿಗಳು ಹಾಗೂ ಇನ್ನಿತರೆ ಪ್ರವರ್ಗದ ಅಭ್ಯರ್ಥಿಗಳು – ರೂ.200–00
   ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ/ ಹಾಗೂ ಮಹಿಳಾ ಅಭ್ಯರ್ಥಿಗಳು – ರೂ.100–00
   ಈಗಾಗಲೇ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ವ್ಯತ್ಯಾಸದ ಶುಲ್ಕವನ್ನು ಈ ಕೂಡಲೇ ಆಯ್ಕೆ ಪ್ರಾಧಿಕಾರಕ್ಕೆ ಪಾವತಿಸತಕ್ಕದ್ದು.
2. ಅಭ್ಯರ್ಥಿಗಳು ಅರ್ಜಿಗಳನ್ನು ನಿಗದಿತ ದಿನಾಂಕದೊಳಗಾಗಿ ಕಛೇರಿ ವೇಳೆಯಲ್ಲಿ ಖುದ್ದಾಗಿಯೂ ಸಲ್ಲಿಸಬಹುದಾಗಿದ್ದು, ಈಗಾಗಲೇ ಹೊರಡಿಸಿರುವ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು.
3. ಅರ್ಜಿ ನಮೂನೆಯಲ್ಲಿ ಅಂಕಣ 2ರಲ್ಲಿ ಅಭ್ಯರ್ಥಿಯು ತಂದೆಯ ಹೆಸರಿನ ಜೊತೆಗೆ ತಾಯಿಯ ಹೆಸರನ್ನು ಸಹ ಕಡ್ಡಾಯವಾಗಿ ನಮೂದಿಸತಕ್ಕದ್ದು.

ಉಳಿದಂತೆ ದಿನಾಂಕ:26.09.2009ರ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟು ಇರುವುದಿಲ್ಲ.

ಎನ್. ಪ್ರಭಾಕರ್

ಪಿ.ಆರ್. 860 ಅಧ್ಯಕ್ಷರು, ಗ್ರಾಮಲೆಕ್ಕಾಧಿಕಾರಿಗಳ ನೇಮಕಾತಿ ಪ್ರಾಧಿಕಾರ ಹಾಗೂ

ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ.

ಕಂದಾಯ ಇಲಾಖೆ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾವೇರಿ

ತಿದ್ದುಪಡಿ ಅಧಿಸೂಚನೆ

ನಂ:ಸಿಬ್ಬಂದಿ(1)ವಪಿ–52:2009–10, ದಿನಾಂಕ: 30ನೇ ಸೆಪ್ಟೆಂಬರ್ 2009

ವಿಷಯ: ಹಾವೇರಿ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ:ಈ ಕಾರ್ಯಾಲಯದ ಅಧಿಸೂಚನೆ ಸಮಸಂಖ್ಯೆ ದಿ:26.9.2009.

ಹಾವೇರಿ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡುವ ಕುರಿತು ಉಲ್ಲೇಖಿತ ಅಧಿಸೂಚನೆಯನ್ವಯ ಅರ್ಜಿಗಳನ್ನು ಆನ್‌ಲೈನ್ (Online) ಮೂಲಕ/ಅಂಚೆ/ಖುದ್ದಾಗಿ ನಿಗದಿತ ನಮೂನೆಯಲ್ಲಿ ಸಹ ಸಲ್ಲಿಸಬಹುದು.

ಅರ್ಜಿಯ ಶುಲ್ಕವನ್ನು ಈ ಕೆಳಗಿನಂತೆ ಪರಿಷ್ಕರಿಸಿದೆ.

1. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಹಾಗೂ ಎಲ್ಲ ಮಹಿಳಾ ಅಭ್ಯರ್ಥಿಗಳಿಗೆ ರೂ: 100–00
2. ಸಾಮಾನ್ಯ/ಇತರೇ ಹಿಂದುಳಿದ ಅಭ್ಯರ್ಥಿಗಳಿಗೆ ರೂ.200–00

ಅಭ್ಯರ್ಥಿಗಳು ಖುದ್ದಾಗಿ/ಅಂಚೆ ಮೂಲಕ ಸಲ್ಲಿಸುವವರು "ಅಧ್ಯಕ್ಷರು ಆಯ್ಕೆ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು ಹಾವೇರಿ" ಇವರ ಹೆಸರಿಗೆ ಹಾವೇರಿಯಲ್ಲಿ ಸಂದಾಯವಾಗುವಂತೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಡಿ ಡಿ ಮೂಲಕ ಪಡೆದು ಅರ್ಜಿಯೊಂದಿಗೆ ಸಲ್ಲಿಸಬೇಕು.

ಪಿ.ಆರ್. 863 ಅಧ್ಯಕ್ಷರು ಆಯ್ಕೆ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು, ಹಾವೇರಿ

ಅಧ್ಯಕ್ಷರು, ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ

ತಿದ್ದುಪಡಿ ಅಧಿಸೂಚನೆ ಸಂಖ್ಯೆ ಇಎಸ್ ಟಿ(1) 177/ 2008–09 ದಿನಾಂಕ 01–10–2009

ಉಲ್ಲೇಖ: 1. ಸರ್ಕಾರದ ಸುತ್ತೋಲೆ ಸಂಖ್ಯೆ ಕಂಇ:51:ಪ್ರಾಕ2009 ಬೆಂಗಳೂರು ದಿನಾಂಕ 26–9–2009
2. ಸರ್ಕಾರದ ಇ–ಮೇಲ್ ಸಂದೇಶದ ದಿನಾಂಕ 29–9–2009
3. ಈ ಕಛೇರಿಯ ಸಮ ಸಂಖ್ಯೆ ಅಧಿಸೂಚನೆ ದಿನಾಂಕ 26–9–2009

ಮಂಡ್ಯ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರುಗಳ ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಿ ಉಲ್ಲೇಖ (3) ರಲ್ಲಿ ಅಧಿಸೂಚನೆ ಹೊರಡಿಸಲಾಗಿದೆ.

ಸದರಿ ಅಧಿಸೂಚನೆಯಲ್ಲಿ ಅಭ್ಯರ್ಥಿಗಳಿಗೆ ನೀಡಿರುವ ಸೂಚನೆ ಮತ್ತು ಷರತ್ತುಗಳಿಗೆ ಉಲ್ಲೇಖ (1) ರ ಸರ್ಕಾರದ ಸುತ್ತೋಲೆ ರೀತ್ಯಾ ಹಾಗೂ ಉಲ್ಲೇಖ (2) ರ ಸರ್ಕಾರದ ಇ–ಮೇಲ್ ಸಂದೇಶರೀತ್ಯಾ ಕೆಲವೊಂದು ತಿದ್ದುಪಡಿ /ಮಾರ್ಪಾಡು ಮಾಡಲಾಗಿದೆ. ಹಾಗೂ ಸದರಿ ಅಧಿಸೂಚನೆಯಲ್ಲಿನ ಸೂಚನೆ ಜೊತೆಗೆ ಈ ಕೆಳಕಂಡ ಸೂಚನೆಗಳನ್ನು ಓದಿಕೊಂಡು ಈ ರೀತ್ಯಾ ಅರ್ಜಿ ಸಲ್ಲಿಸುವುದು.

1. ಅಭ್ಯರ್ಥಿಗಳು ಅರ್ಜಿಯನ್ನು online ಮೂಲಕ ಅಥವಾ ಅಂಚೆ ಅಥವಾ ಖುದ್ದಾಗಿ (ಯಾವುದಾದರೂ ಒಂದು ರೀತಿಯಲ್ಲಿ) ಸಲ್ಲಿಸಬಹುದು
2. ಅಂಚೆ ಅಥವಾ ಖುದ್ದಾಗಿ ಅರ್ಜಿಸಲ್ಲಿಸುವ ಅಭ್ಯರ್ಥಿಗಳು ಅರ್ಜಿಯೊಡನೆ ಬ್ಯಾಂಕಿನ ಶುಲ್ಕದ ಜೊತೆಗೆ ಸಾಮಾನ್ಯ ಅಭ್ಯರ್ಥಿಗಳು ರೂ 200–00 ಹಾಗೂ ಪ.ಜಾ/ಪ.ವರ್ಗ ಹಾಗೂ ಮಹಿಳಾ ಅಭ್ಯರ್ಥಿಗಳು ರೂ 100–00 ಶುಲ್ಕವನ್ನು ಜಿಲ್ಲೆಯ ಯಾವುದಾದರೂ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬ್ಯಾಂಕ್‌ನಲ್ಲಿ ಡಿ.ಡಿ/ಬ್ಯಾಂಕರ್ಸ್ ಚೆಕ್‌ನ್ನು ಪಡೆದು ಅಧ್ಯಕ್ಷರು, ಗ್ರಾಮಲೆಕ್ಕಿಗರ ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಇವರ ಹೆಸರಿಗೆ ಪಾವತಿಸತಕ್ಕದ್ದು. online ಮೂಲಕ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ಲಭ್ಯವಾಗುವ ಚಲನ್ನಿನ ಮುದ್ರಿತ ಪ್ರತಿಯನ್ನು ತೆಗೆದುಕೊಂಡು ಮೇಲೆ ತಿಳಿಸಿರುವ ಸದರಿ ಬ್ಯಾಂಕ್‌ಗಳಲ್ಲಿ ಪಾವತಿಸಿ ಸ್ವೀಕೃತಿಯನ್ನು ಪಡೆಯಬೇಕು.
3. online ಮೂಲಕ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಈ ಹಂತದಲ್ಲಿ ಯಾವುದೇ ಪ್ರಮಾಣಪತ್ರಗಳ ದೃಢೀಕೃತ ಪ್ರತಿಗಳನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ.
4. ಅಂಚೆಮೂಲಕ ಅಥವಾ ಖುದ್ದಾಗಿ ಅರ್ಜಿಯನ್ನು ಸಲ್ಲಿಸಲಿಚ್ಚಿಸುವ ಅಭ್ಯರ್ಥಿಗಳು ಈಗಾಗಲೇ ಹೊರಡಿಸಿರುವ ಮಾರ್ಗಸೂಚಿಯನ್ನು ಅನುಸರಿಸಬೇಕು
5. online ಮೂಲಕ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ವೆಬ್‌ಸೈಟ್ ವಿಳಾಸ – http://recruitment.kar.nic.in/va ಯಲ್ಲಿ ಸಲ್ಲಿಸತಕ್ಕದ್ದು. ಅಭ್ಯರ್ಥಿಗಳು ತಮಗೆ ಬೇಕಾದ ಜಿಲ್ಲೆಯನ್ನು ವೆಬ್ ಸೈಟ್ ಮೂಲಕ ಆಯ್ಕೆ ಮಾಡಿಕೊಳ್ಳುವ ಅವಕಾಶವಿರುತ್ತದೆ. ಈ ಸೌಲಭ್ಯವು ದಿನಾಂಕ 1–10–2009 ರಿಂದ ಲಭ್ಯವಾಗುತ್ತದೆ.

6. ಉಲ್ಲೇಖ(3)ರ ರೀತ್ಯಾ ನೀಡಿರುವ ಅರ್ಜಿ ನಮೂನೆಯ ಬದಲಾಗಿ ಸರ್ಕಾರವು ಒಂದು ಸಾಮಾನ್ಯ (Common) ಅರ್ಜಿ ನಮೂನೆಯನ್ನು ವೆಬ್‌ಸೈಟ್‌ವಿಳಾಸ-http://recruitment.kar.nic.in/vaನಲ್ಲಿ ಪಡೆಯುವುದು.
7. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಈ ಕೆಳಕಂಡಂತೆ ಸಂಪರ್ಕಿಸತಕ್ಕದ್ದು

1) ಇ-ಮೇಲ್ : vamandya@gmail.com
2) ದೂರವಾಣಿ : 08232-231215
3) ಫ್ಯಾಕ್ಸ್ ನಂ : 08232-225596

ಪಿ.ಆರ್. 861

ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯ

ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನಡವಳಿಗಳು, ಉತ್ತರ ಕನ್ನಡ, ಕಾರವಾರ

ನೇಮಕಾತಿ ಪ್ರಕಟಣೆ

ಅಧಿಸೂಚನೆ ಸಂಖ್ಯೆ: 3/2009, ದಿನಾಂಕ: 1ನೇ ಅಕ್ಟೋಬರ್ 2009

ಕಾರವಾರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಘಟಕದಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕೆಳಕಂಡ ಷರತ್ತುಗಳನ್ನು ಪೂರೈಸಿದ ಅರ್ಹ ಅಭ್ಯರ್ಥಿಗಳು **ದಿನಾಂಕ:30ನೇ ಅಕ್ಟೋಬರ್ 2009 ಸಂಜೆ 4-00** ಗಂಟೆಯೊಳಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

1. ಖಾಲಿ ಇರುವ ಹುದ್ದೆಯ ವಿವರಗಳು:

ಕ್ರಮ ಸಂ.	ಹುದ್ದೆಯ ಹೆಸರು	ಖಾಲಿ ಇರುವ ಹುದ್ದೆಗಳ ಸಂಖ್ಯೆ	ವೇತನಶ್ರೇಣಿ
1	ಶೀಘ್ರಲಿಪಿಗಾರರು (1+3)	4	7275-175-7800-200-8600-225-9500-250-10500-300-12300-350
2	ಬೆರಳಚ್ಚುಗಾರರು (ಬ್ಯಾಕ್‌ಲಾಗ್)	1	5800-100-6000-125-6500-150-7100-175-7800-200-8600-225-9500-250-10500
3	ನಕಲು ಬೆರಳಚ್ಚುಗಾರರು	1	5800-100-6000-125-6500-150-7100-175-7800-200-8600-225-9500-250-10500
4	ಪ್ರೊಸಸ್ ಸರ್ವರ್ಸ್	4	5200-100-6000-125-6500-150-7100-175-7800-200-8000
5	ಜವಾನರು	7	4800-100-6000-125-6500-150-7100-175-7275

1. ಖಾಲಿ ಹುದ್ದೆಗಳ ವರ್ಗೀಕರಣ:

ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 8 ಸಹಿಮ 95 ದಿನಾಂಕಃ 20-6-95 ಮತ್ತು ಸರ್ಕಾರಿ ಆದೇಶ ಸಂಖ್ಯೆ ಸಿ ಆ ಸು ಇ 53 ಸೆನನಿ 2002, ದಿನಾಂಕ: 4-1-2008 ಮತ್ತು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 128 ಸೆನನಿ 2006 ದಿನಾಂಕಃ 01-08-2009 ರ ಪ್ರಕಾರ ಕಾಯ್ದಿರಿಸಿದ ಹುದ್ದೆಗಳ ವರ್ಗೀಕರಣ.

ಶೀಘ್ರಲಿಪಿಗಾರರ ಹುದ್ದೆಗಳು- 4

	ಸಾಮಾನ್ಯ ಅರ್ಹತೆ	ಪ್ರವರ್ಗ - II ಎ	ಪ್ರವರ್ಗ - II ಬಿ	ಒಟ್ಟು
ಇತರೆ ಅಭ್ಯರ್ಥಿ	1	-	1	2
ಮಹಿಳಾ ಅಭ್ಯರ್ಥಿ	-	1	-	1
ಗ್ರಾಮೀಣ ಅಭ್ಯರ್ಥಿ	1	-	-	1
ಒಟ್ಟು	**2**	**1**	**1**	**4**

ಬೆರಳಚ್ಚುಗಾರರ ಹುದ್ದೆಗಳು – 1
(ಬ್ಯಾಕ್‌ಲಾಗ್ ಹುದ್ದೆ)

	ಪರಿಶಿಷ್ಟ ಜಾತಿ	ಒಟ್ಟು
ಅಂಗವಿಕಲ ಅಭ್ಯರ್ಥಿ	1	1
ಒಟ್ಟು	**1**	**1**

ಬೆರಳಚ್ಚು ನಕಲುಗಾರರ ಹುದ್ದೆ – 1

	ಸಾಮಾನ್ಯ ಅರ್ಹತೆ	ಒಟ್ಟು
ಇತರೆ ಅಭ್ಯರ್ಥಿ	1	1
ಒಟ್ಟು	**1**	**1**

ಪ್ರೊಸೆಸ್ ಸರ್ವರ್ - 4

	ಸಾಮಾನ್ಯ ಅರ್ಹತೆ	ಪರಿಶಿಷ್ಟ ಜಾತಿ	ಪ್ರವರ್ಗ - I	ಒಟ್ಟು
ಇತರೆ ಅಭ್ಯರ್ಥಿ	-	-	1	1
ಮಹಿಳಾ ಅಭ್ಯರ್ಥಿ	1	-	-	1
ಗ್ರಾಮೀಣ ಅಭ್ಯರ್ಥಿ	1	1	-	2
ಒಟ್ಟು	**2**	**1**	**1**	**4**

ಜವಾನರು-7

	ಸಾಮಾನ್ಯ ಅರ್ಹತೆ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಪ್ರವರ್ಗ-III ಎ	ಒಟ್ಟು
ಇತರೆ ಅಭ್ಯರ್ಥಿ	-	-	1	-	1
ಮಹಿಳಾ ಅಭ್ಯರ್ಥಿ	2	1	-	-	3
ಗ್ರಾಮೀಣ ಅಭ್ಯರ್ಥಿ	1	-	-	1	2
ಯೋಜನಾ ನಿರಾಶ್ರಿತ	1	-	-	-	1
ಒಟ್ಟು	**4**	**1**	**1**	**1**	**7**

1	ಅರ್ಜಿಗಳನ್ನು ಕಳುಹಿಸಬೇಕಾದ ವಿಳಾಸ	ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ, ಕಾರವಾರ
2	ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ	**ದಿನಾಂಕ: 30-10-2009 ರಂದು ಸಂಜೆ 5-00 ಗಂಟೆ**
3	ವಿದ್ಯಾರ್ಹತೆ	
	ಅ) ಶೀಘ್ರಲಿಪಿಗಾರರ ಹುದ್ದೆಗೆ	1. ಎಸ್.ಎಸ್.ಎಲ್.ಸಿ./ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣವಾಗಿರಬೇಕು. 2. ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಹಿರಿಯ ದರ್ಜೆಯ ಶೀಘ್ರಲಿಪಿ ಹಾಗೂ ಹಿರಿಯ ದರ್ಜೆಯ ಬೆರಳಚ್ಚು ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ.
	ಆ) ಬೆರಳಚ್ಚುಗಾರರ ಹುದ್ದೆಗೆ	1. ಎಸ್.ಎಸ್.ಎಲ್.ಸಿ./ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣವಾಗಿರಬೇಕು. 2. ಕನ್ನಡ ಮತ್ತು ಆಂಗ್ಲ ಭಾಷೆಯ ಹಿರಿಯ ದರ್ಜೆಯ ಬೆರಳಚ್ಚು ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ
	ಇ) ಬೆರಳಚ್ಚು ನಕಲುಗಾರರ ಹುದ್ದೆಗೆ	1. ಎಸ್.ಎಸ್.ಎಲ್.ಸಿ./ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣವಾಗಿರಬೇಕು. 2. ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಕಿರಿಯ ಬೆರಳಚ್ಚು ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ.
	ಈ) ಪ್ರೋಸಸ್ ಸರ್ವರ್ ಹುದ್ದಗೆ	1. ಎಸ್.ಎಸ್.ಎಲ್.ಸಿ./ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣವಾಗಿರಬೇಕು 2 ವಾಹನ ಚಾಲನೆಯ ಪರವಾನಗಿ ಹೊಂದಿದವರಿಗೆ ಆದ್ಯತೆ.
	ಉ) ಜವಾನ ಹುದ್ದೆಗೆ	1. ಏಳನೇ ತರಗತಿಯಲ್ಲಿ ಉರ್ತೀರ್ಣರಾಗಿರಬೇಕು ಹಾಗೂ ಕನ್ನಡ ಒಂದು ವಿಷಯವಾಗಿ ಓದಲು ಮತ್ತು ಬರೆಯಲು ಬರಬೇಕು.
4	ವಯೋಮಿತಿ	ಅಭ್ಯರ್ಥಿಯು 18 ವರ್ಷ ಪೂರೈಸಿರಬೇಕು ಮತ್ತು ಗರಿಷ್ಠ ವಯಸ್ಸು ಕೆಳಕಂಡಂತಿದೆ. 1. ಅನುಸೂಚಿತ ಜಾತಿ ಮತ್ತು ಪಂಗಡ ಹಾಗೂ ಪ್ರವರ್ಗ- I ರ ಅಭ್ಯರ್ಥಿಗಳಿಗೆ 40 ವರ್ಷ ಮೀರಿರಬಾರದು. 2. ಗುಂಪು II -ಎ, II-ಬಿ , III- ಎ ಹಾಗೂ III-ಬಿ ಅಭ್ಯರ್ಥಿಗಳು 38 ವರ್ಷ ಮೀರಿರಬಾರದು. 3. ಸಾಮಾನ್ಯ ಅಭ್ಯರ್ಥಿಗಳು 35 ವರ್ಷ ಮೀರಿರಬಾರದು. 4. ವಯಸ್ಸಿನ ಮಿತಿಯನ್ನು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ರಾಜ್ಯ/ಕೇಂದ್ರ ಸರ್ಕಾರಿ ನೌಕರರು/ಮಾಜಿ ಸೈನಿಕರು/ಅಂಗವಿಕಲ ಅರ್ಭ್ಯರ್ಥಿಗಳು ಹಾಗೂ ವಿಧವೆಯರ ಬಗ್ಗೆ ಕೆ.ಸಿ.ಎಸ್.(ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ಪ್ರಕಾರ ಸಡಿಲಿಕೆಯನ್ನು ಕೊಡಲಾಗುವುದು.

ಅಭ್ಯರ್ಥಿಗಳಿಗೆ ಸೂಚನೆಗಳು:-

1. ಅಭ್ಯರ್ಥಿಯು ಈ ಅಧಿಸೂಚನೆಯಲ್ಲಿ ಲಗ್ತೀಕರಿಸಿದ ನಿಗದಿತ ಅರ್ಜಿ ನಮೂನೆಯಲ್ಲಿ ಬೆರಳಚ್ಚು ಮಾಡಿಸಿದ ಅಥವಾ ಗಣಕೀಕೃತ ಅರ್ಜಿಯನ್ನು ತನ್ನ ಕೈ ಬರವಣಿಗೆಯಲ್ಲಿ ಭರ್ತಿ ಮಾಡಿ ಸಲ್ಲಿಸತಕ್ಕದ್ದು.
2. ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಹಾಕಲು ಬಯಸುವವರು ಆಯಾ ಹುದ್ದೆಗಳಿಗೆ ಪ್ರತ್ಯೇಕವಾಗಿ ನಿಗದಿತ ಅರ್ಜಿ ನಮೂನೆಗಳಲ್ಲಿ ಅರ್ಜಿ ಸಲ್ಲಿಸತಕ್ಕದ್ದು.
3. ಅಭ್ಯರ್ಥಿಯು ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿ ನಮೂನೆಯಲ್ಲಿ ತೋರಿಸಿರುವ ಜಾಗದಲ್ಲಿ ಅಂಟಿಸಿ ಅದರ ಮೇಲೆ ಸಹಿ ಮಾಡತಕ್ಕದ್ದು.
4. ಅರ್ಜಿ ನಮೂನೆಯೊಂದಿಗೆ ಸಲ್ಲಿಸಬೇಕಾಗಿರುವ ಶೈಕ್ಷಣಿಕ ವಿದ್ಯಾರ್ಹತೆಯ ಅಂಕಪಟ್ಟಿಗಳನ್ನು ಹಾಗೂ ಇತರೆ ಪ್ರಮಾಣ ಪತ್ರಗಳನ್ನು ಸ್ವಯಂ ಧೃಢೀಕರಿಸತಕ್ಕದ್ದು. ಅರ್ಜಿಯೊಂದಿಗೆ ಮೂಲಪ್ರತಿಗಳನ್ನು ಲಗ್ತೀಕರಿಸುವ ಅವಶ್ಯಕತೆ ಇರುವುದಿಲ್ಲ, ಲಗ್ತೀಕರಿಸಿದ ಪ್ರಮಾಣಪತ್ರಗಳು ಅರ್ಜಿ ಸಲ್ಲಿಸುವ ದಿನಾಂಕದ ಒಳಗೆ ಪಡೆದಿರಬೇಕು.
5. ಅಭ್ಯರ್ಥಿಗಳು ನೇಮಕಾತಿ ಸಂಬಂಧದಲ್ಲಿ ಯಾವುದೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅನುಸರಿಸುವುದು ಕಂಡುಬಂದಲ್ಲಿ ಅಂತಹವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.
6. ಅಪೂರ್ಣವಾಗಿರುವ, ಸಹಿ ಮಾಡದ ಮತ್ತು ವಿದ್ಯಾರ್ಹತೆ, ಮೀಸಲಾತಿ ಹಾಗೂ ವಯೋಮಿತಿ ರಿಯಾಯಿತಿ ಬಗ್ಗೆ ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರದ ಅಭ್ಯರ್ಥಿಗಳ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
7. ಸರ್ಕಾರಿ ಮತ್ತು ಅರೆ-ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಸಮುಚಿತ ಮಾರ್ಗದ ಮುಖಾಂತರ ಸಲ್ಲಿಸಬೇಕು.
8. ಅಭ್ಯರ್ಥಿಗಳು ತಮ್ಮ ಅರ್ಜಿಯ ಜೊತೆ 5-00 ರೂಪಾಯಿಗಳ ಅಂಚೆ ಚೀಟಿ ಲಗತ್ತಿಸಿರುವ ಸ್ವವಿಳಾಸವಿರುವ ಲಕೋಟೆಯನ್ನು ಲಗತ್ತಿಸಿರಬೇಕು.
9. ಅರ್ಜಿದಾರರು ಯಾವ ಹುದ್ದೆಗಳಿಗೆ ಅರ್ಜಿಗಳನ್ನು ಸಲ್ಲಿಸುತ್ತಿದ್ದಾರೆಂಬುದನ್ನು ದಪ್ಪ ಅಕ್ಷರಗಳಲ್ಲಿ ಲಕೋಟೆಯ ಮೇಲೆ ನಮೂದಿಸಿರಬೇಕು.
10. ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗುವುದು.
11. ಖಾಲಿ ಹುದ್ದೆಗಳ ಸಂಖ್ಯೆ ಬದಲಾವಣೆಗೊಳ್ಳುವ ಸಂಭವವಿರುತ್ತದೆ.
12. ನೇಮಕಾತಿಯು ತಾತ್ಕಾಲಿಕವಾಗಿದ್ದು 2 ವರ್ಷದ ಪರೀಕ್ಷಾರ್ಹ ಅವಧಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.
13. ಕರ್ನಾಟಕ ನಾಗರೀಕ ಸೇವಾ ಸಾಮಾನ್ಯ ನೇಮಕಾತಿ ನಿಯಮಗಳು 1977 ರ ಪ್ರಕಾರ ಅಥವಾ ಇನ್ನಾವುದೇ ನಿಯಮಗಳ ಪ್ರಕಾರ ಅಭ್ಯರ್ಥಿಯು ಅನರ್ಹನಾಗಿದ್ದಲ್ಲಿ ನೇಮಕಾತಿಗೆ ಅರ್ಹರಾಗುವುದಿಲ್ಲ.
14. ಅಭ್ಯರ್ಥಿಗೆ ಸಂದರ್ಶನಕ್ಕೆ ಹಾಜರಾಗಲು ಮಾಹಿತಿ ಸಿಗದಿದ್ದ ಪಕ್ಷದಲ್ಲಿ ಅವರು ಸಂದರ್ಶನಕ್ಕೆ ಹಾಜರಾಗಲು ಅನರ್ಹರೆಂದು ತಿಳಿಯತಕ್ಕದ್ದು. ಈ ಬಗ್ಗೆ ಯಾವುದೇ ಪತ್ರ ವ್ಯವಹಾರ ನಡೆಸಲಾಗುವುದಿಲ್ಲ.

ಅಭ್ಯರ್ಥಿಯು ಲಗತ್ತಿಸಬೇಕಾದ ಪ್ರಮಾಣಪತ್ರಗಳು:

1. ವಯಸ್ಸಿನ ಬಗ್ಗೆ ದಾಖಲಾತಿ ಪತ್ರ ಅಥವಾ ಶಾಲಾ ವರ್ಗಾವಣೆ ಪತ್ರ ಇತ್ಯಾದಿ.
2. ಜಾತಿ ಮೀಸಲಾತಿ ಕೋರುವ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಗದಿತ ನಮೂನೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣಪತ್ರ.
3. ಗ್ರಾಮೀಣ ಮೀಸಲಾತಿ ಪ್ರಮಾಣಪತ್ರ ಚಾಲ್ತಿ ನಮೂನೆ-1/ ನಮೂನೆ-2 ರಲ್ಲಿ.
4. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗಮಾಡಿದ ಬಗ್ಗೆಚಾಲ್ತಿ ನಮೂನೆಯಲ್ಲಿರುವ ಪ್ರಮಾಣಪತ್ರ.
5. ಅಂಗವಿಕಲ ಅಭ್ಯರ್ಥಿಗಳು ನಿಗದಿಪಡಿಸಿದ ನಮೂನೆಯಲ್ಲಿ ಪಡೆದ ಪ್ರಮಾಣಪತ್ರ (ಶೇಕಡಾ 40 ಕ್ಕಿಂತ ಕಡಿಮೆ ಇಲ್ಲದಂತಹ ಅಂಗವಿಕಲತೆ)
6. ವಿಧವೆಯರು ವಯೋಮಿತಿ ಸಡಿಲಿಕೆಗಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣಪತ್ರ.
7. ಸೈನಿಕ ಸೇವೆಯಿಂದ ಬಿಡುಗಡೆಯಾದ/ಮುಕ್ತಿ ಹೊಂದಿದ ಕುರಿತಾದ ಪ್ರಮಾಣಪತ್ರ.

ಆಯ್ಕೆಯ ವಿಧಾನ:-

ಅಭ್ಯರ್ಥಿಗಳ ಆಯ್ಕೆಯು ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರ ಹುದ್ದೆಗಳ)(ನೇಮಕಾತಿ)(ತಿದ್ದುಪಡಿ) ನಿಯಮ 2007 ರ ಪ್ರಕಾರ ನಡೆಸಲಾಗುವುದು.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ, ಕಾರವಾರ.

ಅರ್ಜಿ ನಮೂನೆ

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ ಜಿಲ್ಲೆ, ಕಾರವಾರ

ಅಧಿಸೂಚನೆ ಸಂಖ್ಯೆ : 3/2009 ದಿನಾಂಕ : 30-09-2009

__________________ಹುದ್ದೆಗೆ ಅರ್ಜಿ

ಸ್ವಯಂ ದೃಢೀಕರಿಸಿದ ಇತ್ತೀಚಿನ ಪಾಸ್‌ಪೋರ್ಟ್ ಭಾವ ಚಿತ್ರ ಲಗತ್ತಿಸುವದು

ಗೆ

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಕಾರವಾರ..

1.	ಅಭ್ಯರ್ಥಿಯ ಪೂರ್ಣ ಹೆಸರು (ದಪ್ಪ ಅಕ್ಷರಗಳಲ್ಲಿ)			
2.	ಅಭ್ಯರ್ಥಿಯ ತಂದೆ/ತಾಯಿ/ಗಂಡನ ಹೆಸರು			
3.	ಅಭ್ಯರ್ಥಿಯ ಹುಟ್ಟಿದ ದಿನಾಂಕ ಮತ್ತು ವಯಸ್ಸು			
4.	ಅಂಚೆ ವಿಳಾಸ			
5.	ತಂದೆ/ತಾಯಿ/ಪೋಷಕರ ಉದ್ಯೋಗ ಹಾಗೂ ವಾರ್ಷಿಕ ವರಮಾನ			
6.	ಅಭ್ಯರ್ಥಿಯ ವಿದ್ಯಾರ್ಹತೆ	ಪಾಸಾದ ತಿಂಗಳು	ಗರಿಷ್ಠ ಅಂಕಗಳು	ಗಳಿಸಿದ ಅಂಕಗಳು
7.	ಅ. ಏಳನೆ ತರಗತಿ			
	ಆ. ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆ			
	ಇ. ಇಂಗ್ಲೀಷ್ ಶೀಘ್ರಲಿಪಿ ಹಿರಿಯ ಶ್ರೇಣಿ			
	ಈ. ಕನ್ನಡ ಶೀಘ್ರಲಿಪಿ ಹಿರಿಯ ಶ್ರೇಣಿ			
	ಉ. ಇಂಗ್ಲಿಷ್ ಬೆರಳಚ್ಚು ಹಿರಿಯ ಶ್ರೇಣಿ			
	ಊ. ಕನ್ನಡ ಬೆರಳಚ್ಚು ಹಿರಿಯ ಶ್ರೇಣಿ			
	ಎ. ಇಂಗ್ಲಿಷ್ ಬೆರಳಚ್ಚು ಕಿರಿಯ ಶ್ರೇಣಿ			
	ಏ. ಕನ್ನಡ ಬೆರಳಚ್ಚು ಕಿರಿಯ ಶ್ರೇಣಿ			
	ಐ. ಅಭ್ಯರ್ಥಿಯು ಮೋಟಾರು ವಾಹನ ಚಾಲನಾ ಪರವಾನಿಗೆಯನ್ನು ಹೊಂದಿದ್ದರೆ ನಮೂದಿಸುವುದು ಮತ್ತು ಲಗತ್ತಿಸುವುದು. (ಜಾರಿಕಾರರಿಗೆ ಮಾತ್ರ)			
8	ಇತರ ಯಾವುದೇ ನಿಗದಿಪಡಿಸಿದ ಅರ್ಹತಾ ಪರೀಕ್ಷೆ			
9	ಅಭ್ಯರ್ಥಿಯ ರಾಷ್ಟ್ರೀಯತೆ ಹಾಗೂ ವರ್ಗಾವಣೆ ಪ್ರಪತ್ರದಲ್ಲಿ ನಮೂದಿಸಿರುವಂತೆ ಜಾತಿ.			
10	ಅಭ್ಯರ್ಥಿಯು ಮುಂದೆ ತೋರಿಸಿದ ಯಾವ ವರ್ಗವನ್ನು ಹೊಂದಿರುವನೆಂಬುದನ್ನು ನಮೂದಿಸುವುದು ಮತ್ತು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ನಿಗದಿತ ನಮೂನೆಯಲ್ಲಿರುವ ಪ್ರಪತ್ರವನ್ನು ಲಗತ್ತಿಸುವುದು.	ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-2ಬಿ, ಪ್ರವರ್ಗ-3ಎ, ಪ್ರವರ್ಗ-3 ಬಿ		

11	ಅಭ್ಯರ್ಥಿಯು ಮುಂದೆ ತೋರಿಸಿದ ಯಾವಮೀಸಲಾತಿಯನ್ನು ಹೊಂದಿರುವ ನೆಂಬುದನ್ನು ನಮೂದಿಸುವುದು ಮತ್ತು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ನಿಗದಿತ ನಮೂನೆಯಲ್ಲಿರುವ ಪ್ರಪತ್ರವನ್ನು ಲಗತ್ತಿಸುವುದು.	ಮಾಜಿ–ಸೈನಿಕ/ವಿಧವೆ/ದೈಹಿಕ ಅಂಗವಿಕಲ/ಗ್ರಾಮೀಣ ಅಭ್ಯರ್ಥಿ/ಕನ್ನಡ ಮಾಧ್ಯಮ ಅಭ್ಯರ್ಥಿ/ಯೋಜನಾ ನಿರಾಶ್ರಿತ
12	ಅಭ್ಯರ್ಥಿಯು ಕೇಂದ್ರ/ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಈಗಾಗಲೇ ಸೇವೆಯಲ್ಲಿದ್ದರೆ ವಿವರಗಳನ್ನು ನಮೂದಿಸುವುದು ಮತ್ತು ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಲಗತ್ತಿಸುವುದು.	
13	ಅಭ್ಯರ್ಥಿಯು ವಿವಾಹಿತನಾಗಿರುವನೋ? ವಿವಾಹಿತನಾಗಿದ್ದಲ್ಲಿ ಎ) ಒಂದಕ್ಕಿಂತ ಹೆಚ್ಚು ಜೀವಿತ ಪತ್ನಿಯರನ್ನು ಹೊಂದಿದ್ದಾನೆಯೋ ? ವಿವಾಹಿತಳಾಗಿದ್ದಲ್ಲಿ ಬಿ) ಒಂದಕ್ಕಿಂತ ಹೆಚ್ಚು ಜೀವಿತ ಪತ್ನಿಯರನ್ನು ಹೊಂದಿದ ವ್ಯಕ್ತಿಯೊಡನೆ ವಿವಾಹವಾಗಿದೆಯೋ?	
14	ಅಭ್ಯರ್ಥಿಯು ಯಾವುದಾದರೂ ಅಪರಾಧ ಮೊಕದ್ದಮೆಯಲ್ಲಿ ಆಪಾದಿತನಾಗಿರುವನೋ? ಹಾಗಿದ್ದಲ್ಲಿ ಅಂತಹ ಅಪರಾಧ ಪ್ರಕರಣದ ಕ್ರಮ ಸಂಖ್ಯೆ ಹಾಗೂ ಯಾವ ನ್ಯಾಯಾಲಯದಲ್ಲಿ ಸದರಿ ಪ್ರಕರಣ ಚಾಲ್ತಿಯಲ್ಲಿದೆಯೋ ಆ ನ್ಯಾಯಾಲಯದ ಹೆಸರು ಮತ್ತು ಸ್ಥಳ.	

ನಾನು ಶ್ರೀ : ಶ್ರೀಮತಿ/ ಕುಮಾರ/ ಕುಮಾರಿ:

ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸುವುದೇನೆಂದರೆ ಮೇಲೆ ಬರೆದ ಯಾವತ್ತೂ ಮಾಹಿತಿಯು ನನ್ನ ತಿಳುವಳಿಕೆಯ ಮಟ್ಟಿಗೆ ನಿಜವಿರುತ್ತದೆ. ಮೇಲಿನ ಮಾಹಿತಿಯು ಸುಳ್ಳೆಂದು ಕಂಡುಬಂದಲ್ಲಿ ಕಾನೂನು ರೀತ್ಯಾ ಕ್ರಮಕ್ಕೆ ಒಳಪಡಲು ಬದ್ಧನಿರುತ್ತೇನೆ.

ಸ್ಥಳ :

ದಿನಾಂಕ : ಅಭ್ಯರ್ಥಿಯ ಸಹಿ

ಪಿ.ಆರ್. 864

ತುಮಕೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿ

ಅಧಿಸೂಚನೆ ಸಂಖ್ಯೆ: ADMN-I/134/2009, ದಿನಾಂಕ: 1ನೇ ಅಕ್ಟೋಬರ್ 2009

ವಿಷಯ: ಶೀಘ್ರಲಿಪಿಗಾರರ ಹುದ್ದೆಗಳ ನೇಮಕಾತಿ ಬಗ್ಗೆ.

ಉಲ್ಲೇಖ: (1) ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆ: LCA-I/220, ದಿನಾಂಕ: 15.09.2009.

(2) ಸರ್ಕಾರಿ ಆದೇಶ ಸಂಖ್ಯೆ: LAW / 137-LAC 2005, ದಿನಾಂಕ: 25.03.2009.

(3) ಈ ಕಛೇರಿ ಆದೇಶ ಸಂಖ್ಯೆ: ಆಡಳಿತ–I– **115/2009,** ದಿನಾಂಕ: 31.08.2009 ಹಾಗೂ ದಿನಾಂಕ: **29.09.2009** ರ ಟಿಪ್ಪಣಿ ಮೇಲಿನ ಆದೇಶ.

ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 31.10.2009 ಸಂಜೆ 5–00 ಗಂಟೆ.

ಅರ್ಜಿ ಸಲ್ಲಿಸಬೇಕಾದ ವಿಳಾಸ:– ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಜಿಲ್ಲಾ ನ್ಯಾಯಾಲಯ, ತುಮಕೂರು ಜಿಲ್ಲೆ, ತುಮಕೂರು.

I. ಶೀಘ್ರಲಿಪಿಗಾರ ಹುದ್ದೆ: (Stenographers)

ಹುದ್ದೆಗಳ ಸಂಖ್ಯೆ: 4

II. ವೇತನ ಶ್ರೇಣಿ:- 7275-175-7800-200-8600-225-9500-250-10500-300-12300-350-13350- ಇತರ ಭತ್ಯೆಗಳೊಂದಿಗೆ.

III. ಹುದ್ದೆಗಳ ವರ್ಗೀಕರಣ:-

ವರ್ಗೀಕರಣ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಕನ್ನಡ ಮಾಧ್ಯಮ ಅಭ್ಯರ್ಥಿ	ಒಟ್ಟು
ಪರಿಶಿಷ್ಟ ಜಾತಿ	1	-	-	1
ಪ್ರವರ್ಗ- 2A	-	1	-	1
ಸಾಮಾನ್ಯ ಅರ್ಹತೆ	-	1	1	2
ಒಟ್ಟು	**1**	**2**	**1**	**4**

IV. ಶೈಕ್ಷಣಿಕ ವಿದ್ಯಾರ್ಹತೆ :-

(1) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

(2) ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆಯು ನಡೆಸುವ ಹಿರಿಯ ದರ್ಜೆಯ ಕನ್ನಡ ಮತ್ತು ಆಂಗ್ಲ ಭಾಷೆಗಳ ಶೀಘ್ರಲಿಪಿ ಮತ್ತು ಬೆರಳಚ್ಚು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ

(3) ಕರ್ನಾಟಕ ತಾಂತ್ರಿಕ ಪರೀಕ್ಷಾ ಮಂಡಳಿಯು ನಡೆಸುವ ಸೆಕ್ರೆಟೇರಿಯಲ್ ಪ್ರ್ಯಾಕ್ಟೀಸ್ ಪಠ್ಯಕ್ರಮದ ಡಿಪ್ಲೊಮಾ ಪದವಿಯೊಂದಿಗೆ ಕನ್ನಡ ಮತ್ತು ಆಂಗ್ಲ ಭಾಷೆಗಳ ಶೀಘ್ರಲಿಪಿ ಮತ್ತು ಬೆರಳಚ್ಚು ವಿಷಯಗಳನ್ನು ಐಚ್ಛಿಕ ವಿಷಯಗಳನ್ನಾಗಿ ಹೊಂದಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ.

V. ಅರ್ಹತಾ ಪರೀಕ್ಷೆ:-

1 ನಿಮಿಷಕ್ಕೆ 120 ಶಬ್ದಗಳಂತೆ 5 ನಿಮಿಷಗಳ ಅವಧಿಯ ಉಕ್ತಲೇಖನ ಮತ್ತು ಅದನ್ನು ಲಿಪ್ಯಂತರ ಮಾಡಲು 45 ನಿಮಿಷಗಳ ಅವಧಿ.

ಸಾಮಾನ್ಯ ಸೂಚನೆಗಳು:

(1) ಅಭ್ಯರ್ಥಿಯು ಈ ಅಧಿಸೂಚನೆಯಲ್ಲಿ ಲಗ್ತೀಕರಿಸಿದ ನಿಗದಿತ ಅರ್ಜಿ ನಮೂನೆಯಲ್ಲಿ ಬೆರಳಚ್ಚು ಮಾಡಿಸಿದ ಅಥವಾ ಗಣಕೀಕೃತ ಅರ್ಜಿಯನ್ನು ತನ್ನ ಕೈಬರವಣಿಗೆಯಲ್ಲಿ ಭರ್ತಿ ಮಾಡಿ ಸಲ್ಲಿಸತಕ್ಕದ್ದು.

(2) ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಹಾಗೂ ಮೀಸಲಾತಿಯಡಿಯಲ್ಲಿ ಅರ್ಜಿ ಹಾಕಲು ಬಯಸುವವರು ಆಯಾ ಹುದ್ದೆಗಳಿಗೆ ಪ್ರತ್ಯೇಕವಾಗಿ ನಿಗದಿತ ಅರ್ಜಿ ನಮೂನೆಗಳಲ್ಲಿ ಅರ್ಜಿ ಸಲ್ಲಿಸತಕ್ಕದ್ದು.

(3) ಅಭ್ಯರ್ಥಿಯು ಇತ್ತೀಚಿನ ಪಾಸ್‌ಪೋರ್ಟ್ ಸೈಜ್ ಫೋಟೋವನ್ನು ಅರ್ಜಿ ನಮೂನೆಯಲ್ಲಿ ತೋರಿಸಿರುವ ಜಾಗದಲ್ಲಿ ಅಂಟಿಸಿ ಅದರ ಮೇಲೆ ಸಹಿ ಮಾಡತಕ್ಕದ್ದು.

(4) ಅರ್ಜಿ ನಮೂನೆಯೊಂದಿಗೆ ಸಲ್ಲಿಸಬೇಕಾಗಿರುವ ಶೈಕ್ಷಣಿಕ ವಿದ್ಯಾರ್ಹತೆಯ ಅಂಕಪಟ್ಟಿಗಳನ್ನು ಹಾಗೂ ಇತರ ಪ್ರಮಾಣ ಪತ್ರಗಳನ್ನು ಸ್ವಯಂ ದೃಢೀಕರಿಸತಕ್ಕದ್ದು. ಅರ್ಜಿಯೊಂದಿಗೆ ಮೂಲ ಪ್ರತಿಗಳನ್ನು ಲಗತ್ತಿಸುವ ಅವಶ್ಯಕತೆ ಇರುವುದಿಲ್ಲ. ಲಗ್ತೀಕರಿಸಿದ ಪ್ರಮಾಣಪತ್ರಗಳು ಅರ್ಜಿ ಸಲ್ಲಿಸುವ ದಿನಾಂಕದ ಒಳಗೆ ಪಡೆದಿರಬೇಕು.

(5) ಅಭ್ಯರ್ಥಿಗಳು ಅರ್ಜಿಯೊಂದಿಗೆ ತಮ್ಮ ನಡತೆ ಮತ್ತು ಶೀಲದ ಬಗ್ಗೆ ತಮ್ಮ ಸಂಬಂಧಿಯಲ್ಲದ ಸಮಾಜದ ಇಬ್ಬರು ಗಣ್ಯ ವ್ಯಕ್ತಿಗಳಿಂದ ಪಡೆದ ಎರಡು ಪ್ರಮಾಣ ಪತ್ರಗಳನ್ನು ಹಾಗೂ ಕೊನೆಯಲ್ಲಿ ವ್ಯಾಸಂಗ ಮಾಡಿದ ಶಾಲೆ/ವಿದ್ಯಾಲಯದಿಂದ ಪಡೆದ ಒಂದು ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು.

(6) ಶೀಘ್ರಲಿಪಿಗಾರ ಹುದ್ದೆಗಳ ಅಭ್ಯರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಿ ಅರ್ಹರಾದ ಅಭ್ಯರ್ಥಿಗಳಿಗೆ 1 : 5 ರ ಅನುಪಾತದಲ್ಲಿ, ಸಂದರ್ಶನಕ್ಕೆ ಕರೆ ನೀಡಲಾಗುವುದು.

ವಯೋಮಿತಿ:-

(ಅ) ಅರ್ಜಿಗಳನ್ನು ಸ್ವೀಕರಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು ಕನಿಷ್ಟ 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು.

(ಆ) **ಗರಿಷ್ಟ ವಯೋಮಿತಿ** :- ಸಾಮಾನ್ಯ ವರ್ಗ : 35 ವರ್ಷಗಳು

2ಎ, 2ಬಿ, 3ಎ, 3ಬಿ : 38 ವರ್ಷಗಳು

ಪರಿಶಿಷ್ಟಜಾತಿ: ಪರಿಶಿಷ್ಟ ಪಂಗಡ: ಪ್ರವರ್ಗ- 1 : 40 ವರ್ಷಗಳು

(ಇ) ಮಾಜಿ ಸೈನಿಕರಿಗೆ ಗರಿಷ್ಟ ವಯೋಮಿತಿ, ಅವನು ಸಶಸ್ತ್ರ ದಳಗಳಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಆ ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳು ಆಗುವುದೋ ಅಷ್ಟು ವರ್ಷಗಳ ಸಡಿಲಿಕೆ.

(ಈ) ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಹತ್ತು ವರ್ಷಗಳ ಸಡಿಲಿಕೆ.

(ಉ) ಹುಟ್ಟಿದ ದಿನಾಂಕವನ್ನು ತೋರಿಸಿರುವ ಪ್ರಮಾಣ ಪತ್ರದ ಪ್ರತಿಯನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.

(7) **ಮೀಸಲಾತಿ ಹಾಗೂ ವಯೋಮಿತಿ ರಿಯಾಯಿತಿ ಕೋರಿದಲ್ಲಿ ಹಾಜರು ಪಡಿಸಬೇಕಾದ ಸ್ವಯಂ ದೃಢೀಕೃತ ಪ್ರಮಾಣ ಪತ್ರಗಳು:–**

(ಅ) ಸೈನಿಕ ಸೇವೆಯಿಂದ ಬಿಡುಗಡೆಯಾದ : ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ.

(ಆ) ಜಾತಿ ಮೀಸಲಾತಿ ಕೋರುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ತಹಶೀಲ್ದಾರರಿಂದ ಪಡೆದಿರುವ ಪ್ರಮಾಣ ಪತ್ರ.

(ಇ) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ–1 ಮತ್ತು 2 ರಲ್ಲಿ.

(ಈ) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ.

(8) **ಆಯ್ಕೆ ವಿಧಾನ:–**

(ಅ) ಅಭ್ಯರ್ಥಿಗಳ ಆಯ್ಕೆಯು ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರ ಹುದ್ದೆಗಳ) (ನೇಮಕಾತಿ) (ತಿದ್ದುಪಡಿ) ನಿಯಮ 2007 ರ ಪ್ರಕಾರ ನಡೆಸಲಾಗುವುದು.

(ಆ) ಯಾವುದೇ ವರ್ಗಗಳ ಮಹಿಳಾ, ಗ್ರಾಮೀಣ, ಅಂಗವಿಕಲ ಅಥವಾ ಮಾಜಿ ಸೈನಿಕ ಮೀಸಲಾತಿ ಇರುವ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದ ಪಕ್ಷದಲ್ಲಿ ಆ ಸ್ಥಾನಗಳಿಗೆ ಅದೇ ವರ್ಗಗಳ ಅರ್ಹ ಇತರ ಅಭ್ಯರ್ಥಿಗಳಿಂದ ತುಂಬಿಕೊಳ್ಳಲಾಗುವುದು

(9) **ಅಭ್ಯರ್ಥಿಗಳಿಗೆ ಸೂಚನೆ:–**

•(ಅ) ಅಭ್ಯರ್ಥಿಗಳು ನೇಮಕಾತಿ ಸಂಬಂಧದಲ್ಲಿ ಯಾವುದೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅನುಸರಿಸಿರುವುದು ಕಂಡು ಬಂದಲ್ಲಿ ಅಂತಹವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

(ಆ) ಅಪೂರ್ಣವಾಗಿರುವ, ಸಹಿ ಮಾಡದ ಮತ್ತು ವಿದ್ಯಾರ್ಹತೆ, ಮೀಸಲಾತಿ ಹಾಗೂ ವಯೋಮಿತಿ ರಿಯಾಯಿತಿ ಬಗ್ಗೆ ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

(ಉ) ಸರ್ಕಾರಿ ಮತ್ತು ಅರೆ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಸಮುಚಿತ ಮಾರ್ಗದ ಮುಖಾಂತರ ಸಲ್ಲಿಸಬೇಕು.

(ಊ) ಅಭ್ಯರ್ಥಿಗಳು ತಮ್ಮ ಅರ್ಜಿಯ ಜೊತೆ 5–00 ರೂ.ಗಳ ಸ್ಟಾಂಪು ಲಗತ್ತಿಸಿರುವ ಸ್ವವಿಳಾಸವಿರುವ ಲಕೋಟೆಯನ್ನು ಲಗತ್ತಿಸಿರಬೇಕು.

(ಋ) ಅರ್ಜಿದಾರರು ಯಾವ ಹುದ್ದೆಗಳಿಗೆ ಅರ್ಜಿಗಳನ್ನು ಸಲ್ಲಿಸುತ್ತಿದ್ದಾರೆಂಬುದನ್ನು ದಪ್ಪ ಅಕ್ಷರಗಳಲ್ಲಿ ಲಕೋಟೆಯ ಮೇಲೆ ನಮೂದಿಸಿರಬೇಕು.

(ೠ) ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗುವುದು.

(ಎ) ಅಭ್ಯರ್ಥಿಗೆ ಸಂದರ್ಶನಕ್ಕೆ ಹಾಜರಾಗಲು ಮಾಹಿತಿ ಸಿಗದಿದ್ದ ಪಕ್ಷದಲ್ಲಿ ಅವರು ಸಂದರ್ಶನಕ್ಕೆ ಹಾಜರಾಗಲು ಅನರ್ಹರೆಂದು ತಿಳಿಯತಕ್ಕದ್ದು. ಈ ಬಗ್ಗೆ ಯಾವುದೇ ಪತ್ರ ವ್ಯವಹಾರಗಳಿಗೆ ಅವಕಾಶವಿರುವುದಿಲ್ಲ.

(ಏ) ವಿವರ ತುಂಬಿರುವ ಅರ್ಜಿಗಳನ್ನು ಈ ಕಛೇರಿಯ ವಿರಾಮದ ವೇಳೆಯನ್ನು ಹೊರತುಪಡಿಸಿ ಕೆಲಸದ ವೇಳೆಯಲ್ಲಿ ಮಾತ್ರ ಸ್ವೀಕರಿಸಲಾಗುವುದು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು.

ಅರ್ಜಿ ನಮೂನೆ

ಭಾವಚಿತ್ರ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು ಜಿಲ್ಲೆ, ತುಮಕೂರು – ಇವರಿಗೆ

ಮಾನ್ಯರೆ,

ತುಮಕೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಪ್ರಕಟಣೆ ಸಂಖ್ಯೆ:ಎಡಿಎಂ –I–134/2009 ದಿನಾಂಕ:01.10.2009 ರ ಪ್ರಕಾರ ಶೀಘ್ರಲಿಪಿಗಾರ ಹುದ್ದೆಗೆ ನಾನು ಈ ಮೂಲಕ ನನ್ನ ವಿವರಗಳೊಂದಿಗೆ ಅರ್ಜಿ ಸಲ್ಲಿಸಿರುತ್ತೇನೆ.

1.	ಅಭ್ಯರ್ಥಿಯ ಹೆಸರು	
2.	ತಂದೆಯ / ತಾಯಿಯ / ಗಂಡನ ಹೆಸರು	

3.	ಪೂರ್ಣ ವಿಳಾಸ				
4.	ವಯಸ್ಸು ಮತ್ತು ಜನ್ಮ ದಿನಾಂಕ				
5.	ಲಿಂಗ	ಪುರುಷ/ ಮಹಿಳೆ			
6.	ರಾಷ್ಟ್ರೀಯತೆ : ಮತ : ಜಾತಿ /ಉಪಜಾತಿ :				
7.	ಯಾವ ಮೀಸಲಾತಿಯಡಿಯಲ್ಲಿ ನೇಮಕಾತಿ ಅಪೇಕ್ಷಿಸುವಿರಿ ?				
8.	ಶೈಕ್ಷಣಿಕ ವಿದ್ಯಾರ್ಹತೆಯ ವಿವರಗಳು :- (ಸ್ವಯಂ ದೃಢೀಕೃತ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು)				
	ಉತ್ತೀರ್ಣ ಹೊಂದಿದ ಪರೀಕ್ಷೆಗಳು	ಉತ್ತೀರ್ಣ ಹೊಂದಿದ ವರ್ಷ ಮತ್ತು ನೊಂದಣಿ ಸಂಖ್ಯೆ	ಗರಿಷ್ಠ ಅಂಕಗಳು	ಪಡೆದಿರುವ ಅಂಕಗಳು	ಶೇಕಡ ವಾರು ಅಂಕಗಳು
ಎ.	ಎಸ್.ಎಸ್.ಎಲ್.ಸಿ./ತತ್ಸಮಾನ ಏಳನೇ ತರಗತಿ ಪರೀಕ್ಷೆ				
ಬಿ.	ಹಿರಿಯ ದರ್ಜೆಯ ಆಂಗ್ಲ ಶೀಘ್ರಲಿಪಿ ಪರೀಕ್ಷೆ ಹಿರಿಯ ದರ್ಜೆಯ ಕನ್ನಡ ಶೀಘ್ರಲಿಪಿ ಪರೀಕ್ಷೆ				
ಸಿ.	ಹಿರಿಯ/ಕಿರಿಯ ದರ್ಜೆಯ ಆಂಗ್ಲ ಬೆರಳಚ್ಚು ಪರೀಕ್ಷೆ				
ಡಿ.	ಹಿರಿಯ/ಕಿರಿಯ ದರ್ಜೆಯ ಕನ್ನಡ ಬೆರಳಚ್ಚು ಪರೀಕ್ಷೆ				
ಎಫ್	ಇತರ ವಿದ್ಯಾರ್ಹತೆಗಳು ಇದ್ದಲ್ಲಿ				
9.	ಜಾತಿ/ಗ್ರಾಮೀಣ/ಮಾಜಿಸೈನಿಕ/ ಅಂಗವಿಕಲ ಮೀಸಲಾತಿ ಸೌಲಭ್ಯ ಪಡೆಯ ಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ				
10.	ಅರ್ಜಿದಾರರು ವಾಹನ ಚಾಲನೆಯ ಲೈಸೆನ್ಸ್ ಹೊಂದಿರುವರೇ? (ಆದೇಶಿಕ ಜಾರಿಕಾರ ಹುದ್ದೆಗೆ ಮಾತ್ರ)				
11.	ಸಲ್ಲಿಸಲು ಇಚ್ಛೆ ಪಡುವ ಇತರ ಯಾವುದಾದರೂ ವಿವರಗಳು				

ಸೂಚನೆ:- ಅಭ್ಯರ್ಥಿಯು ತನಗೆ ಅನ್ವಯವಾಗದ್ದನ್ನು ಹೊಡೆದು ಹಾಕುವುದು.

ಘೋಷಣೆ

ಈ ಮೇಲೆ ನಮೂದಿಸಿರುವ ಮಾಹಿತಿ ಮತ್ತು ವಿವರಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿದ್ದು ಹಾಗೂ ಒಂದು ವೇಳೆ ಅವು ಅಸತ್ಯವೆಂದು ಕಂಡು ಬಂದಲ್ಲಿ ನನ್ನ ಅಭ್ಯರ್ಥಿತನವನ್ನು ಬಿಟ್ಟು ಬಿಡಲು ನಾನು ಬದ್ಧನಾಗಿರುತ್ತೇನೆ/ಬದ್ಧಳಾಗಿರುತ್ತೇನೆ. ನಾನು ಆಯ್ಕೆಗೊಂಡರೆ ತುಮಕೂರು ಜಿಲ್ಲಾ ಘಟಕದ ಯಾವುದೇ ನ್ಯಾಯಾಲಯಗಳಲ್ಲಿ ಕರ್ತವ್ಯ ನಿರ್ವಹಿಸಲು ಸಿದ್ಧನಿದ್ದೇನೆ/ಸಿದ್ಧಳಿದ್ದೇನೆ.

ಸ್ಥಳ:

ದಿನಾಂಕ: ಅಭ್ಯರ್ಥಿಯ ಸಹಿ.

ಅಭ್ಯರ್ಥಿಯು ಸರ್ಕಾರಿ ನೌಕರನಾಗಿದ್ದ ಪಕ್ಷದಲ್ಲಿ ನೇಮಕಾತಿ ಪ್ರಾಧಿಕಾರಗಳ ದೃಢೀಕರಣ ಪತ್ರ

ಶ್ರೀ / ಶ್ರೀಮತಿ ______________________ ಇವರು ನಮ್ಮ ಇಲಾಖೆಯಲ್ಲಿ ದಿನಾಂಕ:__________ರಿಂದ______________ರವರೆಗೆ ಸೇವೆ ಸಲ್ಲಿಸುತ್ತಿದ್ದು ಅಭ್ಯರ್ಥಿಯ ನಡತೆಯು ಉತ್ತಮವಾಗಿದ್ದು ______________ ಹುದ್ದೆಗೆ ಅರ್ಹರಾಗಿರುತ್ತಾರೆ ಮತ್ತು ______________ ಹುದ್ದೆಗೆ ಅರ್ಜಿ ಸಲ್ಲಿಸಲು ಅನುಮತಿ ನೀಡಲಾಗಿದೆ.

ಸ್ಥಳ: ಸಹಿ:

ದಿನಾಂಕ: ಪದನಾಮ:

ಕಛೇರಿಯ ಮೊಹರು:

ಪಿ.ಆರ್. 870

ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೋಲಾರ ಪ್ರಾದೇಶಿಕ ವಿಭಾಗ, ಕೋಲಾರ

2009–10ನೇ ಸಾಲಿಗೆ ಕೈಗೊಳ್ಳಬೇಕಾದ ಮುಂಗಡ ಕಾಮಗಾರಿಗಳು ಹಾಗೂ ಮಣ್ಣು ಮತ್ತು ತೇವಾಂಶ ಸಂರಕ್ಷಣಾ ಕಾಮಗಾರಿಗಳ ಬಗ್ಗೆ ಟೆಂಡರ್

ಎ2.ಬಿಜಿಟಿ.ಟೆಂಡರ್.ಸಿಆರ್.34/2009–10, ದಿನಾಂಕ 5ನೇ ಅಕ್ಟೋಬರ್ 2009

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವಿ ವೈವಿಧ್ಯ ಸಂರಕ್ಷಣೆ ಯೋಜನೆ ಮತ್ತು ಈ ಕೆಳಗೆ ನಮೂದಿಸಿರುವ ಇತರೆ ಯೋಜನೆಗಳಡಿಯಲ್ಲಿ 2009-10ನೇ ಸಾಲಿಗೆ ಮುಂಗಡ ಕಾಮಗಾರಿಗಳನ್ನು ಹಾಗೂ ಮಣ್ಣು ತೇವಾಂಶ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲು ಈ ಮುಂದೆ ತಿಳಿಸಲಾಗಿರುವ ನಿಬಂಧನೆಗಳ ಮೇರೆಗೆ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ.

ದಿನಾಂಕ 26–10–2009ರ ಅಪರಾಹ್ನ 3.00 ಗಂಟೆಯೊಳಗೆ ಮೊಹರು ಮಾಡಿದ ಟೆಂಡರ್ ಸಲ್ಲಿಸುವುದು. ಅದೇ ದಿನ ಈ ಕೆಳಗೆ ಸಹಿ ಮಾಡಿರುವವರು ಅಥವಾ ಇವರಿಂದ ಅಧಿಕೃತವಾಗಿ ನೇಮಿಸಲ್ಪಟ್ಟವರು ಸದರಿ ದಿನಾಂಕದಂದು ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್ ಲಕೋಟೆಯನ್ನು ಅಪರಾಹ್ನ 4 ಗಂಟೆಗೆ ತೆರೆಯುವರು ಮತ್ತು ಸದರಿ ದಿನಾಂಕದಂದು ಯಾವುದೇ ಟೆಂಡರ್ ಬಾರದಿದ್ದಲ್ಲಿ ಅಥವಾ ಕಾರಣಾಂತರದಿಂದ ಟೆಂಡರ್ ನಡೆಯದಿದ್ದಲ್ಲಿ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಪುನಃ 29–10–2009 ರಂದು ಅಪರಾಹ್ನ 3.00 ಗಂಟೆಗೆ ಎರಡನೇ ಬಾರಿಗೆ ನೊಂದಾಯಿತ ಇಚ್ಚೆಯುಳ್ಳ ಅರಣ್ಯ ಗುತ್ತಿಗೆದಾರರಿಂದ ಭರ್ತಿಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು ಮತ್ತು ಟೆಂಡರ್ ಲಕೋಟೆಯನ್ನು ಅದೇ ದಿನ 4.00 ಗಂಟೆಗೆ ತೆರೆಯಲಾಗುವುದು. ಕಾರಣಾಂತರಗಳಿಂದ ಈ ದಿನವೂ ಟೆಂಡರ್ ನಡೆಯದಿದ್ದಲ್ಲಿ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಪುನಃ ದಿನಾಂಕ 31–10–2009ರಂದು ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು ಹಾಗೂ ಅದೇ ದಿನ ಟೆಂಡರ್ ಲಕೋಟೆಯನ್ನು ಸಂಜೆ 4.00 ಘಂಟೆಗೆ ತೆರೆಯಲಾಗುವುದು. ಈ ಬಗ್ಗೆ ಮತ್ತೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ.

1) ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವಿ ವೈವಿಧ್ಯ ಸಂರಕ್ಷಣೆ ಯೋಜನೆ 2009–10ನೇ ಸಾಲಿನಲ್ಲಿ ಕೈಗೊಳ್ಳಬೇಕಾದ ಮುಂಗಡ ಕಾಮಗಾರಿಗಳು ಹಾಗೂ ಮಣ್ಣು, ತೇವಾಂಶ ಸಂರಕ್ಷಣಾ ಕಾಮಗಾರಿಗಳ ವಿವರ

ಕ್ರ. ಸಂ.	ವಿತ್ತ ಶೀರ್ಷಿಕೆ	ವಲಯ		ಕಾಮಗಾರಿ ವಿವರ	ಪರಿಮಾಣ /ವಿಸ್ತೀರ್ಣ (ಹೆ.ಗಳಲ್ಲಿ)	ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ	ಕಾಮಗಾರಿ ಪೂರೈಸಬೇಕಾದ ಅಂತಿಮ ಗಡುವು
I ನೈಸರ್ಗಿಕವಾಗಿ ಅರಣ್ಯ ಪುನಶ್ಚೇತನದ ಪೂರಕ ಕಾರ್ಯಕ್ರಮ								
1	ಕೆಎಸ್‌ಎಫ್ ಎಂಬಿಸಿ ಮಾದರಿ-02	ಕೋಲಾರ	1	2009-10ನೇ ಸಾಲಿನಲ್ಲಿ ಚೆಲುವನಹಳ್ಳಿ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಅಂತರಗಂಗೆ 'ಸಿ' ಬ್ಲಾಕ್ ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				
			ಅ)	0.60X0.60X0.60 ಮೀ. ಅಳತೆಯ ಮುಂಗಡ ಗುಂಡಿ ತೆಗೆಯುವುದು	25	128983	6449	20-2-2010
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	2250 Cmt	131017	6551	
			2	2009-10ನೇ ಸಾಲಿನಲ್ಲಿ ಚೆಲುವನಹಳ್ಳಿ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಅಂತರಗಂಗೆ 'ಸಿ' ಬ್ಲಾಕ್ ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಟ 1 ಮೀ. ಆಳವಿರಬೇಕು)	2018 Cmt	91500	4575	15-1-2010

ಕ್ರ. ಸಂ.	ವಿತ್ತ ಶೀರ್ಷಿಕೆ	ವಲಯ		ಕಾಮಗಾರಿ ವಿವರ	ಪರಿಮಾಣ /ವಿಸ್ತೀರ್ಣ (ಹೆ.ಗಳಲ್ಲಿ)	ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ	ಕಾಮಗಾರಿ ಪೂರೈಸ ಬೇಕಾದ ಅಂತಿಮ ಗಡುವು
			3	2009-10ನೇ ಸಾಲಿನಲ್ಲಿ ತಿರುಮಲಕೊಪ್ಪ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ವಕ್ಕಲೇರಿ 'ಎ' ಬ್ಲಾಕ್ ಅರಣ್ಯ ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				20-2-2010
			ಅ)	0.60X0.60X0.60 ಮೀ. ಆಳತೆಯ ಮುಂಗಡ ಗುಂಡಿ ತೆಗೆಯುವುದು	25	128983	6449	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	2250 Cmt	131017	6551	
			4	2009-10ನೇ ಸಾಲಿನಲ್ಲಿ ತಿರುಮಲಕೊಪ್ಪ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ವಕ್ಕಲೇರಿ 'ಎ' ಬ್ಲಾಕ್ ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಟ 1 ಮೀ. ಆಳವಿರಬೇಕು)	2018 Cmt	91500	4575	15-1-2010
			5	2009-10ನೇ ಸಾಲಿನಲ್ಲಿ ತಿರುಮಲಕೊಪ್ಪ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ವಕ್ಕಲೇರಿ 'ಬಿ' ಬ್ಲಾಕ್ ಅರಣ್ಯ ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				20-2-2010
			ಅ)	0.60X0.60X0.60 ಮೀ. ಆಳತೆಯ ಮುಂಗಡ ಗುಂಡಿ ತೆಗೆಯುವುದು	25	128983	6449	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	2250 Cmt	131017	6551	
			6	2009-10ನೇ ಸಾಲಿನಲ್ಲಿ ತಿರುಮಲಕೊಪ್ಪ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ವಕ್ಕಲೇರಿ 'ಬಿ' ಬ್ಲಾಕ್ ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದತಗಳನ್ನು ತೆಗೆಸುವುದು (ಕನಿಷ್ಟ 1 ಮೀ. ಆಳವಿರಬೇಕು)	2018	91500	4575	15-1-2010
		ಮಾಲೂರು	1	2009-10ನೇ ಸಾಲಿನಲ್ಲಿ ಗುಲ್ಲಹಳ್ಳಿ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಕೆಎಸ್‌ಎಫ್ 4ನೇ ಬ್ಲಾಕ್ (ಎ ಬ್ಲಾಕ್) ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				20-2-2010
			ಅ)	0.60X0.60X0.60 ಮೀ. ಆಳತೆಯ ಮುಂಗಡ ಗುಂಡಿ ತೆಗೆಯುವುದು	25	128983	6449	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	2250 Cmt	131017	6551	
			2	2009-10ನೇ ಸಾಲಿನಲ್ಲಿ ಗುಲ್ಲಹಳ್ಳಿ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಕೆಎಸ್‌ಎಫ್ ೪ನೇ ಬ್ಲಾಕ್‌ನ (ಎ-ಬ್ಲಾಕ್) ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಟ 1 ಮೀ. ಆಳವಿರಬೇಕು)	2018 Cmt	91500	4575	15-1-2010
			3	2009-10ನೇ ಸಾಲಿನಲ್ಲಿ ಗುಲ್ಲಹಳ್ಳಿ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಕೆಎಸ್‌ಎಫ್ 4ನೇ ಬ್ಲಾಕ್ (ಬಿ-ಬ್ಲಾಕ್) ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				20-2-2010
			ಅ)	0.60X0.60X0.60 ಮೀ. ಆಳತೆಯ ಮುಂಗಡ ಗುಂಡಿ ತೆಗೆಯುವುದು	25	128983	6449	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	2250 Cmt	131017	6551	
			4	2009-10ನೇ ಸಾಲಿನಲ್ಲಿ ಗುಲ್ಲಹಳ್ಳಿ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಕೆಎಸ್‌ಎಫ್ 4ನೇ ಬ್ಲಾಕ್‌ನ (ಬಿ-ಬ್ಲಾಕ್) ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಟ 1 ಮೀ. ಆಳವಿರಬೇಕು)	2018 Cmt	91500	4575	15-1-2010

ಕ್ರ. ಸಂ.	ವಿತ್ತ ಶೀರ್ಷಿಕೆ	ವಲಯ		ಕಾಮಗಾರಿ ವಿವರ	ಪರಿಮಾಣ /ವಿಸ್ತೀರ್ಣ (ಹೆ.ಗಳಲ್ಲಿ)	ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ	ಕಾಮಗಾರಿ ಪೂರೈಸ ಬೇಕಾದ ಅಂತಿಮ ಗಡುವು
			5	2009-10ನೇ ಸಾಲಿನಲ್ಲಿ ಮೂತನೂರು ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಕೆಎಸ್‌ಎಫ್ 3 ಮತ್ತು 4ನೇ ಬ್ಲಾಕ್ ಅರಣ್ಯ ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				20-2-2010
			ಅ)	0.60X0.60X0.60 ಮೀ. ಆಳತೆಯ ಮುಂಗಡ ಗುಂಡಿ ತೆಗೆಯುವುದು	25	128983	6449	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	2250 Cmt	131017	6551	
			6	2009-10ನೇ ಸಾಲಿನಲ್ಲಿ ಮೂತನೂರು ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಕೆಎಸ್‌ಎಫ್ 3 ಮತ್ತು 4ನೇ ಬ್ಲಾಕ್‌ನ ಅರಣ್ಯ ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಟ 1 ಮೀ. ಆಳವಿರಬೇಕು)	2018 Cmt	91500	4575	15-1-2010
			7	2009-10ನೇ ಸಾಲಿನಲ್ಲಿ ಮೂತನೂರು ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಕೆಎಸ್‌ಎಫ್ 3 ಮತ್ತು 4ನೇ ಬ್ಲಾಕ್ ಅರಣ್ಯ ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				20-2-2010
			ಅ)	0.60X0.60X0.60 ಮೀ. ಆಳತೆಯ ಮುಂಗಡ ಗುಂಡಿ ತೆಗೆಯುವುದು	25	128983	6449	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	2250 Cmt	131017	6551	
			8	2009-10ನೇ ಸಾಲಿನಲ್ಲಿ ಮೂತನೂರು ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಕೆಎಸ್‌ಎಫ್ 3 ಮತ್ತು 4ನೇ ಬ್ಲಾಕ್‌ನ ಅರಣ್ಯ ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಟ 1 ಮೀ. ಆಳವಿರಬೇಕು)	2018 Cmt	91500	4575	15-1-2010
		ಶ್ರೀನಿವಾಸಪುರ	1	2009-10ನೇ ಸಾಲಿನಲ್ಲಿ ಕೊತ್ತಪೇಟೆ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಪುಲಗೂರುಕೋಟೆ ಅರಣ್ಯ ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				
			ಅ)	0.60X0.60X0.60 ಮೀ. ಆಳತೆಯ ಮುಂಗಡ ಗುಂಡಿ ತೆಗೆಯುವುದು	10	51593	2580	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	900 Cmt	52407	2620	
			2	2009-10ನೇ ಸಾಲಿನಲ್ಲಿ ಕೊತ್ತಪೇಟೆ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಪುಲಗೂರುಕೋಟೆ ಅರಣ್ಯ ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಟ 1 ಮೀ. ಆಳವಿರಬೇಕು)	807 Cmt	36600	1830	20-2-2010
2	ಕೆಎಸ್‌ಎಫ್ ಎಂಬಿಸಿ ಮಾದರಿ-04	ಕೋಲಾರ	1	2009-10ನೇ ಸಾಲಿನಲ್ಲಿ ಬೆಣ್ಣಂಗೂರು ಗ್ರಾಮ ಅರಣ್ಯ ಸಮಿತಿ ತೊಂಡಾಲ ಅರಣ್ಯ ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				15-1-2010
			ಅ)	ರಿಪ್ಪಿಂಗ್ ಹಾಗೂ 0.60M3 ಆಳತೆಯ ಗುಂಡಿ ತೆಗೆಯುವುದು	25	228333	11417	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	2250 Cmt	131017	6551	
			2	2009-10ನೇ ಸಾಲಿನಲ್ಲಿ ಬೆಣ್ಣಂಗೂರು ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ತೊಂಡಾಲ ಅರಣ್ಯ ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಟ 1 ಮೀ. ಆಳವಿರಬೇಕು)	3104 Cmt	140750	7038	20-2-2010

ಕ್ರ. ಸಂ.	ವಿತ್ತ ಶೀರ್ಷಿಕೆ	ವಲಯ		ಕಾಮಗಾರಿ ವಿವರ	ಪರಿಮಾಣ /ವಿಸ್ತೀರ್ಣ (ಹೆ.ಗಳಲ್ಲಿ)	ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ	ಕಾಮಗಾರಿ ಪೂರೈಸ ಬೇಕಾದ ಅಂತಿಮ ಗಡುವು
			3	2009-10ನೇ ಸಾಲಿನಲ್ಲಿ ತಿರುಮಲಕೊಪ್ಪ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯು ವಕ್ಕಲೇರಿ 1ನೇ ಬ್ಲಾಕ್ ಅರಣ್ಯ ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				15-1-2010
			ಅ)	0.60X0.60X0.60 ಮೀ. ಅಳತೆಯ ಮುಂಗಡ ಗುಂಡಿ ತೆಗೆಯುವುದು	15	137000	6850	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	1350 Cmt	78610	3931	
			4	2009-10ನೇ ಸಾಲಿನಲ್ಲಿ ತಿರುಮಲಕೊಪ್ಪ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯು ವಕ್ಕಲೇರಿ 1ನೇ ಬ್ಲಾಕ್ ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಠ 1 ಮೀ. ಆಳವಿರಬೇಕು)	1862 Cmt	84450	4223	20-2-2010
			5	2009-10ನೇ ಸಾಲಿನಲ್ಲಿ ತಿರುಮಲಕೊಪ್ಪ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯು ವಕ್ಕಲೇರಿ 2ನೇ ಬ್ಲಾಕ್ ಅರಣ್ಯ ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				15-1-2010
			ಅ)	0.60X0.60X0.60 ಮೀ. ಅಳತೆಯ ಮುಂಗಡ ಗುಂಡಿ ತೆಗೆಯುವುದು	15	137000	6850	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	1350 Cmt	78610	3931	
			6	2009-10ನೇ ಸಾಲಿನಲ್ಲಿ ತಿರುಮಲಕೊಪ್ಪ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯು ವಕ್ಕಲೇರಿ 2ನೇ ಬ್ಲಾಕ್ ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಠ 1 ಮೀ. ಆಳವಿರಬೇಕು)	1862 Cmt	84450	4223	20-2-2010
2	ಕೆಎಸ್‌ಎಫ್ ಎಂಬಿಸಿ ಮಾದರಿ-04	ಮಾಲೂರು	1	2009-10ನೇ ಸಾಲಿನಲ್ಲಿ ಗುಲ್ಲಹಳ್ಳಿ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯು ಕೆಎಸ್‌ಎಫ್ 4ನೇ ಬ್ಲಾಕ್ (ಎ ಬ್ಲಾಕ್) ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				15-1-2010
			ಅ)	0.60X0.60X0.60 ಮೀ. ಅಳತೆಯ ಮುಂಗಡ ಗುಂಡಿ ತೆಗೆಯುವುದು	25	228333	11417	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	2250 Cmt	131017	6551	
			2	2009-10ನೇ ಸಾಲಿನಲ್ಲಿ ಗುಲ್ಲಹಳ್ಳಿ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯು ಕೆಎಸ್‌ಎಫ್ ೪ನೇ ಬ್ಲಾಕ್‌ನ (ಎ-ಬ್ಲಾಕ್) ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಠ 1 ಮೀ. ಆಳವಿರಬೇಕು)	3104 Cmt	140750	7038	20-2-2010
		ಬಂಗಾರಪೇಟೆ	1	2009-10ನೇ ಸಾಲಿನಲ್ಲಿ ಬತ್ಲಹಳ್ಳಿ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯು ಕೆಎಸ್‌ಎಫ್ 1ನೇ ಬ್ಲಾಕ್ ಅರಣ್ಯ ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				15-1-2010
			ಅ)	0.60X0.60X0.60 ಮೀ. ಅಳತೆಯ ಮುಂಗಡ ಗುಂಡಿ ತೆಗೆಯುವುದು	25	228333	11417	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	2250 Cmt	131017	6551	
			2	2009-10ನೇ ಸಾಲಿನಲ್ಲಿ ಬತ್ಲಹಳ್ಳಿ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯು ಕೆಎಸ್‌ಎಫ್ 1ನೇ ಬ್ಲಾಕ್ ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಠ 1 ಮೀ. ಆಳವಿರಬೇಕು)	3104 Cmt	140750	7038	20-2-2010

ಕ್ರ. ಸಂ.	ವಿತ್ತ ಶೀರ್ಷಿಕೆ	ವಲಯ		ಕಾಮಗಾರಿ ವಿವರ	ಪರಿಮಾಣ /ವಿಸ್ತೀರ್ಣ (ಹೆ.ಗಳಲ್ಲಿ)	ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ	ಕಾಮಗಾರಿ ಪೂರೈಸ ಬೇಕಾದ ಅಂತಿಮ ಗಡುವು
			3	2009-10ನೇ ಸಾಲಿನಲ್ಲಿ ತಳೂರು ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				15-1-2010
			ಅ)	0.60X0.60X0.60 ಮೀ. ಅಳತೆಯ ಮುಂಗಡ ಗುಂಡಿ ತೆಗೆಯುವುದು	25	228333	11417	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	2250 Cmt	131017	6551	
			4	2009-10ನೇ ಸಾಲಿನಲ್ಲಿ ತಳೂರು ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಠ 1 ಮೀ. ಆಳವಿರಬೇಕು)	3104 Cmt	140750	7038	20-2-2010
		ಮುಳಬಾಗಿಲು	1	2009-10ನೇ ಸಾಲಿನಲ್ಲಿ ಕುನಿಬಂಡೆ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಗೋಕುಂಟೆ ಅರಣ್ಯ ಪ್ರದೇಶದ ಬ್ಲಾಕ್-'ಎ' ಯಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				15-1-2010
			ಅ)	0.50X0.60X0.60 ಮೀ. ಅಳತೆಯ ಮುಂಗಡ ಗುಂಡಿ ತೆಗೆಯುವುದು	25	228333	11417	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	2250 Cmt	131017	6551	
			2	2009-10ನೇ ಸಾಲಿನಲ್ಲಿ ಕುನಿಬಂಡೆ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಗೋಕುಂಟೆ ಅರಣ್ಯ ಪ್ರದೇಶದ ಬ್ಲಾಕ್-'ಎ' ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಠ 1 ಮೀ. ಆಳವಿರಬೇಕು)	3104 Cmt	140750	7038	20-2-2010
			3	2009-10ನೇ ಸಾಲಿನಲ್ಲಿ ಕುನಿಬಂಡೆ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಗೋಕುಂಟೆ ಅರಣ್ಯ ಪ್ರದೇಶದ ಬ್ಲಾಕ್-'ಬಿ' ಯಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				15-1-2010
			ಅ)	0.60X0.60X0.60 ಮೀ. ಅಳತೆಯ ಮುಂಗಡ ಗುಂಡಿ ತೆಗೆಯುವುದು	25	228333	11417	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	2250 Cmt	131017	6551	
			4	2009-10ನೇ ಸಾಲಿನಲ್ಲಿ ಕುನಿಬಂಡೆ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಗೋಕುಂಟೆ ಅರಣ್ಯ ಪ್ರದೇಶದ ಬ್ಲಾಕ್-'ಬಿ' ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಠ 1 ಮೀ. ಆಳವಿರಬೇಕು)	3104 Cmt	140750	7038	20-2-2010
			5	2009-10ನೇ ಸಾಲಿನಲ್ಲಿ ವಮ್ಮಸಂದ್ರ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಗೋಕುಂಟೆ ಅರಣ್ಯ ಪ್ರದೇಶದ 1ನೇ ಬ್ಲಾಕ್‌ನಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				15-1-2010
			ಅ)	0.60X0.60X0.60 ಮೀ. ಅಳತೆಯ ಮುಂಗಡ ಗುಂಡಿ ತೆಗೆಯುವುದು	15	137000	6850	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	1350 Cmt	78610	3931	
			6	2009-10ನೇ ಸಾಲಿನಲ್ಲಿ ವಮ್ಮಸಂದ್ರ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯ ಗೋಕುಂಟೆ ಅರಣ್ಯ ಪ್ರದೇಶದ 1ನೇ ಬ್ಲಾಕ್‌ನಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಠ 1 ಮೀ. ಆಳವಿರಬೇಕು)	1862 Cmt	84450	4223	20-2-2010

ಕ್ರ. ಸಂ.	ವಿತ್ತ ಶೀರ್ಷಿಕೆ	ವಲಯ		ಕಾಮಗಾರಿ ವಿವರ	ಪರಿಮಾಣ /ವಿಸ್ತೀರ್ಣ (ಹೆ.ಗಳಲ್ಲಿ)	ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ	ಕಾಮಗಾರಿ ಪೂರೈಸ ಬೇಕಾದ ಅಂತಿಮ ಗಡುವು
			7	2009-10ನೇ ಸಾಲಿನಲ್ಲಿ ವಮ್ಮಸಂದ್ರ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯು ಗೋಕುಂಟೆ ಅರಣ್ಯ ಪ್ರದೇಶದ 2ನೇ ಬ್ಲಾಕ್‌ನಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				15-1-2010
			ಅ)	0.60X0.60X0.60 ಮೀ. ಅಳತೆಯ ಮುಂಗಡ ಗುಂಡಿ ತೆಗೆಯುವುದು	15	137000	6850	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	1350 Cmt	78610	3931	
			8	2009-10ನೇ ಸಾಲಿನಲ್ಲಿ ವಮ್ಮಸಂದ್ರ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯು ಗೋಕುಂಟೆ ಅರಣ್ಯ ಪ್ರದೇಶದ 2ನೇ ಬ್ಲಾಕ್‌ನಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಠ 1 ಮೀ. ಆಳವಿರಬೇಕು)	1862 Cmt	84450	4223	20-2-2010
		ಶ್ರೀನಿವಾಸಪುರ	1	2009-10ನೇ ಸಾಲಿನಲ್ಲಿ ಕತ್ತಿಬೀಸನಹಳ್ಳಿ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯು 2ನೇ ಬೀಟ್ ಅರಣ್ಯ ಪ್ರದೇಶದ 1ನೇ ಬ್ಲಾಕ್‌ನಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				15-1-2010
			ಅ)	0.60X0.60X0.60 ಮೀ. ಅಳತೆಯ ಮುಂಗಡ ಗುಂಡಿ ತೆಗೆಯುವುದು	25	228333	11417	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	2250 Cmt	131017	6551	
			2	2009-10ನೇ ಸಾಲಿನಲ್ಲಿ ಕತ್ತಿಬೀಸನಹಳ್ಳಿ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯು 2ನೇ ಬೀಟ್ ಅರಣ್ಯ ಪ್ರದೇಶದ 1ನೇ ಬ್ಲಾಕ್ ಅರಣ್ಯ ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಠ 1 ಮೀ. ಆಳವಿರಬೇಕು)	3104 Cmt	14750	738	20-2-2010
			3	2009-10ನೇ ಸಾಲಿನಲ್ಲಿ ಶ್ರೀನಿವಾಸಪುರ 2ನೇ ಬೀಟ್ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯು 2ನೇ ಬ್ಲಾಕ್‌ನಲ್ಲಿ ಅರಣ್ಯ ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				15-1-2010
			ಅ)	0.60X0.60X0.60 ಮೀ. ಅಳತೆಯ ಮುಂಗಡ ಗುಂಡಿ ತೆಗೆಯುವುದು	25	228333	11417	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	2250 Cmt	131017	6551	
			4	2009-10ನೇ ಸಾಲಿನಲ್ಲಿ ಶ್ರೀನಿವಾಸಪುರ 2ನೇ ಬೀಟ್ ಗ್ರಾಮ ಅರಣ್ಯ ಸಮಿತಿ ವ್ಯಾಪ್ತಿಯು 2ನೇ ಬ್ಲಾಕ್ ಅರಣ್ಯ ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಠ 1 ಮೀ. ಆಳವಿರಬೇಕು)	3104 Cmt	14750	738	20-2-2010
3	ಕ್ಷೀಣಿತ ಅರಣ್ಯ ಅಭಿವೃದ್ಧಿ ಯೋಜನೆ	ಕೋಲಾರ	1	2009-10ನೇ ಸಾಲಿನಲ್ಲಿ ಅಂತರಗಂಗೆ 'ಬ' ಬ್ಲಾಕ್ ಅರಣ್ಯ ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				10-2-2010
			ಅ)	0.45X0.45X0.45 ಮೀ. ಅಳತೆಯ ಮುಂಗಡ ಗುಂಡಿ ತೆಗೆಯುವುದು	28	167852	8393	
			ಆ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	700 Cmt	31380	1569	
			2	2009-10ನೇ ಸಾಲಿನಲ್ಲಿ ಅಂತರಗಂಗೆ 'ಬ' ಬ್ಲಾಕ್ ಅರಣ್ಯ ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗೆಸುವುದು (ಕನಿಷ್ಠ 1 ಮೀ. ಆಳವಿರಬೇಕು)	2337 Cmt	105970	5299	10-2-2010

ಕ್ರ. ಸಂ.	ವಿತ್ತ ಶೀರ್ಷಿಕೆ	ವಲಯ		ಕಾಮಗಾರಿ ವಿವರ	ಪರಿಮಾಣ /ವಿಸ್ತೀರ್ಣ (ಹೆ.ಗಳಲ್ಲಿ)	ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ	ಕಾಮಗಾರಿ ಪೂರೈಸ ಬೇಕಾದ ಅಂತಿಮ ಗಡುವು
4	ಕಲ್ಚರಲ್ ಆಪರೇಷನ್	ಮಾಲೂರು	1	2009-10ನೇ ಸಾಲಿನಲ್ಲಿ ನ್ಯೂಕೂರಾಂಡಹಳ್ಳಿ ಅರಣ್ಯ ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				10-2-2010
			ಅ)	ರಿಪ್ಪಿಂಗ್ ಹಾಗೂ 0.60M3 ಅಳತೆಯ ಗುಂಡಿ ತೆಗೆಯುವುದು	30	271210	13561	
			ಅ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	2550 Cmt	115700	5785	
			2	2009-10ನೇ ಸಾಲಿನಲ್ಲಿ ನ್ಯೂಕೂರಾಂಡಹಳ್ಳಿ ಅರಣ್ಯ ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗಸುವುದು (ಕನಿಷ್ಟ 1 ಮೀ. ಆಳವಿರಬೇಕು)	804 Cmt	36465	1823	10-2-2010
5	ತೆಎಫ್‌ಡಿಎಫ್	ಕೋಲಾರ	1	2009-10ನೇ ಸಾಲಿನಲ್ಲಿ ತೊಂಡಾಲ ಅರಣ್ಯ ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				10-2-2010
			ಅ)	ರಿಪ್ಪಿಂಗ್ ಹಾಗೂ 0.60M3 ಅಳತೆಯ ಗುಂಡಿ ತೆಗೆಯುವುದು	25	226000	11300	
			ಅ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	2125 Cmt	96400	4820	
			2	2009-10ನೇ ಸಾಲಿನಲ್ಲಿ ತೊಂಡಾಲ ಅರಣ್ಯ ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗಸುವುದು (ಕನಿಷ್ಟ 1 ಮೀ. ಆಳವಿರಬೇಕು)	670 Cmt	30400	1520	10-2-2010
5	ಕೆಎಫ್‌ಡಿಎಫ್	ಬಂಗಾರಪೇಟೆ	1	2009-10ನೇ ಸಾಲಿನಲ್ಲಿ ಆರ್‌ಯುಎಸ್‌ಎಫ್ 1ನೇ ಬ್ಲಾಕ್ ಅರಣ್ಯ ಪ್ರದೇಶದಲ್ಲಿ ಮುಂಗಡ ಕಾಮಗಾರಿ ಕೈಗೊಳ್ಳುವುದು				10-2-2010
			ಅ)	ರಿಪ್ಪಿಂಗ್ ಹಾಗೂ 0.60M3 ಅಳತೆಯ ಗುಂಡಿ ತೆಗೆಯುವುದು	33	298300	14915	
			ಅ)	ಜಾನುವಾರು ನಿರೋಧಕ ಕಂದಕ ತೆಗೆಯುವುದು	2805 Cmt	127300	6365	
			2	2009-10ನೇ ಸಾಲಿನಲ್ಲಿ ಆರ್‌ಯುಎಸ್‌ಎಫ್ 1ನೇ ಬ್ಲಾಕ್ ಅರಣ್ಯ ಪ್ರದೇಶದಲ್ಲಿ ಮಣ್ಣು ತೇವಾಂಶ ಸಂರಕ್ಷಣೆಗಾಗಿ ವಿವಿಧ ಗಾತ್ರದ ಇಂಗು ಗುಂಡಿಗಳು ಹಾಗೂ ಕಂದಕಗಳನ್ನು ತೆಗಸುವುದು (ಕನಿಷ್ಟ 1 ಮೀ. ಆಳವಿರಬೇಕು)	884 Cmt	40100	2005	10-2-2010

ನಿಬಂಧನೆಗಳು

1 ಟೆಂಡರ್ ಫಾರಂಗಳನ್ನು ಪ್ರತಿ ಫಾರಂಗೆ ರೂ. 200.00 ಹಾಗೂ ಅನ್ವಯಿಸುವ ತೆರಿಗೆ ಪಾವತಿ ಮಾಡಿ ದಿನಾಂಕ 24-10-2009 ಮತ್ತು 28-10-2009 ಹಾಗೂ 30-10-2009ರಂದು ಕಛೇರಿ ಕೆಲಸದ ವೇಳೆಯಲ್ಲಿ ಅಪರಾಹ್ನ 1.00 ಗಂಟೆಯವರೆಗೆ ಪಡೆಯಬಹುದು ಮತ್ತು ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಈ ವಿಭಾಗದಲ್ಲಿ 2009-10ನೇ ಸಾಲಿಗೆ ತಮ್ಮ ಹೆಸರನ್ನು ಅರಣ್ಯ ಗುತ್ತಿಗೆದಾರರಾಗಿ ನೊಂದಾಯಿಸಿಕೊಂಡಿರಬೇಕು. ತಪ್ಪಿದಲ್ಲಿ ಅಂತಹವರ ಟೆಂಡರ್‌ನ್ನು ಪರಿಗಣಿಸಲಾಗುವುದಿಲ್ಲ.

2 ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಪ್ರತಿ ಘಟಕಕ್ಕೆ ಪ್ರತ್ಯೇಕವಾದ ಮೊಹರು ಮಾಡಿದ ಲಕೋಟೆಯಲ್ಲಿ ಪ್ರತ್ಯೇಕ ಇ.ಎಂ.ಡಿ.ಯೊಂದಿಗೆ ಸಲ್ಲಿಸುವುದು. ಘಟಕವಾರು ಇ.ಎಂ.ಡಿ. ಇಲ್ಲದ ಟೆಂಡರ್‌ಗಳನ್ನು ಸಾರಾಸಗಟಾಗಿ ತಿರಸ್ಕರಿಸಲಾಗುವುದು.

3 ಭರ್ತಿ ಮಾಡಿದ ಟೆಂಡರ್ ಫಾರಂ ಅನ್ನು 26-10-2009ರಂದು ಅಪರಾಹ್ನ 3.00 ಗಂಟೆಯವರೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಕೋಲಾರ ವಿಭಾಗ, ಕೋಲಾರ ಅಥವಾ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳು ಸ್ವೀಕರಿಸುವರು ಮತ್ತು ಅಂದು 4.00 ಗಂಟೆಗೆ ಟೆಂಡರನ್ನು ತೆರೆಯಲಾಗುವುದು. ಒಂದು ವೇಳೆ ಅಂದು ಯಾವುದೇ ಕಾರಣದಿಂದಾಗಿ ಟೆಂಡರ್ ನಡೆಯದಿದ್ದರೆ ಇದೇ ಪ್ರಕಟಣೆಯ ನಿಬಂಧನೆಗಳಿಗೆ ಒಳಪಟ್ಟು ಪುನಃ ದಿನಾಂಕ 29-10-2009ರಂದು ಟೆಂಡರು ಸ್ವೀಕರಿಸಲಾಗುವುದು. ಮತ್ತು ಅಪರಾಹ್ನ 4.00 ಗಂಟೆಗೆ ಟೆಂಡರನ್ನು ತೆರೆಯಲಾಗುವುದು ಈ ದಿನವೂ ಕಾರಣಾಂತರಗಳಿಂದ ಟೆಂಡರ್ ನಡೆಯದಿದ್ದಲ್ಲಿ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಪುನಃ ದಿನಾಂಕ 31-10-2009ರಂದು ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು ಅದೇ ದಿನ ಟೆಂಡರ್ ಲಕೋಟೆಯನ್ನು ಸಂಜೆ 4.00 ಘಂಟೆಗೆ ಟೆಂಡರನ್ನು ತೆರೆಯಲಾಗುವುದು ಈ ಬಗ್ಗೆ ಮತ್ತೆ ಪ್ರತ್ಯೇಕವಾದ ಪ್ರಕಟಣೆ ಹೊರಡಿಸುವುದಿಲ್ಲ.

4 ಈ ಸದರಿ ಕಾಮಗಾರಿಗಳು ಋತುಮಾನದ ಕೆಲಸಗಳಾಗಿದ್ದು ಯಾವುದಾದರೂ ಕಾಮಗಾರಿಯನ್ನು ಟೆಂಡರ್‌ಗೆ ಮುಂಚೆ ಕೈಗೊಂಡಿದ್ದಲ್ಲಿ ಮತ್ತು ಕೆಲಸಗಳನ್ನು ಕೈಬಿಡಬೇಕಾದ ಸಂದರ್ಭದಲ್ಲಿ ಅಂತಹ ಕೆಲಸಗಳನ್ನು ಈ ಪ್ರಕಟಣೆಯ ಟೆಂಡರ್‌ನಿಂದ ಹೊರತುಪಡಿಸಿ ಉಳಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರ್‌ದಾರರಿಗೆ ಕಾಮಗಾರಿ ಕೈಗೊಳ್ಳಲು ಆದೇಶ ನೀಡಲಾಗುವುದು.

5 ಕಾಮಗಾರಿ ಸ್ಥಳಗಳಿಗೆ ಸಂಬಂಧಪಟ್ಟಂತೆ ಹಲವು ಪ್ರದೇಶಗಳು ಗುಡ್ಡಗಾಡು ಪ್ರದೇಶಗಳಾಗಿದ್ದು ಕೆಲಸ ಕಷ್ಟಕರವೆಂದು ಕಾರಣ ಒಡ್ಡಿ ಸ್ಥಳ ಬದಲಾವಣೆ ಮಾಡಲು ಸಾಧ್ಯವಿಲ್ಲ. ಹಾಗೂ ಇದಕ್ಕಾಗಿ ಪ್ರತ್ಯೇಕ ಭತ್ಯೆಯನ್ನು ನೀಡಲಾಗುವುದಿಲ್ಲ. ಟೆಂಡರ್ ಒಪ್ಪಿಗೆಯಾದ ನಂತರ ಕೆಲಸವನ್ನು ಸ್ಥಗಿತಗೊಳಿಸಿದಲ್ಲಿ ಟೆಂಡರುದಾರರ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು

6 ಮಣ್ಣು ಮತ್ತು ತೇವಾಂಶ ಸಂರಕ್ಷಣಾ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ತೆಗೆಯಲಾಗುವ ಯಾವುದೇ ಟ್ರೆಂಚುಗಳನ್ನು ಕನಿಷ್ಠ 1Mt X 1Mt X 1Mt ಆಳತೆಯದ್ದಾಗಿರಬೇಕು

7 ಪ್ರತಿ ಟೆಂಡರ್‌ದಾರರು ಕಾಮಗಾರಿಗಳನ್ನು ನೆರವೇರಿಸಲು ಅಗತ್ಯವಿರುವ ಸಲಕರಣೆಗಳನ್ನು ಹಾಗೂ ಸಾಗಾಣಿಕೆ ವ್ಯವಸ್ಥೆಯನ್ನು ಸ್ವಂತವಾಗಿ ಮಾಡಿಕೊಳ್ಳಬೇಕು. ಇದಕ್ಕೆ ಪ್ರತ್ಯೇಕ ಭತ್ಯೆ ನೀಡಲಾಗುವುದಿಲ್ಲ.

8 ಈ ಮೇಲಿನ ಕೆಲಸಗಳಿಗೆ ಟೆಂಡರ್ ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ಆಯಾ ಕೆಲಸಕ್ಕೆ ನಿಗಧಿಪಡಿಸಿರುವ ಇ.ಎಂ.ಡಿ. ಹಾಗೂ ಭದ್ರತಾ ಠೇವಣಿ ಮೊತ್ತಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಕೋಲಾರ ವಿಭಾಗ, ಕೋಲಾರ ಇವರ ಪರವಾಗಿ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಡಿ.ಡಿ. ರೂಪದಲ್ಲಿ ಟೆಂಡರ್ ಜೊತೆಗೆ ಸಲ್ಲಿಸಬೇಕು.

9 ಗುತ್ತಿಗೆದಾರರು ಯಾವುದೇ ಷರತ್ತುಗಳನ್ನೊಳಗೊಂಡ ಟೆಂಡರ್‌ಗಳನ್ನು ಸಲ್ಲಿಸಿದಲ್ಲಿ ಅಂತಹ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಇದರ ಬಗ್ಗೆ ಏನಾದರೂ ತಕರಾರುಗಳು ಉದ್ಭವವಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಕೋಲಾರ ಪ್ರಾದೇಶಿಕ ವಿಭಾಗ ಕೋಲಾರ ರವರ ತೀರ್ಮಾನವೇ ಅಂತಿಮವಾಗಿರುತ್ತದೆ.

10 ನಿಗದಿಪಡಿಸಿದ ಅವಧಿಯ ನಂತರ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.

11 ಯಾವುದೇ ಕಾರಣ ನೀಡದೇ ಟೆಂಡರ್‌ಗಳನ್ನು ಒಪ್ಪುವ ಹಾಗೂ ತಿರಸ್ಕರಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೋಲಾರ ಪ್ರಾದೇಶಿಕ ವಿಭಾಗ, ಕೋಲಾರ ಇವರು ಕಾಯ್ದಿರಿಸಿಕೊಂಡಿರುತ್ತಾರೆ.

12 ಟೆಂಡರ್‌ನಲ್ಲಿ ಯಶಸ್ವಿಯಾದ ಅರಣ್ಯ ಗುತ್ತಿಗೆದಾರರಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೋಲಾರ ಪ್ರಾದೇಶಿಕ ವಿಭಾಗ, ಕೋಲಾರ ಇವರಿಂದ ತಿಳುವಳಿಕೆ ನೀಡಿದ 7 ದಿವಸಗಳ ಒಳಗಾಗಿ ನಿರ್ದಿಷ್ಟ ನಮೂನೆಯಲ್ಲಿ ಕರಾರು ನಾಮೆಯನ್ನು ರೂ. 200-00 ಮೌಲ್ಯದ ಛಾಪಾ ಕಾಗದದಲ್ಲಿ ಸಹಿ ಮಾಡಿ ಸಲ್ಲಿಸತಕ್ಕದ್ದು ಈ ಅವಧಿಯನ್ನು ವಿಸ್ತರಿಸುವ ಅಧಿಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೋಲಾರ ಪ್ರಾದೇಶಿಕ ವಿಭಾಗ, ಕೋಲಾರ ಇವರು ಹೊಂದಿರುತ್ತಾರೆ.

13 ಈ ಮೇಲಿನ ಕಾಮಗಾರಿ ಅನುಷ್ಠಾನ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ವಾರ್ಷಿಕ ಕ್ರಿಯಾಯೋಜನೆ ಅನುಮೋದನೆಯ ನಿಬಂಧನೆಗೆ ಒಳಪಟ್ಟಿರುತ್ತದೆ. ಸರ್ಕಾರದಿಂದ ಹಣ ಬಿಡುಗಡೆ ತಡವಾದ ಪಕ್ಷದಲ್ಲಿ ಅಂತಹ ವಿಳಂಬಿತ ಹಣ ಪಾವತಿಗಳಿಗೆ ಯಾವುದೇ ತರಹದ ಬಡ್ಡಿ ನೀಡಲಾಗುವುದಿಲ್ಲ.

14 ಎಲ್ಲಾ ಕೆಲಸಗಳು ಸಕಾಲಕ್ಕೆ ಸರಿಯಾಗಿ ಆಗಿಂದಾಗ್ಗೆ ಮುಕ್ತಾಯವಾದ ನಂತರ ಸದರಿ ಕೆಲಸಗಳನ್ನು ನಿಯಮದಂತೆ ಸಂಬಂಧಿಸಿದ ಅಧಿಕಾರಿಗಳಿಂದ ತನಿಖೆ ಮಾಡಿಸಿ ವಲಯ ಅರಣ್ಯಾಧಿಕಾರಿಗಳ ಮುಖಾಂತರ ಬಿಲ್ಲುಗಳನ್ನು ಕ್ಷೇತ್ರ ಅಳತೆ ಪುಸ್ತಕದೊಂದಿಗೆ (ಎಂಬಿ / ಎಫ್‌ಎನ್‌ಬಿ) ಒಪ್ಪಿಸಬೇಕಾಗುತ್ತದೆ ಮತ್ತು ಬಿಲ್ ಸಂದಾಯ ಮಾಡುವಾಗ ಸದರಿ ಬಿಲ್‌ಗಳಲ್ಲಿ ನಿಯಮದಂತೆ ಚಾಲ್ತಿಯಲ್ಲಿರುವ ಆದಾಯ ತೆರಿಗೆ, ಮಾರಾಟ ತೆರಿಗೆ, ಸರ್‌ಚಾರ್ಜ್ ಮತ್ತು ಭದ್ರತಾ ಠೇವಣಿಯನ್ನು ಕಡಿತಗೊಳಿಸಲಾಗುವುದು ಮತ್ತು ಆಗಿಂದಾಗ್ಗೆ ಬದಲಾಗುವ ತೆರಿಗೆಗಳ ವ್ಯತ್ಯಾಸವನ್ನು ಸಹ ನಿಯಮದಂತೆ ಕಡಿತಗೊಳಿಸಲಾಗುವುದು.

15 ಕೆಲಸಗಳನ್ನು ನಿರ್ವಹಿಸುವಾಗ ಇತರೆ ನೆಡುತೋಪುಗಳಿಗೆ ಹಾನಿ ಉಂಟು ಮಾಡಿದಲ್ಲಿ ಗಿಡ ಮರಗಳನ್ನು ಕಡಿದು ನಾಶಪಡಿಸಿದಲ್ಲಿ ಸರ್ಕಾರಕ್ಕೆ ಆದ ನಷ್ಟದ ಬಗ್ಗೆ ಸಂಬಂಧಪಟ್ಟ ಗುತ್ತಿಗೆದಾರರ ಮೇಲೆ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು.

16 ಕೆಲಸಗಳ ವಿವರಗಳು ಮತ್ತು ಹೆಚ್ಚಿನ ನಿಬಂಧನೆಗಳನ್ನು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ತಿಳಿದುಕೊಳ್ಳಬಹುದಾಗಿದೆ.

17 ಯಾವುದೇ ವಿಭಾಗದಲ್ಲಿ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಿದ್ದರೆ ಅಂತಹವರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ / ಅವಕಾಶವಿರುವುದಿಲ್ಲ. ನ್ಯಾಯಾಲಯಗಳಲ್ಲಿ ಅಪರಾಧಿಗಳೆಂದು ನಿರ್ಧರಿಸಲ್ಪಟ್ಟಂತಹ ಯಾವುದೇ ವ್ಯಕ್ತಿಗಳು ಈ ಟೆಂಡರ್‌ನಲ್ಲಿ ಭಾಗವಹಿಸುವಂತಿಲ್ಲ.

18 ಗುತ್ತಿಗೆದಾರರು ನೇಮಿಸಿಕೊಳ್ಳುವ ಕೆಲಸಗಾರರಿಗೆ ಸರ್ಕಾರದ ನಿಯಮದಂತೆ ಮಜೂರಿ ಮತ್ತಿತರ ಅನುಕೂಲಗಳನ್ನು ಸ್ವತಃ ಗುತ್ತಿಗೆದಾರರೇ ವಹಿಸಬೇಕು. ಇಲಾಖೆಯು ಗುತ್ತಿಗೆದಾರರ ಮತ್ತು ಅವರ ನೌಕರರಿಗೆ ಯಾವುದೇ ನಷ್ಟ / ಹಾನಿ ಇತ್ಯಾದಿಗಳಿಗೆ ಜವಾಬ್ದಾರರಲ್ಲ.

19 ಟೆಂಡರ್‌ನಲ್ಲಿ ನಮೂದಿಸಿದ ಹಣವು ಅಂದಾಜುಪಟ್ಟಿಗಳ ಅಂದಾಜು ಸಂಭವನೀಯ ದರವಾಗಿರುತ್ತದೆ ಹಣವನ್ನು ಪಾವತಿಸುವಾಗ ಮಂಜೂರಾದ ಅಂದಾಜು ಪಟ್ಟಿಯಂತೆ ಹಾಗೂ ಕ್ಷೇತ್ರ ಅಳತೆಯನುಸಾರವಾಗಿ ಹಣ ಪಾವತಿಸಲಾಗುವುದು.

20 ಕಾಮಗಾರಿಯನ್ನು ಅರಣ್ಯ ಇಲಾಖೆಯಿಂದ ಪರಿಶೀಲಿಸಿ ಮಂಜೂರಾದ ಅಂದಾಜು ಪಟ್ಟಿಯ ಅನುಗುಣವಾಗಿ ಮಾಡಬೇಕಾಗಿರುತ್ತದೆ. ಕಾಮಗಾರಿಯ ಗುಣಮಟ್ಟವು ವಲಯ ಅರಣ್ಯಾಧಿಕಾರಿ, ಸಹಾಯಕ ಸಂರಕ್ಷಣಾಧಿಕಾರಿಗಳು ಇವರು ಕಾಲಕಾಲಕ್ಕೆ ನೀಡುವ ಲಿಖಿತ / ಮೌಖಿಕ ಆದೇಶಗಳಿಗನುಗುಣವಾಗಿ ಇರತಕ್ಕದ್ದು ಕೆಲಸಗಳಲ್ಲಿ ಏನಾದರೂ ಪರಿವರ್ತನೆ ಅಥವಾ ಮಾರ್ಪಾಡು ಮಾಡುವುದು ಅವಶ್ಯವೆಂದು ಕಂಡುಬಂದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಲಿಖಿತ ಆದೇಶದ ಮೇರೆಗೆ ಅಂತಹ ಪರಿವರ್ತನೆ ಅಥವಾ ಮಾರ್ಪಾಡುಗಳನ್ನು ಮಂಜೂರಾದ ದರದಲ್ಲಿಯೇ ಮಾಡಲು ಗುತ್ತಿಗೆದಾರರು ಬದ್ದರಾಗಿರುತ್ತಾರೆ.

21 ಕಾಮಗಾರಿಯನ್ನು ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ನಿರ್ದೇಶನದಂತೆ ಪೂರ್ಣಗೊಳಿಸತಕ್ಕದ್ದು ಗುತ್ತಿಗೆಯ ಅವಧಿಯನ್ನು ಸಾಮಾನ್ಯವಾಗಿ ವಿಸ್ತರಿಸಲಾಗುವುದಿಲ್ಲ. ನಿಗಧಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು. ಅತಿ ವಿಶೇಷ ಸಂದರ್ಭಗಳಲ್ಲಿ ಮಾತ್ರ ವಿಸ್ತರಣಾ ಅವಧಿಯಲ್ಲಿ ಮಾಡಿದ ಕೆಲಸಗಳಿಗೆ ಮಂಜೂರಾದ ದರಗಳಲ್ಲಿ ಶೇ.5ರಂತೆ ಕಡಿತದೊಂದಿಗೆ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಹೊಂದಿರುತ್ತಾರೆ. ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯಾಧಿಕಾರಿಗಳು ನೀಡಿದ ನಿರ್ದೇಶನದಂತೆ ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ ಅಂತಹ ಕಾಮಗಾರಿಗಳಿಗೆ ಹಣವನ್ನು ಪಾವತಿಸಲಾಗುವುದಿಲ್ಲ ಮತ್ತು ಇಎಂಡಿ. ಹಾಗೂ ಭದ್ರತಾ ಠೇವಣಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

22 ಟೆಂಡರ್‌ನ್ನು ಕಂಪನಿಯ ವತಿಯಿಂದ / ಸಂಘ ಸಂಸ್ಥೆಗಳು ಕೊಡುವ ಸಂದರ್ಭದಲ್ಲಿ

ಅ) ಕಂಪನಿಯು / ಸಂಘ ಸಂಸ್ಥೆಗಳ ನೊಂದಾಯಿತ ಸಂಸ್ಥೆಗಳಾಗಿರಬೇಕು.

ಆ) ಕಂಪನಿಯ ಎಲ್ಲಾ ಪಾಲುದಾರರಿಗೆ ಟೆಂಡರ್‌ನ್ನು ಸಹಿ ಮಾಡಲು ಸಾಧ್ಯವಾಗದಿದ್ದಲ್ಲಿ ಟೆಂಡರ್ ಸಹಿ ಮಾಡುವ ವ್ಯಕ್ತಿಯು ಈ ಬಗ್ಗೆ ಅಧಿಕಾರ ಪತ್ರ (Power of Attorney) ಪಡೆದುಕೊಂಡಿರಬೇಕು. ಇಂತಹ ಪತ್ರವನ್ನು ಟೆಂಡರ್‌ನೊಂದಿಗೆ ಲಗತ್ತಿಸಿ ಸಲ್ಲಿಸಬೇಕು.

23 ಅರಣ್ಯ ಕೂಲಿಕಾರರ ಸಹಕಾರ ಸಂಘಗಳು ಈ ಕೆಲಸಗಳಿಗೆ ಟೆಂಡರ್ ಕೊಡಲು ಇಚ್ಛಿಸಿದಲ್ಲಿ ಇಎಂಡಿ. ಮತ್ತು ಭದ್ರತಾ ಠೇವಣಿಯನ್ನು ಕಡ್ಡಾಯವಾಗಿ ನೀಡಬೇಕಾಗುವುದು. ಹಾಗೂ ಸಂಘಗಳ ನೊಂದಾವಣಿ ನಿಯಮದಂತೆ ಸಂಘಗಳು ಕಡ್ಡಾಯವಾಗಿ ನೊಂದಾವಣಿಯಾಗಿರಬೇಕು ಇಲ್ಲವಾದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

24 ಯಶಸ್ವಿ ಟೆಂಡರ್‌ದಾರರು ಕರಾರು ನಾಮೆಯನ್ನು ಸಹಿ ಮಾಡಿದ ನಂತರ ಟೆಂಡರ್‌ನ್ನು ಹಿಂತೆಗೆದುಕೊಂಡಲ್ಲಿ ಅಥವಾ ನಿಗಧಿತ ಸಮಯದಲ್ಲಿ ಕಾಮಗಾರಿ ಪ್ರಾರಂಭಿಸದಿದ್ದಲ್ಲಿ ಅಥವಾ ಕಾಮಗಾರಿಯ ಬಗ್ಗೆ ನಿರಾಸಕ್ತಿ ಹೊಂದಿದಲ್ಲಿ ಅಂತಹ ಟೆಂಡರ್‌ದಾರರ ಇಎಂಡಿ. ಮತ್ತು ಭದ್ರತಾ ಠೇವಣಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೆ ಗುತ್ತಿಗೆ ಕೆಲಸವನ್ನು ಮೂಲ ಗುತ್ತಿಗೆದಾರರ ವೆಚ್ಚ ಮತ್ತು ಜವಾಬ್ದಾರಿಯ ಮೇಲೆ ಮರು ಟೆಂಡರ್ ಮಾಡಲಾಗುವುದು. ಟೆಂಡರ್‌ಗೆ ಕಾಲಾವಕಾಶ ಇಲ್ಲದಿದ್ದಲ್ಲಿ ಇಲಾಖೆಯಿಂದ ಕಾಮಗಾರಿಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ಹಾನಿಯಾದ ಮೊತ್ತವನ್ನು ಕರ್ನಾಟಕ ಅರಣ್ಯ ಸಂಹಿತೆ 1963ರ ಕಲಂ 109 ಮತ್ತು 119ರಂತೆ ಭೂಕಂದಾಯ ಬಾಕಿ ವಸೂಲಿಯಂತೆ ವಸೂಲು ಮಾಡಲಾಗುವುದು.

25 ಯಶಸ್ವಿಯಾದ ಬಿಡ್‌ದಾರರು ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಹಣ ಪಾವತಿಸುವಾಗ ಬಿಲ್ಲಿನ ಮೊತ್ತದ ಶೇ.5ರಷ್ಟು ಮೊತ್ತವನ್ನು ಭದ್ರತಾ ಠೇವಣಿಯಾಗಿ ಹಿಡಿಯಲಾಗುವುದು. ಈ ಹಣವನ್ನು ನೆಡುತೋಪು ನಿರ್ಮಾಣದ ಬಗ್ಗೆ ವಲಯ ಅರಣ್ಯಾಧಿಕಾರಿಗಳು ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ದೃಢೀಕರಣ ಪತ್ರ ಮತ್ತು ಕಾಮಗಾರಿಯ ಮುಕ್ತಾಯ ವರದಿ ನೀಡಿದ ನಂತರ ಭದ್ರತಾ ಠೇವಣಿ ಮೊತ್ತವನ್ನು ಹಿಂದಿರುಗಿಸಲಾಗುವುದು.

26 ಕಾಮಗಾರಿ ಪೂರ್ಣಗೊಂಡ ದಿನಾಂಕದಿಂದ 1 ವರ್ಷದ ಒಳಗಾಗಿ ಕಾಮಗಾರಿಯಲ್ಲಿ ಯಾವುದೇ ಲೋಪ / ದೋಷ ಕಂಡುಬಂದಲ್ಲಿ ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ಲೋಪ / ದೋಷ ಪರಿಹರಿಸಬೇಕಾಗುವುದು. ನಂತರ ಭದ್ರತಾ ಠೇವಣಿ ಹಿಂತಿರುಗಿಸಲಾಗುವುದು. ತಪ್ಪಿದಲ್ಲಿ ಭದ್ರತಾ ಠೇವಣಿಯಲ್ಲಿ ಸದರಿ ವೆಚ್ಚವನ್ನು ಭರಿಸಲಾಗುವುದು.

27 ಗುತ್ತಿಗೆದಾರರು ನೇಮಿಸಿಕೊಂಡಿರುವ ಕೂಲಿ ಕಾರ್ಮಿಕರಿಗೆ ಅಪಘಾತ / ಇನ್ನಿತರೆ ಹಾನಿಗಳು ಸಂಭವಿಸಿದಲ್ಲಿ ಅದಕ್ಕೆ ಗುತ್ತಿಗೆದಾರರೆ ಜವಾಬ್ದಾರರಾಗಿದ್ದು ನಷ್ಟ ಪರಿಹಾರವನ್ನು ವೈಯಕ್ತಿಕವಾಗಿ ಗುತ್ತಿಗೆದಾರರೇ ನೀಡಬೇಕಾಗುತ್ತದೆ.

28 ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಲಿಖಿತ ಅನುಮತಿ ಇಲ್ಲದೇ ಯಾವುದೇ ಕೆಲಸವನ್ನು ಟೆಂಡರುದಾರರು ಪ್ರಾರಂಭಿಸಬಾರದು.

29 ಟೆಂಡರ್ ಫಾರಂ ನೀಡುವ ದಿನಗಳಲ್ಲಿ ಗುತ್ತಿಗೆದಾರರ ನೊಂದಣಿಯನ್ನು ಮಾಡಲಾಗುವುದಿಲ್ಲ.

30 ಸರ್ಕಾರದಿಂದ ಆಗಿಂದಾಗ್ಗೆ ಬರುವ ಆದೇಶಗಳನ್ವಯ ಕಾಲ ಕಾಲಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೋಲಾರ ಪ್ರಾದೇಶಿಕ ಅರಣ್ಯ ವಿಭಾಗರವರು ವಿಧಿಸುವ ಷರತ್ತುಗಳ ಬದಲಾವಣೆಗಳಿಗೆ ಗುತ್ತಿಗೆದಾರರು ಬದ್ದರಾಗಿರಬೇಕು.

31 ಟೆಂಡರ್ ಫಾರಂಗಳನ್ನು ಬೇರೆಯವರ ಹೆಸರಿಗೆ ಪರಬಾರೆ ಮಾಡುವಂತಿಲ್ಲ ಈ ಕಛೇರಿಯಿಂದ ನೀಡಲಾದ ಅಧಿಕೃತ ಟೆಂಡರ್ ಫಾರಂಗಳನ್ನು ಹೊರತು ಬೇರಾವ ಮುದ್ರಿತ ಫಾರಂಗಳನ್ನು ಪರಿಗಣಿಸಲಾಗುವುದಿಲ್ಲ.

32 ನಮೂದಿಸಿರುವ ಕಾಮಗಾರಿಗಳಿಗೆ ಸಂಬಂಧಿಸಿದ ಕೆಲಸದ ಸ್ಥಳ, ಪರಿಮಾಣ ಹಾಗೂ ಅಂದಾಜು ಮೊತ್ತಗಳು ಬದಲಾವಣೆಗಳಿಗೆ ಒಳಪಟ್ಟಿರುತ್ತವೆ. ಇದಕ್ಕೆ ಕಾಮಗಾರಿಗಳ ತತ್ಸಂಬಂಧಿತ ವ್ಯತ್ಯಾಸದ ಪರಿಮಾಣಕ್ಕೆ ಪ್ರತ್ಯೇಕ ಟೆಂಡರು ಕರೆಯಲಾಗುವುದಿಲ್ಲ. ಆದರೆ ಅದೇ ದರದಲ್ಲಿ ವ್ಯತ್ಯಾಸಿತ ಪರಿಮಾಣದ ಕೆಲಸಗಳನ್ನು ಕೈಗೊಳ್ಳಲು ಬದ್ದರಾಗಿರಬೇಕಾಗುತ್ತದೆ.

33 ಸಕ್ಷಮ ಪ್ರಾಧಿಕಾರದ ನಿರ್ಧಾರದ ಮೇರಗೆ ಯಾವುದೇ ಕಾಮಗಾರಿ ತೆಗೆದು ಹಾಕುವ ಹೊಸದಾಗಿ ಸೇರ್ಪಡೆ ಮಾಡುವ ಅಧಿಕಾರವು ಉಪ ಅರಣ್ಯ ಸಂರಕ್ಷಣಾಧಿಕಾರಿ ರವರ ಅಧಿಕಾರಕ್ಕೆ ಒಳಪಟ್ಟಿರುತ್ತದೆ.

ಪಿ.ಆರ್. 877 ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೋಲಾರ ವಿಭಾಗ, ಕೋಲಾರ

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕೋಲಾರ ಅರಣ್ಯ ವಿಭಾಗ, ಕೋಲಾರ

ಸಂಕ್ಷಿಪ್ತ ಹರಾಜು ಪ್ರಕಟಣೆ

ಸಂಖ್ಯೆ: ಎ7.ಎಸ್‌ಎಎಸ್.ಕಿಅಉ.ಸಿಆರ್.115/2009-10, ದಿನಾಂಕ: 6ನೇ ಅಕ್ಟೋಬರ್ 2009

ಕೋಲಾರ ವಿಭಾಗದ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, ಕೋಲಾರ ಅರಣ್ಯ ವಿಭಾಗದ ವಿವಿಧ ತಾಲ್ಲೂಕಿನ ಅರಣ್ಯದಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮಕ್ಕೆ ಹಸ್ತಾಂತರಿಸಿ ಉಳಿದಿರುವ ಈ ಕೆಳಗೆ ಕಾಣಿಸಿದ ತಾಲ್ಲೂಕು ಅರಣ್ಯ ಪ್ರದೇಶದಲ್ಲಿರುವ ಹುಣಸೆ ಫಸಲು, ರಸ್ತೆ ಬದಿ ಹುಣಸೆ ಫಸಲು, ಸಿಟ್ರಿಡೋರಾ, ತೂಪ್ರ ಎಲೆ ಮತ್ತು ಸೀತಾಫಲ ಫಸಲು ಗುತ್ತಿಗೆ ಮಾರಾಟವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಕೋಲಾರ ಅಥವಾ ಅವರಿಂದ ನೇಮಿಸಲ್ಪಟ್ಟ ಇತರೆ ಅಧಿಕಾರಿಗಳಿಂದ ಟೆಂಡರ್ -ಕಂ- ಹರಾಜನ್ನು ದಿನಾಂಕ 28-10-2009ರಂದು ಅಪರಾಹ್ನ 3-00 ಗಂಟೆಗೆ ಮಾಡಲಾಗುವುದು. ಟೆಂಡರ್ ಫಾರಂಗಳನ್ನು ದಿನಾಂಕ 27-10-2009ರಂದು ಸಂಜೆ 5.30 ಗಂಟೆಯವರೆಗೆ ಕೊಡಲಾಗುವುದು. ಪ್ರತಿ ಟೆಂಡರ್ ಫಾರಂನ ಬೆಲೆ ರೂ.200-00 (ಇನ್ನೂರು ರೂಪಾಯಿ) ಮತ್ತು ತೆರಿಗೆಗಳು ಮಾತ್ರ. ಮೇಲ್ಕಂಡ ದಿನಾಂಕದಂದು ಟೆಂಡರ್-ಕಂ-ಹರಾಜು ಕಾರಣಾಂತರದಿಂದ ನಡೆಯದಿದ್ದಲ್ಲಿ ಅಥವಾ ಬಾಕಿ ಉಳಿಯುವ ಘಟಕಗಳ ಟೆಂಡರ್-ಕಂ-ಹರಾಜನ್ನು ಇದೇ ಪ್ರಕಟಣೆಯ ಷರತ್ತಿಗೊಳಪಟ್ಟು ದಿನಾಂಕ 31-10-2009ರಂದು ಮರು ಹರಾಜು ಮಾಡಲಾಗುವುದು. ಇದಕ್ಕೆ ಟೆಂಡರು ಫಾರಂಗಳನ್ನು ದಿನಾಂಕ 30-10-2009ರಂದು ಕಛೇರಿ ವೇಳೆಯಲ್ಲಿ ನೀಡಲಾಗುವುದು. ಇದಕ್ಕೆ ಪ್ರತ್ಯೇಕ ಪ್ರಕಟಣೆ ಹೊರಡಿಸುವುದಿಲ್ಲ. ಹೆಚ್ಚಿನ ವಿವರಗಳಿಗೆ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

2009-10ನೇ ಸಾಲಿನ ಗುತ್ತಿಗೆ ಮಾರಾಟ ಮಾಡುವ ಘಟಕದ ಹೆಸರು
(ಒಂದು ವರ್ಷದ ಅವಧಿಗೆ ಮಾತ್ರ)

ಕ್ರ. ಸಂ.	ಅರಣ್ಯ ಉತ್ಪನ್ನದ ಹೆಸರು	ತಾಲ್ಲೂಕು	ಅರಣ್ಯ ಪ್ರದೇಶದ ಹೆಸರು	
1	ಸಿಟ್ರಡೋರಾ	ಕೋಲಾರ	1.	ಕೋಲಾರ ತಾಲ್ಲೂಕು
		ಶ್ರೀನಿವಾಸಪುರ	2.	ಶ್ರೀನಿವಾಸಪುರ ತಾಲ್ಲೂಕು
		ಮುಳಬಾಗಿಲು	3.	ಮುಳಬಾಗಿಲು ತಾಲ್ಲೂಕು
		ಮಾಲೂರು	4.	ಮಾಲೂರು ತಾಲ್ಲೂಕು
2	ಹುಣಸೆ ಫಸಲು	ಬಂಗಾರಪೇಟೆ	1.	ಬಂಗಾರಪೇಟೆ ತಾಲ್ಲೂಕು ಅರಣ್ಯ (ಕೆಎಸ್‌ಎಫ್-VI ಬ್ಲಾಕ್ ಹೊರತುಪಡಿಸಿ)
			2.	ಕಾರಬೆಲೆ ನೆಡುತೋಪು
		ಮಾಲೂರು	3.	ದಿನ್ನೇರಿ ನೆಡುತೋಪು
			4.	ಲಕ್ಷ್ಮೀಸಾಗರ ನೆಡುತೋಪು (ಶ್ರೀ ವೇಣು ಗೋಪಾಲ ಸ್ವಾಮಿ ಗ್ರಾಮ ಅರಣ್ಯ ಸಮಿತಿಯ ವ್ಯಾಪ್ತಿಗೆ ಒಳಪಡುತ್ತದೆ)
			5.	ನ್ಯೂ ಕೂರಂಡಹಳ್ಳಿ ನೆಡುತೋಪು (ಸೀತನಾಯಕನ ಹಳ್ಳಿ ಗ್ರಾಮ ಅರಣ್ಯ ಸಮಿತಿಯ ವ್ಯಾಪ್ತಿಗೆ ಒಳಪಡುತ್ತದೆ)
		ಕೋಲಾರ	6.	ವಕ್ಕಲೇರಿ ನೆಡುತೋಪು
			7.	ಗಾಜಲದಿನ್ನೆ ನೆಡುತೋಪು
		ಮುಳಬಾಗಿಲು	8.	ಕಾಶೀಪುರ ನೆಡುತೋಪು
		ಶ್ರೀನಿವಾಸಪುರ	9.	ರಾಯಲ್ಪಾಡು 1ರಿಂದ 4ನೇ ಬ್ಲಾಕ್
			10	ಕಲ್ಲೂರು – ಮಣಿಗಾನಹಳ್ಳಿ
3	ರಸ್ತೆ ಬದಿ ಹುಣಸೆ ಫಸಲು	ಕೋಲಾರ	1.	ಕೋಲಾರ ತಾಲ್ಲೂಕು ರಸ್ತೆ ಬದಿ
		ಶ್ರೀನಿವಾಸಪುರ	2.	ಶ್ರೀನಿವಾಸಪುರ ತಾಲ್ಲೂಕು ರಸ್ತೆ ಬದಿ
		ಮಾಲೂರು	3.	ಮಾಲೂರು ತಾಲ್ಲೂಕು ರಸ್ತೆ ಬದಿ
		ಮುಳಬಾಗಿಲು	4.	ಮುಳಬಾಗಿಲು ತಾಲ್ಲೂಕು ರಸ್ತೆ ಬದಿ
		ಬಂಗಾರಪೇಟೆ	5.	ಬಂಗಾರಪೇಟೆ ತಾಲ್ಲೂಕು ರಸ್ತೆ ಬದಿ (ಟ್ರೀಪಟ್ಟಾ ನೀಡಿರುವ ಮರಗಳನ್ನು ಹೊರತುಪಡಿಸಿ)
4	ತೂಪ್ರ ಎಲೆ	ಕೋಲಾರ	1.	ಕೋಲಾರ ತಾಲ್ಲೂಕು
		ಶ್ರೀನಿವಾಸಪುರ	2.	ಶ್ರೀನಿವಾಸಪುರ ತಾಲ್ಲೂಕು
		ಮುಳಬಾಗಿಲು	3.	ಮುಳಬಾಗಿಲು ತಾಲ್ಲೂಕು
5	ಸೀತಾಫಲ	ಬಂಗಾರಪೇಟೆ		ಬಂಗಾರಪೇಟೆ ತಾಲ್ಲೂಕು (ಕೆಎಸ್‌ಎಫ್-VI ಬ್ಲಾಕ್ ಹೊರತುಪಡಿಸಿ)

ಷರತ್ತುಗಳು

1 ಇ.ಎಂ.ಡಿ.ಯನ್ನು ಪ್ರತಿ ಘಟಕಕ್ಕೆ ರೂ. 5000-00ರಂತೆ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ.ಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೋಲಾರರವರ ಪರ ತೆಗೆದು ಟೆಂಡರ್‌ನೊಡನೆ ಸಲ್ಲಿಸಬೇಕು.

2 ಬಿಡ್‌ನಲ್ಲಿ ಭಾಗವಹಿಸುವವರು ಬಿಡ್‌ಗೆ ಮುಂಚೆ ನಿಯಮಾನುಸಾರ ಕನಿಷ್ಟ 5000-00 ರೂ.ಗಳ ಮುಂಗಡ ಠೇವಣಿ ಹಣವನ್ನು ಪಾವತಿಸಬೇಕು.

3 ಕೋಲಾರ ವಿಭಾಗದಲ್ಲಿ 2009-10ನೇ ಸಾಲಿಗೆ ಅರಣ್ಯ ಗುತ್ತಿಗೆದಾರರಾಗಿ ನೊಂದಾಯಿಸಿರುವವರು ಮಾತ್ರ ಟೆಂಡರ್ ಮತ್ತು ಹರಾಜಿನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಇತರರಿಗೆ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.

4 ಟೆಂಡರ್ ಫಾರಂಗಳನ್ನು ದಿನಾಂಕ 28-10-2009ರಂದು ಜರುಗುವ ಹರಾಜಿಗೆ 27-10-2009 ಮತ್ತು 31-10-2009ರಂದು ಜರುಗುವ ಹರಾಜಿಗೆ ದಿನಾಂಕ 30-10-2009ರಂದು ಕಛೇರಿ ಕೆಲಸದ ವೇಳೆಯಲ್ಲಿ ಕೊಡಲಾಗುವುದು. ಒಂದು ಟೆಂಡರ್ ಫಾರಂ ಬೆಲೆ ರೂ. 200-00 ಮತ್ತು ತೆರಿಗೆಗಳು ಪ್ರತ್ಯೇಕ.

5 ಮೇಲ್ಕಂಡ ಮಾರಾಟವನ್ನು ಒಪ್ಪುವುದು ಅಥವಾ ನಿರಾಕರಿಸುವುದು ಅರಣ್ಯ ಇಲಾಖಾ ಪ್ರಾಧಿಕಾರವುಳ್ಳ ಅಧಿಕಾರಿಗಳವರ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

6 ಮೊಹರಾದ ಟೆಂಡರ್ ನಮೂನೆಗಳನ್ನು ದಿನಾಂಕ 28-10-2009ರಂದು ಮತ್ತು ದಿನಾಂಕ 31-10-2009ರಂದು ಮಧ್ಯಾಹ್ನ 1-00 ಗಂಟೆಯವರೆಗೆ ಸಲ್ಲಿಸಬಹುದು.

7 ಯಶಸ್ವಿ ಟೆಂಡರು / ಬಿಡ್‌ದಾರರು ಶೇ. 50ರಷ್ಟು ಹಣವನ್ನು ಮತ್ತು ಎಲ್ಲಾ ಅರ್ಹ ತೆರಿಗೆಗಳನ್ನು ಮಾರಾಟ ಮುಗಿದ ತಕ್ಷಣ ಅದೇ ದಿನ ಪಾವತಿಸಬೇಕು. ಹರಾಜು ಮಾರಾಟ ದೃಢೀಕರಣ ಆದೇಶ ನೀಡಿದ ನಂತರ ಕರಾರು ಪತ್ರ ಮಾಡಿಕೊಂಡು ಆ ಸಮಯದಲ್ಲಿ ಬಾಕಿ ಉಳಿದ 50%ರ ಪೂರ್ತಿ ಹಣ ಪಾವತಿ ಮಾಡಬೇಕು. ಇಲ್ಲದಿದ್ದಲ್ಲಿ ಅದರ ಇ.ಎಂ.ಡಿ. ಹಣವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೆ ಆ ಘಟಕವನ್ನು ಅವರ ಜವಾಬ್ದಾರಿಯಲ್ಲಿ ಮರು ಹರಾಜು ಮಾಡಲಾಗುವುದು. ಇದರಿಂದ ಏನಾದರೂ ನಷ್ಟವುಂಟಾದಲ್ಲಿ ಅಂತಹ ನಷ್ಟವನ್ನು ಮೂಲ ಬಿಡ್ ಟೆಂಡರುದಾರರಿಂದ ನಿಯಮಾನುಸಾರ ವಸೂಲು ಮಾಡಲಾಗುವುದು.

8 ಕಪ್ಪು ಪಟ್ಟಿಗೆ ಸೇರಿರುವವರು, ಇನ್‌ಸಾಲ್‌ವೆಂಟ್ಸ್, ಡಿಫಾಲ್ಟರ್ಸ್ ಮತ್ತು ಮೈನರ್ಸ್ ಟೆಂಡರ್ ಸಲ್ಲಿಸುವುದಕ್ಕಾಗಲೀ ಬಿಡ್‌ನಲ್ಲಿ ಭಾಗವಹಿಸುವುದಕ್ಕಾಗಲೀ ಅರ್ಹರಲ್ಲ.

9 ಯಾವುದೇ ಘಟಕವನ್ನು ಟೆಂಡರ್‌ನಿಂದ ಕೈಬಿಡುವ ಅಥವಾ ಸೇರಿಸುವ ಅಧಿಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಕೋಲಾರ ರವರಿಗೆ ಇರುತ್ತದೆ.

10 ಉಳಿದ ವಿವರಗಳು ಮತ್ತು ಷರತ್ತುಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಕೋಲಾರ ರವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಟಿಪ್ಪಣಿ:

1 ಲಕ್ಷ್ಮೀಸಾಗರ ನೆಡುತೋಪಿನ ಫಸಲಿನಿಂದ ಬರುವ ಆದಾಯವನ್ನು ನಿಯಮಾನುಸಾರ ಶ್ರೀ ವೇಣುಗೋಪಾಲ ಸ್ವಾಮಿ ಗ್ರಾಮ ಅರಣ್ಯ ಸಮಿತಿಗೆ ನೀಡಲಾಗುವುದು.

2 ನ್ಯೂಕೂರುಂಡಹಳ್ಳಿ ನೆಡುತೋಪಿನ ಫಸಲಿನಿಂದ ಬರುವ ಆದಾಯವನ್ನು ನಿಯಮಾನುಸಾರ ಸೀತನಾಯಕನಹಳ್ಳಿ ಗ್ರಾಮ ಅರಣ್ಯ ಸಮಿತಿಗೆ ನೀಡಲಾಗುವುದು.

ಪಿ.ಆರ್. 878 ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೋಲಾರ ವಿಭಾಗ, ಕೋಲಾರ.

ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಛೇರಿ, ಸಾಗರ ವಿಭಾಗ, ಸಾಗರ

ಹರಾಜು ಪ್ರಕಟಣೆ

ಕ್ರ:ಎ5/ಎಸ್‌ಎಎಸ್/ಸಿಆರ್/3/09-10, ಸಾಗರ, ದಿನಾಂಕ: 8ನೇ ಅಕ್ಟೋಬರ್ 2009

ಈ ಮೂಲಕ ಸಾರ್ವಜನಿಕರಿಗೆ ತಿಳಿಯಬಯಸುವುದೇನೆಂದರೆ, ಸಾಗರ ಅರಣ್ಯ ವಿಭಾಗದ ಈ ಕೆಳಗೆ ನಮೂದಿಸಿದ ಸರ್ಕಾರಿ ನಾಟಾ ಸಂಗ್ರಹಾಲಯಗಳಲ್ಲಿ ಲಭ್ಯವಿರುವ ಬೀಟೆ, ಸಾಗುವಾನಿ ಹಾಗೂ ಇತರೆ ಜಾತಿಯ ನಾಟಾ, ಸೌದೆ, ಎಳೆ ಇತ್ಯಾದಿಗಳನ್ನು ಆಯಾ ಡಿಪೋವಿನ ಎದುರು ಸೂಚಿಸಿದ ದಿನಾಂಕಗಳಂದು ಬಹಿರಂಗ ಹರಾಜು ಮಾರಾಟದಲ್ಲಿ ವಿಕ್ರಯಿಸಲು ಸಾಮಾನ್ಯ ಅವಗಾಹನೆಗಾಗಿ ಪ್ರಕಟಿಸಿದೆ.

ಕ್ರ. ಸಂ.	ನಾಟಾ ಸಂಗ್ರಹಾಲಯದ ಹೆಸರು	ಹರಾಜಿನ ದಿನಾಂಕ ಮತ್ತು ವೇಳೆ	ಹಾಲಿ ದಾಸ್ತಾನು ವಿವರ (ಎಂ3/ನಂ.ಗಳಲ್ಲಿ)	
(2)	ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ	ದಿ: 06-11-2009 ಬೆ.10.00 ರಿಂದ ಹರಾಜು ಪೂರ್ಣಗೊಳ್ಳುವವರೆಗೆ	ಬೀಟೆ	6.264
			ಸಾಗುವಾನಿ	2.125
			ಹೆಚ್.ಹಲಸು	7.903
			ಹಲಸು	0.948
			ಇತರೆ ಜಾತಿ	1.632
			ಅಕೇಶಿಯಾ ನಾಟಾ	25.942
			ಬೀಟೆ ಎಳೆಗಳು	20 ಸಂಖ್ಯೆ
			ಸಾಗುವಾನಿ ಎಳೆಗಳು	56 ಸಂಖ್ಯೆ
			ಅಕೇಶಿಯಾ ಎಳೆಗಳು	429 ಸಂಖ್ಯೆ
			ಬೀಟೆ ಸೈಜು	0.999
			ಸಾಗುವಾನಿ ಸೈಜು	1.493
			ಅಕೇಶಿಯಾ ಬಿಲ್ಲೆಟ್ಸ್	3.465
			ಕಾಡುಜಾತಿ, ಅಕೇಶಿಯಾ ಸೌದೆ	18.425

ಕ್ರ. ಸಂ.	ನಾಟಾ ಸಂಗ್ರಹಾಲಯದ ಹೆಸರು	ಹರಾಜಿನ ದಿನಾಂಕ ಮತ್ತು ವೇಳೆ	ಹಾಲಿ ದಾಸ್ತಾನು ವಿವರ (ಎಂ3/ನಂ.ಗಳಲ್ಲಿ)	
(3)	ಸರ್ಕಾರಿ ನಾಟಾ ಸಂಗ್ರಹಾಲಯ, ಹೊಸನಗರ	ದಿ: 07-11-2009 ಬೆ.10.00 ರಿಂದ ಹರಾಜು ಪೂರ್ಣಗೊಳ್ಳುವವರೆಗೆ	ಬೀಟೆ	3.307
			ಸಾಗುವಾನಿ	1.503
			ಹೊನ್ನೆ	3.266
			ಹಲಸು	3.283
			ನೇರಲು	2.743
			ಹುನಾಲು	2.396
			ಇತರೆ ಜಾತಿ	1.540
			ಅಕೇಶಿಯಾ ನಾಟಾ	27.299
			ಅಕೇಶಿಯಾ ಬಿಲ್ಲೆಟ್ಸ್	3.000
			ಇತರೆ ಜಾತಿ ಸೈಜು	3.594
1)	ಸರ್ಕಾರಿ ನಾಟಾ ಸಂಗ್ರಹಾಲಯ, ಆನವಟ್ಟಿ	ದಿ: 09-11-2009 ಬೆ.10.00 ರಿಂದ ಹರಾಜು ಪೂರ್ಣಗೊಳ್ಳುವವರೆಗೆ	ಬೀಟೆ	7.300
			ಸಾಗುವಾನಿ	15.488
			ದೇವದಾರಿ	1.454
			ಮತ್ತಿ	2.135
			ಇತರೆ ಜಾತಿ	16.632
			ಅಕೇಶಿಯಾ ನಾಟಾ	44.502
			ನೀಲಗಿರಿ ನಾಟಾ	2.678
			ಹುನಾಲು	2.135
			ಅಕೇಶಿಯಾ ಎಳೆ	64 ಸಂಖ್ಯೆ
			ಸಾಗುವಾನಿ ಎಳೆ	12 ಸಂಖ್ಯೆ.
(4)	ಸರ್ಕಾರಿ ನಾಟಾ ಸಂಗ್ರಹಾಲಯ, ಶಿಕಾರಿಪುರ	ದಿ: 10-11-2009 ಬೆ.10.00 ರಿಂದ ಹರಾಜು ಪೂರ್ಣಗೊಳ್ಳುವವರೆಗೆ	ಬೀಟೆ	7.678
			ಸಾಗುವಾನಿ	3.777
			ತಡಸಲು	1.927
			ಇತರೆ	7.682
			ಸೈಜು	0.689

ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

OFFICE OF THE DEPUTY CONSERVATOR OF FORESTS, SAGAR DIVISION, SAGAR

No.A5/SAS/CR/3/09-10, Sagar, Dated: 8th October 2009

BRIEF SALE NOTIFICATION

It is hereby notified for general information of the public that Beete, Teak, Other kind timber, poles and firewood available in the following Govt.Timber Depots of Sagar Forest Division will be sold in public auction on the dates shown against each depot.

Sl. No.	Name of the Depots	Date & time of Auction sale	Approximate quantity of timber, Firewood, R.K.Billets etc., are exposed for sale.	
1	Govt.Timber Depot, Sagar	06-11-2009 at 10.00 a.m. upto end of sale	Beete	6.264
			Teak	2.125
			H.Halasu	7.903
			Halasu	0.948
			Other Kind timber	1.632
			Accacia timber	25.942
			Beete poles.	20 Nos.
			Teak poles.	56 Nos.
			Accacia poles	429 Nos.

Sl. No.	Name of the Depots	Date & time of Auction sale	Approximate quantity of timber, Firewood, R.K.Billets etc., are exposed for sale.	
			Beete size. Teak size Accacia billets. J.wood/Accacia Firewood.	0.999 1.493 3.465 18.425
2	Govt.Timber Depot, Hosanagar	07-11-2009 at 10.00 a.m. upto end of sale	Beete Teak Honne Halasu Neralu Hunalu Other kind timber Accacia timber Accacia Billets. Other kind size.	3.307 1.503 3.266 3.283 2.743 2.396 1.540 27.299 3.000 3.594
3	Govt.Timber Depot, Anavatti	09-11-2009 at 10.00 a.m. upto end of sale	Beete Teak Devadari Mathi Other kind Timber Accacia timber Neelagiri timber Hunalu Accacia poles Teak poles.	7.300 15.488 1.454 2.135 16.632 44.502 2.678 2.135 64 Nos. 12 Nos.
4	Govt.Timber Depot, Shikaripurar	10-11-2009 at 10.00 a.m. upto end of sale	Beete Teak Thadasalu Other Kind timber Size	7.678 3.777 1.927 7.682 0.689

P.R. 869 Deputy Conservator of Forests, Sagar Division, Sagar.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರರವರ ಕಛೇರಿ

ವಿವಿಧ ಫಸಲಿನ ಸಂಕ್ಷಿಪ್ತ ಟೆಂಡರ್ ಕಂ ಹರಾಜು ಪ್ರಕಟಣೆ

ಬಹಿರಂಗ ಟೆಂಡರ್ ಕಂ ಹರಾಜು ಪ್ರಕಟಣೆ

ಸಂಖ್ಯೆ : ಎ6/ಸೇಲ್ಸ್/ವಿವಿಧ ಫಸಲು/ಸಿಆರ್-32/2009-10, ದಿನಾಂಕ: 25ನೇ ಸೆಪ್ಟೆಂಬರ್ 2009

ವಿಷಯ: ರಾಮನಗರ ಪ್ರಾದೇಶಿಕ ವಿಭಾಗದ ವ್ಯಾಪ್ತಿಯಲ್ಲಿ ಬರುವ ಸ್ಟೇಟ್ ಫಾರೆಸ್ಟ್, ಮೈನರ್ ಫಾರೆಸ್ಟ್, ಕಾಯ್ದಿಟ್ಟ ಮತ್ತು ಅರಣ್ಯ ಇಲಾಖೆಯ ಸ್ವಾಧೀನದಲ್ಲಿರುವ ಪ್ರದೇಶದಲ್ಲಿ ಹಾಗೂ ರಾಮನಗರ ಪ್ರಾದೇಶಿಕ ಅರಣ್ಯ ವಿಭಾಗದ ಸರಹದ್ದಿನವರೆಗೆ ದೊರೆಯುತ್ತಿರುವ 1) ಸಿಟ್ರಿಡೋರ ಎಲೆ ಫಸಲು. 2) ತೂಪ್ರ ಎಲೆ (ಬೀಡಿ ಎಲೆ) ಫಸಲು 3) ಹುಣಸೆ ಫಸಲು 4) ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಬದಿಯಲ್ಲಿರುವ ಹುಣಸೆ ಫಸಲು 5) ಕಿರು ಅರಣ್ಯ ಉತ್ಪನ್ನ ಅಂದರೆ ಬೇಲ, ನೆಲ್ಲಿ ಗಳ ಟೆಂಡರ್ / ಹರಾಜು ಕುರಿತು.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ ರಾಮನಗರ ಪ್ರಾದೇಶಿಕ ವಿಭಾಗದ ವ್ಯಾಪ್ತಿಯಲ್ಲಿ ಬರುವ ಸ್ಟೇಟ್ ಫಾರೆಸ್ಟ್, ಮೈನರ್ ಫಾರೆಸ್ಟ್, ಕಾಯ್ದಿಟ್ಟ ಮತ್ತು ಅರಣ್ಯ ಇಲಾಖೆಯ ಸ್ವಾಧೀನದಲ್ಲಿರುವ ಪ್ರದೇಶದಲ್ಲಿ ಹಾಗೂ ರಾಮನಗರ ಪ್ರಾದೇಶಿಕ ಅರಣ್ಯ ವಿಭಾಗದ ಸರಹದ್ದಿನವರೆಗೆ ದೊರೆಯುತ್ತಿರುವ 1) ಸಿಟ್ರಿಡೋರ ಎಲೆ ಫಸಲು. 2) ತೂಪ್ರ ಎಲೆ

(ಬೀಡಿ ಎಲೆ) ಫಸಲು 3) ಹುಣಸೆ ಫಸಲು 4) ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಬದಿಯಲ್ಲಿರುವ ಹುಣಸೆ ಫಸಲು 5) ಕಿರು ಅರಣ್ಯ ಉತ್ಪನ್ನ ಅಂದರೆ ಬೇಲ, ನೆಲ್ಲಿ 2009-10ರ (ವಾರ್ಷಿಕ) ಅವಧಿಗೆ ಅಂದರೆ ದಿನಾಂಕ: **01-07-2009** ರಿಂದ **30-06-2010** ರ ಅವಧಿಗೆ ಅಥವಾ ಟೆಂಡರ್ / ಹರಾಜು ಒಪ್ಪಿಕೊಂಡ ದಿನದಿಂದ **30ನೇ ಜೂನ್ 2010** ರವರೆಗೆ ಸಂಗ್ರಹಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ಇವರು ಅಥವಾ ಇವರಿಂದ ಅಧಿಕಾರ ಪಡೆದ ಅಧಿಕಾರಿಗಳು ಈ ಕಛೇರಿಯ ವಿವರವುಳ್ಳ ಪ್ರಕಟಣೆಯಲ್ಲಿರುವ ಷರತ್ತುಗಳಿಗನುಗುಣವಾಗಿ ಕೆಳಗೆ ತಪ್ಸೀಲಿನಲ್ಲಿ ಸೂಚಿಸಿರುವ ಪ್ರಕಾರವಾಗಿ ಟೆಂಡರ್ ಕಂ ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಲಾಗುವುದು. ಇಷ್ಟವುಳ್ಳ ನೊಂದಾಯಿತ ಅರಣ್ಯ ಗುತ್ತಿಗೆದಾರರು ಭಾಗವಹಿಸಿ ಪಡೆಯಬಹುದು.

ಪ್ರಕಟಣೆಯಲ್ಲಿ ನಮೂದಿಸಿರುವ ಅರಣ್ಯೋತ್ಪನ್ನವು ನಿರ್ಧರಿತ ಬಂಜರು ಭೂಮಿ, ಗೋಮಾಳ, ಹರಾಜು ಗ್ರಾಮ ಠಾಣ ಮತ್ತು ಸಮುದಾಯ ಉದ್ದೇಶಕ್ಕಾಗಿ ಬಿಟ್ಟಿರುವ ಪ್ರದೇಶಗಳು ತಹಶೀಲ್ದಾರರಿಂದ ಪ್ರತ್ಯೇಕವಾಗಿ ಮಾರಾಟ ಮಾಡಿರುವ ಮತ್ತು ಮಾರಲ್ಪಡುವ ಪ್ರದೇಶಗಳು, ಮುನ್ಸಿಪಲ್, ನಗರಸಭೆ, ಜಿಲ್ಲಾಪಂಚಾಯತ್, ಮಂಡಲ ಪಂಚಾಯತ್, ಗ್ರಾಮಪಂಚಾಯತ್ ಹಾಗೂ ಈ ವಿಭಾಗದ ನಿಯಂತ್ರಣಕ್ಕೆ ಒಳಪಡದೆ ಇರುವ ಪ್ರದೇಶಗಳನ್ನು ಹೊರತುಪಡಿಸಿ ಈ ಟೆಂಡರ್ ಕಂ ಹರಾಜಿನಲ್ಲಿ ಕೈಬಿಟ್ಟಿರುತ್ತದೆ.

ಕ್ರ ಸಂ.	ಫಸಲಿನ ರೂಡಿಸುವ ಪ್ರದೇಶ	ಮಾರಾಟ ಮಾಡುವ ಸ್ಥಳ	ಟೆಂಡರ್ ಸ್ವೀಕರಿಸುವ ದಿನಾಂಕ / ವೇಳೆ	ಹರಾಜು ದಿನಾಂಕ ವೇಳೆ	ಟೆಂಡರ್ ಫಾರಂ ಲಗತ್ತಿಸಬೇಕಾದ ಠೇವಣಿ / ಹರಾಜಿನ ಹಣ
I). ಸಿಟ್ರಡೋರ ಎಲೆ ಫಸಲು.					
1	ಮಾಗಡಿ ತಾಲ್ಲೂಕು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ	ದಿನಾಂಕ: 28-10-09 ಮಧ್ಯಾಹ್ನ 3.00 ರಿಂದ 3.30 ಗಂಟೆಯವರೆಗೆ ಟೆಂಡರ್ ಕಂ ಹರಾಜನ್ನು ನಡೆಸಲಾಗುವುದು ಒಂದು ಪಕ್ಷ ಮೇಲ್ಕಂಡ ಅರಣ್ಯ ಉತ್ಪನ್ನ ಟೆಂಡರ್ ಕಂ ಹರಾಜಿನಲ್ಲಿ ಮಾರಾಟವಾಗದಿದ್ದಲ್ಲಿ ದಿನಾಂಕ: 09-11-09 ರಂದು ಮರು ಟೆಂಡರ್ ಹರಾಜು ಕಂ ಮಾಡಲಾಗುವುದು.	ದಿನಾಂಕ: 28-10-09 ಮಧ್ಯಾಹ್ನ 3.30 ಗಂಟೆಗೆ	ರೂ 5000/- ಮೊಬಲಗಿನ ರಾಷ್ಟ್ರೀಕೃತ ಬ್ಯಾಂಕ್ ಡಿಮ್ಯಾಡ್ ಡ್ರಾಫ್ಟ್
II). ತೂಪ್ರ ಎಲೆ (ಬೀಡಿ ಎಲೆ) ಫಸಲು					
1	ಚನ್ನಪಟ್ಟಣ ತಾಲ್ಲೂಕು	- " -	- " -	- " -	- " -
2	ಕನಕಪುರ ತಾಲ್ಲೂಕು,	- " -	- " -	- " -	- " -
3	ರಾಮನಗರ ತಾಲ್ಲೂಕು	- " -	- " -	- " -	- " -
4	ಮಾಗಡಿ ತಾಲ್ಲೂಕು	- " -	- " -	- " -	- " -
5	ಸಾತನೂರು ವಲಯ				
III). ಹುಣಸೆ ಫಸಲು					
1.	ಚನ್ನಪಟ್ಟಣ ತಾಲ್ಲೂಕು	- " -	- " -	- " -	- " -
2.	ರಾಮನಗರ ತಾಲ್ಲೂಕು (ಕೂನಗಲ್ ಕಿರು ಅರಣ್ಯ ಪ್ರದೇಶ ಹೊರತುಪಡಿಸಿದೆ)	- " -	- " -	- " -	- " -

ಕ್ರ. ಸಂ.	ಫಸಲಿನ ರೂಡಿಸುವ ಪ್ರದೇಶ	ಮಾರಾಟ ಮಾಡುವ ಸ್ಥಳ	ಟೆಂಡರ್ ಸ್ವೀಕರಿಸುವ ದಿನಾಂಕ / ವೇಳೆ	ಹರಾಜು ದಿನಾಂಕ ವೇಳೆ	ಟೆಂಡರ್ ಫಾರಂ ಲಗತ್ತಿಸಬೇಕಾದ ಠೇವಣಿ / ಹರಾಜಿನ ಹಣ
3.	ಕನಕಪುರ ತಾಲ್ಲೂಕು, ಕನಕಪುರ ಭಾಗ–1, ತೋಕಸಂದ್ರ ಬೀಟ್, ಮರಳವಾಡಿ ಬೀಟ್, ತೇರುಬೀದಿ ಬೀಟ್, ಗೌಡಹಳ್ಳಿ ಬೀಟ್ (ರಾಮಸ್ವಾಮಿ ದೇವಸ್ಥಾನ ಪ್ರದೇಶ)	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ	ದಿನಾಂಕ: 28–10–09 ಮಧ್ಯಾಹ್ನ 3.00 ರಿಂದ 3.30 ಗಂಟೆಯವರೆಗೆ ಟೆಂಡರ್ ಕಂ ಹರಾಜನ್ನು ನಡೆಸಲಾಗುವುದು ಒಂದು ಪಕ್ಷ ಮೇಲ್ಕಂಡ ಅರಣ್ಯ ಉತ್ಪನ್ನ ಟೆಂಡರ್ ಕಂ ಹರಾಜಿನಲ್ಲಿ ಮಾರಾಟವಾಗದಿದ್ದಲ್ಲಿ ದಿನಾಂಕ: 09–11–09 ರಂದು ಮರು ಟೆಂಡರ್ ಹರಾಜು ಕಂ ಮಾಡಲಾಗುವುದು.	ದಿನಾಂಕ: 28–10–09 ಮಧ್ಯಾಹ್ನ 3.30 ಗಂಟೆಗೆ	ರೂ 5000/– ಮೊಬಲಗಿನ ರಾಷ್ಟ್ರೀಕೃತ ಬ್ಯಾಂಕ್ ಡಿಮ್ಯಾಡ್ ಡ್ರಾಫ್ಟ್
4.	ಕನಕಪುರ ತಾಲ್ಲೂಕು, ಕನಕಪುರ ಭಾಗ–2, ರ ಕಾಡುಶಿವನಹಳ್ಳಿ ಬೀಟ್, ಹಂಚಿಗುಳಿ ಬೀಟ್, ಗೌಡಹಳ್ಳಿ ಭಾಗ (ಕಾಳೇಗೌಡನಹಳ್ಳಿ ಕೆರೆ ಪ್ರದೇಶ)	– " –	– " –	– " –	– " –
5.	ಕನಕಪುರ ತಾಲ್ಲೂಕು, ಕನಕಪುರ ಭಾಗ–3, ಚವರ್‌ಕಲ್ ಬೀಟ್, ಮುಗ್ಗೂರು ಬೀಟ್ (ವನ್ಯಪ್ರಾಣಿ ವಿಭಾಗಕ್ಕೆ ಸೇರಿದ ಪ್ರದೇಶವನ್ನು ಬಿಟ್ಟು) ಕೋಟೆಕೊಪ್ಪ ಬೀಟ್ ದಿಂಬದಹಳ್ಳಿ ಬೀಟ್, ಮುನೇಶ್ವರ ಬೀಟ್	– " –	– " –	– " –	– " –
6.	ಕನಕಪುರ ತಾಲ್ಲೂಕು, ಕನಕಪುರ ಭಾಗ–4, ಮಂಜುನಾಥ್ ಬೀಟ್, ರಾಮದೇವರ ಬೆಟ್ಟ ಬೀಟ್, ಗರಳಾಪುರ ಬೀಟ್, ನಾರಾಯಣಪುರ ಬೀಟ್	– " –	– " –	– " –	– " –

ಕ್ರ ಸಂ.	ಫಸಲಿನ ರೂಡಿಸುವ ಪ್ರದೇಶ	ಮಾರಾಟ ಮಾಡುವ ಸ್ಥಳ	ಟೆಂಡರ್ ಸ್ವೀಕರಿಸುವ ದಿನಾಂಕ / ವೇಳೆ	ಹರಾಜು ದಿನಾಂಕ ವೇಳೆ	ಟೆಂಡರ್ ಫಾರಂ ಲಗತ್ತಿಸಬೇಕಾದ ಠೇವಣಿ / ಹರಾಜಿನ ಹಣ
7.	ಮಾಗಡಿ ತಾಲ್ಲೂಕು ಸಾವನದುರ್ಗ ಸ್ಟೇಟ್ ಫಾರೆಸ್ಟ್‌ನಲ್ಲಿ ಅರಣ್ಯ ಕೃಷಿಕರು ಮಾಡುತ್ತಿದ್ದ 35 ಹುಣಸೆಮರ ಸೇರಿ (280 ಹೆಕ್ಟೇರ್ ಎಂ.ಪಿ.ಸಿ.ಎ, 300 ಹೆಕ್ಟೇರ್ ಎ.ಎಫ್.ಸಿ ಪ್ರದೇಶ ಬಿಟ್ಟು)	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ	ದಿನಾಂಕ: 28-10-09 ಮಧ್ಯಾಹ್ನ 3.00 ರಿಂದ 3.30 ಗಂಟೆಯವರೆಗೆ ಟೆಂಡರ್ ಕಂ ಹರಾಜನ್ನು ನಡೆಸಲಾಗುವುದು ಒಂದು ಪಕ್ಷ ಮೇಲ್ಕಂಡ ಅರಣ್ಯ ಉತ್ಪನ್ನ ಟೆಂಡರ್ ಕಂ ಹರಾಜಿನಲ್ಲಿ ಮಾರಾಟವಾಗದಿದ್ದಲ್ಲಿ ದಿನಾಂಕ: 09-11-09 ರಂದು ಮರು ಟೆಂಡರ್ ಹರಾಜು ಕಂ ಮಾಡಲಾಗುವುದು.	ದಿನಾಂಕ: 28-10-09 ಮಧ್ಯಾಹ್ನ 3.30 ಗಂಟೆಗೆ	ರೂ 5000/- ಮೊಬಲಗಿನ ರಾಷ್ಟ್ರೀಕೃತ ಬ್ಯಾಂಕ್ ಡಿಮ್ಯಾಡ್ ಡ್ರಾಫ್ಟ್
8.	ಸಾತನೂರು ವಲಯ (ಹುಲಿಯಾ ಕಾಲೋನಿಯ 125 ಎಕರೆ ಹಾಗೂ ಕಾವೇರಿ ವನ್ಯಪ್ರಾಣಿ ವಿಭಾಗ ಮತ್ತು ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್‌ನ ಪ್ರದೇಶಗಳು ಹಾಗೂ ನೆಹರುದೊಡ್ಡಿ, ಗಾಂಧಿ ಗ್ರಾಮದ ಅಚಲು ಅರಣ್ಯದಲ್ಲಿರುವ 125 ಹುಣಸೆ ಮರಗಳನ್ನು ಬಿಟ್ಟು)	- " -	- " -	- " -	- " -

IV). ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಬದಿಯಲ್ಲಿರುವ ಹುಣಸೆ ಫಸಲು

1.	ಮಾಗಡಿ ತಾಲ್ಲೂಕು (ರಾಷ್ಟ್ರೀಯ ಹೆದ್ದಾರಿ ಬಿಟ್ಟು ಮಾಗಡಿ ತಾಲ್ಲೂಕಿನ ಸರಹದ್ದಿನಲ್ಲಿ ಬರುವ ಎಲ್ಲಾ ಮುಖ್ಯ ರಸ್ತೆಗಳು)	- " -	- " -	- " -	- " -
2.	ಚನ್ನಪಟ್ಟಣ ತಾಲ್ಲೂಕು (ಚನ್ನಪಟ್ಟಣ ತಾಲ್ಲೂಕಿನಲ್ಲಿ ಬರುವ ಬೆಂಗಳೂರು ಮೈಸೂರು ರಾಜ್ಯ ಹೆದ್ದಾರಿ ಮತ್ತು ಇದರ ಸರಹದ್ದಿನಲ್ಲಿ ಬರುವ ಮುಖ್ಯ ರಸ್ತೆಗಳು)	- " -	- " -	- " -	- " -

ಕ್ರ. ಸಂ.	ಫಸಲಿನ ರೂಡಿಸುವ ಪ್ರದೇಶ	ಮಾರಾಟ ಮಾಡುವ ಸ್ಥಳ	ಟೆಂಡರ್ ಸ್ವೀಕರಿಸುವ ದಿನಾಂಕ / ವೇಳೆ	ಹರಾಜು ದಿನಾಂಕ ವೇಳೆ	ಟೆಂಡರ್ ಫಾರಂ ಲಗತ್ತಿಸಬೇಕಾದ ಠೇವಣಿ / ಹರಾಜಿನ ಹಣ
3.	ಕನಕಪುರ ತಾಲ್ಲೂಕು, (ಕನಕಪುರ, ಬೆಂಗಳೂರು ರಾಜ್ಯ ಹೆದ್ದಾರಿ ಹಾಗೂ ಕನಕಪುರ ತಾಲ್ಲೂಕಿನ ಸರಹದ್ದಿನಲ್ಲಿ ಬರುವ ಎಲ್ಲಾ ಜಿಲ್ಲಾ ಮುಖ್ಯ ರಸ್ತೆಗಳು)	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ	ದಿನಾಂಕ: 28–10–09 ಮಧ್ಯಾಹ್ನ 3.00 ರಿಂದ 3.30 ಗಂಟೆಯವರೆಗೆ ಟೆಂಡರ್ ಕಂ ಹರಾಜನ್ನು ನಡೆಸಲಾಗುವುದು ಒಂದು ಪಕ್ಷ ಮೇಲ್ಕಂಡ ಅರಣ್ಯ ಉತ್ಪನ್ನ ಟೆಂಡರ್ ಕಂ ಹರಾಜಿನಲ್ಲಿ ಮಾರಾಟವಾಗದಿದ್ದಲ್ಲಿ ದಿನಾಂಕ: 09–11–09 ರಂದು ಮರು ಟೆಂಡರ್ ಹರಾಜು ಕಂ ಮಾಡಲಾಗುವುದು.	ದಿನಾಂಕ: 28–10–09 ಮಧ್ಯಾಹ್ನ 3.30 ಗಂಟೆಗೆ	ರೂ 5000/– ಮೊಬಲಗಿನ ರಾಷ್ಟ್ರೀಕೃತ ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್
ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 209 ಕಿ.ಮೀ. 30 ರಿಂದ 86 ಕಿ.ಮೀ. ವರೆಗೆ ಮತ್ತು ಕನಕಪುರ ಸಾತನೂರು ಪಟ್ಟಣಗಳ ಮೇಲೆ ಹಾದು ಹೋಗುವ ಮಾರ್ಗದಲ್ಲಿರುವ ರಸ್ತೆ ಬದಿಯ ಹುಣಸೆ ಮರಗಳನ್ನು ಹೊರತುಪಡಿಸಿ)					
4.	ರಾಮನಗರ ತಾಲ್ಲೂಕು (ರಾಮನಗರ ತಾಲ್ಲೂಕಿನಲ್ಲಿ ಬರುವ ಬೆಂಗಳೂರು – ಮೈಸೂರು ರಾಜ್ಯ ಹೆದ್ದಾರಿ ಮತ್ತು ಇದರ ಸರಹದ್ದಿನಲ್ಲಿ ಬರುವ ಎಲ್ಲಾ ಮುಖ್ಯ ರಸ್ತೆಗಳು)	– " –	– " –	– " –	– " –

V). ಕಿರು ಅರಣ್ಯ ಉತ್ಪನ್ನ ಅಂದರೆ ಬೇಲ, ನೆಲ್ಲಿ

1	ಕನಕಪುರ ತಾಲ್ಲೂಕು	– " –	– " –	– " –	– " –
2	ಮಾಗಡಿ ತಾಲ್ಲೂಕು ಸಾವನದುರ್ಗ ಸ್ಟೇಟ್ ಫಾರೆಸ್ಟ್‌ನಲ್ಲಿ ಸಂಶೋಧನಾ ಉದ್ದೇಶಕ್ಕಾಗಿ ಕಾಯ್ದಿರಿಸಿದ ಬೀಜಗಳನ್ನು ಸಂಗ್ರಹಿಸಲು ಅರಣ್ಯ ಕೃಷಿಕರು ಕೇಂದ್ರ ವಲಯ ಬೆಂಗಳೂರು ಇವರಿಗೆ ಕಾಯ್ದಿರಿಸಿದ ಮರಗಳು ಸೇರಿಕೊಂಡಿರುತ್ತವೆ. ಗ್ರಾಮ ಅರಣ್ಯ ಸಮಿತಿಯ 300 ಹೆಕ್ಟೇರ್ ಪ್ರದೇಶ ಮತ್ತು 280 ಹೆಕ್ಟೇರ್ ಎಂ.ಪಿ.ಸಿ.ಎ. ಹಾಗೂ ಎಂ.ಪಿ.ಡಿ.ಎ. ಪ್ರದೇಶಗಳನ್ನು ಹೊರತುಪಡಿಸಿದೆ.	– " –	– " –	– " –	– " –

ಕ್ರ ಸಂ.	ಫಸಲಿನ ರೂಡಿಸುವ ಪ್ರದೇಶ	ಮಾರಾಟ ಮಾಡುವ ಸ್ಥಳ	ಟೆಂಡರ್ ಸ್ವೀಕರಿಸುವ ದಿನಾಂಕ / ವೇಳೆ	ಹರಾಜು ದಿನಾಂಕ ವೇಳೆ	ಟೆಂಡರ್ ಫಾರಂ ಲಗತ್ತಿಸಬೇಕಾದ ಠೇವಣಿ / ಹರಾಜಿನ ಹಣ
3.	ಸಾತನೂರು ವಲಯ (ಹುಲಿಯಾ ಕಾಲೋನಿಯ 125 ಎಕರೆ ಹಾಗೂ ಕಾವೇರಿ ವನ್ಯಪ್ರಾಣಿ ವಿಭಾಗ ಮತ್ತು ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್‌ನ ಪ್ರದೇಶಗಳು ಹಾಗೂ ನೆಹರುದೊಡ್ಡಿ, ಗಾಂಧಿ ಗ್ರಾಮದ ಅಚಲು ಅರಣ್ಯದಲ್ಲಿರುವ 125 ಹುಣಸೆ ಮರಗಳನ್ನು ಬಿಟ್ಟು)	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ	ದಿನಾಂಕ: 28–10–09 ಮಧ್ಯಾಹ್ನ 3.00 ರಿಂದ 3.30 ಗಂಟೆಯವರೆಗೆ ಟೆಂಡರ್ ಕಂ ಹರಾಜನ್ನು ನಡೆಸಲಾಗುವುದು ಒಂದು ಪಕ್ಷ ಮೇಲ್ಕಂಡ ಅರಣ್ಯ ಉತ್ಪನ್ನ ಟೆಂಡರ್ ಕಂ ಹರಾಜಿನಲ್ಲಿ ಮಾರಾಟವಾಗದಿದ್ದಲ್ಲಿ ದಿನಾಂಕ: 09–11–09 ರಂದು ಮರು ಟೆಂಡರ್ ಹರಾಜು ಕಂ ಮಾಡಲಾಗುವುದು.	ದಿನಾಂಕ: 28–10–09 ಮಧ್ಯಾಹ್ನ 3.30 ಗಂಟೆಗೆ	ರೂ 5000/– ಮೊಬಲಗಿನ ರಾಷ್ಟ್ರೀಕೃತ ಬ್ಯಾಂಕ್ ಡಿಮ್ಯಾಡ್ ಡ್ರಾಫ್ಟ್.
4.	ರಾಮನಗರ ತಾಲ್ಲೂಕು (ಕೂಟಗಲ್ ಕಿರು ಅರಣ್ಯ ಹೊರತುಪಡಿಸಿದೆ)	– " –	– " –	– " –	– " –
5.	ಚನ್ನಪಟ್ಟಣ ತಾಲ್ಲೂಕು	– " –	– " –	– " –	– " –

ಷರತ್ತುಗಳು

1. ರೂ. 200/– ಮತ್ತು ಇತರೆ ತೆರಿಗೆಗಳನ್ನು ಸಂದಾಯ ಮಾಡಿ ದಿನಾಂಕ: 28–10–2009 ಮದ್ಯಾಹ್ನ 1.00 ಗಂಟೆಯವರೆಗೆ ರಾಮನಗರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಇವರಿಂದ ಟೆಂಡರ್ ಫಾರಂ ಪಡೆಯಬಹುದು. ಭರ್ತಿ ಮಾಡಿದ ಫಾರಂ ಮೇಲೆ ರೂ. 2.00 ಕೋರ್ಟ್ ಫೀ ಸ್ಟಾಂಪ್‌ನ್ನು ಅಂಟಿಸತಕ್ಕದ್ದು. ಹಾಗೆಯೇ ಟೆಂಡರ್ ಫಾರಂನ ಜೊತೆ 5000/– (ಐದು ಸಾವಿರ) ಮೊಬಲಗಿನ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್ ಡಿ.ಡಿ.ಯನ್ನು ಪ್ರತಿ ಟೆಂಡರಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ರವರ ಹೆಸರಿನಲ್ಲಿ ತೆಗೆದು ಇ.ಎಂ.ಡಿ.ಯಾಗಿ ಲಗತ್ತಿಸತಕ್ಕದ್ದು. ಹಾಗೆಯೇ ಈ ಹರಾಜಿನಲ್ಲಿ ಭಾಗವಹಿಸುವವರು ಸಹಾ ರೂ. 5000/– (ಐದುಸಾವಿರ) ಗಳನ್ನು ನಗದು ರೂಪದಲ್ಲಿ ಇ.ಎಂ.ಡಿ. ಯನ್ನು ಹರಾಜಿಗೆ ಮುನ್ನ ಕೊಡತಕ್ಕದ್ದು.
2. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗದಲ್ಲಿ 2009–10ನೇ ಸಾಲಿಗೆ ನೋಂದಾಯಿಸಿದ ಹಾಗೂ ಅರ್ಹತೆ ಪಡೆದಿರುವ ಅರಣ್ಯ ಗುತ್ತಿಗೆದಾರರಿಗೆ ಮಾತ್ರ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿದೆ.
3. ಹಿಂದಿನ ಹರಾಜಿನಲ್ಲಿ ಪಡೆದ ಫಸಲಿನ ಬಾಬ್ತು ಯಾವುದೇ ಹಣ ಬಾಕಿಯಿರುವ ಗುತ್ತಿಗೆದಾರರು ಮೇಲಿನ ಟೆಂಡರ್ / ಹರಾಜಿನಲ್ಲಿ ಭಾಗವಹಿಸುವುದಕ್ಕೆ ಅವಕಾಶವಿರುವುದಿಲ್ಲ.
4. ಬ್ಲಾಕ್ ಲೀಸ್ಟ್ ಆಗಿರುವವರು, ಇನ್‌ಸಾಲ್ವೆಂಟ್, ಡಿಫಾಲ್ಟರ್ಸ್ ಆದವರು ಮತ್ತು ಮೈನರ್ಸ್ ಟೆಂಡರ್ ಸಲ್ಲಿಸುವುದಕ್ಕಾಗಲೀ ಅಥವಾ ಭಾಗವಹಿಸುವುದಕ್ಕೆ ಅರ್ಹರಾಗಿರುವುದಿಲ್ಲ.
5. ಈ ಹರಾಜಿನ ಟೆಂಡರ್‌ಗಳನ್ನಾಗಲೀ, ಹರಾಜನ್ನಾಗಲೀ ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಪೂರ್ಣ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪಡೆದಿರುತ್ತಾರೆ.
6. ಒಪ್ಪಿಕೊಳ್ಳಲಾಗದ ಟೆಂಡರ್ ಹರಾಜಿನ 1/2 ಭಾಗ ಹಣವನ್ನು ಪೂರ್ಣವಾಗಿ ಚಾಲ್ತಿಯಲ್ಲಿರುವ ಎಲ್ಲಾ ತೆರಿಗೆಗಳೊಂದಿಗೆ ಸ್ಥಳದಲ್ಲಿ ಟೆಂಡರ್ – ಕಂ – ಹರಾಜು ದಿನದಂದೇ ಪಾವತಿ ಮಾಡಬೇಕು. ಇನ್ನು ಮಿಕ್ಕ 1/2 ಭಾಗ ಹಣವನ್ನು ಕರಾರು ಮಾಡಿಕೊಡುವ ದಿನ ಅಥವಾ ಮುಂಚಿತವಾಗಿ ಪಾವತಿಸಬೇಕು. ಇಲ್ಲದಿದ್ದಲ್ಲಿ ಅವರ ಇಂ.ಎಂ.ಡಿ. ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆಯಲ್ಲದೇ ಯೂನಿಟ್‌ನ್ನು ಅವರ ಜವಾಬ್ದಾರಿಯಲ್ಲಿ ಹರಾಜು ಮಾಡಲಾಗುವುದು. ಒಂದು ವೇಳೆ ಮರು ಹರಾಜಿನಲ್ಲಿ ಕಡಿಮೆ ಬಿಡ್ ಬಂದು ಸರ್ಕಾರಕ್ಕೆ ನಷ್ಟವಾದಲ್ಲಿ ಸೆಕ್ಷನ್ 109 ರ

ಕರ್ನಾಟಕ ಅರಣ್ಯ ಕಾಯ್ದೆಯಂತೆ ಬಾಕಿ ಭೂಕಂದಾಯ ರೂಪದಲ್ಲಿ ವಸೂಲಿ ಮಾಡಲಾಗುವುದು ಹಾಗೂ ಸಾಮಗ್ರಿಗಳ ಮಾರಾಟ ಶಾಸನ ಕಾಯ್ದೆ ಸೆಕ್ಷನ್ 54(4) ರ ಪ್ರಕಾರ ಅಥವಾ ನಾಗರೀಕ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

7. ಕರ್ನಾಟಕ ರಾಜ್ಯದಲ್ಲಿಯ ಸವಾಲುದಾರರನ್ನು ಹೊರತುಪಡಿಸಿ, ಅಥವಾ ಯಾವುದೇ ತರಹದ ಆಸ್ತಿಯು ಕರ್ನಾಟಕ ರಾಜ್ಯದಲ್ಲಿ ಇಲ್ಲದಂಥ ಸವಾಲುದಾರರು ಸವಾಲಿನಲ್ಲಿ ಭಾಗವಹಿಸುವುದಕ್ಕಿಂತ ಮುಂಚಿತವಾಗಿ ಸವಾಲು ಮಾಡುವ ಅಧಿಕಾರಿಗೆ ತಮ್ಮ ಸವಾಲಿನ ಅರ್ಧ ರಕಂನ್ನು ಜಾರಿಯಲ್ಲಿರುವ ಮಾರಾಟ ಕರ ಮತ್ತು ಅರಣ್ಯಾಭಿವೃದ್ದಿ ಕರ ಕೊಡಬೇಕು. ಸದರಿ ರಕಂ ಮುಂದಿನ 100/– ರೂಗೆ ಸರಿ ಇರಬೇಕು ಮೇಲೆ ವಿವರಿಸಿದಂತೆ ಯಶಸ್ವಿ ಸವಾಲುದಾರನ್ನು ಶೇ. 50 ಸವಾಲಿನ ರಕಂ ಕಟ್ಟಿದಲ್ಲಿ ಉಳಿದ ಶೇ. 50 ರಕಂ ಚಾಲ್ತಿಯಲ್ಲಿರುವ ಎಲ್ಲಾ ಕರಗಳನ್ನು ಪಾವತಿ ಮಾಡತಕ್ಕದ್ದು ಶೇ 50 ಉಳಿದ ಹಣವನ್ನು ಕರಾರುನಾಮೆ ಸಹಿ ಮಾಡುವುದಕ್ಕಿಂತ ಪೂರ್ವದಲ್ಲಿ ಪಾವತಿ ಮಾಡಬೇಕಾಗುವುದು.

8. ಟೆಂಡರ್‌ದಾರರು ಟೆಂಡರ್ ಫಾರಂನಲ್ಲಿ ಅಥವಾ ಹರಾಜನ್ನು ನಡೆಸುವ ಅಧಿಕಾರಿಯ ಬಳಿ ನೀಡುವ ವಿಳಾಸವೇ ಅಂತಿಮ ಈ ವಿಳಾಸಕ್ಕೆ ಅಂಚೆ ದೃಢೀಕರಣ ಪತ್ರ ಪಡೆದು ಕಳಿಸಿದ ಪತ್ರವು ಟೆಂಡರ್‌ದಾರರಿಗೆ ತಲುಪಿದೆ ಎಂದೇ ತಿಳಿಯಲಾಗುವುದು.

9. ಕಿರು ಅರಣ್ಯ ಉತ್ಪನ್ನದ ಯಾವುದೇ ಬಾಬ್ತುನ್ನು ಹರಾಜು ಮಾಡದೇ ಹಿಂಪಡೆಯಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸಂಪೂರ್ಣ ಹಕ್ಕು ಇರುತ್ತದೆ. ಈ ಸಂಬಂಧ ಟೆಂಡರುದಾರರಾಗಲಿ ಅಥವಾ ಹರಾಜಿನಲ್ಲಿ ಭಾಗವಹಿಸಿದವರಾಗಲೀ ಯಾವುದೇ ಯಾವುದೇ ಪರಿಹಾರ ಧನವನ್ನು ಹಾಗೆ ಹಿಂಪಡೆದ ಹರಾಜಿನ ಬಾಬ್ತು ಕ್ಲೈಮ್ ಮಾಡುವ ಹಕ್ಕು ಇರುವುದಿಲ್ಲ.

10. ಟೆಂಡರುದಾರರು ಟೆಂಡರನ್ನು ಸೀಲು ಮಾಡಿದ ಲಕೋಟೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ಇವರಿಗೆ ವಿಳಾಸಿಸಿ ಟೆಂಡರು ಪೆಟ್ಟಿಗೆಗೆ ಹಾಕಬೇಕು. ಎಲ್ಲಾ ಟೆಂಡರುಗಳನ್ನು ಗೋಪ್ಯವಾಗಿ ಇಡಲಾಗುವುದು.

11. ಟೆಂಡರ್ ಲಕೋಟೆ ಮೇಲೆ.. ಇಂತಹ ಬಾಬ್ತುಗಾಗಿ ಟೆಂಡರು ಎಂದು ನಮೂದಿಸಬೇಕು. ಸಾಮಾನ್ಯವಾಗಿ ಒಬ್ಬ ಹೆಚ್ಚು ಟೆಂಡರುಗಳನ್ನು ಹಾಕಿದ್ದಲ್ಲಿ ಹೆಚ್ಚು ದರ ನಮೂದಿಸಿರುವ ಟೆಂಡರನ್ನು ಮಾತ್ರ ಪುರಸ್ಕರಿಸಿ ಉಳಿದ ಟೆಂಡರುಗಳನ್ನು ತಿರಸ್ಕರಿಸಲಾಗುವುದು.

12. ಟೆಂಡರುಗಳನ್ನು ಟೆಂಡರಿಗಾಗಿಯೇ ಪ್ರತ್ಯೇಕವಾಗಿ ಇಟ್ಟಿರುವ ಪೆಟ್ಟಿಗೆಯಲ್ಲಿ ಹಾಕಬೇಕು. ಟೆಂಡರಿನಲ್ಲಿ ಷರತ್ತುಗಳನ್ನು ನಮೂದಿಸಿ ಹಾಕಬಾರದು ಒಂದು ವೇಳೆ ಷರತ್ತು ನಮೂದಿಸಿ ಟೆಂಡರು ಹಾಕಿದ್ದರೆ ಅಂತಹ ಟೆಂಡರುಗಳನ್ನು ತಿರಸ್ಕರಿಲಾಗುವುದು.

13. ಪ್ರತಿಯೊಂದು ಟೆಂಡರಿನ ಜೊತೆಯಲ್ಲಿ ಆದಾಯ ತೆರಿಗೆ ಪಾವತಿ ದೃಢೀಕರಣ ಪತ್ರ ಲಗತ್ತಿಸಬೇಕು.

14. ಮುಂಗಡ ಠೇವಣಿಯನ್ನು ಲಗತ್ತಿಸದೇ ಹಾಕಿರುವ ಟೆಂಡರುಗಳನ್ನು ತಿರಸ್ಕರಿಸಲಾಗುವುದು.

15. ಟೆಂಡರುದಾರರು ಹರಾಜಿನಲ್ಲೂ ಭಾಗವಹಿಸಲು ಅರ್ಹರಿರುತ್ತಾರೆ. ಠೇವಣಿಯನ್ನು ಕಟ್ಟದೆ ಹರಾಜಿನಲ್ಲಿ ಭಾಗವಹಿಸುವಂತಿಲ್ಲ.

16. ಪ್ರತಿ ಯೂನಿಟ್‌ಗೆ ಅತಿ ಹೆಚ್ಚು ಬಿಡ್ಡು ಮಾಡಿದ ಬಿಡ್ಡುದಾರರ ಹೆಸರನ್ನು ದಾಖಲಿಸಿ ಅವರ ಸಹಿಯನ್ನು ಬಿಡ್ಡರ್ಸ್ ಪಟ್ಟಿಯಲ್ಲಿ ತೆಗೆದುಕೊಳ್ಳಲಾಗುವುದು ಅನಂತರ ಯಾವುದೇ ಬಿಡ್ಡನ್ನು ಅಂಗೀಕರಿಸುವುದಿಲ್ಲ.

17. ಒಂದು ವೇಳೆ ಅತಿ ಹೆಚ್ಚು ಬಿಡ್ಡು ಮಾಡಿದ ಬಿಡ್ಡುದಾರರ ದರವನ್ನು ಹರಾಜು ನಡೆಸುವ ಅಧಿಕಾರಿ ತಿರಸ್ಕರಿಸದಲ್ಲಿ ನಂತರ ಅತಿ ಹೆಚ್ಚು ಬಿಡ್ಡು ಮಾಡಿರುವವರ ಬಿಡ್ಡನ್ನು ಅಧಿಕಾರಿಯು ಒಪ್ಪಬಹುದು ಅಥವಾ ಮರು ಹರಾಜು ಮಾಡಬಹುದು.

18. ಬಿಡ್ಡುದಾರರು ಬಿಡ್ಡನ್ನು ಒಪ್ಪಿದಲ್ಲಿ ಬಿಡ್ಡುದಾರರು ಇ.ಎಂ.ಡಿ. ಜೊತೆಗೆ ಪುನಃ ಹರಾಜಿನ ಮೊತ್ತದ ಶೇ. 2ರ ಭಾಗವನ್ನು ಠೇವಣಿಯಾಗಿ ಇಡಬೇಕು.

19. ವಿಫಲ ಟೆಂಡರುದಾರರ ಠೇವಣಿ ಹಣವನ್ನು ಹರಾಜು ಮುಗಿದ ತಕ್ಷಣ ಹಿಂತಿರುಗಿಸಲಾಗುವುದು.

20. ಒಂದು ವೇಳೆ ಬಿಡ್‌ದಾರರು ನಮೂದಿಸಿರುವ ಹಣವನ್ನು ಮೇಲಾಧಿಕಾರಿಗಳು ತಿರಸ್ಕರಿಸಿದಲ್ಲಿ ಅವರು ಕಟ್ಟಿರುವ ಹಣವನ್ನು ತಕ್ಷಣವೇ ಹಿಂತಿರುಗಿಸಲಾಗುವುದು.

21. ಯಶಸ್ವಿ ಟೆಂಡರುದಾರರಿಗೆ ಅವರ ಟೆಂಡರು ಒಪ್ಪಿಗೆಯಾಗಿರುವ ಬಗ್ಗೆ ನೋಂದಾಯಿತ ಅಂಚೆಯ ಮೂಲಕ ಮಾಹಿತಿ ನೀಡಲಾಗುವುದು ಹಾಗೂ ಕಚೇರಿ ಸೂಚನಾ ಫಲಕದಲ್ಲೂ ಅವರ ಹೆಸರನ್ನು ನಮೂದಿಸಲಾಗುವುದು. ಈ ರೀತಿ ಮಾಡಿದ ನಂತರ ಟೆಂಡರ್‌ದಾರರಿಗೆ ಅದರ ಒಪ್ಪಿಗೆಯ ಬಗ್ಗೆ ಮಾಹಿತಿ ನೀಡಲಾಗಿದೆ ಎಂದು ಭಾವಿಸಲಾಗುವುದು.

22. ಟೆಂಡರು ಸ್ವೀಕೃತವಾದ ಮಾಹಿತಿ ತಲುಪಿದ 15 ದಿನಗಳಲ್ಲಿ ಟೆಂಡರುದಾರರು ಸಂಬಂಧಿಸಿದ ಘಟಕಗಳ ಅಧಿಕಾರಿಯವರ ಜೊತೆ ಪ್ರತ್ಯೇಕವಾಗಿ ಒಪ್ಪಂದ ಮಾಡಿಕೊಳ್ಳಬೇಕು.

23. ಉಳಿಕೆ ಹಣವನ್ನು ಕಟ್ಟುವಲ್ಲಿ ಟೆಂಡರುದಾರರು ಯಶಸ್ವಿಯಾಗದಿದ್ದಲ್ಲಿ ಅವರ ಟೆಂಡರ್‌ನ್ನು ಕೂಡಲೇ ಸ್ಥಗಿತಗೊಳಿಸಲಾಗುವುದು ಒಂದು ವೇಳೆ ಮಾರಾಟ ಬೆಲೆ ಕಂತುಗಳು ಮತ್ತು ಬಡ್ಡಿಯ ಕಂತುಗಳನ್ನು ಒಂದು ತಿಂಗಳಿಗೂ ಹೆಚ್ಚು ಅವಧಿಗೆ ಕಟ್ಟದಿದ್ದರೆ ಅಂತಹ ಟೆಂಡರುಗಳನ್ನು ತಿರಸ್ಕರಿಸಲಾಗುವುದು.

V-F7-B/B

24. ಟೆಂಡರುದಾರರು ವಿಭಾಗೀಯ ಅಧಿಕಾರಿಗಳಿಗೆ ಆಗಿಂದಾಗ್ಯೆ ಅವರು ನೇಮಿಸಿಕೊಂಡಿರುವ ಕೆಲಸಗಾರರ ಹೆಸರು ಮತ್ತು ವಿಳಾಸವನ್ನು ವಿಭಾಗೀಯ ಅಧಿಕಾರಿಗಳಿಗೆ ಸಲ್ಲಿಸುವುದು.
25. ಬೆಳೆಯ ಸಂಗ್ರಹಣೆ ಕೆಲಸವನ್ನು ಮಾಡುವ ಪ್ರತಿಯೊಂದು ನೌಕರರ ಹೆಸರನ್ನು ಗುತ್ತಿಗೆದಾರರು ಅಥವಾ ಅವರಿಂದ ನೇಮಿಸಲ್ಪಟ್ಟ ಪ್ರತಿನಿಧಿಗಳಿಂದ ಲಿಖಿತ ಅನುಮತಿಯನ್ನು ತರಬೇಕು.
26. ಅರಣ್ಯ ಇಲಾಖೆಯ ನೌಕರರನ್ನು ವಲಯ ಅರಣ್ಯಾಧಿಕಾರಿಗಳ ಅನುಮತಿಯೊಂದಿಗೆ ಮಾತ್ರ ಕೆಲಸಕ್ಕೆ ತೆಗೆದುಕೊಳ್ಳುವುದು.
27. ಬೆಳೆಯನ್ನು ತೆಗೆಯುವ ಕಾಲದಲ್ಲಿ ಗುತ್ತಿಗೆದಾರರು / ನೌಕರರು ಅವರ ನಡುವಳಿಕೆಗೆ ಮತ್ತು ಕೆಲಸದಲ್ಲಿ ನಿರತವಾದ ಎಲ್ಲಾ ನೌಕರರ ನಡವಳಿಕೆಗೆ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ.
28. ಪ್ರತಿಯೊಬ್ಬ ಖರೀದಿದಾರರು ಪ್ರತಿ ಮಾಹೆಯಲ್ಲಿ ಅವರು ತೆಗೆದ ಉತ್ಪನ್ನದ ಪ್ರಮಾಣದ ಬಗ್ಗೆ ಲೆಕ್ಕ ನೀಡಬೇಕು.
29. ಟೆಂಡರುದಾರರು ಅವರು ಪಡೆದ ಗುತ್ತಿಗೆಯನ್ನು ಯಾರಿಗೂ ಹಸ್ತಾಂತರಿಸುವ ಹಾಗಿಲ್ಲ.
30. ಗುತ್ತಿಗೆದಾರರು ಕೆಲಸಕ್ಕೆ ನೇಮಿಸಿಕೊಂಡ ನೌಕರರಿಗೆ ಏನಾದರೂ ಹಾನಿಯಾದಲ್ಲಿ ಅದನ್ನು ಗುತ್ತಿಗೆದಾರರೇ ಭರಿಸತಕ್ಕದ್ದು.
31. ಗುತ್ತಿಗೆಯ ಅವಧಿಯನ್ನು ಒಂದು ನಿಶ್ಚಿತ ಅವಧಿಗೆ ಮಾಡಿದ್ದು ಯಾವುದೇ ಕಾರಣಕ್ಕೂ ಈ ಅವಧಿಯನ್ನು ವಿಸ್ತರಿಸಲಾಗುವುದಿಲ್ಲ. ಗುತ್ತಿಗೆಯ ಅವಧಿಯು ಮುಗಿಯುವುದರೊಳಗೆ ಗುತ್ತಿಗೆದಾರರು ಉತ್ಪನ್ನಗಳನ್ನು ತೆಗೆಯತಕ್ಕದ್ದು.
32. ಗುತ್ತಿಗೆದಾರರು ಎಲ್ಲಾ ಸಮಯದಲ್ಲೂ ಕರ್ನಾಟಕ ಅರಣ್ಯ ಕಾಯ್ದೆ ಮತ್ತು ಇತರೆ ಶಾಸನಬದ್ಧ ಮಾರ್ಪಾಟುಗಳಿಗೆ ಬದ್ಧರಾಗಿರುತ್ತಾರೆ.
33. ಗುತ್ತಿಗೆದಾರರು ಟೆಂಡರು ಷರತ್ತಿನ ಯಾವುದೇ ಅಂಶಗಳನ್ನು ಉಲ್ಲಂಘನೆ ಮಾಡಿದಲ್ಲಿ ಅವರ ಮುಂಗಡ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
34. ಮೇಲ್ಕಂಡ ಟೆಂಡರ್ ಹರಾಜಿನಲ್ಲಿ ಭಾಗವಹಿಸುವ ಮುನ್ನ ಅರಣ್ಯ ಗುತ್ತಿಗೆದಾರರು ಆಯಾಯ ತಾಲ್ಲೂಕಿನ ವಲಯ ಅರಣ್ಯಾಧಿಕಾರಿಯವರನ್ನು ಸಂಪರ್ಕಿಸಿ ಫಸಲನ್ನು ನೋಡಲು ಅನುಮತಿ ಪಡೆದು ಫಸಲನ್ನು ಪರಿಶೀಲಿಸಿಕೊಳ್ಳಬೇಕು.
35. ಈ ಟೆಂಡರ್–ಕಂ–ಹರಾಜಿಗೆ ಸಂಬಂಧಿಸಿದಂತೆ ಬೇಕಾದ ಇತರೆ ಮಾಹಿತಿಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ತಿಳಿದುಕೊಳ್ಳಬಹುದು.
36. ಟೆಂಡರ್–ಕಂ–ಹರಾಜಿನಲ್ಲಿ ಯಶಸ್ವಿಯಾದ ಟೆಂಡರ್ / ಹರಾಜಿಗೆ ಅರಣ್ಯ ಗುತ್ತಿಗೆದಾರರಿಗೆ ಸದರಿ ಪ್ರದೇಶದ ಬೆಳೆಯನ್ನು ತೆಗೆಯಲು ಟೆಂಡರ್ ಹರಾಜು ಸಂಬಂಧಿಸಿದ ಅಧಿಕಾರಿಗಳಿಂದ ದೃಢೀಕೃತವಾದ ನಂತರ ಹಾಗೂ ಸದರಿ ಗುತ್ತಿಗೆದಾರರು ನಿಗದಿತ ಛಾಪಾ ಕಾಗದದ ಮೇಲೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ಇವರೊಂದಿಗೆ ಕರಾರು ಮಾಡಿಕೊಂಡ ಮೇಲೆ ಅನುಮತಿ ನೀಡಲಾಗುವುದು.
37. ಪ್ರತಿ ತಾಲ್ಲೂಕಿಗೆ ಬೇರೆ ಬೇರೆ ಟೆಂಡರ್ ಫಾರಂನ್ನು ನಿಗದಿತ ಇ.ಎಂ.ಡಿ ಲಗತ್ತಿಸಿ ಉಪಯೋಗಿಸಬೇಕು.
38. ಟೆಂಡರ್ ಕಂ ಹರಾಜನ್ನು ಸಂಪೂರ್ಣವಾಗಿ ತಿರಸ್ಕರಿಸಿದಲ್ಲಿ ಅಥವಾ ಬಿಡ್ಡುದಾರರು ಭಾಗವಹಿಸದೇ ಇದ್ದಲ್ಲಿ ಮರು ಟೆಂಡರ್ ಕಂ ಹರಾಜನ್ನು ದಿನಾಂಕ: 09–11–2009 ರಂದು ನಡೆಸಲಾಗುವುದು ಹಾಗೂ ಮರು ಟೆಂಡರ್ ಕಂ ಹರಾಜಿಗೆ ಪುನಃ ಯಾವುದೇ ರೀತಿಯ ಪ್ರಕಟಣೆಯನ್ನು ನೀಡಲಾಗುವುದಿಲ್ಲ.

ವಿ. ಗೀತಾಂಜಲಿ
ಪಿ.ಆರ್. 879
ಉಪ ಅರಣ್ಯ ಸಂರಕ್ಷಣಾಧಿಕಾರಿ,
ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ರವರ ಕಛೇರಿ

ಬಹಿರಂಗ ಹರಾಜು ಪ್ರಕಟಣೆ

ಸಂಖ್ಯೆ : ಎ6/ಉಅಸಂ/ಟಿಂಬರ್/ಸಿಆರ್–33/2009–10, ದಿನಾಂಕ: 26ನೇ ಸೆಪ್ಟೆಂಬರ್ 2009

ವಿಷಯ: ರಾಮನಗರ ಪ್ರಾದೇಶಿಕ ವಿಭಾಗಕ್ಕೆ ಸೇರಿದ ವಿವಿಧ ನೆಡುತೋಪಿನಲ್ಲಿ ಕಡಿದು ಲಾಟ್ ಮಾಡಿರುವ ನೀಲಗಿರಿ ಟಿಂಬರ್ ಲಾಗ್ ಹರಾಜು ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ರಾಮನಗರ ಪ್ರಾದೇಶಿಕ ಅರಣ್ಯ ವಿಭಾಗದ ಚನ್ನಪಟ್ಟಣ ವಲಯದ ವಿವಿಧ ನೆಡುತೋಪುಗಳಲ್ಲಿ ಕರ್ನಾಟಕ ಅರಣ್ಯ ಕೈಗಾರಿಕಾ ನಿಗಮ, ಬೆಂಗಳೂರು ಇವರ ವತಿಯಿಂದ ಕಟಾವಣೆ ಮಾಡಿ ಇಲಾಖೆಗೆ ಹಸ್ತಾಂತರಿಸಿದ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪರಿಮಾಣದ ನೀಲಗಿರಿ ಮರಗಳಿಂದ ಲಭ್ಯವಾದ ಟಿಂಬರ್ ಲಾಟ್ ಮಾಡಿದ್ದು ಇವುಗಳನ್ನು ಬಹಿರಂಗ ಹರಾಜು ಮೂಲಕ ಕೆಳಕಂಡ ಸ್ಥಳ ಹಾಗೂ ದಿನಾಂಕದಂದು ಈ ಕೆಳಸಹಿದಾರರು ಅಥವಾ ಇವರಿಂದ ಅಧಿಕಾರ ಪಡೆದ ಅಧಿಕೃತ ಅಧಿಕಾರಿಯು ಕೆಳಕಂಡ ಷರತ್ತುಗಳ ಮೇಲೆ ಬಹಿರಂಗ ಹರಾಜನ್ನು ಮಾಡಲು ಉದ್ದೇಶಿಸಿ ಪ್ರಕಟಣೆ ಹೊರಡಿಸಲಾಗಿದೆ. ಇಚ್ಛೆಯುಳ್ಳ ಖರೀದಿದಾರರು ಹರಾಜಿನಲ್ಲಿ ಭಾಗವಹಿಸಿ ಈ ಕೆಳಕಂಡ ಷರತ್ತುಗೊಳಪಟ್ಟು ಉತ್ಪನ್ನವನ್ನು ಖರೀದಿಸಬಹುದಾಗಿರುತ್ತದೆ.

ಷೆಡ್ಯೂಲ್

ಕ. ಸಂ	ವಲಯ	ಹರಾಜಿಗೆ ಇಡಲಾಗಿರುವ ಉತ್ಪನ್ನದ ವಿವರಗಳು	ಅಂದಾಜು ಪರಿಮಾಣ	ಹರಾಜು ದಿನಾಂಕ ಮತ್ತು ವೇಳೆ	ಹರಾಜು ನಡೆಯುವ ಸ್ಥಳ
1	ಚನ್ನಪಟ್ಟಣ	ನೀಲಗಿರಿ ನಾಟಾ	47.00 ಘಮೀ	ದಿ: 03-11-2009 ಬೆಳಿಗ್ಗೆ 11.00 ಗಂಟೆಗೆ	ಕೆಂಗಲ್ ನರ್ಸರಿ, ಹನುಮಂತಪುರ

ಷರತ್ತುಗಳು

1. ಆಸಕ್ತ ಖರೀದಿದಾರರು ಈ ಕೆಳಗೆ ನಮೂದಿಸಿದ ಪ್ರಮಾಣದಲ್ಲಿ ಇಂಎಂಡಿ ಮೊತ್ತವನ್ನು ರಾಷ್ಟ್ರೀಕೃತ ಅಥವಾ ಲೋಕಲ್ ಷೆಡ್ಯೂಲ್ ಬ್ಯಾಂಕುಗಳ ಡಿಮಾಂಡ್ ಡ್ರಾಫ್ಟ್‌ನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಪದನಾಮದಲ್ಲಿ ತೆಗೆದು ಸವಾಲಿನ ಪೂರ್ವದಲ್ಲಿ ನಡೆಸುವ ಅಧಿಕಾರಿಗಳ ಬಳಿಯಲ್ಲಿ ನೀಡಬೇಕು, ಹೀಗೆ ನೀಡಲಾದ ಇಎಂಡಿ ಮೊತ್ತವನ್ನು ಯಶಸ್ವಿ ಬಿಡ್ಡುದಾರರು ಖರೀದಿಸಲಾಗುವ ಮರಮುಟ್ಟುಗಳ ಮೌಲ್ಯದ 1/2 ಭಾಗದ ಹಣಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.
   ಇಎಂಡಿ ಮೊತ್ತ ರೂ. 25,000-00 (ಪ್ರತಿ ಲಾಟಿಗೆ)
2. ಷೆಡ್ಯೂಲ್‌ನಲ್ಲಿ ಸೂಚಿಸಿರುವ ನಿಗಧಿತ ಸಮಯ ಮತ್ತು ದಿನಾಂಕದಂದು ಹರಾಜನ್ನು ನಡೆಸಲಾಗುವುದು. ಒಂದೊಮ್ಮೆ ಸದರಿ ದಿನದಂದು ಹರಾಜು ನಡೆಸಲು ಅನಿವಾರ್ಯ ಕಾರಣಗಳಿಂದ ಸಾಧ್ಯವಾಗದಿದ್ದಲ್ಲಿ ಮರು ಹರಾಜನ್ನು ದಿನಾಂಕ: 12-11-2009 ರಂದು ಬೆಳಿಗ್ಗೆ 11.00 ಗಂಟೆಗೆ ನಡೆಸಲಾಗುವುದು.
3. ಇಡಿಗಂಟನ್ನು ಜಮಾ ಮಾಡದೇ ಬಿಡ್‌ದಾರರು ಹರಾಜಿನಲ್ಲಿ ಭಾಗವಹಿಸುವ ಹಕ್ಕು ಇರುವುದಿಲ್ಲ.
4. ಲಾಟುಗಳಲ್ಲಿ ಒಳಗೊಂಡ ದಿಮ್ಮಿಗಳ ಸಂಖ್ಯೆ ಪರಿಮಾಣಗಳನ್ನು ಘ.ಮೀ.ಗಳಲ್ಲಿ ನಮೂದಿಸಲಾಗುವುದು. ಏಳೆಗಳಿದ್ದಲ್ಲಿ ಸಂಖ್ಯೆಗಳನ್ನು ನಮೂದಿಸಲಾಗುವುದು. ಖರೀದಿದಾರರ ಬೇಡಿಕೆಯು ಸಂಬಂಧಿಸಿದ ಲಾಟ್‌ನ ಮಾಲಿಗೆ ಮಾತ್ರ ಸೀಮಿತವಾಗಿರುತ್ತದೆ.
5. ಷೆಡ್ಯೂಲ್‌ನಲ್ಲಿ ಸೂಚಿಸಿರುವ ಮತ್ತು ಕತ್ರಾವಣೆ ಮಾಡಿ ಲಾಟ್ ಮಾಡಿರುವ ನೀಲಗಿರಿ ಮರಗಳ ಲಾಗ್‌ಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಂಡ ನಂತರ ಹರಾಜಿನಲ್ಲಿ ಭಾಗವಹಿಸಬೇಕು.
6. ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪರಿಮಾಣಕ್ಕೆ ಷೆಡ್ಯೂಲ್‌ನಲ್ಲಿರುವ ಸ್ಥಳಗಳಲ್ಲಿ ಪ್ರತಿ ಲಾಟ್‌ನ್ನು ಪ್ರತ್ಯೇಕವಾಗಿ ಹರಾಜು ಮಾಡಲಾಗುವುದು.
7. ಯಶಸ್ವಿ ಬಿಡ್ಡುದಾರರು ತಮ್ಮ ಸ್ವಂತ ಖರ್ಚಿನಲ್ಲಿ ವಿಲೇವಾರಿ ಮಾಡಿಕೊಳ್ಳತಕ್ಕದ್ದು.
8. ಟಿಂಬರ್ ಲಾಗ್‌ಗಳನ್ನು ಸಾಗಿಸಲು ಪರವಾನಗಿಯನ್ನು ನೀಡಲಾಗುವುದು. ಪರವಾನಗಿ ಶುಲ್ಕವನ್ನು ಯಶಸ್ವಿ ಬಿಡ್ಡುದಾರರು ವಲಯ ಅರಣ್ಯಾಧಿಕಾರಿ, ರಾಮನಗರ ಮತ್ತು ವಲಯ ಅರಣ್ಯಾಧಿಕಾರಿ, ಚನ್ನಪಟ್ಟಣ ಇವರಲ್ಲಿ ಜಮಾ ಮಾಡತಕ್ಕದ್ದು.
9. ಹರಾಜಿನಲ್ಲಿ ಯಶಸ್ವಿಯಾದ ಬಿಡ್ಡುದಾರರು ಹರಾಜಿನ ದಿನದಂದೇ ತಾವು ಸೂಚಿಸಿದ ಹರಾಜಿನ ಮೊತ್ತದ ಶೇಕಡ 50 ರಷ್ಟು ಹಣವನ್ನು ಹಾಗೂ ಸೂಚಿಸಿದ ಮೊತ್ತಕ್ಕೆ ಅನ್ವಯಿಸುವ ಪೂರ್ಣ ತೆರಿಗೆಯನ್ನು ಅಂದರೆ ವ್ಯಾಟ್ **12.5%**, ಅರಣ್ಯ ಅಭಿವೃದ್ಧಿ ತೆರಿಗೆ **12%**, ಆದಾಯ ತೆರಿಗೆ **2.5%** ಮತ್ತು ಆದಾಯ ತೆರಿಗೆ ಮೇಲೆ ಸೆಸ್ **3%** ರಷ್ಟು ತೆರಿಗೆಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು 2ನೇ ಬಿಡ್ಡುದಾರರನ್ನು ಯಶಸ್ವಿ ಬಿಡ್ಡುದಾರರೆಂದು ಪರಿಗಣಿಸಲಾಗುವುದು.
10. ಬಹಿರಂಗ ಹರಾಜಿನಲ್ಲಿ ಉದ್ಭವಿಸಬಹುದಾದ ತಂಟೆತಕರಾರುಗಳಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ರವರು ನೀಡುವ ತೀರ್ಮಾನವೇ ಅಂತಿಮವಾಗಿರುತ್ತದೆ.
11. ಕಪ್ಪು ಪಟ್ಟಿಯಲ್ಲಿರುವ ಬಿಡ್‌ದಾರರು ಅಥವಾ ದಿವಾಳಿಯಾಗಿರುವವರು ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ.
12. ಹರಾಜಿನ ನಂತರ ಬರುವ ಬೆಲೆಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.
13. ಯಾವುದೇ ತಂಟೆತಕರಾರುಗಳಿದ್ದಲ್ಲಿ ಹರಾಜು ಪ್ರಾರಂಭಿಸುವ ಎರಡು ಗಂಟೆ ಮುಂಚಿತವಾಗಿ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ಲಿಖಿತ ಮೂಲಕ ತರತಕ್ಕದ್ದು ಹಾಗೂ ಹರಾಜಿನ ನಂತರ ತಡವಾಗಿ ಬರುವ ಯಾವುದೇ ತರಹದ ದೂರುಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.
14. ಯಶಸ್ವಿ ಬಿಡ್‌ದಾರರು ಹರಾಜು ಸ್ಥಿರೀಕರಣ ಆದೇಶ ಪಡೆದ 7 ದಿನಗಳೊಳಗಾಗಿ ನೀಲಗಿರಿ ಟಿಂಬರ್ ಲಾಗ್‌ಗಳನ್ನು ಬಾಕಿ ಇರುವ ಬಿಡ್‌ನ ಮೊತ್ತವನ್ನು ವಲಯ ಅರಣ್ಯಾಧಿಕಾರಿ, ರಾಮನಗರ ಹಾಗೂ ವಲಯ ಅರಣ್ಯಾಧಿಕಾರಿ, ಚನ್ನಪಟ್ಟಣ ಇವರಿಗೆ ಪಾವತಿಸಿ ನೀಲಗಿರಿ ಟಿಂಬರ್ ಲಾಗ್‌ಗಳನ್ನು ತೆಗೆದುಕೊಂಡು ಹೋಗತಕ್ಕದ್ದು ನಿಗಧಿತ ಅವಧಿಯಲ್ಲಿ ಟಿಂಬರ್‌ನ್ನು ಸಾಗಿಸದ ಪಕ್ಷದಲ್ಲಿ E.M.D. ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೆ ಬಿಡ್‌ದಾರರ ಜವಾಬ್ದಾರಿ ಮೇರೆಗೆ ನೀಲಗಿರಿ ಟಿಂಬರ್‌ನ್ನು ಮರು ಹರಾಜು

ಮಾಡಲಾಗುವುದು. ಮರು ಹರಾಜಿನಲ್ಲಿ ಕಡಿಮೆ ಬಿಡ್ ಬಂದು ಸರ್ಕಾರಕ್ಕೆ ನಷ್ಟವಾದಲ್ಲಿ 1963 ರ ಅರಣ್ಯ ಕಾಯ್ದೆ ಸೆಕ್ಷನ್ 109 ರಂತೆ ಬಾಕಿಯನ್ನು ಭೂಕಂದಾಯ ರೂಪದಲ್ಲಿ ವಸೂಲಿ ಮಾಡಲಾಗುವುದು ಅಥವಾ ಸರಕು ಸಾಮಗ್ರಿಗಳ ಮಾರಾಟದ ಕಾನೂನಿನನ್ವಯ ಅಥವಾ ಭಾರತೀಯ ದಂಡ ಸಂಹಿತೆ (Civil procedure) ಅನ್ವಯ ಕ್ರಮ ಕೈಗೊಳ್ಳಲಾಗುವುದು.

15. ಈ ಹರಾಜನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಪೂರ್ಣ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪಡೆದಿರುತ್ತಾರೆ.
16. ಕರ್ನಾಟಕ ರಾಜ್ಯದಲ್ಲಿಯ ಸವಾಲುದಾರರನ್ನು ಹೊರತುಪಡಿಸಿ, ಅಥವಾ ಯಾವುದೇ ತರಹದ ಆಸ್ತಿಯು ಕರ್ನಾಟಕ ರಾಜ್ಯದಲ್ಲಿ ಇಲ್ಲದಂಥ ಸವಾಲುದಾರರು ಹರಾಜಿನಲ್ಲಿ ಭಾಗವಹಿಸುವುದಕ್ಕಿಂತ ಮುಂಚಿತವಾಗಿ ಹರಾಜು ಮಾಡುವ ಅಧಿಕಾರಿಗೆ ತಮ್ಮ ಬಿಡ್‌ನ ಅರ್ಧ ರಕಂನ್ನು ಜಾರಿಯಲ್ಲಿದ್ದ ಮಾರಾಟ ಕರ ಮತ್ತು ಅರಣ್ಯಾಭಿವೃದ್ಧಿ ಕರ ಕೊಡಬೇಕು. ಸದರಿ ರಕಂ ಮುಂದಿನ 100 ರೂಗೆ ಸರಿ ಇರಬೇಕು ಮೇಲೆ ವಿವರಿಸಿದಂತೆ ಯಶಸ್ವಿ ಬಿಡ್‌ದಾರರು ಶೇಕಡಾ 50 ಬಿಡ್‌ನ ರಕಂ ಕಟ್ಟಿದಲ್ಲಿ ಉಳಿದ ಶೇ 50 ರಕಂನ್ನು ಚಾಲ್ತಿಯಲ್ಲಿರುವ ಎಲ್ಲಾ ಕರಗಳೊಡನೆ ಪಾವತಿ ಮಾಡತಕ್ಕದ್ದು ಶೇ 50 ಉಳಿದ ಹಣವನ್ನು ಕರಾರುನಾಮೆ ಸಹಿ ಮಾಡುವುದಕ್ಕಿಂತ ಪೂರ್ವದಲ್ಲಿ ಪಾವತಿ ಮಾಡಬೇಕಾಗುವುದು.
17. ಬಿಡ್ಡುದಾರರು ಹರಾಜನ್ನು ನಡೆಸುವ ಅಧಿಕಾರಿಯ ಬಳಿ ನೀಡುವ ವಿಳಾಸವೇ ಅಂತಿಮ ಈ ವಿಳಾಸಕ್ಕೆ ಅಂಚೆ ದೃಢೀಕರಣ ಪತ್ರ ಪಡೆದು ಕಳುಹಿಸಿದ ಪತ್ರವು ಬಿಡ್ಡುದಾರರಿಗೆ ತಲುಪಿದೆ ಎಂದೇ ತಿಳಿಯಲಾಗುವುದು.
18. ಪ್ರತಿ ಲಾಟ್‌ಗೆ ಅತಿ ಹೆಚ್ಚು ಬಿಡ್ಡು ಮಾಡಿದ ಬಿಡ್ಡುದಾರರ ಹೆಸರನ್ನು ದಾಖಲಿಸಿ ಅವರ ಸಹಿಯನ್ನು ಬಿಡ್ಡರ್ಸ್ ಪಟ್ಟಿಯಲ್ಲಿ ತೆಗೆದುಕೊಳ್ಳಲಾಗುವುದು ಅನಂತರ ಯಾವುದೇ ಬಿಡ್ಡನ್ನು ಅಂಗೀಕರಿಸುವುದಿಲ್ಲ.
19. ಒಂದು ವೇಳೆ ಅತಿ ಹೆಚ್ಚು ಬಿಡ್ಡು ಮಾಡಿದ ಬಿಡ್ಡುದಾರರ ದರವನ್ನು ಹರಾಜು ನಡೆಸುವ ಅಧಿಕಾರಿ ತಿರಸ್ಕರಿಸಿದಲ್ಲಿ, ನಂತರದ ಅತಿ ಹೆಚ್ಚು ಬಿಡ್ಡು ಮಾಡಿರುವವರ ಬಿಡ್ಡನ್ನು ಅಧಿಕಾರಿಯು ಒಪ್ಪಬಹುದು ಅಥವಾ ಮರು ಹರಾಜು ಮಾಡಬಹುದು.
20. ಬಿಡ್ಡುದಾರರು ಬಿಡ್ಡನ್ನು ಒಪ್ಪಿದಲ್ಲಿ ಬಿಡ್ಡುದಾರರು E.M.D ಯ ಜೊತೆಗೆ ಪುನಃ ಹರಾಜಿನ ಮೊತ್ತದ ಶೇ. 2 ರ ಭಾಗವನ್ನು ಠೇವಣಿಯಾಗಿ ಇಡಬೇಕು.
21. ವಿಫಲರಾದ ಬಿಡ್‌ದಾರರ ಠೇವಣಿ ಹಣವನ್ನು ಹರಾಜು ಮುಗಿದ ತಕ್ಷಣ ಹಿಂತಿರುಗಿಸಲಾಗುವುದು.
22. ಒಂದು ವೇಳೆ ಬಿಡ್‌ದಾರರು ನಮೂದಿಸಿರುವ ಹಣವನ್ನು ಮೇಲಾಧಿಕಾರಿಗಳು ತಿರಸ್ಕರಿಸಿದಲ್ಲಿ ಅವರು ಕಟ್ಟಿರುವ ಹಣವನ್ನು ತಕ್ಷಣವೇ ಹಿಂತಿರಿಗಿಸಲಾಗುವುದು.
23. ಯಶಸ್ವಿ ಹಗಾಜುದಾರರಿಗೆ ಅವರ ಟೆಂಡರು ಒಪ್ಪಿಗೆಯಾಗಿರುವ ಬಗ್ಗೆ ನೋಂದಾಯಿತ ಅಂಚೆಯ ಮೂಲಕ ಮಾಹಿತಿ ನೀಡಲಾಗುವುದು ಹಾಗೂ ಕಛೇರಿ ಸೂಚನಾ ಫಲಕದಲ್ಲೂ ಅವರ ಹೆಸರನ್ನು ನಮೂದಿಸಲಾಗುವುದು, ಈ ರೀತಿ ಮಾಡಿದ ನಂತರ ಟೆಂಡರ್‌ದಾರರಿಗೆ ಅದರ ಒಪ್ಪಿಗೆಯ ಬಗ್ಗೆ ಮಾಹಿತಿ ನೀಡಲಾಗಿದೆ ಎಂದು ಭಾವಿಸಲಾಗುವುದು.
24. ಬಿಡ್ಡುದಾರರು ಎಲ್ಲಾ ಸಮಯದಲ್ಲೂ ಕರ್ನಾಟಕ ಅರಣ್ಯ ಕಾಯ್ದೆ ಮತ್ತು ಇತರೆ ಶಾಸನಬದ್ಧ ಮಾರ್ಪಾಟುಗಳಿಗೆ ಬದ್ಧರಾಗಿರುತ್ತಾರೆ.
25. ಬಿಡ್ಡುದಾರರು ಟೆಂಡರ್ ಷರತ್ತಿನ ಯಾವುದೇ ಅಂಶಗಳನ್ನು ಉಲ್ಲಂಘನೆ ಮಾಡಿದಲ್ಲಿ ಅವರ ಮುಂಗಡ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
26. ಈ ಹರಾಜಿಗೆ ಸಂಬಂಧಿಸಿದಂತೆ ಬೇಕಾದ ಇತರೆ ಮಾಹಿತಿಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ತಿಳಿದುಕೊಳ್ಳಬಹುದು.

ವಿ. ಗೀತಾಂಜಲಿ

ಪಿ.ಆರ್. 880

ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ.

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯನಿರ್ವಾಹಕ ಇಂಜನೀಯರರ ಕಛೇರಿ, ಸಣ್ಣ ನೀರಾವರಿ ವಿಭಾಗ, ಬೆಳಗಾವಿ.

ಟೆಂಡರ್ ಪ್ರಕಟಣೆ (2ನೇ ಕರೆ)

(ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂ–2 ರ ಅನ್ವಯ ಗುತ್ತಿಗೆ ಆಹ್ವಾನ)

ಕ್ರ.ಸಂ.ಸನೀ.ವಿ.ಬೆಳಗಾವಿ/ಕಿ.ಇಂ./ಟೆಂಡರ್/2009–10/3300, ದಿನಾಂಕ: 5ನೇ ಅಕ್ಟೋಬರ್ 2009

1. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ–2000ರ ಅಡಿಯಲ್ಲಿ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಗುತ್ತಿಗೆಯನ್ನು "ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ" ಇವರಿಂದ ಆಹ್ವಾನಿಸಲಾಗಿದೆ. ಗುತ್ತಿಗೆ ಪಡೆಯಲು ಕನಿಷ್ಠ ಅವಶ್ಯಕ ಅರ್ಹತೆಗಳಿಗಾಗಿ ಗುತ್ತಿಗೆದಾರರು ಸೂಚನೆಗಳಲ್ಲಿ ಕಲಂ–3ನ್ನು ಸೂಕ್ಷ್ಮವಾಗಿ ಗಮನಿಸುವಂತೆ ಸೂಚಿಸಲಾಗಿದೆ.

2. ದಿನಾಂಕ:29.10.09 ರಿಂದ 03.11.09ರ ಒಳಗಿನ ಅವಧಿಯಲ್ಲಿ (ಕಛೇರಿ ಕಾರ್ಯಾವಧಿಯಲ್ಲಿ) ಈ ಕೆಳಗೆ ಕಾಣಿಸಿದ ಶುಲ್ಕವನ್ನು (ಹಿಂದಿರುಗಿಸಲಾಗದ) ಯಾವುದಾದರೂ ರಾಷ್ಟ್ರೀಕೃತ ಅಥವಾ ಶೆಡ್ಯೂಲ್ಡ್ ಬ್ಯಾಂಕಿನಿಂದ ಪಡೆದ, ಬೆಳಗಾವಿಯಲ್ಲಿ ನಗದೀಕರಣ ಮಾಡಬಹುದಾದ ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ವಿಭಾಗ ಬೆಳಗಾವಿ ಇವರ ಹೆಸರಿನಲ್ಲಿ ಪಡೆಯಲಾದ ಡಿ.ಡಿ., ಪೇ ಆರ್ಡರ್ ಅಥವಾ ನಗದು ರೂಪದಲ್ಲಿ ತುಂಬಿ ಖಾಲಿ ಗುತ್ತಿಗೆ ಪತ್ರಗಳನ್ನು ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ ಇವರ ಕಛೇರಿಯಿಂದ ಪಡೆದುಕೊಳ್ಳಬೇಕು. ಗುತ್ತಿಗೆಗೆ ಸಂಬಂಧಿಸಿದ ಎಲ್ಲ ವಿವರಗಳನ್ನು ಆಸಕ್ತ ಗುತ್ತಿಗೆದಾರರು ಸಣ್ಣ ನೀರಾವರಿ ವಿಭಾಗ, ಬೆಳಗಾವಿ ಇವರ ಕಛೇರಿಯಲ್ಲಿ ಪಡೆದುಕೊಳ್ಳಬೇಕು. ಗುತ್ತಿಗೆ ಪತ್ರಗಳನ್ನು ನೊಂದಾಯಿತ ಅಂಚೆ/ವೇಗದ ಅಂಚೆ ಮೂಲಕ ಪಡೆಯಲು ಇಚ್ಚಿಸಿದಲ್ಲಿ ರೂ.200.00ಗಳ ಹೆಚ್ಚುವರಿ ಶುಲ್ಕವನ್ನು ಭರಿಸಬೇಕಾಗುತ್ತದೆ. ಗುತ್ತಿಗೆ ಪತ್ರಗಳನ್ನು ಅಂಚೆ ಮೂಲಕ ಪಡೆಯುವಾಗ ವಿಳಂಬವಾದಲ್ಲಿ ಅಥವಾ ಗುತ್ತಿಗೆ ಪತ್ರಗಳು ಸ್ವೀಕೃತವಾಗದಿದ್ದಲ್ಲಿ ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ ಇವರು ಹೊಣೆಗಾರರಾಗುವುದಿಲ್ಲ.

3. ಕಾಮಗಾರಿಗಾಗಿ ನಿರ್ದಿಷ್ಟಪಡಿಸಿದ ಈ ಕೆಳಗೆ ನಮೂದಿಸಿದ ಮುಂಗಡ ಠೇವಣಿಯನ್ನು ಗುತ್ತಿಗೆ ಪತ್ರಗಳೊಂದಿಗೆ ಸಲ್ಲಿಸತಕ್ಕದ್ದು. ಗುತ್ತಿಗೆ ಪತ್ರಗಳಲ್ಲಿ ನಿರ್ದಿಷ್ಟಪಡಿಸಿರುವ ಯಾವುದಾದರೊಂದು ರೂಪದಲ್ಲಿ ಗುತ್ತಿಗೆ ಅರ್ಹತಾ ಅವಧಿಗಿಂತ 45 ದಿನಗಳ ಹೆಚ್ಚುವರಿ ಅವಧಿಯನ್ನು (ಒಟ್ಟಾರೆ 135 ದಿನಗಳ ಅವಧಿ) ಅರ್ಹತಾ ಅವಧಿಯಾಗಿ ಹೊಂದಿರುವ ಹಾಗೂ ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ ಇವರ ಹೆಸರಿನಲ್ಲಿ ಪಡೆದ ಮತ್ತು ಬೆಳಗಾವಿಯಲ್ಲಿ ನಗದೀಕರಣವಾಗುವ ಮುಂಗಡ ಠೇವಣಿಯನ್ನು ಸಲ್ಲಿಸಬೇಕು.

4. ಭರ್ತಿ ಮಾಡಿದ ಗುತ್ತಿಗೆ ಪತ್ರಗಳನ್ನು ದಿನಾಂಕ: 06.11.09ರ ಮಧ್ಯಾಹ್ನ 16.00 ಘಂಟೆಯೊಳಗಾಗಿ (ಕಛೇರಿ ಕಾರ್ಯಾವಧಿಯಲ್ಲಿ) ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ ಇವರ ಕಾರ್ಯಾಲಯದಲ್ಲಿ ಸ್ವೀಕರಿಸಲಾಗುವುದು. ಮತ್ತು ಸಾಧ್ಯವಾದಲ್ಲಿ ಅಂದೇ 16.30 ಘಂಟೆಗೆ ಅಥವಾ ಬೇರೆ ಸೂಕ್ತ ದಿನಾಂಕದಂದು ಆಸಕ್ತರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ಗುತ್ತಿಗೆ ಪತ್ರಗಳನ್ನು ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ ಇವರ ಕಾರ್ಯಾಲಯದಲ್ಲಿ ತೆರೆಯಲಾಗುವುದು. ಮೇಲೆ ನಮೂದಿಸಿದ ದಿನಾಂಕಗಳು ಸಾರ್ವತ್ರಿಕ ರಜಾ ಅಥವಾ ಘೋಷಿತ ರಜಾ ದಿನವಾದಲ್ಲಿ ಮುಂದಿನ ಕೆಲಸದ ದಿನವನ್ನು ಪರಿಗಣಿಸಲಾಗುವುದು.

5. ಇನ್ನುಳಿದ ವಿವರಗಳನ್ನು ಹಾಗೂ ನಿಯಮಗಳನ್ನು ಮಾದರಿ ಗುತ್ತಿಗೆ ದಾಖಲೆ (ಕೆಡಬ್ಲ್ಯೂ-2)ದಲ್ಲಿ ವಿವರಿಸಲಾಗಿದ್ದು ಗುತ್ತಿಗೆದಾರರು ನಿಯಮಾವಳಿಗಳನ್ನು ಸಂಪೂರ್ಣ ಅಭ್ಯಸಿಸಿ ಅರ್ಥೈಸಿಕೊಳ್ಳಲು ಸೂಚಿಸಲಾಗಿದೆ.

ಕ್ರಮ ಸಂ.	ಕೆಲಸದ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಡುಗಂಟು ಮೊತ್ತ (ರೂ.ಗಳಲ್ಲಿ)	ಟೆಂಡರ್ ಫಾರಂ ಬೆಲೆ ರೂ.+ತೆರಿಗೆ ಪ್ರತ್ಯೇಕ ಹಿಂದಿರುಗಿ ಸಲಾಗದು	ಕೆಲಸವನ್ನು ಮುಗಿಸುವ ಕಾಲಮಿತಿ ಮಳೆಗಾಲ ಸೇರಿ
1	ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಯರನಾಳ ಗ್ರಾಮದ ಹತ್ತಿರ ಇಂಗು ಕೆರೆ ನಿರ್ಮಾಣ	39.20	78500/–	4000+Tax	6 ತಿಂಗಳು (ಮಳೆಗಾಲ ಸೇರಿ)

ವ್ಹಿ.ಬಿ. ಕುಲಕರ್ಣಿ

ಪಿ.ಆರ್. 866 ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ನಂ:ಕಾಇಂ:ಲೋವಿ:ಚಿ:ಕಟ್ಟಡಗಳು:09:2009–10, ದಿನಾಂಕ: 5ನೇ ಅಕ್ಟೋಬರ್ 2009

1) ಇ-ಟೆಂಡರ್ ಉಲ್ಲೇಖ: KPWD/2009-10/WORK_INDENT 1354

2) ಇ-ಟೆಂಡರ್ ಉಲ್ಲೇಖ: KPWD/2009-10/WORK_INDENT 1535

ಕರ್ನಾಟಕ ರಾಜ್ಯಪಾಲರ ಪರವಾಗಿ, 1ನೇ ದರ್ಜೆ ಗುತ್ತಿಗೆದಾರರಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಕಾಮಗಾರಿ ವಿವರಗಳು ಈ ಕೆಳಗಿನಂತಿವೆ.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರಿಗೆ ಇಟ್ಟಿರುವ ಹಣ ರೂ. ಗಳಲ್ಲಿ	ಮುಂಗಡ ಠೇವಣಿ ಹಣ ರೂ.ಗಳಲ್ಲಿ
1	ಚಳ್ಳಕೆರೆ ತಾಲ್ಲೂಕು ಚಳ್ಳಕೆರೆ ಪಟ್ಟಣದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆ ಕಟ್ಟಡ (ನೆಲ ಅಂತಸ್ತು) ನಿರ್ಮಾಣ	23940663–00	359110–00
2	ಹೊಳಲ್ಕೆರೆ ತಾಲ್ಲೂಕು ಹೊಳಲ್ಕೆರೆ ಪಟ್ಟಣದಲ್ಲಿ ವಿ.ಐ.ಪಿ. ಗೆಸ್ಟ್ ಹೌಸ್ ನಿರ್ಮಾಣ	9426941–13	188539–00

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.Karnataka.gov.in/eportal/index.seam ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ.

ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ	:	21.10.2009 ಸಮಯ: 17.30
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ	:	23.10.2009 ಸಮಯ: 16.00
ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ	:	27.10.2009 ಸಮಯ: 11.00
ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ	:	29.10.2009 ಸಮಯ: 11.00

ಸೂಚನೆ ಈ ಮೇಲ್ಕಂಡ ಕಾಮಗಾರಿಗಳ ಮುಂದೆ ನಮೂದಿಸಿದ ಟೆಂಡರಿಗಿಟ್ಟ ಮೊತ್ತ ಮತ್ತು ಮುಂಗಡ ಹಣ ಠೇವಣಿ (ಇ.ಎಂ.ಡಿ) ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಬಿಡ್ ಡಾಕ್ಯುಮೆಂಟ್‌ನಲ್ಲಿ ನಮೂದಿಸಿರುವ ಟೆಂಡರಿಗಿಟ್ಟ ಮೊತ್ತ ಮತ್ತು ಮುಂಗಡ ಹಣ ಠೇವಣಿ (ಇ.ಎಂ.ಡಿ) ಮೊತ್ತವು ಅಂತಿಮವಾಗಿರುತ್ತದೆ.

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ: 080–22485867 ರಿಂದ ಮಾಹಿತಿ ಪಡೆಯಬಹುದು.

ಕಾರ್ಯಪಾಲಕ ಅಭಿಯಂತರರು

ಪಿ.ಆರ್. 858 ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಭಾಗ, ಚಿತ್ರದುರ್ಗ

ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ (ರಾಜ್ಯ ವಲಯ) ಚಿಕ್ಕಬಳ್ಳಾಪುರ

ಸಾರ್ವಜನಿಕ ಪಕಟಣೆ ಸಂಖ್ಯೆ:ಸತೋನಿ(ರಾವ)ಚಿಪುರ:2009–10, ದಿನಾಂಕ: 22ನೇ ಸೆಪ್ಟೆಂಬರ್ 2009

ವಿಷಯ: ಚಿಕ್ಕಬಳ್ಳಾಪುರ ಜಿಲ್ಲೆ ತೋಟಗಾರಿಕೆ ಇಲಾಖೆಯ ವತಿಯಿಂದ RKVY ಯೋಜನೆಯಡಿ ಚಿಕ್ಕದಾಸರಹಳ್ಳಿ ಗೋಡಂಬಿ ಮತ್ತು ಮಾವು ಕ್ಷೇತ ಹಾಗೂ ಪಸಪಲೋಡು ತೋಟಗಾರಿಕೆ ಕ್ಷೇತಗಳಲ್ಲಿ ವಿವಿಧ ಅಭಿವೃದ್ಧಿ (ಪೋಜನಿ ಆರ್ಚರ್ಡ್) ಕೆಲಸ ಕಾರ್ಯಗಳನ್ನು ನಿರ್ವಹಿಸಲು ಲಕೋಟೆ ಟೆಂಡರ್ ದರಗಳನ್ನು ಆಹ್ವಾನಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ತೋಟಗಾರಿಕೆ ಇಲಾಖೆಯ **KSHDA** ಅಧೀನದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ರಾಜ್ಯವಲಯದ ಚಿಕ್ಕದಾಸರಹಳ್ಳಿ ಗೋಡಂಬಿ ಮತ್ತು ಮಾವು ಹಾಗೂ ಪಸಪಲೋಡು ತೋಟಗಾರಿಕೆ ಕ್ಷೇತ್ರಗಳಲ್ಲಿ ವಿವಿಧ ಅಭಿವೃದ್ಧಿ (ಪೋಜನಿ ಆರ್ಚರ್ಡ್) ಕೆಲಸ ಕಾರ್ಯಗಳನ್ನು ನಿರ್ವಹಿಸಲು ಲಕೋಟೆ ಟೆಂಡರ್‌ಗಳನ್ನು ಆಹ್ವಾನಿಸಿದೆ. ಇಚ್ಚೆಯುಳ್ಳವರು ಟೆಂಡರ್‌ಗಳನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ದಿನಾಂಕ:23–10–2009 ಮಧ್ಯಾಹ್ನ 2–00 ಗಂಟೆ ಒಳಗೆ ನೀಡಲು ಕೋರಿದೆ. ಟೆಂಡರ್‌ಗಳನ್ನು ಅದೇ ದಿನ ಅಂದರೆ 23–10–2009 ರಂದು ಸಂಜೆ 4–00 ಗಂಟೆಗೆ ಕೆಳ ಸಹಿದಾರರ ಕಛೇರಿಯಲ್ಲಿ ತೆರೆಯಲಾಗುವುದು.

ಕ. ಸಂ.	ನಿರ್ವಹಿಸಬೇಕಾದ ಕೆಲಸ ಮತ್ತು ಸರಬರಾಜು ಮಾಡಬೇಕಾದ ದಾಸ್ತಾನು ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ
1.	ಜಿಲ್ಲೆಯಲ್ಲಿರುವ ತೋಟಗಾರಿಕೆ ಕ್ಷೇತ್ರದಲ್ಲಿ ಕಾಡು ಗಿಡಗಳನ್ನು ತೆಗೆದು ಸ್ವಚ್ಚಗೊಳಿಸುವುದು (ದಟ್ಟವಾದ ಕಾಡು / ಸಾಧಾರಣ ಕಾಡು) 1) 20 ಹೆ. ಚಿಕ್ಕದಾಸರಹಳ್ಳಿ ಗೋಡಂಬಿ ತೋಟಗಾರಿಕೆ ಕ್ಷೇತ್ರ 2) 02 ಹೆ. ಪಸಪಲೋಡು ತೋಟಗಾರಿಕೆ ಕ್ಷೇತ 3) 02 ಹೆ. ಚಿಕ್ಕದಾಸರಹಳ್ಳಿ ಮಾವು ತೋಟಗಾರಿಕೆ ಕ್ಷೇತ್ರ ಒಟ್ಟು 24 ಹೆಕ್ಟೇರ್. ಪತಿ ಹೆಕ್ಟೇರ್‌ಗೆ ದರ ನಮೂದಿಸುವುದು.	2.00	10000–00
2.	ಹಣ್ಣಿನ ಗಿಡಗಳನ್ನು ನಾಟಿ ಮಾಡಲು ವಿವಿಧ ಅಳತೆಯ ಗುಂಡಿಗಳನ್ನು ತೆಗೆಯಲು 2 ಅಡಿ x 2 ಅಡಿ x 2ಅಡಿ ಅಳತೆಯ 1200 ಗುಂಡಿಗಳು 1 ಮೀಟರ್ x 1 ಮೀಟರ್ x 1ಮೀಟರ್ 2400 ಗುಂಡಿಗಳು ಪತಿ ಗುಂಡಿಗೆ ದರ ನಮೂದಿಸುವುದು.	1.20	
3.	ಕಲ್ಟಿವೇಟರ್ ಮತ್ತು ಎಂ.ಬಿ. ನೇಗಿಲು ನಿಂದ ಉಳುಮೆ ಮಾಡುವುದು. 24 ಹೆಕ್ಟೇರ್ ಪ್ರತಿ ಹೆಕ್ಟೇರ್ ಗೆ ದರ ನಮೂದಿಸುವುದು.	1.50	
4.	ಕೊಟ್ಟಿಗೆ ಗೊಬ್ಬರ 512 ಸಿ.ಎಂ.ಟಿ ಮರಳು 512 ಸಿ.ಎಂ.ಟಿ ಕೆಂಪು ಮಣ್ಣು 512 ಸಿ.ಎಂ.ಟಿ ಪ್ರತಿ ಸಿ.ಎಂ.ಟಿ ಗೆ ದರ ನಮೂದಿಸುವುದು.	4.52	

ಟೆಂಡರ್ ಷೆಡ್ಯೂಲ್: (Tender Schedule)

ಕ್ರ. ಸಂ	ವಿವರಗಳು	ದಿನಾಂಕ	ಸಮಯ	ಸ್ಥಳ
1	ಖಾಲಿ ಟೆಂಡರ್ ಫಾರಂಗಳ ವಿತರಣೆ	12–10–2009 ರಿಂದ 16–10–2009	ಬೆಳಿಗ್ಗೆ 10–30 ರಿಂದ ಸಂಜೆ 5–00 ಗಂಟೆ	ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ (ರಾಜ್ಯ ವಲಯ), ನಂದಿ ಕ್ರಾಸ್, ಚಿಕ್ಕಬಳ್ಳಾಪುರ
2	ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ	23–10–2009	ಮಧ್ಯಾಹ್ನ 2–00 ಗಂಟೆಗೆ	--ಡಿಟೋ--
3	ಟೆಂಡರ್‌ಗಳನ್ನು ತೆರೆಯುವ ದಿನಾಂಕ	23–10–2009	ಸಂಜೆ 4–00 ಗಂಟೆಗೆ	--ಡಿಟೋ--

ಷರತ್ತುಗಳು:

1. ಟೆಂಡರ್‌ಗಳನ್ನು ನಿಗದಿಪಡಿಸಿದ ಅವಧಿಯೊಳಗಾಗಿ ಲಕೋಟೆಯಲ್ಲಿ ಸಲ್ಲಿಸಬೇಕು. ನಂತರ ಬಂದ ಟೆಂಡರ್‌ಗಳನ್ನು ಯಾವುದೇ ಕಾರಣಕ್ಕೂ ಅಂಗೀಕರಿಸಲಾಗುವುದಿಲ್ಲ.
2. ಟೆಂಡರ್‌ಗಳನ್ನು ದಿನಾಂಕ:23–10–2009ರಂದು ಹಾಜರಾಗುವ ಟೆಂಡರ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು.
3. ಟೆಂಡರ್‌ಗಳಲ್ಲಿ ಕೆಲಸದ ಪೂರ್ಣ ವಿವರಣೆಯನ್ನು ಹಾಗೂ ಅದರ ದರವನ್ನು ಸ್ಪಷ್ಟವಾಗಿ ನಮೂದಿಸಬೇಕು. ಹಾಗೂ ತಾವು ಹೊಂದಿರುವ ಟಿನ್ ನಂಬರ್ ಹಾಗೂ ಇತರೇ ಆದಾಯ ತೆರಿಗೆ ದಾಖಲಾತಿಗಳನ್ನು ಸಲ್ಲಿಸತಕ್ಕದ್ದು. ಕಳೆದ ಸಾಲಿನಲ್ಲಿ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿದ ವಿವರಗಳನ್ನು ನೀಡುವುದು.
4. ಟೆಂಡರ್ ದರವನ್ನು ಅನುಮೋದಿಸಿದ ಕೂಡಲೇ ಕಾರ್ಯಾದೇಶ ನೀಡಿದ ಒಂದು ವಾರದಲ್ಲಿ ಕೆಲಸ ಮಾಡಿಕೊಡತಬೇಕು. ಯಾವುದೇ ಕಾರಣಕ್ಕೂ ಅವಧಿಯನ್ನು ವಿಸ್ತರಿಸುವ ಅವಕಾಶವಿರುವುದಿಲ್ಲ.
5. ಟೆಂಡರ್‌ನಲ್ಲಿ ನಮೂದಿಸಿರುವ ಕೆಲಸ ಕಾರ್ಯಗಳ ಮತ್ತು ಸರಬರಾಜಿನ ಬಗ್ಗೆ ಇರುವ ತೆರಿಗೆಯನ್ನು ಸ್ಪಷ್ಟವಾಗಿ ನಮೂದಿಸಬೇಕು.
6. ಟೆಂಡರ್‌ನಲ್ಲಿ ಮರಳು ಮತ್ತು ಕೆಂಪು ಮಣ್ಣಿಗೆ ಸಂದಾಯಮಾಡಿರುವ ರಾಯಲ್ಟಿ ವಿವರಗಳನ್ನು ನೀಡಬೇಕು. ತಪ್ಪಿದಲ್ಲಿ ಕಾನೂನು ರೀತ್ಯಾ ಲಭ್ಯವಿರುವ ಆದೇಶಗಳನುಸಾರ ರಾಯಲ್ಟಿಯನ್ನು ಬಿಲ್ಲಿನಲ್ಲಿ ನೇರವಾಗಿ ಕಡಿತಗೊಳಿಸಲಾಗುವುದು.
7. ನಿರ್ವಹಣೆ ಮತ್ತು ಸರಬರಾಜಿಗೆ ಸಂಬಂಧಿಸಿದ ಇಲಾಖೆಯ ನಿಯಮಾವಳಿ ಪ್ರಕಾರ ಆದಾಯ ತೆರಿಗೆಯನ್ನು ಬಿಲ್ಲಿನಲ್ಲಿ ಕಟಾಯಿಸಲಾಗುವುದು.
8. ಟೆಂಡರ್‌ಗೆ ಲಗತ್ತಿಸುವ ಇ.ಎಂ.ಡಿಯನ್ನು ಕೆಳ ಸಹಿದಾರರ ಪದನಾಮದಲ್ಲಿ ಪಡೆದಿರಬೇಕು. ಹಾಗೂ ನೀವು ನಿರ್ವಹಿಸುವ ಕಾರ್ಯ ಪೂರ್ಣಗೊಳ್ಳುವ ತನಕ ಮೊತ್ತವನ್ನು ಕಛೇರಿಯಲ್ಲಿ ಕಾದಿರಿಸಲಾಗುವುದು. ಹಾಗೂ ನಿಮ್ಮ ಕಾರ್ಯ ನಿರ್ವಹಣೆ ಮತ್ತು ಸರಬರಾಜಿನಲ್ಲಿ ಯಾವುದೇ ವ್ಯತ್ಯಾಸವಾದಲ್ಲಿ ಇ.ಎಂ.ಡಿ ಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
9. ಟೆಂಡರ್ ಕಮಿಟಿ ತೀರ್ಮಾನದಂತೆ ಇಲಾಖೆಯಿಂದ ಅನುಮೋದಿಸಿದ ಟೆಂಡರ್‌ದಾರರಿಗೆ ಸರಬರಾಜಿಗೆ ಮತ್ತು ಕೆಲಸ ನಿರ್ವಹಿಸಲು ಆದೇಶವನ್ನು ನೀಡಲಾಗುವುದು.
10. ಟೆಂಡರ್ ಪ್ರಕ್ರಿಯೆಯನ್ನು ಅನುಮೋದಿಸುವ ಅಥವಾ ತಿರಸ್ಕರಿಸುವ ಅಧಿಕಾರ ಟೆಂಡರ್ ಕಮಿಟಿಗೆ ಸೀಮಿತಗೊಳಿಸಿದೆ. ಇದರ ಬಗ್ಗೆ ಯಾವುದೇ ಹೆಚ್ಚಿನ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

ಪಿ.ಆರ್. 874 ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ) ಚಿಕ್ಕಬಳ್ಳಾಪುರ.

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಮಂಗಳೂರು ವಿಭಾಗ, ಮಂಗಳೂರು–575001

ಹಳೇ ಕಟ್ಟಡ ಸಾಮಗ್ರಿ ವಿಲೇವಾರಿಗಾಗಿ ಟೆಂಡರು ಹಾಗೂ ಹರಾಜು ಪ್ರಕಟಣೆ

ನಂ. ಲೋ.ಬಂ.ಒ.ಜ.ಸಾ.ಇ.:ಮಂ.ವಿ:ಎಇ–2:ಹಳೇಕಟ್ಟಡ ಸಾಮಗ್ರಿ ವಿಲೇವಾರಿ:09–10 ದಿನಾಂಕ: 9ನೇ ಅಕ್ಟೋಬರ್ 2009

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಪುತ್ತೂರು ಸಹಾಯಕ ಕಮೀಷನರ್ ಕಛೇರಿಯ ಹಳೇ ಕಟ್ಟಡದ ಈ ಕೆಳಕಂಡ ಸಾಮಗ್ರಿಗಳನ್ನು "ಎಲ್ಲಿದೆಯೋ" "ಹೇಗಿದೆಯೋ" ಅದೇ ಸ್ಥಿತಿಯಲ್ಲಿ ವಿಲೇವಾರಿಗಾಗಿ ಮೊಹರು ಮಾಡಿದ ಟೆಂಡರು ಕರೆಯಲಾಗಿದೆ. ಟೆಂಡರುಗಳನ್ನು ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರ ಕಛೇರಿಯಲ್ಲಿ ದಿನಾಂಕ:27.10.2009ರ ಸಂಜೆ 4–00 ಗಂಟೆಯವರೆಗೆ ಸ್ವೀಕರಿಸುವರು.

ಕ್ರ. ಸಂ.	ಹಳೇ ಕಟ್ಟಡ ಸಾಮಗ್ರಿಗಳ ವಿವರ		ಠೇವಣಿ (ಟೆಂಡರಿನ ಜೊತೆಗೆ ಡಿ.ಡಿ. ರೂಪದಲ್ಲಿ ಕೊಡ ಬೇಕಾಗಿರುವುದು) ರೂ.ಗಳಲ್ಲಿ	ಟೆಂಡರಿನ ದಾಖಲೆಗಳ ಮೌಲ್ಯ (ಹಿಂದಿರುಗಿಸ ಲಾಗುವುದಿಲ್ಲ) ರೂ.ಗಳಲ್ಲಿ	ಸಾರ್ವಜನಿಕರಿಂದ ಟೆಂಡರು ದಾಖಲೆಗಳಿಗಾಗಿ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ	ಖಾಲಿ ಟೆಂಡರ್ ಫಾರಂ ಗಳನ್ನು ಕೊಡುವ ದಿನಾಂಕ	ಭರ್ತಿ ಗೊಳಿಸಿದ ಟೆಂಡರು ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ	ಸಾರ್ವಜನಿಕ ಹರಾಜಿನ ದಿನಾಂಕ	ಸಾಮಗ್ರಿ ಇರುವ ಸ್ಥಳ
1	ಮಂಗಳೂರು ಹಂಚುಗಳು	8811 ಸಂಖ್ಯೆಗಳು	12000.00	1100.00	23.10.2009	26.10.2009	27.10.2009	28.10.2009	ಶಿವರಾಮಕಾರಂತರ ಬಾಲವನ, ಪರ್ಲಡ್ಕ, ಪುತ್ತೂರು
2	ಸಿಲಿಂಗ್ ಹಂಚುಗಳು	1940 ಸಂಖ್ಯೆಗಳು							
3	ಪಕ್ಕಾಸು ಹಲಗೆ	21.257 ಘ.ಮೀ							
4	ಬೀಮ್ (ತೊಲೆಗಳು)	3.715 ಘ.ಮೀ							
5	ಲ್ಯಾಟರೇಟು ಕಲ್ಲುಗಳು 3650 ನಂ (1ಘ.ಮೀ. = 70 ಕಲ್ಲು)	52.14 ಘ.ಮೀ							
6	ನೆಲಹಾಸು ಹಂಚುಗಳು	3975 ಸಂಖ್ಯೆಗಳು							
7	ಮೆಟಲ್ ಜಾಲರಿ ಮೆಶ್	41.47 ಚ.ಮೀ							

ಸೂಚನೆ:–

1. ಟೆಂಡರಿನ ನಿಗದಿತ ನಮೂನೆಯನ್ನು ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಮಂಗಳೂರು ಇವರಿಗೆ ಮೇಲೆ ತಿಳಿಸಿರುವ ದಿನಾಂಕದೊಳಗೆ ಕಾಲಂ 4 ರಲ್ಲಿ ನಮೂದಿಸಿರುವ ನಗದು ಪಾವತಿಸಿ ಪಡೆಯಬಹುದು. ಟೆಂಡರು ದಾಖಲೆಗಳನ್ನು ಅಂಚೆಯ ಮೂಲಕ ಕಳುಹಿಸಲಾಗುವುದಿಲ್ಲ.
2. ಖಾಲಿ ಟೆಂಡರು ದಾಖಲೆಗಳನ್ನು ಸಾರ್ವಜನಿಕರಿಂದ ಮನವಿ ಪತ್ರಗಳನ್ನು ದಿನಾಂಕ:23.10.2009 ರ ವರೆಗೆ ಕಾಲಂ 4 ರಲ್ಲಿ ನಮೂದಿಸಿದ ಮೊಬಲಗಿನೊಂದಿಗೆ ಕೆಲಸದ ದಿನಗಳಂದು ಈ ಕಛೇರಿಯಲ್ಲಿ ಕೆಲಸದ ವೇಳೆ ಪಡೆಯಲಾಗುವುದು. ಖಾಲಿ ಟೆಂಡರು ದಾಖಲೆಗಳನ್ನು ದಿನಾಂಕ:26.10.2009 ರಂದು ಕಛೇರಿಯ ಕೆಲಸದ ವೇಳೆ ಪಡೆಯಬಹುದು. ಟೆಂಡರು ದಾಖಲೆಗಳ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.
3. ಮೊಹರು ಮಾಡಿದ ಭರ್ತಿ ಮಾಡಿದ ಟೆಂಡರು ದಾಖಲೆಗಳನ್ನು ಕಾಲಂ 3 ರಲ್ಲಿ ನಮೂದಿಸಿದ ಮೌಲ್ಯವನ್ನು ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಮಂಗಳೂರು ಇವರ ಹೆಸರಿನಲ್ಲಿ ಡಿ.ಡಿ. ರೂಪದ ಠೇವಣಿ ಸಹಿತ ದಿನಾಂಕ:27.10.2009 ರಂದು ಅಪರಾಹ್ನ 4.00 ಗಂಟೆಯ ವರೆಗೆ ಈ ಕಛೇರಿಯಲ್ಲಿಟ್ಟಿರುವ ಟೆಂಡರು ಡಬ್ಬಿಯಲ್ಲಿ ಹಾಕಬಹುದು. ನಂತರ ಬಂದ ಟೆಂಡರುಗಳನ್ನು ಸ್ವೀಕರಿಸಲಾಗುವುದಿಲ್ಲ. ಮೊಹರು ಮಾಡಿದ ಟೆಂಡರುಗಳನ್ನು ಬಹಿರಂಗ ಹರಾಜಿನ ಮುಂದಿನ ದಿನ ದಿನಾಂಕ:29.10.2009 ರಂದು ಕಛೇರಿ ವೇಳೆಯಲ್ಲಿ ಉಪಸ್ಥಿತರಿರುವ ಟೆಂಡರುದಾರರ ಸಮಕ್ಷಮ ತೆಗೆಯಲಾಗುವುದು. ಒಂದು ವೇಳೆ ಮೇಲೆ ತಿಳಿಸಿದ ದಿನಾಂಕದಂದು ನಿಗದಿತ ಸಮಯದಲ್ಲಿ ಟೆಂಡರು ತೆಗೆಯಲು ಸಾಧ್ಯವಾಗದಿದ್ದಲ್ಲಿ ಮುಂದೆ ಅನುಕೂಲವಾಗುವ ದಿನದಂದು ಟೆಂಡರು ತೆಗೆಯಲಾಗುವುದು ಹಾಗೂ ಈ ಬಗ್ಗೆ ಮಾಹಿತಿ ನೀಡಲಾಗುವುದು.
4. ಮೇಲೆ ತಿಳಿಸಿರುವ ದಿನಾಂಕಗಳು ರಜಾ ದಿನಗಳಾದರೆ ಮುಂದಿನ ಕೆಲಸ ದಿನವು ವ್ಯವಹಾರಕ್ಕೆ ಅನ್ವಯಿಸುವುದು.
5. ಯಾವುದೇ ಕಾರಣ ನೀಡದೆ ಟೆಂಡರನ್ನು ಅಂತಿಮವಾಗಿ ಒಪ್ಪುವ ಯಾ ನಿರಾಕರಿಸುವ ಅಥವಾ ಎಲ್ಲಾ ಟೆಂಡರುಗಳನ್ನು ತಿರಸ್ಕರಿಸುವ ಅಧಿಕಾರವನ್ನು ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರು ಹೊಂದಿರುತ್ತಾರೆ.
6. ಅತೀ ಹೆಚ್ಚು ಟೆಂಡರ್ ಬೆಲೆ ನಮೂದಿಸಿದ ವ್ಯಕ್ತಿಯು ಟೆಂಡರನ್ನು ತೆಗೆದ ಮೇಲೆ ಸ್ಥಳದಲ್ಲಿಯೇ ಟೆಂಡರ್ ಬೆಲೆಯ ಶೇಕಡಾ 50 ಮತ್ತು ಸರಕಾರದಿಂದ ನಿಗದಿಪಡಿಸಿರುವ ತೆರಿಗೆಯನ್ನು ಠೇವಣಿಯಾಗಿ ಇಡಬೇಕು ಹಾಗೂ ಟೆಂಡರಿನೊಂದಿಗೆ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾಗಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರ ಹೆಸರಿನಲ್ಲಿ ಠೇವಣಿ ಮೊತ್ತದ ಡಿ.ಡಿ.ಯನ್ನು ಪಡೆದು ಲಗತ್ತಿಸಿರಬೇಕು. ಇಲ್ಲವಾದಲ್ಲಿ ಅವರ ಟೆಂಡರನ್ನು ನಿರಾಕರಿಸಲಾಗುವುದು.
7. ದಿನಾಂಕ:28.10.2009 ರಂದು ಅಪರಾಹ್ನ 4.30 ಗಂಟೆಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಪವಿಭಾಗ, ಪುತ್ತೂರು ಇವರು ಸದರಿಯವರ ಕಛೇರಿಯಲ್ಲಿ ಹಳೆ ಕಟ್ಟಡ ಸಾಮಗ್ರಿಗಳ ವಿಲೇವಾರಿಗಾಗಿ ಸಾರ್ವಜನಿಕ ಹರಾಜನ್ನು ನಡೆಸುತಾರೆ. ಇದರಲ್ಲಿ ಟೆಂಡರು ಹಾಕಲ್ಪಟ್ಟ ವ್ಯಕ್ತಿಗಳ ಸಹಿತ ಯಾರೂ ಭಾಗವಹಿಸಬಹುದು. ಆದರೆ ಟೆಂಡರ್‌ನಲ್ಲಿ ಭಾಗವಹಿಸದವರು ಮೊದಲು ಕಾಲಂ 3 ರಲ್ಲಿ ನಮೂದಿಸಿದ ಮೌಲ್ಯವನ್ನು ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಮಂಗಳೂರು ಇವರ ಹೆಸರಿನಲ್ಲಿ ಡಿ.ಡಿ. ರೂಪದ ಠೇವಣಿಯಾಗಿಡತಕ್ಕದ್ದು.
8. ಸಾರ್ವಜನಿಕ ಹರಾಜಿನಲ್ಲಿ ಅತಿ ಹೆಚ್ಚು ಬಿಡ್ ಮಾಡಿದ ವ್ಯಕ್ತಿಯು ಬಿಡ್ ಮೌಲ್ಯದ ಶೇಕಡಾ 50 ಮತ್ತು ಸರಕಾರದಿಂದ ನಿಗದಿಪಡಿಸಿರುವ ತೆರಿಗೆಯನ್ನು ಸ್ಥಳದಲ್ಲಿಯೇ ಠೇವಣಿಯಾಗಿಡಬೇಕು.
9. ಅತೀ ಹೆಚ್ಚಿನ ಟೆಂಡರ್ ಮೊತ್ತದ ಬಿಡ್ಡುದಾರರ ಬಿಡ್ಡಿನ ಮೊತ್ತವನ್ನು ಮೇಲಾಧಿಕಾರಿಯವರಿಂದ ಅನುಮೋದನೆ ಪಡೆದ ನಂತರ ಮೇಲಿನ ಹಳೇ ಕಟ್ಟಡ ಸಾಮಗ್ರಿಗಳನ್ನು ವಿಲೇವಾರಿ ಮಾಡಲಾಗುವುದು.
10. ಆಸಕ್ತರು ಸಹಾಯಕ ಕಾರ್ಯಪಾಲಕ ಇಂಜಿನಿಯರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪವಿಭಾಗ, ಪುತ್ತೂರು ಇವರನ್ನು ಸಂಪರ್ಕಿಸಿ, ಮೇಲಿನ ಸಾಮಗ್ರಿಗಳನ್ನು ಕಛೇರಿ ಸಮಯದಲ್ಲಿ ಪರಿಶೀಲಿಸಬಹುದು.

ಕಾರ್ಯನಿರ್ವಾಹಕ ಇಂಜಿನಿಯರ್,
ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಮಂಗಳೂರು ವಿಭಾಗ, ಮಂಗಳೂರು

ಪಿ.ಆರ್. 871

DISTRICT AND SESSIONS COURT, BANGALORE RURAL DISTRICT, BANGALORE

NOTIFICATION

NOS: ADM/133/2009 & ADM/164/2009, Dated: 6th October 2009

Applications are invited for the following Posts in the units of District & Sessions Court, Bangalore Rural District, Bangalore from the eligible candidates. The last date fixed for receiving the application is **26.10.2009 at 4.00 P.M.** The details are as under:-

1. PROCESS SERVER

Total number of vacancies is 04 (Four)

Classification of vacancies:-

Category of post	Others	P.H.	Ex. M.P.	Total
G.M.	-	1	1	2
S.T.	1	-	-	1
Cat. II A	1	-	-	1
Total	**2**	**1**	**1**	**4**

Pay scale: 5500-100-6000-125-6500-150-7100-175-7800-200-8600-225-9500

Qualification: A pass in SSLC or equivalent examination.

Preference will be given to the candidates possessing driving licence.

Mode of selection: Oral interview.

2. PEONS

No. of vacancies-10

Classification of vacancies

ವರ್ಗೀಕರಣ	ಇತರೆ	ಮಹಿಳಾ ಅಭ್ಯರ್ಥಿ	ಗ್ರಾಮೀಣ	ಮಾಜಿ ಸೈನಿಕ	ಒಟ್ಟು
ಸಾಮಾನ್ಯ ಅರ್ಹತೆ (General Merit)	01	01	02	01	05
ಪರಿಶಿಷ್ಟ ಜಾತಿ (S.C.)	–	–	01	–	01
ಪರಿಶಿಷ್ಟ ಪಂಗಡ (S.T.)	–	–	01	–	01
ಪ್ರವರ್ಗ – 1 (Cat.I)	–	01	–	–	01
ಪ್ರವರ್ಗ – 2ಎ (Cat.II-A)	–	–	01	–	01
ಪ್ರವರ್ಗ – 3ಬಿ (Cat. III-B)	–	01	–	–	01
ಒಟ್ಟು	**01**	**03**	**05**	**01**	**10**

Pay scale:

4800-100-6000-125-6500-150-7100-175-7275.

Qualification: A pass in VII Standard and must be able to read and write Kannada

Mode of selection: Oral interview.

AGE LIMIT FOR ALL THE ABOVE POSTS

(i) The applicant must have attained the age of 18 years and must not have attained the age of

a) 40 years in case of persons belonging to SC/ST and Category-I

b) 38 years in case of other categories of Backward classes.

c) 35 years in case of others

as on the last date fixed for submission of application.

d) Age relaxation will be given to the applicant who is in State/Central Govt. Service/ Ex.M.P./P.H./Widow as per the KCS (General Recruitment) Rules, 1977

The application in the prescribed proforma as per the respective notifications to be submitted to the District & Sessions Judge, Bangalore Rural District, Bangalore on or before 26.10.2009

For application formats and further details, refer the notification affixed on the Notice board of this office.

Bangalore
Dated:06.10.2009.
P.R. 876

K. GOVINDARAJULU
Prl. District & Sessions Judge,
Bangalore Rural District, Bangalore

V-F8-B/B

ಲೋಕೋಪಯೋಗಿ ಇಲಾಖೆ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು

ಇ–ಟೆಂಡರ್ – ಪ್ರಕಟಣೆ (ದ್ವಿಲಕೋಟೆ ಪದ್ಧತಿ) – 4ನೇ ಕರೆ

ಸಂಖ್ಯೆ:ಲೋ.ಇ.ಮಂವಿ:ಟಿಎನ್‌ಡಿ(33ಇ):2009–10:ಎಇ1, ದಿನಾಂಕ: 12ನೇ ಅಕ್ಟೋಬರ್ 2009

ಈ ಕೆಳಕಂಡ ಕಾಮಗಾರಿಗಳ ಟೆಂಡರುಗಳನ್ನು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್‌ನಲ್ಲಿ ಸಲ್ಲಿಸುವ ದಿನಾಂಕವನ್ನು 26.10.2009ರ ಅಪರಾಹ್ನ 4.00 ಗಂಟೆ (16.00 ಗಂಟೆ) ಎಂದು ಮರುನಿಗದಿಪಡಿಸಲಾಗಿದೆ. ಉಳಿದಂತೆ ಯಾವುದೇ ಬದಲಾವಣೆಗಳು ಇರುವುದಿಲ್ಲ. ಟೆಂಡರನ್ನು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮಾರ್ಗಸೂಚಿಯಂತೆ ತೆರೆಯಲಾಗುವುದು.

ಹೆಚ್ಚಿನ ವಿವರಗಳನ್ನು ಅಂತರ್ಜಾಲದಲ್ಲಿ ಟೆಂಡರು ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. (ರೂ.ಲಕ್ಷಗಳಲ್ಲಿ)	ಕಾಮಗಾರಿಯನ್ನು ಪೂರ್ಣಗೊಳಿಸಲು ಕಾಲಾವಧಿ (ಮಳೆಗಾಲ ಹೊರತುಪಡಿಸಿ)
	ನಬಾರ್ಡ್ ಆರ್.ಐ.ಡಿ.ಎಫ್–14 (ರಸ್ತೆಗಳು)			
1	ಸುಳ್ಯ ತಾಲ್ಲೂಕಿನ ಐವರನಾಡು–ಪಾಲೆಪ್ಪಾಡಿ ಅಮಲ ರಸ್ತೆ ಅಭಿವೃದ್ಧಿ	69.00	1.38	9 ತಿಂಗಳು
2	ಸುಳ್ಯ ತಾಲ್ಲೂಕಿನ ನರಕೋಡು–ಕೊಲ್ಚಾರು–ಬಂಡ್ಯಡ್ಕ ರಸ್ತೆ ಅಭಿವೃದ್ಧಿ	95.00	1.90	9 ತಿಂಗಳು

ಕಾರ್ಯನಿರ್ವಾಹಕ ಇಂಜಿನಿಯರ್
ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,
ಮಂಗಳೂರು ವಿಭಾಗ, ಮಂಗಳೂರು

ಪಿ.ಆರ್. 882

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಭದ್ರಾವತಿ ವಿಭಾಗ, ಭದ್ರಾವತಿ

ಸಂಕ್ಷಿಪ್ತ ಹರಾಜು ಪ್ರಕಟಣೆ

ಸಂಖ್ಯೆ:ಬಿ1/ಎಸ್.ಎ.ಎಸ್.ಸಿಆರ್.3/2009–10, ದಿನಾಂಕ: 6ನೇ ಅಕ್ಟೋಬರ್ 2009

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ತರೀಕೆರೆ ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿರುವ ನಾಟಾಗಳನ್ನು ಅನುಸೂಚಿಯಲ್ಲಿ ಸೂಚಿಸಿರುವಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಭದ್ರಾವತಿ ವಿಭಾಗ, ಭದ್ರಾವತಿ ಅಥವಾ ಇವರಿಂದ ಅಧಿಕಾರ ಪಡೆದ ಇತರೆ ಅಧಿಕಾರಿಗಳು ದಿನಾಂಕ: 04.11.2009 ರ ಬೆಳಿಗ್ಗೆ 10.00 ಗಂಟೆಗೆ ಈ ಕೆಳಗೆ ನಮೂದಿಸಿದ ಷರತ್ತಿಗೊಳಪಟ್ಟು ಹಾಗೂ ಸವಿಸ್ತಾರ ಹರಾಜು ಪ್ರಕಟಣೆ ನಿಬಂಧನೆಗಳ ಪ್ರಕಾರ ಬಹಿರಂಗ ಹರಾಜು ಮಾಡುವರು.

ಕ್ರ. ಸಂ.	ಜಾತಿ	(ಅಂದಾಜು ಪ್ರಮಾಣ)
1	ಬೀಟೆ	25.000 ಎಂ3
2	ಸಾಗುವಾನಿ	30.000 ಎಂ3
3	ಜಂಗಲ್ ವುಡ್	60.000 ಎಂ3
4	ಪೋಲ್ಸ್	250 ಸಂಖ್ಯೆ

ಷರತ್ತುಗಳು

1. ನಾಟಾ ಹರಾಜಿನಲ್ಲಿ ಭಾಗವಹಿಸುವ ಪ್ರತಿಯೊಬ್ಬ ಸವಾಲುದಾರರು 20,000/– ರೂ. ಮೌಲ್ಯದ ಮರ ಖರೀದಿಗೆ ಕನಿಷ್ಟ 5000/– ರೂ.ಗಳನ್ನು ಮತ್ತು ರೂ.20,000/– ಮೀರಿದ ಮೌಲ್ಯಕ್ಕೆ 20,000/– ರೂ.ಗಳನ್ನು ಮುಂಗಡ ಠೇವಣಿಯಾಗಿ ಕಟ್ಟಬೇಕು.
2. ಹರಾಜಿನ ದಿನವೇ ಒಟ್ಟು ಹರಾಜಿನ ಮೌಲ್ಯದ ಕಾಲುಭಾಗ ಹಣ ಮತ್ತು ಅನ್ವಯಿಸುವ ಎಲ್ಲಾ ತೆರಿಗೆಗಳನ್ನು ಕೆಳಕಂಡಂತೆ ಅಥವಾ ಹರಾಜಿನ ದಿನದಂದು ಚಾಲ್ತಿಯಲ್ಲಿರುವಂತೆ ಪೂರ್ಣವಾಗಿ ಪಾವತಿಸಬೇಕು. ಉಳಿದ ಮುಕ್ಕಾಲು ಭಾಗ ಹಣವನ್ನು ಹರಾಜು ದಿನಾಂಕದಿಂದ 60 ದಿನಗಳೊಳಗೆ ಪಾವತಿಸಿ 90 ದಿನಗಳಲ್ಲಿ ಮಾಲು ಎತ್ತುವಳಿ ಮಾಡಬೇಕು.

ಅ. ಟಿಂಬರ್, ಪೋಲ್ಸ್ ಆರ್.ಕೆ. ಬಿಲ್ಲೆಟ್ಸ್ ವ್ಯಾಟ್ 12.5%

ಆ. ಎಫ್.ಡಿ.ಟಿ.= 8% ಇತರೆಯವರಿಗೆ, 12% ಕೈಗಾರಿಕೆಗಳಿಗೆ

ಇ. ಆದಾಯ ತೆರಿಗೆ=2.5% ಮೌಲ್ಯ ವ್ಯಾಟ್ ಮತ್ತು ಎಫ್.ಡಿ.ಟಿ. ಮೇಲೆ

ಈ. ಸರ್ಚಾರ್ಜ್=2.5% ಆದಾಯ ತೆರಿಗೆ ಮೇಲೆ

ಉ. ಎಜುಕೇಷನ್ ಸೆಸ್ 3% ಆದಾಯ ತೆರಿಗೆ ಮತ್ತು ಸರ್ಚಾರ್ಜ್ ಮೇಲೆ

3. ಪರಾಜಿನಲ್ಲಿ ಭಾಗವಹಿಸುವ ಬಿಡ್ದುದಾರರು ಠೇವಣಿ ಕಟ್ಟುವ ಮೊದಲು ಚುನಾವಣಾಧಿಕಾರಿಗಳು ನೀಡಿರುವ ಗುರುತಿನ ಚೀಟಿ ಅಥವಾ ಆಹಾರ ಪಡಿತರ ಚೀಟಿ ಅಥವಾ ಡ್ರೈವಿಂಗ್ ಪರವಾನಿಗೆ ಇವುಗಳಲ್ಲಿ ಯಾವುದಾದರೂ ಒಂದು ಗುರುತಿನ ಚೀಟಿ ಹಾಜರುಪಡಿಸತಕ್ಕದ್ದು.
4. ಇತರೆ ಷರತ್ತುಗಳನ್ನು ಕಛೇರಿಯಿಂದ ಅಥವಾ ಸಂಬಂಧಪಟ್ಟ ಡಿಪೋ ವಲಯ ಅರಣ್ಯಾಧಿಕಾರಿ ಯವರ ಕಛೇರಿಯಿಂದ ಪಡೆಯಬಹುದಾಗಿದೆ.
5. ಟ್ಯಾನ್ ಮತ್ತು ಟಿನ್ ಸಂಖ್ಯೆಗಳನ್ನು ಸಂಬಂಧಿಸಿದ ಆದಾಯ ತೆರಿಗೆ ಮತ್ತು ವಾಣಿಜ್ಯ ತೆರಿಗೆ ಅಧಿಕಾರಿಗಳಿಂದ ಕಡ್ಡಾಯವಾಗಿ ಪಡೆದು ಹರಾಜು ಭಾಗವಹಿಸುವ ಪೂರ್ವ ಹಾಜರುಪಡಿಸಬೇಕು.

ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ

BHADRAVATHI FOREST DIVISION

Office of the Deputy Conservator of Forests, Bhadravathi Division, Bhadravathi

BRIEF SALE NOTIFICATION

No.B1.SAS.CR. 3/2009-10, Dated: 6th October 2009

Sub: Auction sale of Timber and other forest produce in Govt. Timber Depot. Tarikere on 04.11.2009.

Ref: No.B4.SAS.ಬಹ–CR.6/099-10 dtd: 06.10.2009 of the Conservator of Forests, Shimoga Circle, Shimoga.

It is hereby notified for the general information of the public that the Timber and other forest produce as detailed here below will be sold in the Government Timber Depot. Tarikere in public auction on 04.11.2009 from 10.00 A.M. by the Deputy Conservator of Forests, Bhadravathi Division, Bhadravathi or the authorized officer subject to conditions to the detailed sale notifications.

Sl. No.	Species	Approximate quantity
1	Beete	25.000 m3
2	Teak	30.000 m3
3	Jungle wood	60.00 m3
4	Poles	250 Nos

CONDITIONS

1. Each intending bidders should deposit a sum of Rs.5,000/- if value of timber does not exceed Rs.20,000/- & Rs.20,000/- if exceeds, Rs.20,000/- as EMD.
2. Each bidders should pay 1/4th sale value plus full taxes at the rates given below or at the prevailing rates in force on the sale date immediately after conclusion of the sale. The remaining 3/4th value should be paid within 60 days from the date of sale. Material should be lifted within 90 days from the date of sale.
   a) VAT-12.5% b) FDT-for other than industries 8% for industries. 12% c) Income Tax 2.5% on value, VAT & FDT d) SC on IT 2.5% e) Education cess 3% on IT & Sc.
3. Each intending bidder should produce identity card issued by the Election Commissioner or Ration Card or Driving License. Otherwise the bidder will not be allowed to participate in the sale.
4. Further details can be had from the division office or the concerned depot office.
5. Each intending bidder should produce TAN and TIN No. allotted by Income Tax & Vat Officers.

Deputy Conservator of Forests,
Bhadravathi Division, Bhadravathi

P.R. 883

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಭದ್ರಾವತಿ ವಿಭಾಗ, ಭದ್ರಾವತಿ

ಸಂಕ್ಷಿಪ್ತ ಹರಾಜು ಪ್ರಕಟಣೆ

ಸಂಖ್ಯೆ:ಬಿ1/ಎಸ್.ಎ.ಎಸ್.ಸಿಆರ್-21/2009-10, ದಿನಾಂಕ: 6ನೇ ಅಕ್ಟೋಬರ್ 2009

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ರಾಜ್ಯ ಹೆದ್ದಾರಿ 68 ರ ತುಮಕೂರು-ಹೊನ್ನಾವರ ರಸ್ತೆಯ ಬಾರಂದೂರು ಕ್ರಾಸ್‌ನಿಂದ ಅಪ್ಪರ್ ಹುತ್ತಾದವರೆಗಿನ ರಸ್ತೆಯ ಎರಡು ಬದಿಯಲ್ಲಿರುವ ಇತರೆ ಜಾತಿಯ ಮರಗಳನ್ನು ಅನುಸೂಚಿಯಲ್ಲಿ ಸೂಚಿಸಿರುವಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಭದ್ರಾವತಿ ವಿಭಾಗ, ಭದ್ರಾವತಿ ಅಥವಾ ಇವರಿಂದ ಅಧಿಕಾರ ಪಡೆದ ಇತರೆ ಅಧಿಕಾರಿಗಳು ದಿನಾಂಕ: 9.11.2009 ರ ಬೆಳಿಗ್ಗೆ 10.00 ಗಂಟೆಗೆ ಈ ಕೆಳಗೆ ನಮೂದಿಸಿದ ಷರತ್ತಿಗೊಳಪಟ್ಟು ಹಾಗೂ ಸವಿಸ್ತಾರ ಹರಾಜು ಪ್ರಕಟಣೆ ನಿಬಂಧನೆಗಳ ಪ್ರಕಾರ ನಿಂತ ಸ್ಥಳದಲ್ಲೇ ಇರುವಂತೆ ಬಹಿರಂಗ ಹರಾಜು ಮಾಡುವರು.

ಕ್ರ. ಸಂ.	ರಸ್ತೆ ವಿವರ	ಮರಗಳ ಸಂಖ್ಯೆ	ಮರದ ಪ್ರಮಾಣ (ಘ.ಮೀ.ಗಳಲ್ಲಿ)
			ನಾಟಾ
1	ಶಿವನಿಕ್ರಾಸ್-ಬಾರಂದೂರು ಎಡಭಾಗದ ಬೈಪಾಸ್	79	29.924
2	ಶಿವನಿಕ್ರಾಸ್‌ನ ಬಲಭಾಗ	78	28.998
3	ಶಿವನಿಕ್ರಾಸ್-ಅಪ್ಪರ್ ಹುತ್ತಾ ಎಡಭಾಗ	67	11.143
4	ಶಿವನಿಕ್ರಾಸ್ ಅಪ್ಪರ್ ಹುತ್ತ ಬಲಭಾಗ	53	9.117
	ಒಟ್ಟು	**277**	**79.182**

ವಿವರವಾದ ಹರಾಜು ಷರತ್ತುಗಳನ್ನು ಈ ಕೆಳಸಹಿದಾರರ ಕಛೇರಿಯಿಂದ ಹರಾಜಿಗೆ ಮುನ್ನ ಪಡೆದುಕೊಳ್ಳಬಹುದು.

ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ

BHADRAVATHI FOREST DIVISION

Office of the Deputy Conservator of Forests, Bhadravathi Division, Bhadravathi

BRIEF SALE NOTIFICATION

No.B1.SAS.CR.21/2009-10, Dated: 6th October 2009

Sub: Auction sale of Standing Trees along the State High Way 68 of Bhadravathi Taluk, Shimoga District of Karnataka State from Tumkur-Honnavara Road Barandur cross to Upper Hutha.

It is hereby notified for the general information of the public that the trees Standing along the State High Way 68 of Bhadravathi Taluk, Shimoga District of Karnataka State from Tumkur-Honnavara Road Barandur cross to Upper Hutha will be sold in public auction on 9.11.2009 at 10.00 A.M. by the Deputy Conservator of Forests, Bhadravathi Division, Bhadravathi or the authorized officer subject to conditions mentioned in the detailed sale notification.

Sl. No.	Road Details	No. of Standing trees	Standing trees qnty in M3
			Timber
1.	Shivani cross to Barandur bypass road left side	79	29.924
2.	Shivani cross right side	78	28.998
3.	Shivani cross-Upper Hutha left side	67	11.143
4.	Shivani cross Upper-Hutha right side	53	9.117
	Total	**277**	**79.182**

The detailed sale conditions can be obtained from the office of the Deputy Conservator of Forests, Bhadravathi Division on any date on or before the sale date.

Deputy Conservator of Forests,
Bhadravathi Division, Bhadravathi

P.R. 884

ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ

ಅಧಿಸೂಚನೆ

ಸಂಖ್ಯೆ: ಎ4-ನಾಟಾ ಹರಾಜು:ಸಿಆರ್-16/09-10, ದಿನಾಂಕ: 2ನೇ ಅಕ್ಟೋಬರ್ 2009

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಈ ಕೆಳಗೆ ನಮೂದಿಸಿದ ನಾಟಾ ಸಂಗ್ರಹಾಲಯಗಳಲ್ಲಿ ಲಭ್ಯವಿರುವ ಬೀಟೆ, ಸಾಗುವಾನಿ, ಅಕೇಶಿಯಾ ಇತರೆ ಜಾತಿಯ ನಾಟಾಗಳು ಎಳೆಗಳು ಮತ್ತು ಸೌದೆ ಇತ್ಯಾದಿಗಳನ್ನು ಆಯಾ ಡಿಪೋವಿನ ಹೆಸರಿನ ಮುಂದೆ ಸೂಚಿಸಿದ ದಿನಾಂಕದಂದು ಬಹಿರಂಗ ಹರಾಜು ಮಾರಾಟದಲ್ಲಿ ವಿಕ್ರಯಿಸಲು ಸಾಮಾನ್ಯ ಅವಗಾಹನೆಗೆ ಪ್ರಕಟಿಸಿದೆ.

ಕ್ರ. ಸಂ.	ಡಿಪೋದ ಹೆಸರು	ಹರಾಜು ದಿನಾಂಕ	ಹರಾಜಿಗಿಟ್ಟ ನಾಟಾ, ಪೋಲ್ಸ್, ಸೌದೆ, ಬಿಲ್ಲೆಟ್ಸ್ ಇತ್ಯಾದಿ ಅಂದಾಜು ಪ್ರಮಾಣ												
			ಬೀಟೆ	ಸಾಗುವಾನಿ	ಇತರೆ ಜಾತಿ	ಅಕೇಶಿಯಾ	ಪೋಲ್ಸ್	ನೀಲಗಿರಿ	ಎಫ್.ಡಿ.ಸಿ.						
									ಬೀಟೆ	ಸಾಗುವಾನಿ	ಇತರೆ ಜಾತಿ	ಅಕೇಶಿಯಾ	ಸೌದೆ	ಪೋಲ್ಸ್	ಕಲ್ಲು
			ಘ.ಮೀ.	ಘ.ಮೀ.	ಘ.ಮೀ.	ಘ.ಮೀ.	ಸಂಖ್ಯೆ	ಘ.ಮೀ.	ಘ.ಮೀ.	ಘ.ಮೀ.	ಘ.ಮೀ.	ಘ.ಮೀ.	ಘ.ಮೀ.	ಘ.ಮೀ.	ಸಂಖ್ಯೆ
1	ಸರ್ಕಾರಿ ನಾಟಾ ಡಿಪೋ ಆಲ್ಕೊಳ ಶಿವಮೊಗ್ಗ	02.11.09	ನಾಟಾ (ಖಾಸಗಿ) 9.000 ಆರ್.ಕೆ.ಬಿ (ಖಾಸಗಿ) 1.000 ಸೌದೆ (ಖಾಸಗಿ) 5.000	–	ನಾಟಾ 1.300	ನಾಟಾ 390.000 ಸೌದೆ 1250.000	2000 (ಅಕೇಶಿಯಾ) 100 (ನೀಲಗಿರಿ)	100.0000 ನಾಟಾ 50.000 ಸೌದೆ	–	–	–	–	–	–	
2	ಸರ್ಕಾರಿ ನಾಟಾ ಡಿಪೋ ಕುರುವಳ್ಳಿ ತೀರ್ಥಹಳ್ಳಿ	03.11.09	ನಾಟಾ 0.511	ನಾಟಾ 0.658	ನಟಾ 5.940	–	–	–	–	ನಾಟಾ 1.800	ನಾಟಾ 5.999	ನಾಟಾ 17.000	7.000	–	67 ಟನ್ನು

ಟಿಪ್ಪಣಿ: 1. ಈ ಮೇಲಿನ ಸರಕು ಪ್ರಮಾಣ ಅಂದಾಜು ಇರುತ್ತದೆ.

2. ಮಾರಾಟದ ಅಧಿಸೂಚನೆಯ ಪ್ರತಿಗಳಿಗಾಗಿ ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿಯ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಸಂಪರ್ಕಿಸುವುದು.

ಎಸ್. ವೆಂಕಟೇಸನ್

ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ.

FOREST DEPARTMENT

Office of the Deputy Conservator of Forests, Shimoga Division, Shimoga

Notification

No. A4-SAS-CR-16/2009-10, Dated: 2nd October 2009

It is hereby notified for the information of general public that Beete, Acacia Other Kind Timber, Poles, Ballies and Firewood etc, available in the following Govt. Timber Depots of Shimoga division will be sold in Public Auction on the dates shown against each depot.

Sl. No.	Name of the Depot	Date of sale	Beete	Teak	Other kind	Acacia	Poles	Eucalyplus	F O C						
									Beete	Teak	O.K	Acacia	F/W	Poles	Stones
			M3	M3	M3	M3	M3	Nos.	M3	M3	M3	M3	M3		
1	GTD, Alkola, Shimoga	02.11.09	Timber (Pvt) 9.000 RKB(Pvt) 1.000 (F/wood) (Pvt) 5.000	-	Timber 1.300	Timber 390.000 F/wood 1250.000	2000 (Acacia) 100 (Eucalyptus)	Timber 100.0000 Firewood 50.000	-	-		-	-	-	
2	GTD Kuruvalli, Thirthahalli	03.11.09	Timber 0.511	Timber 0.658	Timber 5.940	-	-	-	-	Timber 1.800	Timber 5.999	Timber 17.000	7.000	-	67 Tonn

Note: 1. Quantities shown above are approximate.

2. For detailed sale notification please contact the concerned Deputy Conservator of Forests, during office hours except Govt. holidays.

S. VENKATESHAN

Deputy Conservator of Forests,

Shimoga Division, Shimoga.

P R. 885

ಶಿಕ್ಷಣ ಇಲಾಖೆ

ಅಧಿಸೂಚನೆ

ಸಂಖ್ಯೆ: ಇಡಿ 210 ಡಿಸಿಇ 2008(10), ಬೆಂಗಳೂರು, ದಿನಾಂಕ: 29ನೇ ಸೆಪ್ಟೆಂಬರ್ 2009

ಕಾಲೇಜು ಶಿಕ್ಷಣ ಇಲಾಖೆಯ ವಿವಿಧ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ಅರ್ಜಿಗಳನ್ನು ಆಹ್ವಾನಿಸಿ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದುದು ಸರಿಯಷ್ಟೆ. ಕರ್ನಾಟಕ ಲೋಕಸೇವಾ ಆಯೋಗವು ಆಯ್ಕೆ ಪ್ರಕ್ರಿಯೆಯನ್ನು ಪೂರೈಸಿ ತದನಂತರ ಮತ್ತು ಆಯೋಗವು ಸಲ್ಲಿಸಿದ ಆಯ್ಕೆ ಪಟ್ಟಿಯಂತೆ ಈ ಕೆಳಕಂಡ ಅಭ್ಯರ್ಥಿಯ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ವಾಣಿಜ್ಯಶಾಸ್ತ್ರ ಉಪನ್ಯಾಸಕರ ಹುದ್ದೆಗಳಿಗೆ 02 ವರ್ಷಗಳ ಪರಿವೀಕ್ಷಣಾ ಅವಧಿಯ ಮೇರೆಗೆ ವೇತನ ಶ್ರೇಣಿ ರೂ.8000–275–13500 ರಲ್ಲಿ ಈ ಮೂಲಕ ನೇಮಕಾತಿ ಮಾಡಲಾಗಿದೆ.

ವಾಣಿಜ್ಯಶಾಸ್ತ್ರ

1	344	ಜೈಶೀಲಾ D/o ಬಾಬುರಾವ್, ಮನೆ ನಂ.8–5–253, ಲೇಬರ್ ಕಾಲೋನಿ, ಷಹಾಗುಂಜ್, ಬೀದರ್–585401.				M.Phil - Gul

ಮೇಲ್ಕಂಡ ನೇಮಕಾತಿಯು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ.

1. ಈ ಅಧಿಸೂಚನೆಯಲ್ಲಿರುವ ಅಭ್ಯರ್ಥಿ ಕಾಲೇಜು ಶಿಕ್ಷಣ ಆಯುಕ್ತರು ಸ್ಥಳನಿಯುಕ್ತಿ ಆದೇಶ ನೀಡುವ ಸಂಬಂಧ ಕರ್ನಾಟಕ ಲೋಕ ಸೇವಾ ಆಯೋಗ ಆಯ್ಕೆ ಮಾಡಿರುವ ಜ್ಯೇಷ್ಠತೆಯಂತೆಯೇ ಪರಿಗಣಿಸಿ ಕೌನ್ಸಿಲಿಂಗ್ ಮಾಡುವುದು. ಈ ಸಂಬಂಧ ಆಯುಕ್ತರ ಕಾರ್ಯಾಲಯವು ಕೌನ್ಸಿಲಿಂಗ್ ದಿನಾಂಕವನ್ನು ತಿಳಿಸುತ್ತದೆ.
2. ನೇಮಕಾತಿಯು ತಾತ್ಕಾಲಿಕವಾಗಿದ್ದು ಆಗ್ಗಿಂದಾಗ್ಗೆ ಈ ಸಂಬಂಧ ವಿಧಿಸುವ ಸೇವಾ ಷರತ್ತುಗಳಿಗೆ ಒಳಪಟ್ಟಿರುತ್ತದೆ.
3. ಜನ್ಮ ದಿನಾಂಕ, ವಿದ್ಯಾರ್ಹತೆ (ಅಂಕಪಟ್ಟಿ) ನಡತೆ, ಮೀಸಲಾತಿಗೆ ಸಂಬಂಧಿಸಿದ ಮತ್ತಿತರ ಮೂಲ ದಾಖಲಾತಿಗಳನ್ನು ಅಭ್ಯರ್ಥಿಗಳು ಪ್ರಥಮವಾಗಿ ಆಯುಕ್ತರ ಮುಂದೆ ಹಾಜರುಪಡಿಸಿ ಪರಿಶೀಲನೆಯ ನಂತರ ಈ ದಾಖಲಾತಿಗಳನ್ನು ಹಾಜರಾಗುವ ಕಾಲೇಜಿನ ಪ್ರಾಂಶುಪಾಲರಿಗೆ ಸಲ್ಲಿಸತಕ್ಕದ್ದು.
4. ಕರ್ನಾಟಕ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳ (1974)ರ ಅಡಿ ನಿಗದಿಪಡಿಸಿರುವ ಕನ್ನಡ ಭಾಷಾ ಪರೀಕ್ಷೆಯನ್ನು ಪರಿವೀಕ್ಷಣಾ ಅವಧಿಯಲ್ಲಿ ಉತ್ತೀರ್ಣರಾಗತಕ್ಕದ್ದು.
5. ಪಿಹೆಚ್.ಡಿ / ಎನ್.ಇ.ಟಿ / ಎಸ್.ಎಲ್.ಇ.ಟಿ ಪರೀಕ್ಷೆ ತೇರ್ಗಡೆ ಹೊಂದಿದ್ದವರು ಅಕೌಂಟ್ಸ್ ಹೈಯರ್ ಮತ್ತು ಜನರಲ್ ಲಾ, ಭಾಗ–1 ಮತ್ತು ಭಾಗ–2 ಇದನ್ನು ಪರಿವೀಕ್ಷಣಾ ಅವಧಿಯಲ್ಲಿ ತೇರ್ಗಡೆಯಾಗತಕ್ಕದ್ದು. ಇಲ್ಲವಾದಲ್ಲಿ ಪರಿವೀಕ್ಷಣಾ ಅವಧಿಯ ತೃಪ್ತಿಕರ ಘೋಷಣೆಗೆ ಅರ್ಹರಾಗುವುದಿಲ್ಲ.
6. ಪಿಹೆಚ್.ಡಿ/ ಎನ್.ಇ.ಟಿ / ಎಸ್.ಎಲ್.ಇ.ಟಿ ಪದವಿ ಇಲ್ಲದವರು ಅಂದರೆ ಕೇವಲ ಎಂ.ಫಿಲ್ ಪಾಸು ಮಾಡಿರುವವರು (ದೂರ ಶಿಕ್ಷಣ ಮುಖೇನ ಅಥವಾ ಸಾಂಪ್ರದಾಯಿಕ ಶಿಕ್ಷಣದ ಮುಖೇನ) ಪರಿವೀಕ್ಷಣಾ ಅವಧಿಯಲ್ಲಿ ಎನ್.ಇ.ಟಿ/ಎಸ್.ಎಲ್.ಇ.ಟಿ, / ಪಿ.ಹೆಚ್.ಡಿ.ಯಲ್ಲಿ ಮೇಲ್ಕಾಣಿಸಿದ ಇಲಾಖಾ ಪರೀಕ್ಷೆಗಳ ಜೊತೆಗೆ ಕಡ್ಡಾಯವಾಗಿ ಉತ್ತೀರ್ಣರಾಗತಕ್ಕದ್ದು. ಇಲ್ಲವಾದಲ್ಲಿ ಪರಿವೀಕ್ಷಣಾ ಅವಧಿಯ ತೃಪ್ತಿಕರ ಘೋಷಣೆಗೆ ಅರ್ಹರಾಗುವುದಿಲ್ಲ.
7. ಉಪನ್ಯಾಸಕ ಹುದ್ದೆಗೆ ಅವಶ್ಯಕತೆ ಇರುವ ಓರಿಯಂಟೇಷನ್ ಮತ್ತು ರಿಫ್ರೆಷರ್ ಕೋರ್ಸ್ ತರಬೇತಿಯನ್ನು ಪೂರೈಸತಕ್ಕದ್ದು.
8. ಅಭ್ಯರ್ಥಿಯ ಜೇಷ್ಠತೆಯು ಕರ್ನಾಟಕ ಲೋಕ ಸೇವಾ ಆಯೋಗದ ಆಯ್ಕೆ ಪಟ್ಟಿಯಲ್ಲಿ ಪ್ರಸ್ತುತ ಇದ್ದಂತೆಯೇ ಇರತಕ್ಕದ್ದು ಹಾಗೂ ತದನಂತರ ಈ ಸಂಬಂಧ ಸರ್ಕಾರ ಹೊರಡಿಸುವ ಅಧಿಸೂಚನೆಯನ್ವಯ ಇರತಕ್ಕದ್ದು.
9. ಅಭ್ಯರ್ಥಿಯ ನೇಮಕಾತಿಯು ಮಹಿಳಾ ಮೀಸಲಾತಿ ಕುರಿತಂತೆ ಭಾರತದ ಸರ್ವೋಚ್ಛ ನ್ಯಾಯಾಲಯದಲ್ಲಿನ ರಿಟ್ ಅರ್ಜಿ (ಸಿವಿಲ್) ಸಂಖ್ಯೆ:232/99ರ ಅಂತಿಮ ತೀರ್ಮಾನಕ್ಕೆ ಬದ್ಧವಾಗಿರುತ್ತದೆ.
10. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಈ ಕುರಿತು ಬಾಕಿ ಇರುವ ಅರ್ಜಿ ಸಂಖ್ಯೆ: 5502/2008 ಮತ್ತು 2365/2009ರ ಮೇಲೆ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೆ ಬದ್ಧರಾಗಿರತಕ್ಕದ್ದು. ಹಾಗೂ ಈ ತೀರ್ಪುಗಳ ಕುರಿತಾದ ಉಚ್ಚ ನ್ಯಾಯಾಲಯದ ಮೇಲ್ಮನವಿ ತೀರ್ಪಿಗೆ ಬದ್ಧರಾಗಿರತಕ್ಕದ್ದು.
11. ಪರಿವೀಕ್ಷಣಾ ಅವಧಿಯಲ್ಲಿ ಯಾವುದೇ ವರ್ಗಾವಣೆ ಪರಿಗಣಿಸಲಾಗುವುದಿಲ್ಲ.
12. ಈ ಅಧಿಸೂಚನೆಯಲ್ಲಿ ಕಾಣಿಸಿರುವ ಅಭ್ಯರ್ಥಿಯ ಸಂಬಳ, ಭತ್ಯೆ ಇತ್ಯಾದಿ ಇವುಗಳು ಸ್ಥಳನಿಯುಕ್ತಿ ಆದೇಶ ಹೊರಡಿಸಿ ಅದರಂತೆ ಆಯಾ ಸ್ಥಳಗಳಲ್ಲಿ ಹಾಜರಾದ ದಿನಾಂಕದಿಂದ ಲಭ್ಯವಾಗುತ್ತದೆ.

ಅಭ್ಯರ್ಥಿಗಳು ಅಂದರೆ ಪಿ.ಹೆಚ್‌ಡಿ/ಎನ್.ಇ.ಟಿ/ಎಸ್.ಎಲ್.ಇ.ಟಿ ಪದವಿ ಹೊಂದಿರುವವರು ಕನ್ನಡ ಭಾಷೆ, ಅಕೌಂಟ್ಸ್ ಹೈಯರ್ ಹಾಗೂ ಜನರಲ್ ಲಾ ಭಾಗ–1 ಮತ್ತು ಭಾಗ–2 ಇವುಗಳಲ್ಲಿ ತೇರ್ಗಡೆ ಹೊಂದಿದ ನಂತರವೆ ಪರಿವೀಕ್ಷಣಾ ಅವಧಿ ತೃಪ್ತಿಕರವಾಗಿ ಪೂರೈಸಿದ್ದಾರೆ ಎಂದು ಘೋಷಿಸಲು ಅರ್ಹರಿರುತ್ತಾರೆ; ಅಂತೆಯೇ ಕೇವಲ ಎಂ.ಫಿಲ್ ಪದವಿ ಪಡೆದವರು ಈ

ಇಲಾಖಾ ಪರೀಕ್ಷೆಗಳ ಜೊತೆಗೆ ಎನ್.ಇ.ಟಿ/ಎಸ್.ಎಲ್.ಇ.ಟಿ ಪರೀಕ್ಷೆಯಲ್ಲಿ ತೇರ್ಗಡೆಯಾದಲ್ಲಿ ಮಾತ್ರ ಪರಿವೀಕ್ಷಣಾ ಅವಧಿಯ ತೃಪ್ತಿಕರ ಘೋಷಣೆಗೆ ಅರ್ಹರಿರುತ್ತಾರೆ. ಈ ದಿಶೆಯಲ್ಲಿ ಲಗತ್ತಿಸಿರುವ ನಮೂನೆಯಲ್ಲಿ ಒಂದು ಮುಚ್ಚಳಿಕೆಯನ್ನು ಕೌನ್ಸಿಲಿಂಗ್ ಸಮಯದಲ್ಲಿ ಇವರು ತಪ್ಪದೇ 100 ರೂಪಾಯಿ ಛಾಪಾ ಕಾಗದದಲ್ಲಿ ಶಪಥಗ್ರಹಣ ಮಾಡಿ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಅವರುಗಳು ಸ್ಥಳ ನಿಯೋಜನೆಗೆ ಅರ್ಹರಲ್ಲ ಮತ್ತು ಈ ನೇಮಕಾತಿ ಆದೇಶ ರದ್ದಾಗಿದೆಯೆಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಎಂ. ನಂದಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ).

LETTER OF UNDERTAKING

I, Sri/Smt/Kum... son of/ daughter of wife of residing at.., do hereby understand and undertake to comply with the following terms and conditions relating to my appointment as Lecturer in..................................pursuant to the recommendation made by the Karnataka Public Service Commission:-

(1) The scale of pay for which I have been appointed has been Rs.8,000 – 275 – 13,500 and the designation is Lecturer in.....................

(2) I have to pass the prescribed Kannada language examination and the departmental examinations, viz., Accounts Higher, General Part – I and Part – II, besides the orientation course and refresher course for the post of lecturer.

(3) I have to acquire Ph.D/NET/SLET and only thereafter I am entitled for declaration of period of probation as satisfactory i.e. after the completion of two years and after passing the above said examinations composed with satisfactory performance.

(4) As I have not acquired NET/SLET/Ph.D. through course work but only M.Phil, I do understand that for declaration of period of probation, apart from passing Kannada language examination, Accounts Higher, General Law Part-I and Part-II besides the orientation course and refresher course I have to acquire NET/SLET without fail. Failure to acquire NET/SLET will render me ineligible for satisfactory declaration of period of probation and claim further increment either in the scale of Rs.8,000 – 13,500 or in any revised scale or claim any revised designation.

(5) I undertake to relinquish my claim to the post of lecturer in..................due to any adverse court verdict treating M.Phil degree obtained through distance or traditional education mode as invalid.

Signature of the candidate

Witnesses:

1.

2.

P.R. 855

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಅಧಿಸೂಚನೆ

ಸಂಖ್ಯೆ: ಸಿಆಸುಇ 61 ಆಸೇಇ 2009, ದಿನಾಂಕ: 21ನೇ ಮೇ 2009

ಶ್ರೀಮತಿ **ಎಂ. ವಿಜಯಕುಮಾರಿ,** ಕೆ.ಎ.ಎಸ್ (ಕಿರಿಯ ಶ್ರೇಣಿ) ಅಧಿಕಾರಿ, ಹಾಲಿ ಉಪ ನಿರ್ದೇಶಕರು, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಉಡುಪಿ ಇವರ ಹೆಸರನ್ನು ಶ್ರೀಮತಿ ಎಂ **ವಿಜಯಕುಮಾರಿ ಶೆಣೈ** ಎಂದು ಬದಲಾಯಿಸಿಕೊಳ್ಳಲು ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು.ಇ. (ಸೇವೆಗಳು–2)

ಪಿ.ಡಿ. 165

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಅಕ್ಟೋಬರ್ ೨೨, ೨೦೦೯ (ಆಶ್ವಯುಜ ೩೦, ಶಕ ವರ್ಷ ೧೯೩೧)	ಸಂಚಿಕೆ ೪೨

ಭಾಗ – ೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 23 ಎಲ್‌ಆರ್‌ಎಂ 2009, ಬೆಂಗಳೂರು, ದಿನಾಂಕ: 21ನೇ ಆಗಸ್ಟ್ 2009

ಮೆ:ಜೈರಾಜ್ ಇಸ್ಪಾತ್ ಲಿ., ಹೈದರಾಬಾದ್, ಇವರಿಗೆ ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕು, ಬೆಳಗಲ್ ಗ್ರಾಮದ ಸರ್ವೆ ನಂ.66ಎ ಹಾಗೂ ಇತರೆಗಳಲ್ಲಿ ಒಟ್ಟು ವಿಸ್ತೀರ್ಣ 42 ಎಕರೆ 23 ಗುಂಟೆ ಕೃಷಿ ಜಮೀನನ್ನು ಕೈಗಾರಿಕೆ ಉದ್ದೇಶಕ್ಕಾಗಿ ನಮೂನೆ 15ಎ ಮತ್ತು 15–ಎಎ, ಗಳಲ್ಲಿನ ಮಾಹಿತಿ ಅನುಸರಿಸಿ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಇವರ ಪತ್ರ ಸಂಖ್ಯೆ:ಕಂಭೂಸು/40/2008–09 ದಿನಾಂಕ:5/17.02.09 ರಲ್ಲಿ ಪ್ರಸ್ತಾಪಿತ ಮೇಲ್ಕಂಡ ನಂ.66ಎ ಹಾಗೂ ಇತರೆಗಳಲ್ಲಿ ಒಟ್ಟು ವಿಸ್ತೀರ್ಣ 42 ಎಕರೆ 23 ಗುಂಟೆ ಕೃಷಿ ಜಮೀನನ್ನು ಖರೀದಿಸಲು ಕರ್ನಾಟಕ ಭೂಸುಧಾರಣೆ ಅಧಿನಿಯಮ, 1961ರ ಕಲಂ 109 (1)ರಡಿ ಅನುಮೋದನೆ ನೀಡುವ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವಿತ ಜಮೀನು ಖರೀದಿಸಲು ಖಾತೆದಾರರಿಂದ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಹಾಗೂ ಸದರಿ ಜಮೀನು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (ಪಿ.ಟಿ.ಸಿ.ಎಲ್) ಅಧಿನಿಯಮ 1978, ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯ ಮೇಲೆ ಕಾರಣಗಳನ್ನು ದಾಖಲಿಸಿ ನಿರ್ದಿಷ್ಟ ಉದ್ದೇಶಕ್ಕಾಗಿ ಎಷ್ಟೇ ವಿಸ್ತೀರ್ಣದ ಭೂಮಿಯನ್ನು ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961ರ ಕಲಂ 63, 79ಎ, 79ಬಿ ಅಥವಾ 80ರ ಅವಕಾಶಗಳಿಂದ ವಿನಾಯಿತಿ ನೀಡಲು ಸದರಿ ಅಧಿನಿಯಮದ ಕಲಂ 109(1ಎ) ರಡಿ ಅವಕಾಶ ಕಲ್ಪಿಸಿದೆ.

ಈ ಪ್ರಸ್ತಾವನೆಯು ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಅಧಿನಿಯಮ 1995ರ ಕಲಂ 109(1ಎ) ಮತ್ತು ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ನಿಯಮಗಳು, 1996ರ ನಿಯಮ 38–ಬಿ ಮತ್ತು 38–ಸಿ ರಲ್ಲಿನ ಷರತ್ತುಗಳನ್ನು ಪೂರೈಸಿದ್ದು ಕರ್ನಾಟಕ ಭೂ ಸುಧಾರಣೆ ಅಧಿನಿಯಮ 1961ರ ಕಲಂ 63, 79ಎ, 79ಬಿ, ಅಥವಾ 80ಕ್ಕೆ ವಿನಾಯಿತಿ ನೀಡಿ ಮೆ:ಜೈರಾಜ್ ಇಸ್ಪಾತ್ ಲಿ., ಹೈದರಾಬಾದ್, ಇವರಿಗೆ ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲ್ಲೂಕಿನ ಬೆಳಗಲ್ ಗ್ರಾಮದ ನಂ.66ಎ ಹಾಗೂ ಇತರೆಗಳಲ್ಲಿ ಒಟ್ಟು ವಿಸ್ತೀರ್ಣ 42 ಎಕರೆ 23 ಗುಂಟೆ ಕೃಷಿ ಜಮೀನನ್ನು ಕೈಗಾರಿಕೆ ಉದ್ದೇಶಕ್ಕಾಗಿ ಖರೀದಿಸಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109 ರಡಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಸರ್ಕಾರದ ಅನುಮತಿ ನೀಡಲಾಗಿದೆ:–

VI -F1-B/B

ಷರತ್ತುಗಳು

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು ಎರಡು ವರ್ಷಗಳೊಳಗಾಗಿ ಉಪಯೋಗಿಸಿಕೊಳ್ಳತಕ್ಕದ್ದು ಮತ್ತು ಆ ಬಗ್ಗೆ ಜಿಲ್ಲಾಧಿಕರಿಗಳ ಮುಖಾಂತರ ಸರ್ಕಾರಕ್ಕೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2. ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ, 1956ರ ಕಲಂ 3 ರಲ್ಲಿ ಹೇಳಿರುವಂತೆ ಶೇಕಡ 51 ಪೇಯ್ಡ್ ಅಪ್ ಷೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ನಿಯಂತ್ರಿತ ಅಥವಾ ಎರಡರ ಹಿಡಿತ ಹೊಂದಿರುವ ಸರ್ಕಾರದ ಸಂಘ/ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ನಿಗದಿತ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
3. ಜಮೀನು ನಗರಾಭಿವೃದ್ಧಿ ಪ್ರಾಧಿಕಾರದ ಸಿ.ಡಿ.ಪಿ/ಒ.ಡಿ.ಪಿ. ವ್ಯಾಪ್ತಿಯೊಳಗೆ ಬಂದರೆ, ಅದರಂತೆ ಅನುಮತಿ ಪಡೆದು ಉಪಯೋಗಿಸತಕ್ಕದ್ದು.
4. ಈ ಅನುಮತಿಯು ಕರ್ನಾಟಕ ಭೂಸುಧಾರಣೆ ಅಧಿನಿಯಮ, 1961ರ ಕಲಂ 109 ರನ್ವಯ ವಿನಾಯಿತಿ ಮಾತ್ರವಾಗಿರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.
5. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 95 ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯತಕ್ಕದ್ದು.
6. ಸಂಸ್ಥೆ ನಡೆಸುವ ಚಟುವಟಿಕೆಗಳು ಸ್ಥಳೀಯ ಕಾನೂನು, ಕರ್ನಾಟಕ ಮತ್ತು ಭಾರತದ ಕಾನೂನುಗಳನ್ನು ಪಾಲಿಸತಕ್ಕದ್ದು.
7. ಪ್ರಸ್ತಾಪಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಜಮೀನಿನ ವಿನ್ಯಾಸಕ್ಕೆ ನಗರ ಯೋಜನಾ ಇಲಾಖೆ/ಅಭಿವೃದ್ಧಿ ಪ್ರಾಧಿಕಾರ/ಸ್ಥಳೀಯ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯತಕ್ಕದ್ದು.
8. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯ ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತ ಮಾಡಿಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 400

ಟಿ.ಎನ್. ನಾರಾಯಣಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ ಸುಧಾರಣೆ)

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ-27

ನಂ. ಎಲ್.ಎನ್.ಡಿ/ಸಿ.ಆರ್/173/09-10, ದಿನಾಂಕ: 20ನೇ ಆಗಸ್ಟ್ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ಗುಂಡು ತೋಪು ಜಮೀನಾಗಿರುತ್ತದೆ. ಅದರಂತೆ ವಣಕನಹಳ್ಳಿ ಗ್ರಾಮದ ಸ.ನಂ. 8 ರಲ್ಲಿ ವಿಸ್ತೀರ್ಣ 1-00 (ಎ-ಗುಂ) ಜಮೀನಿನಲ್ಲಿ 0-20 ಗುಂ ಪಶುವೈದ್ಯ ಶಾಲೆ ಮತ್ತು 0-20 ಗುಂ ಸ್ಮಶಾನಕ್ಕೆ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68 (1) ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.8 ಜಮೀನಿನಲ್ಲಿ 1-00 (ಎ-ಗುಂ) ಜಮೀನಿನಲ್ಲಿ 0-20 ಗುಂ ಪಶು ವೈದ್ಯ ಶಾಲೆ ಮತ್ತು 0-20 ಗುಂ ಸ್ಮಶಾನಕ್ಕೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಗುಂಡು ಜಮೀನಿನಲ್ಲಿ 0-20 ಗುಂ ಪಶು ವೈದ್ಯ ಶಾಲೆ ಮತ್ತು 0-20 ಗುಂ ಸ್ಮಶಾನಕ್ಕೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಂದು 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ

ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗುಂಡು ತೋಪು ಜಮೀನಿನ 1-00 ಎ ಜಮೀನಿನಲ್ಲಿ 0-20 ಗುಂ ಪಶು ವೈದ್ಯ ಶಾಲೆ ಮತ್ತು 0-20 ಗುಂ ಸ್ಮಶಾನಕ್ಕೆ ಸಾರ್ವಜನಿಕವಾಗಿ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು ತಾಲ್ಲೂಕು: ಆನೇಕಲ್ ಗ್ರಾಮ: ವಣಕನಹಳ್ಳಿ

ಸ.ನಂ.- 8 ವಿಸ್ತೀರ್ಣ: 1-00 ಎ-ಗುಂ ವರ್ಗೀಕರಣ: ಗುಂಡು ತೋಪು

ಪೂರ್ವಕ್ಕೆ: ಸ.ನಂ.-14, 10 ಪಶ್ಚಿಮಕ್ಕೆ: ಸ.ನಂ.-9

ಉತ್ತರಕ್ಕೆ: ಸ.ನಂ.-106 ದಕ್ಷಿಣಕ್ಕೆ: ಸ.ನಂ.-12

ತಹಶೀಲ್ದಾರ್,

ಪಿ.ಆರ್. 401 ಆನೇಕಲ್ ತಾಲ್ಲೂಕು, ಆನೇಕಲ್.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು

ರದ್ದಿಯಾತಿ ಅಧಿಸೂಚನೆ

ಪ್ರಕರಣದ ಸಂಖ್ಯೆ: ಎಲ್ಎಕ್ಯೂಎಸ್ಆರ್: 31/09-10, ದಿನಾಂಕ: 18ನೇ ಆಗಸ್ಟ್ 2009

ಭೂಸ್ವಾಧೀನ ಕಾಯಿದೆ 1894 (ಸೆಂಟ್ರಲ್ ಕಾಯಿದೆ 1894)ರಂತೆ ವಿಧಿ 4(1)ರ ಅಧಿಸೂಚನೆ ಸಂಖ್ಯೆ:ಎಲ್ಎಕ್ಯೂಎಸ್ಆರ್: 75/07-08 ದಿನಾಂಕ: 24.03.2008 ರಂತೆ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ಇವರಿಂದ ಅನುಮೋದಿಸಿದ್ದು, ಸದರಿ ಅಧಿಸೂಚನೆಯು ದಿನಾಂಕ: 05.06.2008ರ ಕರ್ನಾಟಕ ರಾಜ್ಯ ಪತ್ರದ ಪುಟ 732 ರಿಂದ 736 ವರೆಗೆ ಭಾಗ-6ರಲ್ಲಿ ಕನ್ನಗುಣಿ, ನಡೆಮಾವಿನಪುರ ಗ್ರಾಮಗಳ ಜಮೀನು ಹೇಮಾವತಿ ನಾಲಾ ಯೋಜನೆಗೆ ಭೂಸ್ವಾಧೀನಪಡಿಸಲು ಪ್ರಕಟಣೆ ಹೊರಡಿಸಿರುತ್ತದೆ. ಆದರೆ ಈ ಗ್ರಾಮದ ಬಾಬ್ತು ಜಂಟಿ ಮೋಜಣಿ ಕಾರ್ಯ ಪೂರೈಸಿದಾಗ ಈ ಕೆಳಕಂಡ ಅನುಸೂಚಿಯಲ್ಲಿ ನಮೂದಿಸಿರುವ ಸರ್ವೆ ನಂಬರ್‌ಗಳ ಬಾಬ್ತು ಕಲಂ 4(1) ರಂತೆ ಪ್ರಕಟಿಸಲಾದ ವಿಸ್ತೀರ್ಣಕ್ಕಿಂತ ಕಡಿಮೆ ವಿಸ್ತೀರ್ಣ ಭೂಸ್ವಾಧೀನಕ್ಕೆ ಒಳಪಡುವುದೆಂದು ಕಂಡು ಬಂದಿರುವುದರಿಂದ ಕಲಂ 4(1) ರಲ್ಲಿ ಹೆಚ್ಚುವರಿಯಾಗಿ ಪ್ರಕಟವಾಗಿದ್ದ ವಿಸ್ತೀರ್ಣವನ್ನು ರದ್ದುಪಡಿಸಲು ರದ್ದಿಯಾತಿ ಅಧಿಸೂಚನೆ ಹೊರಡಿಸಿರುವುದಾಗಿ ಈ ಮೂಲಕ ಪ್ರಕಟಿಸಲಾಗಿದೆ.

ಅನುಸೂಚಿ

ಜಿಲ್ಲೆ: ತುಮಕೂರು **ಹೋಬಳಿ:** ಯಡಿಯೂರು

ತಾಲ್ಲೂಕು: ಕುಣಿಗಲ್ **ಗ್ರಾಮ:** ಕನ್ನಗುಣಿ

ಕ್ರ ಸಂ.	4(1)ರ ಕ್ರ.ಸಂ.	ಹಿಡುವಳಿದಾರರ ಹೆಸರುಗಳು	ಸ. ನಂ.	ಭೂ ಸ್ವಾಧೀನಕ್ಕೊಳ ಪಡದ ಕಡಿಮೆಯಾದ ವಿಸ್ತೀರ್ಣ
		ಗ್ರಾಮ: ಕನ್ನಗುಣಿ		
1	1	ಮುತ್ತಲಮ್ಮ ದೇವರು, ಕಲ್ಲಯ್ಯ, ಮುತ್ತಲಮ್ಮ ದೇವರು	56	0-02
2	3	ಮುತ್ತಯ್ಯ, ಕೆ.ಪಿ. ಕೃಷ್ಣಪ್ಪ, ಜಯಮ್ಮ, ಮುತ್ತಯ್ಯ	52/2	0-02

ಪಿ.ಆರ್. 402 ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ರಾಮನಗರ ಜಿಲ್ಲೆ, ರಾಮನಗರ

ತಿದ್ದುಪಡಿಯ ಅಧಿಸೂಚನೆ

ಭೂಆರ್ಜನೆ ಅಧಿನಿಯಮದ 4(1)ನೇ ಪ್ರಕರಣದ ಮೇರೆಗಿನ ಅಧಿಸೂಚನೆ

ಕ್ರಮಾಂಕ ಎಲ್ಎಕ್ಯೂಸಿಆರ್ 141/07-08, ದಿನಾಂಕ: 12ನೇ ಜನವರಿ 2009

ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ, ರಾಮನಗರ ಇವರ ಕಲಂ4(1)ರ ಅಧಿಸೂಚನೆಯಲ್ಲಿ ರಾಮನಗರ ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಮಣ್ಣುಗುಡ್ಡೆ ಗ್ರಾಮದಲ್ಲಿ ಸರ್ಕಾರಿ ತಾಂತ್ರಿಕ ಶಿಕ್ಷಣ ಕಾಲೇಜು ನಿರ್ಮಾಣಕ್ಕಾಗಿ ಅವಶ್ಯಕವಾಗಿದೆ ಎಂದು ದೊಡ್ಡಮಣ್ಣುಗುಡ್ಡೆ ಗ್ರಾಮದ ಸರ್ವೆ ನಂ.1/308ರಲ್ಲಿ 4 ಎಕರೆ 11 ಗುಂಟೆ ಜಮೀನಿಗೆ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ರಾಮನಗರ ಉಪವಿಭಾಗ, ರಾಮನಗರ ಇವರ ವರದಿಯಂತೆ ಕರ್ನಾಟಕ ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅನ್ವಯ ಆದೇಶವನ್ನು ಹೊರಡಿಸಿದ್ದು ಕರ್ನಾಟಕ ರಾಜ್ಯ ಪತ್ರದಲ್ಲಿ ಪುಟದ ಸಂಖ್ಯೆ 119ರಲ್ಲಿ ಭಾಗ 6 ರಲ್ಲಿ ದಿನಾಂಕ:29.01.09 ರಂದು ಪ್ರಕಟಗೊಂಡಿರುತ್ತದೆ. ಭೂ ಮಾಲೀಕರಿಗೆ ಕಲಂ 4(2)ರ ನೋಟೀಸ್‌ನ್ನು ಜಾರಿ ಮಾಡಲು ಕಳುಹಿಸಿದಾಗ ತಹಶೀಲ್ದಾರ್ ರಾಮನಗರ ಇವರು ಸದರಿ ಜಮೀನನ್ನು ಭೂ ಮಾಲೀಕರು ಶ್ರೀ ಲಿಯಾಕತ್ ಅಲಿಖಾನ್ ಬಿನ್ ಸಾದತ್ ಅಲೀಖಾನ್ ಎಂಬುವವರಿಗೆ ಮಾರಾಟ ಮಾಡಿದ್ದು ಎಂ.ಆರ್. 72/07-08ರಂತೆ ಕ್ರಯದಾರರಿಗೆ ಖಾತೆಯಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಹಿಂದಿನ ಭೂ ಮಾಲೀಕರಿಗೆ ನೋಟೀಸ್‌ಗಳನ್ನು ಜಾರಿ ಮಾಡಲು ಸಾಧ್ಯವಿಲ್ಲವೆಂದು ವರದಿ ಮಾಡಿರುತ್ತಾರೆ. ಸದರಿಯವರ ವರದಿಯಂತೆ ಕೆಳಕಂಡಂತೆ ಸೂಕ್ತ ತಿದ್ದುಪಡಿಯೊಂದಿಗೆ ಓದಿಕೊಳ್ಳಲು ಈ ಮೂಲಕ ಆದೇಶಿಸಿದೆ.

ಜಿಲ್ಲೆ: ರಾಮನಗರ **ತಾಲ್ಲೂಕು:** ರಾಮನಗರ

ಹೋಬಳಿ: ಕಸಬಾ **ಗ್ರಾಮ:** ದೊಡ್ಡ ಮಣ್ಣುಗುಡ್ಡೆ

ಕ್ರ. ಸಂ.	ಸರ್ವೆ ನಂ.	4(1)ರ ಅಧಿಸೂಚನೆಯಲ್ಲಿ ಪ್ರಕಟವಾಗಿರುವುದು	ಎಂದು ಓದಿಕೊಳ್ಳುವುದು
1	1/308	ಸೈಯದ್ ಫಕ್ರುಲ್ ಖಾದ್ರಿ ಬಿನ್ ಲೇಟ್ ಅಲಾಜಾ ಸೈಯದ್ ಯುಸೂಫ್ ಉಲ್ಲಾ ಶಾ ಖಾದ್ರಿ ಮೊಹಮ್ಮದ್ ಮುಹೀದ್ ಪಾಷ ಬಿನ್ ಲೇ॥ ಮಹಮ್ಮದ್ ಅನ್ವರ್, ಉಸ್ಮಾನ್ ಬೇಗ್ ಬಿನ್ ಲೇ॥ ಖಾಸಿಂ ಬೇಗ್ ಉ. ಅನ್ವರ್ ಬೇಗ್	ಶ್ರೀ ಲಿಯಾಖತ್ ಅಲಿ ಖಾನ್ ಬಿನ್ ಸಾದತ್ ಅಲಿ ಖಾನ್

ಪಿ.ಆರ್. 414 ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ, ರಾಮನಗರ.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಅಧಿಕೃತ ಜ್ಞಾಪನ ಪತ್ರ

ನಂ: ಎಲ್.ಆರ್.ಎಫ್(ಎ)(109)ಸಿ.ಆರ್.14/08-09, ಬೆಂಗಳೂರು, ದಿನಾಂಕ: 25ನೇ ಆಗಸ್ಟ್ 2009

ವಿಷಯ: ಸುದರ್ಶನ ವಿದ್ಯಾ ಮಂದಿರ (ಯುನಿಟ್ ಆಫ್ ಜ್ಞಾನ ಮಂದಿರ ಟ್ರಸ್ಟ್) ನಂ.1163, 26ನೇ ಎ ಮೈನ್ 4ನೇ ಬ್ಲಾಕ್, ಜಯನಗರ, ಬೆಂಗಳೂರು-42 ರವರು ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಲಕ್ಷ್ಮೀಪುರ ಗ್ರಾಮದ ಸ.ನಂ. 43/1 ರಲ್ಲಿ 0-33 ಗುಂಟೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಕಲಂ 109 ರಡಿ ಹೊಂದಲು ಅನುಮತಿ ಕೋರಿರುವ ಬಗ್ಗೆ.

ಸುದರ್ಶನ ವಿದ್ಯಾ ಮಂದಿರ (ಯುನಿಟ್ ಆಫ್ ಜ್ಞಾನ ಮಂದಿರ ಟ್ರಸ್ಟ್) ನಂ.1163, 26ನೇ ಎ ಮೈನ್, 4ನೇ ಬ್ಲಾಕ್, ಜಯನಗರ, ಬೆಂಗಳೂರು-42 ರವರು ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಲಕ್ಷ್ಮೀಪುರ ಗ್ರಾಮದ ಸ.ನಂ. 43/1 ರಲ್ಲಿ 0-33 ಗುಂಟೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಕಲಂ 109 ರಡಿ ಖರೀದಿಸಲು ಮಾಡಿರುವ ಬೇಡಿಕೆ ಹಾಗೂ ನಮೂನೆ-15ಎ ಮತ್ತು ನಮೂನೆ-15ಎಎ ರಲ್ಲಿ ನೀಡಿದ ಮಾಹಿತಿ ಅನುಸರಿಸಿ ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ ರವರ ಪತ್ರ ಸಂಖ್ಯೆ: ಎಲ್.ಆರ್.ಎಫ್ (109) ಸಿ.ಆರ್:4/09-10, ದಿನಾಂಕ: 12.8.2009 ರಲ್ಲಿ ಪ್ರಸ್ತಾವಿತ ಲಕ್ಷ್ಮೀಪುರ ಗ್ರಾಮದ ಸ.ನಂ. 43/1 ರಲ್ಲಿ 0-33 ಗುಂಟೆ ಜಮೀನನ್ನು ಖರೀದಿಸಲು ಸದರಿ ಸಂಸ್ಥೆಗೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರ ಕಲಂ 109 (1)(II) ರಡಿ ಅನುಮತಿ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಸಂಸ್ಥೆಯು ನೋಂದಣಿ ಸಂಖ್ಯೆ: ಪಿ.ನಂ.489/67-68, ದಿನಾಂಕ: 6.3.1968 ರಲ್ಲಿ ನೋಂದಾಯಿಸಲ್ಪಟ್ಟಿದೆ. ಖಾತೆದಾರರಿಂದ ಜಮೀನು ಖರೀದಿಸಲು ಕರಾರು ಪತ್ರ ಮಾಡಿಕೊಂಡಿರುತ್ತಾರೆ.

ಪ್ರಸ್ತಾವಿತ ಜಮೀನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (ಪಿ.ಟಿ.ಸಿ.ಎಲ್) ಕಾಯ್ದೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರ ಕಲಂ 109 ರ ಪ್ರಕಾರ ಶೈಕ್ಷಣಿಕ ಉದ್ದೇಶಕ್ಕೆ 4 ಯುನಿಟ್‌ಗಳವರೆಗೆ ಜಮೀನು ಹೊಂದಲು ಅವಕಾಶ ಕಲ್ಪಿಸಿದೆ. ಈ ಪ್ರಸ್ತಾವನೆ ಕರ್ನಾಟಕ ತಿದ್ದುಪಡಿ ಕಾಯ್ದೆ 1995 ರ ಪ್ರಕಾರ ಕಲಂ 109 (1)(11) ಮತ್ತು ಕರ್ನಾಟಕ ಭೂ ಸುಧಾರಣೆ ತಿದ್ದುಪಡಿ ಕಾಯಿದೆ 1961 ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯ್ತಿ ನೀಡಿ ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಲಕ್ಷ್ಮೀಪುರ ಗ್ರಾಮದ ಸ.ನಂ. 43/1 ರಲ್ಲಿ 0-33 ಗುಂಟೆ ಜಮೀನನ್ನು ಸುದರ್ಶನ ವಿದ್ಯಾ ಮಂದಿರ (ಯುನಿಟ್ ಆಫ್ ಜ್ಞಾನ ಮಂದಿರ ಟ್ರಸ್ಟ್) ನಂ.1163, 26ನೇ ಎ ಮೈನ್, 4ನೇ ಬ್ಲಾಕ್, ಜಯನಗರ, ಬೆಂಗಳೂರು-42 ರವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಖರೀದಿಸಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ಕಲಂ 109 (1) (II) ರಡಿ ಹಾಗೂ ಸರ್ಕಾರದ ತಿದ್ದುಪಡಿ ಅಧಿಸೂಚನೆ ನಂ:ವ್ಯಶಾಇ 47 ಶಾಸನ 2001 ಬೆಂಗಳೂರು, ದಿನಾಂಕ: 23.04.2003 ರಂತೆ ಶೈಕ್ಷಣಿಕ ಉದ್ದೇಶಕ್ಕೆ 2 ಯುನಿಟ್‌ಗಳಿದ್ದು, ಜಮೀನನ್ನು ಹೊಂದಲು ಅವಕಾಶ ಕಲ್ಪಿಸಿದೆ. ಹಾಗೂ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅನುಮತಿ ನೀಡಿದೆ.

ಷರತ್ತುಗಳು

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು ಎರಡು ವರ್ಷದೊಳಗಾಗಿ ಉಪಯೋಗಿಸಿಕೊಳ್ಳತಕ್ಕದ್ದು ಮತ್ತು ಈ ಬಗ್ಗೆ ತಹಸೀಲ್ದಾರ್‌ರವರ ಮೂಲಕ ಈ ಕಛೇರಿಗೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.

2. ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯಿದೆ 1995 ಕಲಂ 3 ರಲ್ಲಿ ಹೇಳಿರುವಂತೆ ಶೇಕಡ 55 ಪೆಯಿಡ್ ಅಪ್ ಷೇರು ಬಂಡವಾಳ ಹೊಂದಿರುವ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಸಂಘ ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ನಿಗದಿತ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
3. ಸದರಿ ಜಮೀನು ಸಿ.ಡಿ.ಪಿ ಪ್ರಕಾರ ಹಸಿರು ವಲಯದಲ್ಲಿ ಬರುತ್ತಿದ್ದು, ಶೈಕ್ಷಣಿಕ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳತಕ್ಕದ್ದು. ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅನುಮತಿ ಪಡೆಯದೆ ಹಾಗೂ ಅನ್ಯಕ್ರಾಂತ ಪಡಿಸದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
4. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಭೂ ಕಂದಾಯ ಕಾಯಿದೆ 1964ರ ಕಲಂ 95 ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯಬೇಕು. ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸುವ ಷರತ್ತಿಗೆ ಒಳಪಡಿಸಿದೆ.
5. ಈ ಜಮೀನು ನಗರಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಂದ ಸಿ.ಡಿ.ಪಿ, ಒ.ಡಿ.ಪಿ ಮತ್ತು ಹಸಿರು ವಲಯ ವ್ಯಾಪ್ತಿಯೊಳಗೆ ಬಂದರೆ ಅದರಂತೆ ಅನುಮತಿ ಪಡೆದು ಉಪಯೋಗಿಸಿಕೊಳ್ಳತಕ್ಕದ್ದು.
6. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾದ ಅನುಮತಿಯನ್ನು ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣ ಮುಕ್ತವಾಗಿಸಿ ಸರ್ಕಾರದಲ್ಲಿ ನಿಹಿತ ಮಾಡಲಾಗುವುದು.
7. ಈ ಅನುಮತಿ ಭೂ ಸುಧಾರಣೆ ಕಾಯಿದೆ 1961 ರ ಕಲಂ 109 ರನ್ವಯ ಮಾತ್ರ ಮಾಡಿರುತ್ತದೆ. ಬೇರೆ ಕಾನೂನುಗಳಿಗೆ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.

ವಿಶೇಷ ಜಿಲ್ಲಾಧಿಕಾರಿಗಳು (ಕಂ),
ಪಿ.ಆರ್. 418 ಬೆಂಗಳೂರು ಜಿಲ್ಲೆ, ಬೆಂಗಳೂರು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಅಧಿಕೃತ ಜ್ಞಾಪನ

ನಂ:ಎಲ್.ಎನ್.ಡಿ(ಪೂ)ಸಿಆರ್:198/07-08, ದಿನಾಂಕ: 22ನೇ ಆಗಸ್ಟ್ 2009

ವಿಷಯ: ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಕಣ್ಣೂರು ಗ್ರಾಮದ ಸ.ನಂ. 50 ರಲ್ಲಿ 20-00 ಎಕರೆ ಜಮೀನನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಗೊಳಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ನಡವಳಿ ಆದೇಶದ ಸಂ.ಆರ್.ಡಿ:265:ಎಲ್‌ಜಿಬಿ:2007 (ಪಿ6) ಬೆಂಗಳೂರು, ದಿನಾಂಕ:27.1.2009.
2. ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರ ಪತ್ರದ ಸಂ:ಎಲ್‌ಎನ್‌ಡಿ:ಸಸ:ಸಿಆರ್: 490/07-08, ದಿನಾಂಕ: 24.10.2007.
3. ಈ ಕಛೇರಿ ಸಮ ಸಂಖ್ಯೆ ತಿಳುವಳಿಕೆ ಪತ್ರದ ದಿನಾಂಕ: 3.11.2007.
4. ಸಹಾಯಕ ಆಯುಕ್ತರು, (ಆಸ್ತಿಗಳು), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರವರ ಪತ್ರ ಸಂಖ್ಯೆ:ಎಲ್.ಎ.ಕ್ಯೂ:ಸಿಆರ್:02/09-10 ದಿನಾಂಕ: 23.7.2009.

ಬೆಂಗಳೂರು ಜಿಲ್ಲೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ಸರ್ಕಾರಿ ಜಮೀನುಗಳ ಮೇಲಿನ ಅತಿಕ್ರಮಣ/ಒತ್ತುವರಿಯನ್ನು ಸರ್ವೆ ಮಾಡಿ ಪತ್ತೆ ಹಚ್ಚಿದ್ದು, ಅತಿಕ್ರಮಣಕಾರರಿಂದ ಈ ತಹಲ್‌ವರೆಗೆ ಖಿಲ್ಲಾ ಪಡಿಸಲಾಗಿರುವ 3,313-28 ಎಕರೆ/ಗುಂಟೆ ಸರ್ಕಾರಿ ತೋಪು ಜಮೀನನ್ನು ಸರ್ಕಾರಿ/ಸಾರ್ವಜನಿಕ ಉಪಯೋಗಕ್ಕಾಗಿ ಸಂಬಂಧಿಸಿದ ಸಂಸ್ಥೆಗೆ ಮಂಜೂರಾತಿ ಮಾಡುವ ಸರ್ಕಾರದ ನಿರ್ಧಾರದ ಹಿನ್ನೆಲೆಯಲ್ಲಿ, ಉಲ್ಲೇಖ(1)ರಲ್ಲಿನ ಸರ್ಕಾರದ ನಡವಳಿ ಆದೇಶದ ಸಂಖ್ಯೆ:ಆರ್‌ಡಿ265:ಎಲ್‌ಜಿಬಿ/2007 (ಪಿ6), ಬೆಂಗಳೂರು ದಿನಾಂಕ:27.1.2009 ರ ಆದೇಶದಲ್ಲಿ ಸರ್ಕಾರಿ ಜಮೀನನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ನಿಯಮ 20(1)(ಸಿ) ಅನ್ವಯ ಮಂಜೂರಾತಿ ಮಾಡಲು ಸರ್ಕಾರ ತನ್ನ ಅನುಮತಿ ನೀಡಿರುತ್ತದೆ.

ಸರ್ಕಾರದ ಪೂರ್ವಾನುಮೋದನೆಯಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಜಮೀನಿನ ನಕ್ಷೆಯೊಂದಿಗೆ ಜಮೀನನ್ನು ಹಸ್ತಾಂತರಿಸುವಂತೆ ಉಲ್ಲೇಖ (4)ರ ಪತ್ರದಲ್ಲಿ ಕೋರಿರುತ್ತಾರೆ.

ಉಲ್ಲೇಖ (1) ರ ಸರ್ಕಾರದ ಆದೇಶದಂತೆ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಕಣ್ಣೂರು ಗ್ರಾಮದ ಸ.ನಂ. 50 ರಲ್ಲಿ 20-00 ಎಕರೆ ಸರ್ಕಾರಿ ಜಮೀನನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ

ಹಸ್ತಾಂತರಿಸುವ ಬಗ್ಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 20(1)(ಸಿ)ರನ್ವಯ ಈ ಕೆಳಕಂಡ ಷರತ್ತಿಗೊಳಪಡಿಸಿ ಭೂ ಮಂಜೂರಾತಿ ಆದೇಶವನ್ನು ನೀಡಲಾಗಿದೆ.

ಷರತ್ತುಗಳು

1. ಈ ಜಮೀನಿನ ಮಂಜೂರಾತಿಯು 1969ರ ಕರ್ನಾಟಕ ಭೂ ಮಂಜೂರಾತಿ ನಿಯಮಗಳಿಗೆ ಬದ್ಧವಾಗಿರುತ್ತದೆ.
2. ಮಂಜೂರು ಮಾಡಲಾದ ಜಮೀನನ್ನು ಮಂಜೂರಾತಿ ಉದ್ದೇಶಕ್ಕೆ 2 ವರ್ಷದ ಒಳಗಾಗಿ ಉಪಯೋಗಿಸಿಕೊಳ್ಳತಕ್ಕದ್ದು.
3. ಈ ಭೂಮಿಯಲ್ಲಿ ವಿನಾಶಕಾರಿಯಾದ ಅಥವಾ ಖಾಯಂ ಆಗಿ ಹಾನಿಕಾರಕವಾಗುವ ರೀತಿಯಲ್ಲಿ ಏನನ್ನೂ ಮಾಡತಕ್ಕದ್ದಲ್ಲ.
4. ಯಾವ ಉದ್ದೇಶಕ್ಕಾಗಿ ಮಂಜೂರಾತಿ ಮಾಡಲಾಗಿದೆಯೋ ಅದರ ಹೊರತು ಇತರೇ ಯಾವುದೇ ಉದ್ದೇಶಕ್ಕೆ ಈ ಜಮೀನನ್ನು ಉಪಯೋಗಿಸತಕ್ಕದ್ದಲ್ಲ.
5. ಮಂಜೂರಾತಿ ಸಂಸ್ಥೆಯು ನಿಗದಿತ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ಇತ್ಯಾದಿಗಳನ್ನು ಸರ್ಕಾರಕ್ಕೆ ಪಾವತಿಸಿ ಸಂಬಂಧಪಟ್ಟ ಉಪನೋಂದಣಾಧಿಕಾರಿ ಕಛೇರಿಯಲ್ಲಿ ನೋಂದಣಿಯನ್ನು ಮಾಡಿಸಿಕೊಳ್ಳತಕ್ಕದ್ದು.
6. ಈ ಮಂಜೂರಾತಿಯು ಯಾವುದೇ ನ್ಯಾಯಾಲಯದಲ್ಲಿ ದಾವೆಗಳು ದಾಖಲಾಗಿದ್ದಲ್ಲಿ, ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.
7. ಈ ಸರ್ಕಾರಿ ಭೂಮಿ ಅಥವಾ ಭೂಮಿಯ ಒಂದು ಭಾಗವು ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವೆಂದು ಕಂಡುಬಂದಲ್ಲಿ ಮೂರು ತಿಂಗಳ ನೋಟೀಸನ್ನು ಕೊಟ್ಟು ತರುವಾಯ ಹಿಂತೆದುಕೊಳ್ಳಲಾಗುವುದು. ಈ ರೀತಿ ಸರ್ಕಾರದ ವಶಕ್ಕೆ ಪಡೆದ ಜಮೀನಿನಲ್ಲಿ ಅಭಿವೃದ್ಧಿಪಡಿಸಿದ ಬಾಬ್ತು ಯಾವುದೇ ಪರಿಹಾರವನ್ನು ಪಡೆಯಲು ಅರ್ಹರಾಗುವುದಿಲ್ಲ.
8. ಸದರಿ ಜಮೀನಿನಲ್ಲಿ ಅಭಿವೃದ್ಧಿ ಕೆಲಸ ಇತ್ಯಾದಿಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ನಿಗದಿತ ಶುಲ್ಕ ಸಂದಾಯ/ತೆರಿಗೆ ಸಂದಾಯ ಮಾಡಿ ಕಾನೂನು ರೀತ್ಯ ಪೂರ್ವಾನುಮೋದನೆ ಪಡೆದು ಕಾಮಗಾರಿ ಪ್ರಾರಂಭಿಸಬೇಕು.
9. ಶಾಸನಬದ್ಧ ಕಾಯ್ದೆಗಳ ಕಟ್ಟುಪಾಡುಗಳನ್ನು ಪಾಲಿಸದೇ ಇದ್ದಲ್ಲಿ ಅಥವಾ ಮೇಲ್ಕಂಡ ಯಾವುದೇ ಷರತ್ತುಗಳಿಗೆ ವಿರುದ್ಧವಾಗಿ ನಡೆದಲ್ಲಿ ಜಮೀನಿನ ಮಂಜೂರಾತಿಯನ್ನು ವಜಾ ಮಾಡಲಾಗುವುದು.
10. ಪ್ರಶ್ನಿತ ಜಮೀನಿನಲ್ಲಿ ಸಿಗುವ ಬೆಲೆ ಬಾಳುವ ನಿಧಿ, ನಿಕ್ಷೇಪ ಇತ್ಯಾದಿಗಳು ಸರ್ಕಾರಕ್ಕೆ ಸೇರಿದ್ದಾಗಿರುತ್ತದೆ.
11. ಸದರಿ ಸಂಸ್ಥೆಗೆ ಈ ಜಮೀನು ಅವಶ್ಯಕವಿಲ್ಲವೆಂದು ಕಂಡು ಬಂದಲ್ಲಿ ಕಂದಾಯ ಇಲಾಖೆಗೆ ಹಿಂದಿರುಗಿಸತಕ್ಕದ್ದು.
12. ಈ ಜಮೀನಿನಲ್ಲಿ ದೊಡ್ಡ ಮತ್ತು ಸಣ್ಣ ಕೆರೆಕಟ್ಟೆ ಇತ್ಯಾದಿಗಳಿದ್ದಲ್ಲಿ ನಕಾಶೆ ದಾರಿಗಳಿದ್ದಲ್ಲಿ ಸಾರ್ವಜನಿಕ ಆಸ್ತಿಯನ್ನು ಸಂರಕ್ಷಿಸಿ ನಿರ್ವಹಿಸತಕ್ಕದ್ದು. ಇವುಗಳ ಮೇಲೆ ಮಂಜೂರುದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ.
13. ಆರ್ಜಿತ ಸಂಸ್ಥೆಯು ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿ 1969ರ ನಿಯಮ 28(2) ರಡಿಯಲ್ಲಿ ನಿಗದಿಪಡಿಸಿರುವ ನಮೂನೆ/ಫಾರಂ-VIರಲ್ಲಿ ಕರಾರು ಪತ್ರವನ್ನು ಬರೆದುಕೊಡತಕ್ಕದ್ದು.

ಮೇಲ್ಕಂಡ ಯಾವುದೇ ಷರತ್ತು ಉಲ್ಲಂಘನೆಯಾದಲ್ಲಿ, ಈ ಭೂ ಮಂಜೂರಾತಿಯು ತನಗೆ ತಾನಾಗಿ ರದ್ದುಗೊಳ್ಳುತ್ತದೆ ಮತ್ತು ಆರ್ಜಿತ ಸಂಸ್ಥೆಗೆ ಯಾವುದೇ ತರಹದ ನಷ್ಟ ಉಂಟಾದಲ್ಲಿ ಸರ್ಕಾರವು ಇದಕ್ಕೆ ಜವಾಬ್ದಾರಿಯಾಗುವುದಿಲ್ಲ.

ವಿಶೇಷ ಜಿಲ್ಲಾಧಿಕಾರಿಗಳು,
ಪಿ.ಆರ್. 419 ಬೆಂಗಳೂರು ಜಿಲ್ಲೆ, ಬೆಂಗಳೂರು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಅಧಿಕೃತ ಜ್ಞಾಪನ

ಸಂ:ಎಲ್‌ಎನ್‌ಡಿ:(ಎನ್.ಎ):ಸಿಆರ್:203/07-08, ದಿನಾಂಕ: 26ನೇ ಆಗಸ್ಟ್ 2009

ವಿಷಯ: ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಹೆಸರಘಟ್ಟ ಹೋಬಳಿ, ಗುಡ್ಡದಹಳ್ಳಿ ಗ್ರಾಮದ ಸರ್ವೆ ನಂ. 43 ರಲ್ಲಿ 46-31 ಎಕರೆ/ಗುಂಟೆ ಜಮೀನನ್ನು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಪತ್ರದ ಸಂಖ್ಯೆ:ಆರ್.ಡಿ:265:ಎಲ್‌ಜಿಬಿ/2007, (ಭಾಗ-6), ಬೆಂಗಳೂರು, ದಿನಾಂಕ:18.10.2007.
2. ತಹಶೀಲ್ದಾರ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ರವರ ಪತ್ರದ ಸಂಖ್ಯೆ:462/07-08, ದಿನಾಂಕ: 22.10.2007 ರಂತೆ.
3. ಸರ್ಕಾರದ ಪತ್ರದ ಸಂಖ್ಯೆ:ಆರ್.ಡಿ:265:ಎಲ್‌ಜಿಬಿ/2007, (ಭಾಗ-6), ಬೆಂಗಳೂರು ದಿನಾಂಕ:27.1.2009 ರಂತೆ.

ಬೆಂಗಳೂರು ಜಿಲ್ಲೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ಸರ್ಕಾರಿ ಜಮೀನುಗಳ ಮೇಲಿನ ಅತಿಕ್ರಮಣ / ಒತ್ತುವರಿಯನ್ನು ಸರ್ವೆ ಮಾಡಿ ಪತ್ತೆ ಹಚ್ಚಿರುವುದನ್ನು ಅತಿಕ್ರಮಣದಾರರಿಂದ ಈ ತಹಲ್‌ವರೆಗೆ ಖುಲ್ಲಾಪಡಿಸಲಾಗಿರುವ 8,717-00 ಎಕರೆಗಳಲ್ಲಿ ವಿವಿಧ ಸಾರ್ವಜನಿಕ / ಸಾಮಾಜಿಕ ಬೆಳವಣಿಗೆ ಮಂಜೂರಾತಿ ಮಾಡುವ ಸರ್ಕಾರದ ನಿರ್ಧಾರದ ಹಿನ್ನೆಲೆಯಲ್ಲಿ ಸರ್ಕಾರದ ಪತ್ರದ ಸಂಖ್ಯೆ:ಆರ್.ಡಿ:265:ಎಲ್‌ಜಿಬಿ/2007 (ಭಾಗ-6) ಬೆಂಗಳೂರು ದಿನಾಂಕ:18.10.2007ರ ಆದೇಶದಲ್ಲಿ ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಹೆಸರಘಟ್ಟ ಹೋಬಳಿ, ಗುಡ್ಡದಹಳ್ಳಿ ಗ್ರಾಮದ ಸರ್ವೆ ನಂ.43 ರಲ್ಲಿ 46-31 ಎಕರೆ/ಗುಂಟೆ ಜಮೀನನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಂಸ್ಥೆಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ನಿಯಮ 20(1) (ಸಿ) ಅನ್ವಯ ಮಂಜೂರಾತಿ ಮಾಡಲು ಸರ್ಕಾರ ತನ್ನ ಅನುಮತಿ ನೀಡಿರುತ್ತೆ.

ಈ ಕಛೇರಿಯಿಂದ ದಿನಾಂಕ: 13.11.2007 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರಿಗೆ ತಿಳುವಳಿಕೆ ಪತ್ರ ನೀಡಿ ಹೆಸರಘಟ್ಟ ಹೋಬಳಿ, ಗುಡ್ಡದಹಳ್ಳಿ ಗ್ರಾಮದ ಸರ್ವೆ ನಂ. 43ರಲ್ಲಿ 46-31 ಎಕರೆ/ಗುಂಟೆ ಜಮೀನಿಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969, ನಿಯಮ 20(1)(ಸಿ) ರಂತೆ ಮಂಜೂರಿಯಾದ ಜಮೀನಿಗೆ ಕಿಮ್ಮತ್ತಿನ ಹಣ 2,21,82,631-00 (ಎರಡು ಕೋಟಿ ಇಪ್ಪತ್ತೊಂದು ಲಕ್ಷದ ಎಂಭತ್ತೆರಡು ಸಾವಿರದ ಆರುನೂರ ಮೂವತ್ತೊಂದು) ರೂ. ಗಳನ್ನು ಸರ್ಕಾರಕ್ಕೆ 15 ದಿನಗಳೊಳಗಾಗಿ ಪಾವತಿ ಮಾಡಲು ಸೂಚಿಸಲಾಗಿರುತ್ತದೆ.

ಉಲ್ಲೇಖ (3)ರ ಸರ್ಕಾರದ ಆದೇಶದಂತೆ ಉಚಿತವಾಗಿ ಮಂಜೂರು ಮಾಡಲು ಸೂಚಿಸಿರುವ ಮೇರೆಗೆ ಬೆಂಗಳೂರು ಉತ್ತರ (ಅಪರ) ತಾಲ್ಲೂಕು ಹೆಸರಘಟ್ಟ ಹೋಬಳಿ, ಗುಡ್ಡದಹಳ್ಳಿ ಗ್ರಾಮದ ಸರ್ವೆ ನಂ. 43 ರಲ್ಲಿ 46-31 ಎಕರೆ/ಗುಂಟೆ ಸರ್ಕಾರಿ ಗೋಮಾಳದ ಜಮೀನನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಈ ಕೆಳಕಂಡ ಷರತ್ತಿಗೊಳಪಡಿಸಿ ಭೂ ಮಂಜೂರಾತಿ ಆದೇಶವನ್ನು ನೀಡಲಾಗಿದೆ.

ಷರತ್ತುಗಳು

1) ಈ ಜಮೀನಿನ ಮಂಜೂರಾತಿಯು 1969ರ ಕರ್ನಾಟಕ ಭೂ ಮಂಜೂರಾತಿ ನಿಯಮಗಳಿಗೆ ಬದ್ಧರಾಗಿರುತ್ತದೆ.
2) ಈ ಜಮೀನನ್ನು ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಎರಡು ವರ್ಷಗಳ ಒಳಗೆ ಉಪಯೋಗಿಸಿಕೊಳ್ಳಬೇಕು ಹಾಗೂ ಇನ್ನಿತರ ಉದ್ದೇಶಗಳಿಗಾಗಿ ಈ ಜಮೀನನ್ನು ಉಪಯೋಗಿಸತಕ್ಕದ್ದಲ್ಲ.
3) ಪ್ರಶ್ನಿತ ಜಮೀನಿನ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ದಾವೆಗಳು ದಾಖಲಾಗಿದ್ದಲ್ಲಿ ಈ ಮಂಜೂರಾತಿಯು ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.
4) ಈ ಸರ್ಕಾರಿ ಭೂಮಿ ಅಥವಾ ಭೂಮಿಯ ಒಂದು ಭಾಗವು ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಾಗಿದ್ದಲ್ಲಿ ಸರ್ಕಾರಕ್ಕೆ ಹಿಂತೆಗೆದುಕೊಳ್ಳಲಾಗುವುದು. ಈ ರೀತಿ ಸರ್ಕಾರದ ವಶಕ್ಕೆ ಪಡೆದ ಜಮೀನಿನಲ್ಲಿ ಉಚಿತವಾಗಿ ನೀಡಿರುವ ಕಾರಣ ಯಾವುದೇ ಪರಿಹಾರವನ್ನು ನೀಡಲಾಗುವುದಿಲ್ಲ.
5) ಸದರಿ ಜಮೀನು ನಿಮಗೆ ಅವಶ್ಯಕವಿಲ್ಲವೆಂದು ಕಂಡು ಬಂದಲ್ಲಿ ಕಂದಾಯ ಇಲಾಖೆಗೆ ಹಿಂದಿರುಗಿಸತಕ್ಕದ್ದು.
6) ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಮಂಜೂರಾತಿಯು ತಾನೇ ತಾನಾಗಿ ರದ್ದುಗೊಳ್ಳುತ್ತದೆ.

ಹೆಚ್. ರಾಮಾಂಜನೇಯ

ಪಿ.ಆರ್. 420 ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು.

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ-27

ನಂ. ಎಲ್.ಎನ್.ಡಿ/ಸಿ.ಆರ್/233/09-10, ದಿನಾಂಕ: 14ನೇ ಸೆಪ್ಟೆಂಬರ್ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ತೋಪು ಜಮೀನಾಗಿರುತ್ತದೆ. ಅದರಂತೆ ಲಿಂಗಾಪುರ ಗ್ರಾಮದ ಸ.ನಂ. 91 ರಲ್ಲಿ ವಿಸ್ತೀರ್ಣ 0-21 (ಎ-ಗುಂ) ಜಮೀನನ್ನು ಸಾರ್ವಜನಿಕ ರಸ್ತೆಗಾಗಿ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.91 ಜಮೀನಿನಲ್ಲಿ 0-21 ಎ-ಗುಂ ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ತೋಪು ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ರಸ್ತೆಗೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗುಂಡು ತೋಪು ಜಮೀನಿನ 0–21 ಎ–ಗುಂ ಜಮೀನನ್ನು ರಸ್ತೆಗಾಗಿ ಸಾರ್ವಜನಿಕವಾಗಿ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು
ತಾಲ್ಲೂಕು: ಆನೇಕಲ್
ಗ್ರಾಮ: ಲಿಂಗಾಪುರ
ಸ.ನಂ.– 91
ವಿಸ್ತೀರ್ಣ: 0–21 (ಎ–ಗುಂ)
ವರ್ಗೀಕರಣ: ತೋಪು
ಪೂರ್ವಕ್ಕೆ – ಸ.ನಂ.90
ಪಶ್ಚಿಮಕ್ಕೆ – ಸ.ನಂ.92
ಉತ್ತರಕ್ಕೆ – ರಸ್ತೆ
ದಕ್ಷಿಣಕ್ಕೆ – ಸ.ನಂ.83

ಪಿ.ಆರ್. 430

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್.ಎನ್.ಡಿ/ಸಿ.ಆರ್/234/09–10, ದಿನಾಂಕ: 14ನೇ ಸೆಪ್ಟೆಂಬರ್ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ಗುಂಡು ತೋಪು ಜಮೀನಾಗಿರುತ್ತದೆ. ಅದರಂತೆ ಸಿಂಗಸಂದ್ರ ಗ್ರಾಮದ ಸ.ನಂ. 72 ರಲ್ಲಿ ವಿಸ್ತೀರ್ಣ 0–37 ಎ–ಗುಂ ಜಮೀನನ್ನು ಸ್ಮಶಾನಕ್ಕಾಗಿ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.72 ಜಮೀನಿನಲ್ಲಿ 0–37 ಎ–ಗುಂ ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಗುಂಡು ತೋಪು ಜಮೀನನ್ನು ಸಾರ್ವಜನಿಕ ಸ್ಮಶಾನಕ್ಕಾಗಿ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ತೋಪು ಜಮೀನಿನ 0–37 ಎ–ಗುಂ ಜಮೀನನ್ನು ಸ್ಮಶಾನಕ್ಕಾಗಿ ಸಾರ್ವಜನಿಕವಾಗಿ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು
ತಾಲ್ಲೂಕು: ಆನೇಕಲ್
ಗ್ರಾಮ: ಸಿಂಗಸಂದ್ರ
ಸ.ನಂ.– 72
ವಿಸ್ತೀರ್ಣ: 0–37 (ಎ–ಗುಂ)
ವರ್ಗೀಕರಣ: ಗುಂಡು ತೋಪು
ಪೂರ್ವಕ್ಕೆ – ಸ.ನಂ.75, 79
ಪಶ್ಚಿಮಕ್ಕೆ – ಸ.ನಂ. 71
ಉತ್ತರಕ್ಕೆ – ಸ.ನಂ. 73
ದಕ್ಷಿಣಕ್ಕೆ – ಸ.ನಂ.70, 69

ಪಿ.ಆರ್. 431

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.